ವಿಶ್ವವಾಣಿ
ವಿಶ್ವಾಸವೇ ವಿಶ್ವ

ಉಗ್ರ ದಾಳಿಯನ್ನು ಹೀಗೆ ತಡೀತೀವಿ

ಭಯೋತ್ಪಾದಕ ದಾಳಿಯ ಸಮಯದಲ್ಲಿ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಲಾಗುತ್ತದೆ ಎನ್ನುವುದನ್ನು ತಿಳಿಸಲು ಎನ್‌ಎಸ್‌ಜಿ ಸಿಬ್ಬಂದಿ ಬುಧವಾರ ಬೆಂಗಳೂರಿನ ವಿಧಾನಸೌಧದಲ್ಲಿ ಅಣಕು ಪ್ರದರ್ಶನ ನಡೆಸಿದರು.

ಚಿನ್ನಕ್ಕೆ ಕರಭಾರ

ಚಿನ್ನ, ಬೆಳ್ಳಿ ಆಮದು ಸುಂಕ ಶೇ.15ಕ್ಕೇರಿಕೆ, ಬಳಕೆ ತಗ್ಗಿಸಲು ಕ್ರಮ

ಪೆಟ್ರೋಲ್, ಡೀಸೆಲ್ ಬೆಲೆ 5., ಎಲ್ಪಿಜಿ ಬೆಲೆ 50 ರು. ಹೆಚ್ಚಳ?

ದೆಹಲಿ: ಇತ್ತೀಚೆಗಷ್ಟೇ ಪ್ರಧಾನಿ ನರೇಂದ್ರ ಮೋದಿ 1 ವರ್ಷದವರೆಗೆ ಚಿನ್ನ, ಬೆಳ್ಳಿ ಖರೀದಿ ತಗ್ಗಿಸಿ, ವಿದೇಶ ಪ್ರವಾಸ ಕಡಿಮೆ ಮಾಡಿ, ಪೆಟ್ರೋಲ್, ಡೀಸೆಲ್ ಬಳಕೆ ಕಡಿಮೆ ಮಾಡಿ ಎಂದು ಮನವಿ ಮಾಡಿದ್ದರು. ಅದರ ಬೆನ್ನಲ್ಲೇ ಚಿನ್ನ, ಬೆಳ್ಳಿ ಆಮದು ಸುಂಕ ಶೇ.15ರಷ್ಟು ಹೆಚ್ಚಾಗಿದೆ. ಇದೇ ವೇಳೆ ಪೆಟ್ರೋಲ್, ಡೀಸೆಲ್ ಬೆಲೆಗಳೂ ಲೀಟರ್‌ಗೆ 4ರಿಂದ 5 ರು. ಹೆಚ್ಚಾಗುವ ಭೀತಿಯಿದೆ. ಇತ್ತೀಚೆಗೆ 19 ಕೆಜಿ ತೂಕದ ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆ 993 ರು. ಏರಿತ್ತು. ಇನ್ನು 14 ಕೆಜಿ ತೂಕದ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ 40ರಿಂದ 50 ರು. ಹೆಚ್ಚಾಗುವ ಸುಳಿವಿದೆ. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಕೂಡ ತೈಲಬೆಲೆ ಏರಿಕೆ ಅನಿವಾರ್ಯವಾಗಲಿದೆ ಎಂದಿರುವುದು ಈ ಮಾತಿಗೆ ಪುಷ್ಟಿ ನೀಡಿದೆ.

ಇರಾನ್ ಮೇಲೆ ಅಮೆರಿಕ-ಇಸ್ರೇಲ್‌ಗಳು ನಡೆಸಿದ ಜಂಟಿ ದಾಳಿಯಿಂದ ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿತ್ತು. ಅದರ ಪರಿಣಾಮ ಅನಿಲ ಮತ್ತು ತೈಲಪೂರೈಕೆಗೆ ಜಾಗತಿಕವಾಗಿ ಹೊಡೆತ ಬಿದ್ದಿರುವುದರಿಂದ ಎಲ್ಲ ದೇಶಗಳಲ್ಲಿ ಬೆಲೆಯೇರಿಕೆ ಅನಿವಾರ್ಯವಾಗಿದೆ. ಭಾರತದಲ್ಲಂತೂ ಅನಿಲ ಪೂರೈಕೆಯ ಕೊರತೆಯಿಂದ ಹಲವು ಹೋಟೆಲ್‌ಗಳು ಬಾಗಿಲು ಹಾಕಿವೆ. ಪ್ರಸ್ತುತ ತೈಲ ಖರೀದಿಯಿಂದ ಆಗುತ್ತಿರುವ ನಷ್ಟವನ್ನು ಕೇಂದ್ರ ಸರಕಾರಿ ಕಂಪನಿಗಳೇ ಭರಿಸುತ್ತಿವೆ. ಬಹುಶಃ ಅದನ್ನು ಇನ್ನು ಜನರಿಗೆ ದಾಟಿಸುವ ಸಾಧ್ಯತೆಯಿದೆ. ಆದರೆ ಇದನ್ನು ಒಮ್ಮೆಗೇ ಮಾಡದೇ ಹಂತಹಂತವಾಗಿ ಮಾಡುವ ನಿರೀಕ್ಷೆಯಿದೆ. ಕಳೆದ 4 ವರ್ಷಗಳಿಂದ ಭಾರತದಲ್ಲಿ ತೈಲಬೆಲೆ ಏರಿಸಿಲ್ಲ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ಅನಿಲ ಸಚಿವ ಹರ್ದೀಪ್ ಪುರಿ ಹೇಳಿದ ಬೆನ್ನಲ್ಲೇ ಬೆಲೆಯೇರಿಕೆ ಮಾತುಗಳು ಕೇಳಿಬಂದಿವೆ.

ಚಿನ್ನ, ಬೆಳ್ಳಿ ದುಬಾರಿ: ದೇಶೀಯ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿಯ ಬೆಲೆಗಳು ಮತ್ತಷ್ಟು ದುಬಾರಿಯಾಗಲಿವೆ. ದೇಶದ ವಿದೇಶಿ ವಿನಿಮಯ ಮೀಸಲು ನಿಧಿಯನ್ನು ರಕ್ಷಿಸಲು ಮತ್ತು ರುಪಾಯಿ ಮೌಲ್ಯದ ಕುಸಿತವನ್ನು ತಡೆಯಲು ಈ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಮೂಲ ಸೀಮಾಸುಂಕ ಈ ಹಿಂದೆ 5% ಇತ್ತು. ಈಗ ಇದನ್ನು 10%ಗೆ ಏರಿಕೆ ಮಾಡಲಾಗಿದೆ. ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್ ಈ ಹಿಂದೆ 1% ಇತ್ತು. ಈಗದನ್ನು ಶೇ.5ಕ್ಕೇರಿಸಲಾಗಿದೆ. ಹೀಗಾಗಿ ಒಟ್ಟು ಸುಂಕ ಶೇ.15ಕ್ಕೇರಿಕೆಯಾಗಿದೆ.

ಆಮದು ಸುಂಕ ಹೆಚ್ಚಾದ ಬೆನ್ನಲ್ಲೇ ದೇಶೀಯ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿಯ ಬೆಲೆಗಳು ತಕ್ಷಣವೇ ದುಬಾರಿಯಾಗಲಿವೆ. ಮುಂಬರುವ ಹಬ್ಬ ಹಾಗೂ ಮದುವೆ ಸೀಸನ್‌ಗಳಲ್ಲಿ ಆಭರಣ ಖರೀದಿಸುವ ಗ್ರಾಹಕರಿಗೆ ಮೇಕಿಂಗ್ ಚಾರ್ಜ್ ಹಾಗೂ ಶೇ.3 ಜಿಎಸ್‌ಟಿ ಜೊತೆಗೆ ಈ ಹೆಚ್ಚುವರಿ ಸುಂಕದ ಹೊರೆಯೂ ತಟ್ಟಲಿದೆ.

ಏರಿಕೆ ಮಾಡಿದ್ದು ಯಾಕೆ?

ಭಾರತದ ಚಿನ್ನದ ಆಮದು ಬಿಲ್ 2025ರಲ್ಲಿ ಸುಮಾರು 58.9 ಬಿಲಿಯನ್ ಡಾಲರ್‌ಗೆ (5.63 ಲಕ್ಷ ಕೋಟಿ ರು.) ತಲುಪಿತ್ತು. ಇದು ದೇಶದ ಒಟ್ಟು ವಿದೇಶಿ ವಿನಿಮಯ ಮೀಸಲು ನಿಧಿಯ ಮೇಲೆ ಭಾರಿ ಒತ್ತಡ ಹೇರಿತು. ವಿದೇಶಗಳಿಂದ ಚಿನ್ನ ಖರೀದಿಸಲು ಡಾಲರ್‌ನಲ್ಲಿ ಹಣ ಪಾವತಿಸಬೇಕಾಗುತ್ತದೆ. ಡಾಲರ್ ಜಾಸ್ತಿ ಬಳಸಿ ದಂತೆ ರೂಪಾಯಿ ಮೌಲ್ಯ ಕುಸಿಯುತ್ತದೆ. ಹಾಗೆಯೇ ಫಾರೆಕ್ಸ್‌ನಲ್ಲಿ ಡಾಲರ್ ಸಂಗ್ರಹವೂ ಕುಸಿಯುತ್ತದೆ. ಇದನ್ನು ತಡೆಯಲು ಆಮದು ಪ್ರಮಾಣವನ್ನು ಕಡಿಮೆ ಮಾಡುವುದು ಅನಿವಾರ್ಯವಾಗಿದೆ.

ಆಭರಣ ಚಿನ್ನ ಗ್ರಾಂಗೆ 735 ರು.

ಕೆಜಿ ಬೆಳ್ಳಿಗೆ 20000 ರು. ಏರಿಕೆ

ಚಿನ್ನ ಮತ್ತು ಬೆಳ್ಳಿ ಮೇಲಿನ ಆಮದು ಸುಂಕ ಏರಿಕೆಯಾದ ಬೆನ್ನಲ್ಲೇ ಮಾರುಕಟ್ಟೆಯಲ್ಲೂ ಬೆಲೆ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 22 ಕ್ಯಾರೆಟ್ ಆಭರಣ ಚಿನ್ನದ ಬೆಲೆ 1 ಗ್ರಾಮ್‌ಗೆ 735 ರು. ಹೆಚ್ಚಿ ಒಟ್ಟು ಬೆಲೆ 14,850 ರು.ಗೇರಿದೆ. 24 ಕ್ಯಾರೆಟ್ ಗ್ರಾಮ್ ಚಿನ್ನದ ಬೆಲೆ 802 ರು. ಹೆಚ್ಚಿ 16,200 ರು. ಗೇರಿದೆ. 1 ಕೆಜಿ ಬೆಳ್ಳಿ ಬೆಲೆ ಬುಧವಾರ 20,000 ರು. ಏರಿಕೆ ಕಂಡು ಒಟ್ಟು ಬೆಲೆ 3,10,000 ರು. ಗೆ ಮುಟ್ಟಿ ಗ್ರಾಹಕರಿಗೆ ಬಿಸಿ ಮುಟ್ಟಿಸಿದೆ.

ರು. ಮೌಲ್ಯ 100 ರು.ಗಿಳಿಕೆ?

ಡಾಲರ್ ಎದುರು ರುಪಾಯಿ ಮೌಲ್ಯ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಕುಸಿತವಾಗಿದೆ. ಮಂಗಳವಾರ ರುಪಾಯಿ ಮೌಲ್ಯ 95.7375 ರು.ಗೆ ಇಳಿದಿತ್ತು. ಬುಧವಾರ 95.7450 ರು.ಗಿಳಿದಿದೆ. ಇತ್ತೀಚೆಗೆ ನಿರಂತರವಾಗಿ ರುಪಾಯಿ ಕುಸಿಯುತ್ತಿದೆ. ಹೀಗೆಯೇ ಕುಸಿದರೆ ಡಾಲರ್ ಎದುರು ರುಪಾಯಿ ಮೌಲ್ಯ 100 ರು.ಗೆ ಕುಸಿವ ಸಾಧ್ಯತೆಯಿದೆ. ಇದನ್ನು ತಡೆಯಲು ಆರ್‌ಬಿಐ ಯತ್ನಿಸಿದೆ.

ಬಿಜೆಪಿ ಸರಕಾರದ ಆದೇಶವನ್ನು ಹಿಂಪಡೆದ ಶಿಕ್ಷಣ ಇಲಾಖೆ
ಪೇಟ, ಜನಿವಾರ, ರುದ್ರಾಕ್ಷಿ ಬಳಸಬಹುದು: ಮಧು ಬಂಗಾರಪ್ಪ

ಶಾಲಾ-ಕಾಲೇಜುಗಳಿಗೆ ಹಿಜಾಬ್ ವಾಪಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಹತ್ವದ ಬೆಳವಣಿಗೆಯಲ್ಲಿ ರಾಜ್ಯದ ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ಸೇರಿದಂತೆ ಧಾರ್ಮಿಕ ಸಂಕೇತದ ವಸ್ತ್ರಗಳನ್ನು ಧರಿಸಲಿದ್ದ ನಿರ್ಬಂಧವನ್ನು ರಾಜ್ಯ ಸರಕಾರ ಹಿಂಪಡೆದಿದೆ. ಈ ಮೂಲಕ ಕಳೆದ ನಾಲ್ಕು ವರ್ಷಗಳಿಂದ ಶಾಲಾ-ಕಾಲೇಜು

ಆವರಣದಲ್ಲಿ ನಿರ್ಬಂಧ ಹೇರಿದ್ದ ಹಿಜಾಬ್ ಇದೀಗ ಘರ್‌ವಾಪ್ಸಿಯಾಗಿದೆ.

ಬಿಜೆಪಿ ಸರಕಾರದ ಅವಧಿಯಲ್ಲಿ ಹಿಜಾಬ್ ನಿರ್ಬಂಧ ಹೇರಿದ್ದನ್ನೇ ಮುಂದಿಟ್ಟುಕೊಂಡು ಕಾಂಗ್ರೆಸ್ ಸರಕಾರದ ವಿರುದ್ಧ ಮುಗಿಬಿದ್ದಿತ್ತು. ವಿಧಾನಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿಯೂ ಅಧಿಕಾರಕ್ಕೆ ಬಂದರೆ ಹಿಜಾಬ್ ಧರಿಸಲು ಅವಕಾಶ ನೀಡುವುದಾಗಿ ಭರವಸೆ ನೀಡಿತ್ತು. ಆದರೆ ಅಧಿಕಾರಕ್ಕೆ ಬಂದ ಮೂರು ವರ್ಷದ ಬಳಿಕ, ಬಿಜೆಪಿ ಸರಕಾರದ ಅವಧಿಯಲ್ಲಿ ಹೊರಡಿಸಿದ್ದ ಆದೇಶವನ್ನು ಹಿಂಪಡೆದಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಕರ್ನಾಟಕದ ಶಾಲಾ ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ಅನುಮತಿ ನೀಡಲಾಗಿದೆ. ಇದರೊಂದಿಗೆ ಹಿಂದೂ ಧರ್ಮದ ಪವಿತ್ರ ದಾರ, ಪೇಟ, ರುದ್ರಾಕ್ಷಿ, ಜನಿವಾರ ಸೇರಿ ಎಲ್ಲಾ ಧರ್ಮಗಳ ಧಾರ್ಮಿಕ ವಸ್ತುಗಳಿಗೂ ಅವಕಾಶವಿದೆ. ಈ ಹಿಂದಿನ ಸರಕಾರದ ಹಿಜಾಬ್ ನಿಷೇಧ ಆದೇಶವನ್ನು ತೆರವು ಮಾಡಲಾಗುವುದು. ಮುಸ್ಲಿಮರ ಬೇಡಿಕೆಯಂತೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

2022ರಲ್ಲಿ ಹೇರಿದ್ದ ನಿರ್ಬಂಧ: 2022ರ ಆರಂಭದಲ್ಲಿ ಉಡುಪಿಯ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ವಿವಾದ ಭುಗಿಲೆದ್ದಿತ್ತು. ಇದರ ಬೆನ್ನಲ್ಲೇ ಅಂದಿನ ಬಿಜೆಪಿ ಸರಕಾರ, ಕರ್ನಾಟಕ ಶಿಕ್ಷಣ ಕಾಯಿದೆ 1983ರಂತೆ ಶಾಲಾ-ಕಾಲೇಜುಗಳಲ್ಲಿ ಆಡಳಿತ ಮಂಡಳಿಗಳು ನಿಗದಿಪಡಿಸಿದ 'ಸಮವಸ್ತ್ರ'ವನ್ನು ಕಡ್ಡಾಯವಾಗಿ ಧರಿಸಬೇಕು ಮತ್ತು ಸಮಾನತೆ, ಸಮಗ್ರತೆ ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುವಂತಹ ಧಾರ್ಮಿಕ ಉಡುಪುಗಳನ್ನು (ಹಿಜಾಬ್ ಅಥವಾ ಕೇಸರಿ ಶಾಲು) ಧರಿಸಿ ತರಗತಿಯೊಳಗೆ ಬರುವಂತಿಲ್ಲ ಎಂದು ಆದೇಶ ಹೊರಡಿಸಿತ್ತು.

ಷರತ್ತುಗಳೇನು?

- ವಿದ್ಯಾರ್ಥಿಗಳು ಧರಿಸುವ ಸಾಂಪ್ರದಾಯಿಕ ಸಂಕೇತಗಳು ಶಾಲಾ ಸಮವಸ್ತ್ರಕ್ಕೆ ಪೂರಕವಾಗಿರಬೇಕು
- ಶಾಲೆಗಳಲ್ಲಿ ಈಗಾಗಲೇ ನಿಗದಿಪಡಿಸಿರುವ ಸಮವಸ್ತ್ರವನ್ನು ಮಾರ್ಪಡಿಸುವ ರೀತಿಯಲ್ಲಿರಬಾರದು
- ಶಾಲೆಯ ಶಿಸ್ತು, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಗುರುತಿಸುವಿಕೆಗೆ ಯಾವುದೇ ಅಡ್ಡಿಯಾಗಬಾರದು
- ಯಾರನ್ನೂ ಇಂತಹ ದಿರಿಸನ್ನು ಧರಿಸುವಂತೆ ಒತ್ತಾಯಿಸುವಂತಿಲ್ಲ ಹಾಗೂ ಬಲವಂತವಾಗಿ ತೆಗೆಸುವಂತಿಲ್ಲ
- ಪರೀಕ್ಷಾ ಸಂದರ್ಭಗಳಲ್ಲಿ ರಾಷ್ಟ್ರ ಮತ್ತು ರಾಜ್ಯ ಪ್ರಾಧಿಕಾರಗಳು ನಿಗದಿಪಡಿಸುವ ವಸ್ತ್ರಸಂಹಿತೆ ಕಡ್ಡಾಯ

ಆದೇಶದಲ್ಲಿ ಏನಿದೆ?

ಜನಿವಾರ ಮತ್ತು ಹಿಜಾಬ್ ಸೇರಿದಂತೆ ಧಾರ್ಮಿಕ ಪದ್ಧತಿಗೆ ಅನುಗುಣವಾದ ವಸ್ತ್ರ ಧರಿಸಲು ಅವಕಾಶ ನೀಡಲಾಗಿದೆ. ಸಮವಸ್ತ್ರ ವಿಚಾರವಾಗಿ 2022ರ ಆದೇಶ ಹಿಂಪಡೆದು ಹೊಸ ಆದೇಶ ಹೊರಡಿಸಲಾಗಿದೆ. ಸಾಮಾನ್ಯವಾಗಿ ವಿದ್ಯಾರ್ಥಿಗಳು ಜನಿವಾರ, ಪವಿತ್ರ ದಾರ, ಶಿವದಾರ, ರುದ್ರಾಕ್ಷಿ, ಪೇಟ ಅಥವಾ ಟರ್ಬನ್, ತಲೆ ವಸ್ತ್ರ ಅಥವಾ ಹಿಜಾಬ್ ಇತರೆ ಯಾವುದೇ ಸ್ವರೂಪದ ಸಾಂಪ್ರದಾಯಿಕ ಸಂಕೇತವನ್ನು ನಿಗದಿಪಡಿಸಲಾದ ಸಮವಸ್ತ್ರ ಜತೆಗೆ ಧರಿಸಬಹುದು.

ಸೊಂಪಾದ ಪುಟಗಳು

ರಸ್ತೆಗಿಂತ ಆಕಾಶವೇ ಸುರಕ್ಷಿತ: ಗಗನಯಾನದ ಅಸಲಿ ಮುಖ

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ಭಯವಾಗುತ್ತದೆ ಎಂಬ ಬರಹಗಾರರಿಗೆ ಎರಡು ಮಾತು

ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಯಶಸ್ವಿ ವ್ಯಕ್ತಿಗಳು ಯಾವತ್ತೂ ಫಲಿತಾಂಶಗಳನ್ನು ಮೊದಲೇ ಯೋಜಿಸುವುದಿಲ್ಲ. ಅವರು ಆರಂಭಗಳನ್ನು ಯೋಜಿಸುತ್ತಾರೆ. ಸರಿಯಾದ ಫಲಿತಾಂಶಗಳು ಯಾವಾಗಲೂ ಸರಿಯಾದ ಆರಂಭಗಳನ್ನು ಅನುಸರಿಸುತ್ತವೆ ಎಂಬುದು ಅವರಿಗೆ ಗೊತ್ತಿರುತ್ತದೆ.

ವಕ್ರತುಂಡೋಕ್ತಿ



ನಮ್ಮ ಮನೆಯವರು ನಮ್ಮನ್ನು ಎಷ್ಟೇ ಹೊಗಳಿದರೂ ಏನೂ ಅನಿಸುವುದಿಲ್ಲ. ಯಾವುದೋ ದೇಶದ ವ್ಯಕ್ತಿ ನಮ್ಮ ಪೋಸ್ಟಿಗೆ 'ವಾವ್' ಎಂದು ಕಾಮೆಂಟ್ ಮಾಡಿದಾಗ ಸಿಗುವ ಆ ಖುಷಿಯೇ ಬೇರೆ!

ಮುಲಾಯಂ 2ನೇ ಪುತ್ರ ಪ್ರತೀಕ್ ನಿಧನ

ಲಖನೌ: ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಕಿರಿಯ ಸಹೋದರ, ಮುಲಾಯಂ ಸಿಂಗ್

ಯಾದವ್‌ರ 2ನೇ ಪತ್ನಿಯ ಪುತ್ರ ಪ್ರತೀಕ್ ಯಾದವ್ ಬುಧವಾರ ನಿಧನ ಹೊಂದಿ ದ್ದಾರೆ. ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದ ಅವರ ಸಾವು ಅನುಮಾನಾಸ್ಪದವಾಗಿದೆ. ಇತ್ತೀಚೆಗೆ ಅವರು ಪತ್ನಿ, ಬಿಜೆಪಿ ನಾಯಕಿ ಅಪರ್ಣಾ ಯಾದವ್‌ರಿಂದ ದೂರಾಗಿದ್ದರು. ಶ್ವಾಸಕೋಶದಲ್ಲಿ ರಕ್ತಹೆಪ್ಪುಗಟ್ಟಿದ್ದು ಸಾವಿಗೆ ಕಾರಣ ಎನ್ನಲಾಗಿತ್ತು, ತನಿಖೆ ನಡೆದಿದೆ.

ಸಿಬಿಎಸ್‌ಇ-12 ಫಲಿತಾಂಶ ಪ್ರಕಟ

ದೆಹಲಿ: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಬುಧವಾರ, ಮೇ 13, 2026ರಂದು 12ನೇ ತರಗತಿಯ ಬೋರ್ಡ್ ಪರೀಕ್ಷಾ ಫಲಿತಾಂಶಗಳನ್ನು ಪ್ರಕಟಿಸಿದೆ. ಒಟ್ಟಾರೆ ಶೇಕಡಾ 85.20 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ವರ್ಷ ಸಿಬಿಎಸ್‌ಇ ಮಂಡಳಿಯ 12ನೇ ತರಗತಿ ಪರೀಕ್ಷೆಗಳಲ್ಲಿ ಒಟ್ಟಾರೆ ಉತ್ತೀರ್ಣ ಪ್ರಮಾಣದಲ್ಲಿ ಇಳಿಕೆಯಾಗಿದೆ. 2026ರಲ್ಲಿ, ಒಟ್ಟು 17,80,365 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು, 15,07,109 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸತ್ತವರ ಖಾತೆಗೆ 22 ಕೋಟಿ ಗೃಹಲಕ್ಷ್ಮೀ ಹಣ ಜಮಾ.

ಸುದ್ದಿ

ಬಿ ಖಾತೆಯನ್ನು ಬದಲಿಸಲು ಶೇ.60 ಶುಲ್ಕ ವಿನಾಯ್ತಿ

ರಿಯಾಯ್ತಿಯಲ್ಲಿ ಸಿಗುತ್ತೆ ಎ ಖಾತೆ

ಬೆಂಗಳೂರು: ನಿರೀಕ್ಷೆಯಲ್ಲಿ ರಾಜಧಾನಿ ಬೆಂಗಳೂರಿಗರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರನೇ ಗ್ಯಾರಂಟಿಯನ್ನಾಗಿ ಭೂ ಗ್ಯಾರಂಟಿಯನ್ನು ಘೋಷಿಸಿದ್ದಾರೆ. ಮುಂದಿನ ನೂರು ದಿನಗಳ ಕಾಲ ವಿನಾಯಿತಿ ಶುಲ್ಕದಲ್ಲಿ ಬಿ ಖಾತೆಯನ್ನು ಎ ಖಾತೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ಬೆಂಗಳೂರು ನಾಗರಿಕರಿಗೆ 'ಇ' ಖಾತಾ ವಿತರಣೆ, ಕಟ್ಟಡ ಉಲ್ಲಂಘನೆ ವಿನಾಯಿತಿ ಮಿತಿ ಶೇ.5ರಿಂದ ಶೇ.15ಕ್ಕೆ ಹೆಚ್ಚಳ, 100 ದಿನದಲ್ಲಿ 'ಬಿ' ಖಾತೆಯಿಂದ ಎ ಖಾತೆ ಮಾಡಿಸಿಕೊಳ್ಳಲು ಶುಲ್ಕ ಪಾವತಿಸಿದರೆ ಶೇ.60ರಷ್ಟು ರಿಯಾಯಿತಿ, ಶಿವರಾಮ್ ಕಾರಂತ ಬಡಾವಣೆಯ ಭೂಮಾಲೀಕರಿಗೆ 18 ಸಾವಿರ ನಿವೇಶನ ಹಂಚಿಕೆ, 'ಗ್ರೀನ್ ಬೆಂಗಳೂರು' ಕಾರ್ಯಕ್ರಮ, ಬಿಡಿಎ ಮನೆಗಳ ಮಾರಾಟ ಸೇರಿದಂತೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಬುಧವಾರ ಹಲವು ಬಂಪರ್ ಘೋಷಣೆಗಳನ್ನು ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನನ್ನ ಖಾತೆ, ನನ್ನ ಹಕ್ಕು' ಅಭಿಯಾನ ಮೂರು ತಿಂಗಳ ಕಾಲ ಶನಿವಾರ ನಡೆಯಲಿದೆ. ಪ್ರತಿ ಶನಿವಾರ ಬೆಂಗಳೂರಿನ ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ ತಲಾ 10ರಂತೆ 50 ಸ್ಥಳಗಳಲ್ಲಿ ಈ ಅಭಿಯಾನ (ಇ-ಖಾತಾ ಸಿಟಿಜನ್ ಓಪನ್ ಹೌಸ್) ಕಾರ್ಯಕ್ರಮ ನಡೆಯಲಿದೆ. ಮೇ 16ರಿಂದ ಇದಕ್ಕೆ ಚಾಲನೆ ನೀಡಲಾಗುವುದು. ಬೆಳಗ್ಗೆ 10ಕ್ಕೆ ಪ್ರಾರಂಭವಾಗಿ ಸಂಜೆವರೆಗೆ ಈ ಅಭಿಯಾನ ನಡೆಯಲಿದೆ ಎಂದರು.

ಕಟ್ಟಡದ ಉಲ್ಲಂಘನೆ ವಿನಾಯಿತಿ ಮಿತಿಯನ್ನು ಶೇ.5ರ ಬದಲಾಗಿ ಶೇ.15ಕ್ಕೆ ಹೆಚ್ಚಿಸ ಲಾಗಿದೆ. ಶೇ.15ರಷ್ಟು ಪ್ರಮಾಣದ ಉಲ್ಲಂಘನೆಗಳಿಗೆ ದಂಡ ಪಾವತಿಸಿಕೊಂಡು ಸ್ವಾಧೀನಾನುಭವ ಪ್ರಮಾಣಪತ್ರ ನೀಡಲು ಒಪ್ಪಿಗೆ ನೀಡಲಾಗಿದೆ. ಸುಪ್ರೀಂ ಕೋರ್ಟ್ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯದ ಕಟ್ಟಡಗಳಿಗೆ ವಿದ್ಯುತ್ ಹಾಗೂ ನೀರು ಸರಬರಾಜು ಸೌಕರ್ಯ ಒದಗಿಸಬಾರದೆಂದು ಆದೇಶಿಸಿದೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

'ಬಿ' ಖಾತೆಯಿಂದ 'ಎ' ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದವರು ದಾಖಲೆಗಳನ್ನು ಸರಿಯಾಗಿ ನೀಡಿದ್ದರೆ ಈಗಿರುವ ಮಾರ್ಗಸೂಚಿ ದರದ ಶೇ.5ರಷ್ಟನ್ನು ಕಟ್ಟಬೇಕಿದೆ. ಆದರೆ 100 ದಿನಗಳ ಒಳಗಾಗಿ ಶುಲ್ಕ ಪಾವತಿಸಿದರೆ ಶೇ.2ರಷ್ಟು ಕಟ್ಟಿದರೆ ಸಾಕು. ಅಂದರೆ ಶೇ.60ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಉದಾಹರಣೆಗೆ ಒಂದು ಕೋಟಿ ರು. ಆಸ್ತಿಯ ಬೆಲೆಯಿದ್ದರೆ ಐದು ಲಕ್ಷ ಶುಲ್ಕದ ಬದಲಿಗೆ ಎರಡು ಲಕ್ಷ ರು. ಕಟ್ಟಿದರೆ ಸಾಕು. ಇದರಿಂದ ಏಳು ಲಕ್ಷ ರು. ಉಳಿತಾಯವಾಗುತ್ತದೆ ಎಂದರು. 100 ದಿನಗಳಲ್ಲಿ ಈ ಉಪಯೋಗ ಪಡೆಯ ದಿದ್ದರೆ ಎಂದಿನಂತೆ ಶುಲ್ಕ ಪಾವತಿ ಮಾಡಬೇಕಾಗುತ್ತದೆ.

ಹಠಾತ್ ಹೃದಯಾಘಾತ | ಅಭಿಮಾನಿಗಳಿಗೆ ದಿಗ್ಭ್ರಮೆ

ಪ್ರತಿಭಾವಂತ ನಟ ದಿಲೀಪ್ ನಿಧನ

ಬೆಂಗಳೂರು: ಕನ್ನಡದ ಕಿರುತೆರೆ ಹಾಗೂ ಬೆಳ್ಳಿತೆರೆಯಲ್ಲಿ ಪ್ರತಿಭಾನ್ವಿತ ನಟರಾಗಿ ಗುರುತಿಸಿ

ಕೊಂಡಿದ್ದ ನಟ ದಿಲೀಪ್ ರಾಜ್(47) ಕೊನೆ ಯುಸಿರು ಎಳೆದಿದ್ದಾರೆ. ಬುಧವಾರ ಸಂಜೆ ವೇಳೆ ರಾಮನಗರದ ಬಳಿಯಿರುವ ಫಾರ್ಮ್‌ಹೌಸ್‌ನಲ್ಲಿ ಪಂಚಭೂತದಲ್ಲಿ ಲೀನರಾಗಿದ್ದಾರೆ.

ಹಿಂದಿನ ದಿನದವರೆಗೆ ಲವಲವಿಕೆಯಿಂದ ಇದ್ದ ದಿಲೀಪ್ ರಾಜ್ ಹಠಾತ್ ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾರೆ. ದಿಲೀಪ್ ರಾಜ್ ಅವರಿಗೆ ಮಂಗಳವಾರ ರಾತ್ರಿಯೇ ಎದೆನೋವು ಕಾಣಿಸಿಕೊಂಡಿದೆ. ಹೀಗಾಗಿ ಬುಧವಾರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ನಿರ್ಧರಿಸಿದ್ದರು. ಆದರೆ ಆಸ್ಪತ್ರೆಗೆ ದಾಖಲಾಗುವ ಹೊತ್ತಿಗೆ ನಿಧನರಾಗಿದ್ದಾರೆ. ದಿಲೀಪ್ ಅವರ ನಿಧನಕ್ಕೆ ಚಿತ್ರರಂಗದ ಕಲಾವಿದರು, ಗಣ್ಯರು ಕಂಬನಿ ಮಿಡಿದಿದ್ದಾರೆ. ಮೃತರು ಮಡದಿ ಮತ್ತು ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

2005ರಲ್ಲಿ ತೆರೆಗೆ ಬಂದ ಬಾಯ್ ಫ್ರೆಂಡ್ ಚಿತ್ರದಲ್ಲಿ ನಟಿಸುವ ಮೂಲಕ ಬೆಳ್ಳಿತೆರೆಗೆ ಪಾದಾರ್ಪಣೆ ಮಾಡಿದರು. ಅಪ್ಪು ಅಭಿನಯದ ಮಿಲನ ಚಿತ್ರ ದಿಲೀಪ್ ರಾಜ್‌ಗೆ ಪ್ರಸಿದ್ಧಿ ತಂದುಕೊಟ್ಟಿತು. ಈ ಚಿತ್ರದಲ್ಲಿ ದಿಲೀಪ್ ಖಳನಾಗಿ ಮೆಚ್ಚುವ ಅಭಿನಯ ತೋರಿದರು.

ರಾಜ್ಯದ ಮಾಜಿ ಡಿಜಿಪಿ ಪ್ರವೀಣ್ ಅಧಿಕಾರ ವಿಸ್ತರಣೆ

ಸೂದ್ ಇನ್ನೂ 1 ವರ್ಷ ಸಿಬಿಐ ನಿರ್ದೇಶಕ

ದೆಹಲಿ: ಕೇಂದ್ರ ಸರಕಾರವು ಸಿಬಿಐ ನಿರ್ದೇಶಕ ಪ್ರವೀಣ್ ಸೂದ್ ಅವರ ಅಧಿಕಾರಾವಧಿಯನ್ನು

ಇನ್ನೂ ಒಂದು ವರ್ಷ ವಿಸ್ತರಿಸಿದೆ. ಈ ವರ್ಷ ಮೇ 24ಕ್ಕೆ ನಿವೃತ್ತರಾಗಬೇಕಿದ್ದ ಅವರಿಗೆ ಕೆಲವೇ ದಿನಗಳ ಮುನ್ನ ಮತ್ತೊಮ್ಮೆ ವಿಸ್ತರಣೆ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆಯ್ಕೆ ಸಮಿತಿಯ ಶಿಫಾರಸಿನ ಮೇರೆಗೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕರ್ನಾಟಕ ಕೇಡರ್‌ನ ಪ್ರವೀಣ್ ಸೂದ್ ಅವರು 2023ರ ಮೇ 25ರಂದು ಸಿಬಿಐ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದರು. ಅವರ ಅಧಿಕಾರಾವಧಿ 2025ರ ಮೇ 24ರಂದು ಮುಕ್ತಾಯವಾಗಬೇಕಿತ್ತು. ಆಗಲೂ ಅವರಿಗೆ 1 ವರ್ಷ ವಿಸ್ತರಣೆ ನೀಡಲಾಗಿತ್ತು. ಈಗ ಮತ್ತೆ ವಿಸ್ತರಣೆ ನೀಡಲಾಗಿರುವುದರಿಂದ ಸತತ 2ನೇ ಬಾರಿ ವಿಸ್ತರಣೆಯಾದಂತಾಗಿದೆ.

ರೈತರಿಗೆ ಕೇಂದ್ರ ಬೆಂಬಲ

14 ಬೆಳೆಗಳಿಗೆ ಕೇಂದ್ರದಿಂದ ಬೆಂಬಲ ಬೆಲೆ ಏರಿಕೆ
ಹತ್ತಿಗೆ 557, ಸೂರ್ಯಕಾಂತಿಗೆ 622 ರು. ಹೆಚ್ಚಳ

ದೆಹಲಿ: ನೈಋತ್ಯ ಮುಂಗಾರು ಆರಂಭಕ್ಕೂ ಮೊದಲು ದೇಶದ ರೈತರಿಗೆ ಕೇಂದ್ರ ಸರಕಾರ ಶುಭ ಸುದ್ದಿ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿಯು (ಸಿಸಿಇಎ) ಭತ್ತ, ಹತ್ತಿ, ತೊಗರಿ, ಜೋಳ, ಎಣ್ಣೆಕಾಳುಗಳು ಸೇರಿದಂತೆ 14 ಬೆಳೆಗಳ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸಿದೆ. ಆಮದು ಅವಲಂಬನೆಯನ್ನು ಕಡಿಮೆ ಮಾಡುವ ಮತ್ತು ಬೆಳೆ ವೈವಿಧ್ಯೀಕರಣವನ್ನು ಉತ್ತೇಜಿಸುವ ಸಲುವಾಗಿ ದ್ವಿದಳ ಧಾನ್ಯಗಳು, ಎಣ್ಣೆಬೀಜಗಳು ಮತ್ತು ಹತ್ತಿಗೆ ಹೆಚ್ಚಿನ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಲಾಗಿದೆ.

ಯಾವ ಬೆಳೆಗೆ ಎಷ್ಟು ಏರಿಕೆ?: 2026-27ರ ಖಾರಿಫ್ ಋತುವಿನಿಂದ ಭತ್ತದ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಕ್ವಿಂಟಲ್‌ಗೆ 72 ರುಪಾಯಿ ಹೆಚ್ಚಿಸಲಾಗಿದೆ. ಇದರಿಂದ, 1 ಕ್ವಿಂಟಲ್ ಭತ್ತದ ಬೆಲೆ 2,441 ರುಪಾಯಿಗೆ ಏರಿಕೆಯಾಗಿದೆ. ಸೆಪ್ಟೆಂಬರ್-ಅಕ್ಟೋಬರ್ ಅವಧಿಗೆ ಅನುಸಾರವಾಗಿ ಸಾಮಾನ್ಯ ಭತ್ತದ ಬೆಂಬಲ ಬೆಲೆ 2,441 ರು., ಎ ದರ್ಜೆಯ ತಳಿಗಳಿಗೆ 2,461 ರು. ನೀಡಲು ಒಪ್ಪಿಗೆ ಸೂಚಿಸಲಾಗಿದೆ.

ಒಣಭೂಮಿಯಲ್ಲಿ ಅತಿ ಹೆಚ್ಚಾಗಿ ಬೆಳೆಯಲಾಗುವ ಹತ್ತಿಗೆ ಪ್ರತಿ ಕ್ವಿಂಟಲ್‌ಗೆ 557 ರುಪಾಯಿ ಹೆಚ್ಚಿಸಲಾಗಿದೆ. ಅಂದರೆ, ಈಗ ಅದರ ಬೆಂಬಲ ಬೆಲೆ 8,267 ರು.ಗೇರಿದೆ.

→ 4

ಬೆಳೆ	ಏರಿಕೆ	ಒಟ್ಟು ದರ
ಭತ್ತ	72 ರು.	2441 ರು.
ಹತ್ತಿ	557 ರು.	8267 ರು.
ಸೂರ್ಯಕಾಂತಿ	622 ರು.	8343 ರು.
ಗುರೆಳ್ಳು	515 ರು.	10,052 ರು.
ಎಳ್ಳು	500 ರು.	10,346 ರು.
ಸೋಯಾಬೀನ್	380 ರು.	5,708 ರು.
ನೆಲಗಡಲೆ	254 ರು.	7,517 ರು.
ತೊಗರಿ	450 ರು.	8,450 ರು.
ಉದ್ದಿನಬೇಳೆ	400 ರು.	8,200 ರು.
ಹೆಸರುಬೇಳೆ	12 ರು.	8,780 ರು.
ಜೋಳ	324 ರು.	4,023 ರು.
ಸಜ್ಜೆ	125 ರು.	2,900 ರು.
ರಾಗಿ	319 ರು.	5,205 ರು.
ಮೆಕ್ಕೆಜೋಳ	10 ರು.	2,410 ರು.

ವಿಶ್ವಾಸಮತ ಗೆದ್ದ ವಿಜಯ್

25 ಎಡಿಎಂಕೆ ಶಾಸಕರೂ ಸೇರಿ 144 ಮಂದಿ ಬೆಂಬಲ
ಎಡಿಎಂಕೆ ಇಬ್ಭಾಗ | ಡಿಎಂಕೆ, ಪಿಎಂಕೆ ಸಭಾತ್ಯಾಗ

ಚೆನ್ನೈ: ವಿಶ್ವಾಸಮತ ಯಾಚನೆ ಪರೀಕ್ಷೆಯಲ್ಲಿ ಟಿವಿಕೆ ಮುಖ್ಯಸ್ಥ ವಿಜಯ್ ಪಾಸ್ ಆಗಿದ್ದಾರೆ. ಸರ್ಕಾರಕ್ಕೆ 144 ಮಂದಿ ಶಾಸಕರು ಬೆಂಬಲ ವ್ಯಕ್ತಪಡಿಸಿದ್ದಾರೆ. ಟಿವಿಕೆ, ಕಾಂಗ್ರೆಸ್, ಸಿಪಿಎಂ, ಸಿಪಿಐ, ಮುಸ್ಲಿಮ್ ಲೀಗ್, ವಿಸಿಕೆ ಜೊತೆ ಎಐಎ ಡಿಎಂಕೆಯ ಬಂಡಾಯ ಎದ್ದಿರುವ 25 ಶಾಸಕರು ವಿಜಯ್ ಸರಕಾರಕ್ಕೆ ಬೆಂಬಲ ನೀಡಿದ್ದಾರೆ. ಬಹುಮತ ಸಾಬೀತು ಪಡಿಸುವ ವೇಳೆ ಡಿಎಂಕೆ ಮತ್ತು ಪಿಎಂಕೆ ಶಾಸಕರು ಸಭಾತ್ಯಾಗ ಮಾಡಿದರು. ಒಬ್ಬ ಬಿಜೆಪಿ ಶಾಸಕರು ಮತದಾ ನದಿಂದ ದೂರ ಉಳಿದರು. ಆದರೆ ಸದನದಲ್ಲಿದ್ದ 22 ಎಐಎಡಿಎಂಕೆ ಶಾಸಕರು ವಿಶ್ವಾಸಮತದ ವಿರುದ್ಧ ಮತ ಹಾಕಿದರು.

234 ಶಾಸಕರನ್ನು ಹೊಂದಿರುವ ವಿಧಾನಸಭೆಯಲ್ಲಿ ಬಹುಮತಕ್ಕೆ 118 ಶಾಸಕರ ಅಗತ್ಯವಿದೆ. ವಿಜಯ್ ತಿರುಚ್ಚಿ ಪಶ್ಚಿಮ ಮತ್ತು ಪೆರಂಬೂರು ಕ್ಷೇತ್ರದಿಂದ ಸ್ಪರ್ಧೆ ಮಾಡಿದ ಹಿನ್ನೆಲೆಯಲ್ಲಿ ಒಂದು ಕ್ಷೇತ್ರವನ್ನು ಮಾತ್ರ ಪರಿಗಣಿಸ ಲಾಗುತ್ತದೆ. ಇದರ ಜೊತೆಗೆ ತಿರುಪತ್ತೂರು ಟಿವಿಕೆ ಶಾಸಕ ಶ್ರೀನಿವಾಸ್ ಸೇತುಪತಿ ಅವರಿಗೆ ಬಹುಮತ ಸಾಬೀತು ಪ್ರಕ್ರಿಯೆಯಲ್ಲಿ ಭಾಗಿಯಾಗದಂತೆ ಮದ್ರಾಸ್ ಹೈಕೋರ್ಟ್ ಸೂಚನೆ ನೀಡಿರುವ ಹಿನ್ನೆಲೆ ವಿಧಾನಸಭೆಯ ಬಲ 232ಕ್ಕೆ ಇಳಿದಿದ್ದು, ಬಹುಮತಕ್ಕೆ 116 ಶಾಸಕರ ಬೆಂಬಲ ಅಗತ್ಯವಿತ್ತು.

ಟೀಕೆ ಬೆನ್ನಲ್ಲೇ ಜ್ಯೋತಿಷಿಗೆ ನೀಡಿದ್ದ ಹುದ್ದೆ ವಾಪಸ್

ಜ್ಯೋತಿಷಿ ರಿಕಿ ರಾಧನ್ ಪಂಡಿತ್ ವೆಟ್ರಿವೇಲ್‌ರನ್ನು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿ ಆಗಿ ನೇಮಕ ಮಾಡಿಕೊಂಡ ಆದೇಶವನ್ನು ಸಿಎಂ ವಿಜಯ್ ಹಿಂಪಡೆದುಕೊಂಡಿದ್ದಾರೆ. ಟಿವಿಕೆ ಗೆಲ್ಲುತ್ತದೆ ಎಂದು ಭವಿಷ್ಯ ನುಡಿದಿದ್ದರಿಂದ ರಾಧನ್‌ರನ್ನು ವಿಜಯ್ ನೇಮಿಸಿದ್ದರು.

ಸರ್ಕಾರದ ಪರ ಮತ ಎಷ್ಟು?

ಟಿವಿಕೆ -	106	ವಿಸಿಕೆ -	02
ಕಾಂಗ್ರೆಸ್ -	05	ಮುಸ್ಲಿಂ ಲೀಗ್ -	02
ಎಡಪಕ್ಷಗಳು -	04	ಎಐಎಡಿಎಂಕೆ -	25

400 ಬಿಂದುಗಳ ರೋಸ್ಟರ್, ಶೇ.15ರ ಮೀಸಲಿನಲ್ಲೇ ಒಳಮೀಸಲು ಹಂಚಿಕೆ

ಎಸ್‌ಸಿ ಒಳಮೀಸಲಿಗೆ ಸರಕಾರದ ಮುದ್ರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಲವು ವರ್ಷಗಳ ಗೊಂದಲದ ನಡುವೆಯೇ ಪರಿಶಿಷ್ಟ ಜಾತಿಗಳ ಒಳಮೀಸಲಾತಿಗಾಗಿ ಅಧಿಕೃತ ಆದೇಶ ಸರಕಾರ ಹೊರಡಿಸಿದೆ. ಈ ಆದೇಶದನ್ವಯ, ಶೇ.15ರ ಮೀಸಲಾ ತಿಯನ್ನು ಮೂರು ಪ್ರವರ್ಗ ಗಳಾಗಿ ವಿಂಗಡಿಸಲಾಗಿದ್ದು, ನೇಮಕಾತಿಗಾಗಿ 400 ಬಿಂದುಗಳ ರೋಸ್ಟರ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಹೀಗಾಗಿ 56,432 ಹುದ್ದೆಗಳ ಭರ್ತಿ ಪ್ರಕ್ರಿಯೆ ನಡೆಯಲಿದೆ.

ಕರ್ನಾಟಕ ರಾಜ್ಯದಲ್ಲಿ ಬಹುದಿನಗಳಿಂದ ಚರ್ಚೆಯಲ್ಲಿದ್ದ ಪರಿಶಿಷ್ಟ ಜಾತಿಗಳ (ಎಸ್‌ಸಿ) ಒಳಮೀಸಲಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ರಾಜ್ಯ ಸರಕಾರ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಹೈಕೋರ್ಟ್ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ತಾತ್ಕಾಲಿಕವಾಗಿ ಶೇ.17ರಿಂದ ಶೇ.15ಕ್ಕೆ ಸೀಮಿತಗೊಳಿಸಿ, ಅದರೊಳಗೆ ಒಳಮೀಸಲಾತಿಯನ್ನು ಜಾರಿಗೊಳಿಸಲು ಸರಕಾರ ಅಧಿಕೃತ ಆದೇಶ ಹೊರಡಿಸಿದೆ.

ತಕ್ಷಣದಿಂದಲೇ ಜಾರಿ: ಈ ಆದೇಶವು ಪರಿಶಿಷ್ಟ ಜಾತಿಯಲ್ಲಿರುವ ವಿವಿಧ ಉಪಜಾತಿಗಳ ನಡುವೆ ಸಮಾನ ಅವಕಾಶಗಳನ್ನು ಕಲ್ಪಿಸುವ ಉದ್ದೇಶ ಹೊಂದಿದೆ. ವಿಶೇಷವಾಗಿ ಅತ್ಯಂತ ಹಿಂದುಳಿದ ವರ್ಗಗಳಿಗೆ ಆದ್ಯತೆ ನೀಡಿರುವುದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಮಹತ್ವದ್ದಾಗಿದೆ. ಸಮಾಜ ಕಲ್ಯಾಣ ಇಲಾಖೆಯ ಸಮಾಲೋಚನೆಯೊಂದಿಗೆ ಸಿದ್ಧಪಡಿಸಲಾದ ಈ 400 ಬಿಂದುಗಳ ರೋಸ್ಟರ್ ಇನ್ನು ಮುಂದೆ ರಾಜ್ಯದ ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ದಾರಿದೀಪವಾಗ ಲಿದೆ. ಹೊಸ ನಿಯಮಾವಳಿಗಳು ತಕ್ಷಣದಿಂದಲೇ ಜಾರಿಗೆ ಬರಲಿದ್ದು, ಇದರಿಂದಾಗಿ ರಾಜ್ಯದ ಸಾವಿರಾರು ಉದ್ಯೋಗಾಕಾಂಕ್ಷಿಗಳಿಗೆ ಸ್ಪಷ್ಟವಾದ ಮೀಸಲಾತಿ ಚೌಕಟ್ಟು ಲಭ್ಯವಾದಂತಾಗಿದೆ.

ಪ್ರಮುಖ ಮಾರ್ಗಸೂಚಿ: ಯಾವುದೇ ನೇಮಕಾತಿ ಅಧಿಸೂಚನೆಯಲ್ಲಿ ಪರಿಶಿಷ್ಟ ಜಾತಿಯ ಬಿಂದು ಗಳು 3ಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ ಹುದ್ದೆಗಳಿಗೆ ಎಲ್ಲಾ 101 ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳು ಸ್ಪರ್ಧಿಸಲು ಅವಕಾಶ ನೀಡಲಾಗಿದೆ. ಬ್ಯಾಕ್‌ಲಾಗ್ ಹುದ್ದೆಗಳ ವಿಚಾರದಲ್ಲಿ, ನ್ಯಾಯಾಲಯವು ಶೇ.24ರಷ್ಟು ಮೀಸಲಾತಿ ಪ್ರಮಾಣ ಒಪ್ಪಿದಲ್ಲಿ, ಹೆಚ್ಚುವರಿ ಶೇ.6ರಷ್ಟು ಹುದ್ದೆಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ನೇಮಕಾತಿ ಮಾಡಲಾಗು ವುದು. ಸಮತಳ ಮೀಸಲಾತಿ (ಹಾರಿಜಾಂಟಲ್ ರಿಸರ್ವೇಷನ್) ಅನ್ವಯಿಸುವಾಗಲೂ ಸರಕಾರ ನಿಗದಿಪಡಿಸಿದ ಹೊಸ ರೋಸ್ಟರ್ ನಿಯಮಗಳನ್ನೇ ಪಾಲಿಸಬೇಕಾಗುತ್ತದೆ.

ಹೊಸ ವರ್ಗೀಕರಣ

ಮೇ 13ರಂದು ಹೊರಡಿಸಲಾದ ಈ ಆದೇಶದನ್ವಯ, ಪರಿಶಿಷ್ಟ ಜಾತಿಯ ಒಟ್ಟು ಶೇ.15ರಷ್ಟು ಮೀಸಲಾತಿಯನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

- ಪ್ರವರ್ಗ-ಎ (ಎಸ್‌ಸಿ-ಎ): ಶೇ.5.25
- ಪ್ರವರ್ಗ-ಬಿ (ಎಸ್‌ಸಿ-ಬಿ): ಶೇ.5.25
- ಪ್ರವರ್ಗ-ಸಿ (ಎಸ್‌ಸಿ-ಸಿ): ಶೇ.4.5

400 ಬಿಂದುಗಳ ರೋಸ್ಟರ್ ಜಾರಿ

ಈ ಒಳಮೀಸಲಾತಿ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು ಸರಕಾರವು 400 ಬಿಂದುಗಳ ರೋಸ್ಟರ್' (400-ಪಾಯಿಂಟ್ ರೋಸ್ಟರ್) ವ್ಯವಸ್ಥೆ ಜಾರಿಗೆ ತಂದಿದೆ. ಇನ್ನು ಮುಂದೆ ನಡೆಯುವ ಎಲ್ಲಾ ನೇರ ನೇಮಕಾತಿಗಳಲ್ಲಿ ಈ ರೋಸ್ಟರ್ ಅನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಸೂಚಿಸಲಾಗಿದೆ. ಹಿಂದಿನ ನೇಮಕಾತಿಯಲ್ಲಿ ಯಾವ ಬಿಂದುವಿನವರೆಗೆ ಪ್ರಕ್ರಿಯೆ ಮುಗಿದಿದೆಯೋ, ಅದರ ಮುಂದಿನ ಬಿಂದುವಿನಿಂದ ಹೊಸ ನೇಮಕಾತಿ ಪ್ರಕ್ರಿಯೆ ಆರಂಭವಾಗಲಿದೆ ಎಂದು ಸ್ಪಷ್ಟಪಡಿಸಲಾಗಿದೆ.

56,432 ಹುದ್ದೆ ನೇಮಕಾತಿಗೆ ಅಸ್ತು

ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 56,432 ಹುದ್ದೆಗಳ ನೇರ ನೇಮಕಾತಿಗಾಗಿ ಆರ್ಥಿಕ ಇಲಾಖೆಯು ಈಗಾಗಲೇ ಅನುಮೋದನೆ ನೀಡಿದೆ. ಈ ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ತುರ್ತಾಗಿ ಕೈಗೊಳ್ಳಲು ಸಚಿವ ಸಂಪುಟವು ನಿರ್ಧರಿಸಿದ್ದು, ಹೊಸ ಒಳಮೀಸಲಾತಿ ನೀತಿಯ ಅನ್ವಯವೇ ಈ ನೇಮಕಾತಿಗಳು ನಡೆಯಲಿವೆ. ಈ ಹಿಂದೆ ಹೊರಡಿಸಲಾಗಿದ್ದ ಕೆಲವು ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು, ಹೊಸ ಮಾರ್ಗಸೂಚಿಯಂತೆ ಮರು ಅಧಿಸೂಚನೆ ಹೊರಡಿಸಲು ಆದೇಶದಲ್ಲಿ ತಿಳಿಸಲಾಗಿದೆ.

Maha Rashtra Apex Corporation Limited

ESTD 1943

Registered Office : 3rd Floor, Front Wing, North Block, Manipal Centre, # 47 Dickenson Road, Bengaluru - 560 042, Tel : 080-4031 3131, CIN : L85110KA1943PLC001177
E-mail : mracl.ho@manipal.com, Website : https://www.maharashtraapex.com

NOTICE

Maha Rashtra Apex Corporation Limited

Maha Rashtra Apex Corporation Limited (our "**Company**" or the "**Issuer**") wasoriginally incorporated as"**Maharashtra Apex Bank Limited**" on April 26, 1943 asa public company under the Companies Act, 1913 with the Additional Assistant Registrar of Joint Stock Companies. A certificate of commencement of business dated May 5, 1943 was issued by Additional Assistant Registrar of Joint Stock Companies. Subsequently, the name of our Company was changed to "**Maharashtra Apex Corporation Limited**", and a fresh certificate of incorporation dated September 2, 1995 was issued by the Registrar of Companies. Further, the name of our Company was again changed to "**Maha Rashtra Apex Corporation Limited**" and a fresh certificate of incorporation dated March 22, 1996 was issued by the Registrar of Companies, Karnataka at Bangalore

Registered Office : 3rd Floor, Front Wing North Block, Manipal Centre, # 47 Dickenson Road, Bengaluru - 560 001, Karnataka, India, **Tel.** : +91 820 2571 021 / 024 / 4031 3131, **Fax** : +91 820 257 1112, **E-mail** : mracl.ho@manipal.com, **Website** : https://www.maharashtraapex.com, **Contact Person** : Jamsheed Minoo Panday, Company Secretary and Compliance Officer, **Corporate Identification Number** : L85110KA1943PLC001177

PUBLIC ANNOUNCEMENT READ WITH BASIS OF ALLOTMENT INTIMATION DATED MAY 08, 2026 AND CORRIGENDUM DATED MAY 12, 2026 IN RELATION TO THE RIGHTS ISSUE OF EQUITY SHARES OF MAHA RASHTRA APEX CORPORATION LIMITED.

This public announcements being issued with reference to the Basis of Allotment Intimation dated **May 08, 2026**, and subsequent corrigendum dated **May 12, 2026**, issued in relation to the Rights Issue of Equity Shares of the Company.

The shareholders are hereby informed that the Company has completed the requisite procedural formalities with BSE Limited and National Stock Exchange of India Limited and has received trading approvals from the Stock Exchanges on **May 13, 2026.**

Accordingly, the Rights Equity Shares shall commence trading on the Stock Exchanges with effect from **May 14, 2026.**

The shareholders are requested to take note of the above. All other contents of the Basis of Allotment Intimation dated **May 08, 2026** and corrigendum dated **May 12, 2026** remain unchanged.

For and on behalf of
Maha Rashtra Apex Corporation Limited
Sd/-
Jamsheed Minoo Panday
Company Secretary & Compliance Officer.

Place : Bengaluru
Date : May 13, 2026

ಕರ್ನಾಟಕ ಗ್ರಾಮೀಣ ಬ್ಯಾಂಕ್

ಕರ್ನಾಟಕ ಗ್ರಾಮೀಣ ಬ್ಯಾಂಕ್ KARNATAKA GRAMEENA BANK

"ಸರಕಾರದ ಸ್ವಾಮ್ಯದ ಶೆಡ್ಯೂಲ್ ಬ್ಯಾಂಕ್"
ಪ್ರಾದೇಶಿಕ ಕಛೇರಿ: ಬೆಂಗಳೂರು (ಆರ್ & ಎಲ್ ವಿಭಾಗ)

ನಂ.19-19/ 1, 2ನೇ ಮಹಡಿ, ಸೌತ್ ಎಂಡ್ ರಸ್ತೆ, ಬಸವನಗುಡಿ, ಬೆಂಗಳೂರು-560004.
ದೂ: 080-23186095 / 23217079,
ಇ-ಮೇಲ್ ಐಡಿ: roblr.rlw@kgbk.in

ಸ್ಥಿರಾಸ್ತಿ ಸ್ವತ್ತಿನ ಈ-ಹರಾಜು/ ಮಾರಾಟ ಸೂಚನೆ

ಸರ್ಫೇಸಿ ಖಾಯ್ದೆ 2002 ಮತ್ತು ಸೆಕ್ಯೂರಿಟಿ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 8(6) & 9 ರ ನಿಬಂಧನೆಗಳನ್ನು ಓದಿಕೊಂಡಂತೆ ಇದರ ಅನ್ವಯ ಸ್ಥಿರಾಸ್ತಿಯ ಮಾರಾಟ ಸೂಚನೆ

ನಿರ್ದಿಷ್ಟವಾಗಿ ಈ ಕೆಳಕಂಡ ಸಾಲಗಾರ/ರಿಗೆ, ಅಡಮಾನದಾರ/ರುಗಳಿಗೆ ಹಾಗೂ ಸಾಮಾನ್ಯವಾಗಿ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಭದ್ರತಾ ಸಾಲಗಾರರು ಆದ **ಕರ್ನಾಟಕ ಗ್ರಾಮೀಣ ಬ್ಯಾಂಕ್** ಇವರಿಗೆ ಅಡಮಾನ ಮಾಡಿರುವ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು, ಇದರ ಅಧಿಕೃತ ಅಧಿಕಾರಿಯವರು ರಚನಾತ್ಮಕವಾಗಿ ಸ್ವಾಧೀನ ಪಡೆದುಕೊಂಡಿದ್ದು, ಭದ್ರತಾ ಸಾಲಗಾರರಾದ ಇವರಿಗೆ ಬರಬೇಕಾಗಿರುವ ಬಾಕಿ ವಸೂಲಿಗಾಗಿ **"ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೊ ಹಾಗೆ"** ಮತ್ತು **"ಮತ್ತ್ಯಾವುದಾದರೂ ಅಲ್ಲಿ ಇದ್ದಲ್ಲಿ"** ಅದರ ಆಧಾರದ ಮೇಲೆ **ದಿನಾಂಕ: 16.06.2026** ರಂದು ಹರಾಜು ಮೂಲಕ ಮಾರಾಟ ಮಾಡಲಾಗುವುದು.

ಹರಾಜು ದಿನಾಂಕ : 16.06.2026 ರಂದು ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12:00 ಗಂಟೆಯವರೆಗೆ
ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ : 15.06.2026 ರಂದು ಸಂಜೆ 4.00 ಗಂಟೆಯ ಒಳಗೆ ಕರ್ನಾಟಕ ಗ್ರಾಮೀಣ ಬ್ಯಾಂಕ್

ಶಾಖೆ: ದೊಡ್ಡಬಳ್ಳಾಪುರ

1. ಸಾಲಗಾರರ ಹೆಸರು ಮತ್ತು ವಿಳಾಸ : (1) ಶ್ರೀಮತಿ ಹನುಮಕ್ಕ ಕೋಂ ಲೇಟ್ ಜಿ ಟಿ ಕೃಷ್ಣಪ್ಪ, **(2) ಶ್ರೀ. ಜಿ ಕೆ ವೆಂಕಟೇಶ್** ಬಿನ್ ಲೇಟ್ ಜಿ ಟಿ ಕೃಷ್ಣಪ್ಪ, **(3) ಶ್ರೀ. ಜಿ ಕೆ ಆನಂದ್** ಬಿನ್ ಲೇಟ್ ಜಿ ಟಿ ಕೃಷ್ಣಪ್ಪ, **(4) ಶ್ರೀ. ಜಿ ಕೆ ಶ್ರೀನಿವಾಸ್** ಬಿನ್ ಲೇಟ್ ಜಿ ಟಿ ಕೃಷ್ಣಪ್ಪ, **ಇವರೆಲ್ಲರ ವಿಳಾಸ** : ಗುಂಡಸಂದ್ರ (ಗ್ರಾಮ), ದೊಡ್ಡಬಳ್ಳಾಪುರ (ತಾಲ್ಲೂಕು), ಬೆಂಗಳೂರು ಗ್ರಾಮಾಂತರ (ಜಿಲ್ಲೆ)-561203.
ಬರಬೇಕಾದ ಬಾಕಿ ಮೊತ್ತ: ರೂ.33,13,271/- (ರೂಪಾಯಿ ಮೂವತ್ತಮೂರು ಲಕ್ಷದ ಹದಿಮೂರು ಸಾವಿರದ ಎರಡುನೂರ ಎಪ್ಪತ್ತೊಂದು ಮಾತ್ರ) ದಿನಾಂಕ : 04.05.2026 ರಂದು ಇದ್ದಂತೆ **ದಿನಾಂಕ : 04.05.2026** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.
ಆಸ್ತಿಯ ವಿವರ:- ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಿವೇಶನ ನಂ.17, ಬಿಬಿಎಂಪಿ ನಂ.100-118-17, ಆಸ್ತಿಯ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 42 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 39 ಅಡಿ, ಈ ಆಸ್ತಿಯು ನಾಗಶೆಟ್ಟಿಹಳ್ಳಿ (ಗ್ರಾಮ), ಕಸಬಾ ಹೋಬಳಿ, ಬೆಂಗಳೂರು ಉತ್ತರ (ತಾಲ್ಲೂಕು), ಬೆಂಗಳೂರು ಗ್ರಾಮಾಂತರ-561203ರಲ್ಲಿದೆ. ಈ ಆಸ್ತಿಯು ಶ್ರೀಮತಿ ಹನುಮಕ್ಕ ಕೋಂ ಲೇಟ್ ಜಿ ಟಿ ಕೃಷ್ಣಪ್ಪ ಅವರ ಹೆಸರಿನಲ್ಲಿದೆ. ಪೂರ್ವಕ್ಕೆ: ನಿವೇಶನ ನಂ.16, ಪಶ್ಚಿಮಕ್ಕೆ: ನಿವೇಶನ ನಂ.18, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಪೂಜಾಪ್ಪ ಅವರ ಆಸ್ತಿ.
ಮೀಸಲು ಬೆಲೆ: ರೂ.1,14,00,000/- **ಇಎಂಡಿ: ರೂ.11,40,000/-**

ಶಾಖೆ: ಬನಶಂಕರಿ

2. ಸಾಲಗಾರರ ಹೆಸರು ಮತ್ತು ವಿಳಾಸ : (1) ಮೆ॥ ಎಂ ಎಸ್ ಬೇಕರಿ & ಸ್ವೀಟ್ಸ್ (ಸಾಲಗಾರರು) ಮಾಲೀಕರು: ಶ್ರೀ. ಸುಭಾಷ್ ಡಿ, ವಿಳಾಸ : ನಂ.119/1, ಗೋವಿಂದಪ್ಪ ರಸ್ತೆ, ಡಾ. ಡಿವಿಜಿ ರಸ್ತೆ, ಗಾಂಧಿ ಬಜಾರ್, ಬೆಂಗಳೂರು-560009. **(2) ಶ್ರೀ ಆರ್ ಸೋಮಶೇಖರ್** ಬಿನ್ ಲೇಟ್ ಎ ರಂಗಸ್ವಾಮಿ **(ಅಡಮಾನದಾರರು ಮತ್ತು ಜಾಮೀನುದಾರರು), ವಿಳಾಸ** : 21, 4ನೇ ಕ್ರಾಸ್, 2ನೇ ಮೇನ್, ಕೆಂಪೇಗೌಡ ನಗರ, ಬೆಂಗಳೂರು-560019.
ಬರಬೇಕಾದ ಬಾಕಿ ಮೊತ್ತ: ರೂ.16,50,871/- (ರೂಪಾಯಿ ಹದಿನಾರು ಲಕ್ಷದ ಐವತ್ತು ಸಾವಿರದ ಎಂಟುನೂರ ಎಪ್ಪತ್ತೊಂದು ಮಾತ್ರ) **MSME-TL Loan ದಿನಾಂಕ : 09.05.2026** ರಂದು ಇದ್ದಂತೆ **ದಿನಾಂಕ : 09.05.2026** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು ಮತ್ತು **ರೂ.18,06,099/- (ರೂಪಾಯಿ ಹದಿನೆಂಟು ಲಕ್ಷದ ಆರು ಸಾವಿರದ ತೊಂಭತ್ತೊಂಭತ್ತು ಮಾತ್ರ) CC-MSME ದಿನಾಂಕ : 30.04.2026** ರಂದು ಇದ್ದಂತೆ **ದಿನಾಂಕ : 30.04.2026** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು
ಆಸ್ತಿಯ ವಿವರ:- ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ಮುನಿಸಿಪಲ್ ನಂ.8 (ಹಳೆ ಮುನಿಸಿಪಲ್ ನಂ.21), ಪಿಐಡಿ ನಂ.49-26-8, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 31.2 ಅಡಿ, ಉತ್ತರದಿಂದ ದಕ್ಷಿಣಕ್ಕೆ: 10.5 ಅಡಿ, ಒಟ್ಟು ವಿಸ್ತೀರ್ಣ 327.6 ಚದರ ಅಡಿ, ಈ ಆಸ್ತಿಯು ನಂ.21, 4ನೇ ಕ್ರಾಸ್, 2ನೇ ಮೇನ್, ಕೆಂಪೇಗೌಡ ನಗರ, ಬೆಂಗಳೂರು-560019ರಲ್ಲಿದೆ. ಈ ಆಸ್ತಿಯು ಶ್ರೀ ಆರ್ ಸೋಮಶೇಖರ್ ಬಿನ್ ಲೇಟ್ ಎ ರಂಗಸ್ವಾಮಿರವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಬೈರಪ್ಪ ಅವರ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಆರ್ ಶಿವಶಂಕರ್ ಅವರಿಗೆ ಸೇರಿದ ಆಸ್ತಿಯ ಉಳಿಕೆ ಭಾಗ, ದಕ್ಷಿಣಕ್ಕೆ: ಖಾಸಗಿ ಆಸ್ತಿ.
ಮೀಸಲು ಬೆಲೆ: ರೂ.31,00,000/- **ಇಎಂಡಿ: ರೂ.3,10,000/-**

ಶಾಖೆ: ಹಾವನೂರು ಎಕ್ಸ್‌ಟೆನ್ಷನ್

3. ಸಾಲಗಾರರ ಹೆಸರು ಮತ್ತು ವಿಳಾಸ : (1) ಶ್ರೀ. ಮೋಹನ್ ಎನ್ ಬಿನ್ ನರಸಪ್ಪ, ನಂ.281, ಜನತಾ ಕಾಲೋನಿ, ತರಬನಹಳ್ಳಿ, ಚಿಕ್ಕಬಾಣಾವರ ಅಂಚೆ, ಬೆಂಗಳೂರು-560090.
ಬರಬೇಕಾದ ಬಾಕಿ ಮೊತ್ತ: ರೂ.45,52,665/- (ರೂಪಾಯಿ ನಲವತ್ತೈದು ಲಕ್ಷದ ಐವತ್ತೆರಡು ಸಾವಿರದ ಆರುನೂರ ಅರವತ್ತೈದು ಮಾತ್ರ) ದಿನಾಂಕ : 30.04.2026 ರಂದು ಇದ್ದಂತೆ **ದಿನಾಂಕ : 30.04.2026** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.
ಆಸ್ತಿಯ ವಿವರ:- ವಾಸಯೋಗ್ಯ ಮನೆಯ ನಂ.281, ಖಾತಾ ನಂ.272, ಸರ್ವೆ ನಂ.49/10, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 31.5 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 41.5 ಅಡಿ, ಈ ಆಸ್ತಿಯು ಶ್ರೀ ಮೋಹನ್ ಎನ್ ಬಿನ್ ನರಸಪ್ಪ ಅವರ ಹೆಸರಿನಲ್ಲಿದೆ, ಈ ಆಸ್ತಿಯು ತರಬನಹಳ್ಳಿ, ಚಿಕ್ಕಬಾಣಾವರ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಸರ್ಕಾರಿ ಆಸ್ತಿ, ಪಶ್ಚಿಮಕ್ಕೆ: ಜಾನ್ ಮ್ಯಾಥ್ಯೂಸ್ ಅವರ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಜನತಾ ಕಾಲೋನಿ.
ಮೀಸಲು ಬೆಲೆ: ರೂ.26,00,000/- **ಇಎಂಡಿ: ರೂ.2,60,000/-**

ಶಾಖೆ: ಬೆಳ್ಳಂದೂರು

4. ಸಾಲಗಾರರ ಹೆಸರು ಮತ್ತು ವಿಳಾಸ : (1) ಶ್ರೀ ವೆಂಕಟೇಶ ಆರ್ ಬಿನ್ ರಾಮಯ್ಯ, **ವಿಳಾಸ** : ನಂ.33, ಕ್ರಮ ಸಂಖ್ಯೆ ಮತ್ತು ಜಂಜರ್ ನಂ.162, ಚಿಮಂಡನಹಳ್ಳಿ (ಗ್ರಾಮ), ದೊಡ್ಡಗಟ್ಟಿಗನಬ್ಬೆ ಗ್ರಾಮ ಪಂಚಾಯಿತಿ, ಕಸಬಾ (ಹೋಬಳಿ), ಹೊಸಕೋಟೆ (ತಾಲ್ಲೂಕು), ಬೆಂಗಳೂರು ಗ್ರಾಮಾಂತರ (ಜಿಲ್ಲೆ)-562114. **(2) ಜಾಮೀನುದಾರರು: ಶ್ರೀ ಕೆ ಎಂ ಮುನಿಯಪ್ಪ** ಬಿನ್ ಮುನಿಯಪ್ಪ, **ವಿಳಾಸ** : ಕಣ್ಣೂರಹಳ್ಳಿ, ಕಸಬಾ (ಹೋಬಳಿ), ಹೊಸಕೋಟೆ (ತಾಲ್ಲೂಕು), ಬೆಂಗಳೂರು ಗ್ರಾಮಾಂತರ (ಗ್ರಾಮ)-562114.
ಬರಬೇಕಾದ ಬಾಕಿ ಮೊತ್ತ: ರೂ.22,54,967/- (ರೂಪಾಯಿ ಇಪ್ಪತ್ತೆರಡು ಲಕ್ಷದ ಐವತ್ತನಾಲ್ಕು ಸಾವಿರದ ಒಂಭೈನೂರ ಅರವತ್ತೇಳು ಮಾತ್ರ) ದಿನಾಂಕ : 30.04.2026 ರಂದು ಇದ್ದಂತೆ **ದಿನಾಂಕ : 30.04.2026** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.
ಆಸ್ತಿಯ ವಿವರ:- ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ನಿವೇಶನ ನಂ.33, ಕ್ರಮ ಸಂಖ್ಯೆ ಮತ್ತು ಜಂಜರ್ ನಂ.162, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಈ ಆಸ್ತಿಯು ಶ್ರೀ ವೆಂಕಟೇಶ್ ಆರ್ ಬಿನ್ ರಾಮಯ್ಯ ಅವರ ಹೆಸರಿನಲ್ಲಿದ್ದು, ಚಿಮಂಡನಹಳ್ಳಿ (ಗ್ರಾಮ), ದೊಡ್ಡಗಟ್ಟಿಗನಬ್ಬೆ ಗ್ರಾಮ ಪಂಚಾಯಿತಿ, ಹೊಸಕೋಟೆ (ತಾಲ್ಲೂಕು), ಬೆಂಗಳೂರು ಗ್ರಾಮಾಂತರ (ಜಿಲ್ಲೆ) ದಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.34, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ.38.
ಮೀಸಲು ಬೆಲೆ: ರೂ.33,00,000/- **ಇಎಂಡಿ: ರೂ.3,30,000/-**

ಸರ್ಫೇಸಿ ಕಾಯ್ದೆಯ ಅಡಿಯಲ್ಲಿ ಶಾಸನಬದ್ಧ 30 ದಿನಗಳ ಮಾರಾಟ ಸೂಚನೆ

ಸದರಿ ನೋಟೀಸ್ ಪ್ರಕಟವಾದ ದಿನಾಂಕದಿಂದ 30 ದಿನಗಳ ಒಳಗೆ ಮೇಲೆ ತಿಳಿಸಿರುವ ಸಾಲದ ಬಾಕಿ ಮೊತ್ತವನ್ನು ಪಾವತಿ ಮಾಡುವಂತೆ, ಇಲ್ಲದಿದ್ದರೆ ಸರ್ಫೇಸಿ ಕಾಯ್ದೆ 2002ರಲ್ಲಿ ತಿಳಿಸಿರುವ ಉಪಬಂಧಗಳ ಅನ್ವಯ ಸ್ವತ್ತನ್ನು ಬ್ಯಾಂಕ್ ಮಾರಾಟ ಮಾಡುವುದೆಂದು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ಸಲಹೆ ನೀಡಲಾಗಿದೆ.

ಇ-ಹರಾಜು ಮಾರಾಟದ ನಿಯಮಗಳು ಮತ್ತು ನಿಬಂದನೆಗಳು :

1. ಹರಾಜು/ಬಿಡ್ಡನ್ನು **"ಆನ್‌ಲೈನ್ ಎಲೆಕ್ಟ್ರಾನಿಕ್ ಮೋಡ್"** ಮೂಲಕ ನಡೆಸಲಾಗುವುದು. ಬ್ಯಾಂಕ್ ಅನುಮೋದಿತ ಸೇವಾ ಪೂರೈಕೆದಾರರಾದ **M/s. 4 Closure India** ವೆಬ್‌ಸೈಟ್ **BankAuctions.in** ಮತ್ತು **ForeclosureIndia.com** ಇವರ ಮೂಲಕ ಇ-ಹರಾಜು ನಡೆಸಲಾಗುವುದು.
2. ಬಿಡ್‌ದಾರರು ತಮ್ಮ ಆಯ್ಕೆಯ ಸ್ಥಳದಿಂದ ಬಿಡ್ಡಿಂಗ್‌ಗಾಗಿ ಇ-ಹರಾಜಿನಲ್ಲಿ ಭಾಗವಹಿಸಬಹುದು. ಬಿಡ್‌ದಾರರು ಸ್ವತ: ತಾವೇ ಇಂಟರ್‌ನೆಟ್ ಸಂಪರ್ಕವನ್ನು ಹೊಂದಿರಬೇಕು. ಬ್ಯಾಂಕ್/ಸೇವೆ ಪೂರೈಕೆದಾರರು ಇಂಟರ್‌ನೆಟ್ ಸಂಪರ್ಕ, ನೆಟ್‌ವರ್ಕ್ ವ್ಯತ್ಯಯ, ಸಿಸ್ಟಮ್ ಕ್ರ್ಯಾಷ್, ವಿದ್ಯುತ್ ವ್ಯತ್ಯಯ ಮುಂತಾದ ಸೌಲಭ್ಯಗಳು ಬ್ಯಾಂಕ್/ಸೇವೆ ಪೂರೈಕೆದಾರರು ಭರಿಸುವುದಿಲ್ಲ / ಜವಬ್ದಾರರಾಗಿರುವುದಿಲ್ಲ ಹಾಗೂ ನಿರೀಕ್ಷಿತ ಬಿಡ್‌ದಾರರು ಹೆಚ್ಚಿನ ವಿವರಗಳು, ಸಹಾಯ, ಕಾರ್ಯವಿಧಾನ, ನೋಂದಣಿ, ಹರಾಜು ಬಿಡ್ ಫಾರಂಗಳು, ಮಾರಾಟದ ನಿಯಮಗಳು ಮತ್ತು ನಿಬಂಧನೆಗಳು ಮತ್ತು ಇ-ಹರಾಜಿನ ಆನ್‌ಲೈನ್ ತರಬೇತಿ ಇವೆಲ್ಲವು ಬ್ಯಾಂಕ್ ಅನುಮೋದಿತ ಸೇವಾ ಪೂರೈಕೆದಾರರಾದ **M/s. 4 Closure India** ವೆಬ್‌ಸೈಟ್ **BankAuctions.in ಮತ್ತು ForeclosureIndia.com** ಇವರನ್ನು ಸಂಪರ್ಕಿಸಬಹುದು ಮತ್ತು ವಿವರವಾದ ನಿಯಮಗಳು ಮತ್ತು ನಿಬಂಧನೆಗಳು ಬಿಡ್ ಫಾರಂನಲ್ಲಿ ಲಗತ್ತಿಸಲಾಗಿದೆ.
3. ಬಳಕೆದಾರರು ಐಡಿ ಮತ್ತು ಪಾಸ್‌ವರ್ಡ್ ಪಡೆಯತಕ್ಕದ್ದು. ಅದನ್ನು ಸ್ವೀಕರಿಸಿದ ನಂತರ ಪಾಸ್‌ವರ್ಡ್ ಅನ್ನು ಮಾತ್ರ ಬದಲಾಯಿಸಬಹುದು.
4. ಬಿಡ್‌ದಾರರು ಮಾರಾಟ ಹರಾಜಿನ ಷರತ್ತು ಮತ್ತು ನಿಬಂಧನೆಗಳ ವಿವರಗಳು ತಿಳಿಸಿರುವ **BankAuctions.in** ಗೆ ವೀಕ್ಷಿಸಬಹುದು ಮತ್ತು ತಮ್ಮ ಬಿಡ್‌ಗಳನ್ನು ಸಲ್ಲಿಸುವ ಮೊದಲು ಹರಾಜು ಅರ್ಜಿ ನಮೂನೆಯನ್ನು ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.
5. ಒಮ್ಮೆ ಮಾಡಿದ ಬಿಡ್‌ಗಳನ್ನು ರದ್ದುಗೊಳಿಸಲಾಗುವುದಿಲ್ಲ ಅಥವಾ ಹಿಂಪಡೆಯಲಾಗುವುದಿಲ್ಲ. ಬಳಕೆದಾರ ಐಡಿ ಯಿಂದ ಮಾಡಿದ ಎಲ್ಲಾ ಬಿಡ್‌ಗಳು ಬಿಡ್‌ದಾರರಿಗೆ ನೀಡಲಾಗಿದ್ದು, ಅವನು/ಅವಳು ಮಾಡಿದ ಎಂದು ಪರಿಗಣಿಸಲಾಗುವುದು.
6. ಎಲ್ಲಾ ಬಿಡ್‌ದಾರರು ಮಾರಾಟದ ಷರತ್ತು ಮತ್ತು ನಿಯಮಗಳು ಓದಿ ಮತ್ತು ಅರ್ಥಮಾಡಿಕೊಂಡಿರುವುದು ಎಂದು ಪರಿಗಣಿಸಲಾಗುವುದು ಮತ್ತು ಅವರೇ ಬದ್ಧರಾಗಬೇಕು.

ಇತರೆ ನಿಯಮಗಳು ಮತ್ತು ನಿಬಂಧನೆಗಳು:

1. ಹರಾಜಿನಲ್ಲಿ ಭಾಗವಹಿಸಲು, ಉದ್ದೇಶಿತ ಬಿಡ್‌ದಾರರು ನಿಗದಿತ ಫಾರಂನಲ್ಲಿ ಮೊಹರಾದ ಲಕೋಟೆಯಲ್ಲಿ, ಮೇಲೆ ತಿಳಿಸಿರುವ ಷೆಡ್ಯೂಲ್ಡ್ ಬ್ಯಾಂಕ್ ಹೆಸರಲ್ಲಿ ಪಡೆದ ಪಿಓ/ಡಿಡಿ/ಬ್ಯಾಂಕರ್ಸ್ ಚೆಕ್ ರೂಪದಲ್ಲಿ ಮೀಸಲು ಬೆಲೆಯ 10% ರಂತೆ ತಿಳಿಸಿರುವ ಸಮಯ ಮತ್ತು ದಿನಾಂಕದ ಒಳಗೆ ಇಎಂಡಿ ಮೊತ್ತವನ್ನು ಪಾವತಿ ಮಾಡಬೇಕು. ಇಎಂಡಿ ಮೊತ್ತದ ಮೇಲೆ ಯಾವುದೇ ಬಡ್ಡಿ ಇರುವುದಿಲ್ಲ.
2. ಮಾರಾಟವನ್ನು **"ಹೇಗಿದೆಯೋ ಹಾಗೆ ಮತ್ತು ಎಲ್ಲಿದೆಯೋ ಹಾಗೆ ಅದರ ಆಧಾರದ"** ಮೇಲೆ ಮಾಡಲಾಗುವುದು.
3. ಸ್ವತ್ತನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ.
4. ಒಂದು ವೇಳೆ ಬಿಡ್‌ದಾರರು ಕಂಪನಿಯಾಗಿದ್ದರೆ, ಮಂಡಳಿಯು ಅಂಗೀಕರಿಸಿದ ನಿರ್ಣಯದ ಪ್ರತಿಯನ್ನು ಕಂಪನಿಯ ಪರವಾಗಿ ಹರಾಜಿನಲ್ಲಿ ಭಾಗವಹಿಸಲು ಅಧಿಕೃತ ಅಧಿಕಾರಿಯವರಿಂದ ಪಡೆದ ಪ್ರತಿಯನ್ನು ಸಲ್ಲಿಸಬೇಕು.
5. ಬಿಡ್ ಮೊತ್ತವನ್ನು **ರೂ.10,000/-** ಕ್ಕಿಂತ ಹೆಚ್ಚು ನಿಗದಿಪಡಿಸಲಾಗಿದೆ ಮತ್ತು ಈ ಸ್ವತ್ತನ್ನು ಅತಿ ಹೆಚ್ಚು ಬಿಡ್‌ದಾರರಿಗೆ ಮಾರಾಟ ಮಾಡಲಾಗುತ್ತದೆ.
6. ಯಶಸ್ವಿಯಾದ ಬಿಡ್‌ದಾರರು ಹರಾಜು ಮಾರಾಟವಾದ ತಕ್ಷಣ ಅದೇ ದಿನ ಮಾರಾಟ ಬೆಲೆಯ 25% ಹಣವನ್ನು (ಇಎಂಡಿ ಸೇರಿದಂತೆ) ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ತಿಳಿಸಿರುವ ಆಯಾ ಶಾಖೆಗಳ: **(1) ದೊಡ್ಡಬಳ್ಳಾಪುರ ಶಾಖೆ: A/C ನಂ. 121981013050189, ಶಾಖೆ IFSC: PKGB0012198, (2) ಬನಶಂಕರಿ ಶಾಖೆ: A/C ನಂ. 122101013050189, ಶಾಖೆ IFSC: PKGB0012210, (3) ಹಾವನೂರು ಎಕ್ಸ್‌ಟೆನ್ಷನ್ ಶಾಖೆ: A/C ನಂ. 122021013050189, ಶಾಖೆ IFSC: PKGB0012202 (4) ಬೆಳ್ಳಂದೂರು ಶಾಖೆ: A/C ನಂ. 122001013050189, ಶಾಖೆ IFSC: PKGB0012200** ತಿಳಿಸಿರುವ ಖಾತೆ ಸಂಖ್ಯೆಗೆ ಸಂದಾಯ ಮಾಡಬೇಕು ಮತ್ತು ಮಾರಾಟ ಬೆಲೆಯ ಉಳಿದ 75% ಬಾಕಿ ಹಣವನ್ನು ಮಾರಾಟ ಸ್ಥಿರೀಕರಣವಾದ 15 ದಿನಗಳ ಒಳಗೆ ಪಾವತಿ ಮಾಡಬೇಕು. ಒಂದು ವೇಳೆ ಹಣ ಪಾವತಿಸಲು ಯಶಸ್ವಿ ಬಿಡ್‌ದಾರರು ತಪ್ಪಿದರೆ ಅವರಿಗೆ ಸೂಚನೆ ನೀಡದೆ ಅವರು ಇದುವರೆಗೆ ಪಾವತಿ ಮಾಡಿರುವ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಸ್ವತ್ತನ್ನು ಮರುಹರಾಜಿಗೆ ಇಡಲಾಗುವುದು.
7. ಅಧಿಕೃತ ಅಧಿಕಾರಿಯಿಂದ ಮಾರಾಟದ ದೃಢೀಕರಣದ ಮತ್ತು ಪಾವತಿಯ ನಿಯಮಗಳ ಅನುಸಾರದ ಮೇಲೆ, ಮಾರಾಟದ ಅಧಿಕಾರವನ್ನು ಚಲಾಯಿಸುವ ಅಧಿಕೃತ ಅಧಿಕಾರಿ ರೂಪದಲ್ಲಿ ಖರೀದಿದಾರರ ಪರವಾಗಿ ಸೆಕ್ಯೂರಿಟೈಸೇಷನ್ 2002ರ ಕಾಯ್ದೆ, ಅಪೆಂಡಿಕ್ಸ್ 5 ಇದರ ಅನುಸಾರ ನೀಡಲಾಗುವುದು.
8. ಯಶಸ್ವಿಯಾಗದ ಬಿಡ್‌ದಾರರ ಹೆಸರಿಗೆ ಮಾರಾಟದ ಪ್ರತಿಯನ್ನು ನೀಡಲಾಗುವುದು ನೋಂದಾಯಿಸಲಾಗುವುದು ಹಾಗೂ ಮಾರಾಟದ ಪ್ರತಿಯನ್ನು ನೀಡುವುದಕ್ಕಿಂತ ಮುಂಚೆ ನಿಮ್ಮ ಪಾನ್ ಕಾರ್ಡ್ ಐಡಿ ಪ್ರೂಫ್ ಅನ್ನು ಪಾವತಿಸಬೇಕು.
9. ವಿಫಲವಾದ ಬಿಡ್ ದಾರರಿಗೆ ಇಎಂಡಿ ಮೊತ್ತವನ್ನು ಹರಾಜು ತೀರ್ಮಾನಿಸಿದ ತಕ್ಷಣವೇ ಹಿಂತಿರುಗಿಸಲಾಗುವುದು.
10. ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರುಗಳು ಬಿಡ್/ಆಫರುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಮತ್ತು / ಅಥವಾ ಹರಾಜು ಮಾರಾಟವನ್ನು ಮುಂದೂಡುವ/ ಮುಂದಕ್ಕೆ ಹಾಕುವ ರದ್ದುಪಡಿಸುವ ಸಂಪೂರ್ಣ ಹಕ್ಕನ್ನು ಅಧಿಕೃತ ಅಧಿಕಾರಿಯವರು ಹೊಂದಿರುವರು ಮತ್ತು ಮುಂಚಿತವಾಗಿ ಸೂಚನೆ ನೀಡದೆ ಮಾರಾಟದ ಯಾವುದೇ ಅಥವಾ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳನ್ನು ಮಾರ್ಪಾಡು ಮಾಡುವ ಅಧಿಕಾರವನ್ನು ಹೊಂದಿರುವರು.
11. ಯಶಸ್ವಿ ಖರೀದಿದಾರರು ಬಿಡ್‌ದಾರರು ಶಾಸನ ಬದ್ಧ ಬಾಕಿಗಳು/ತೆರಿಗೆಗಳು/ಶುಲ್ಕಗಳ/ಸ್ವತ್ತಿನ ತೆರಿಗೆ/ನೋಂದಣಿ ಶುಲ್ಕ/ಟಿಡಿಎಸ್/ ಬೆಸ್ಕಾಂ ಶುಲ್ಕಗಳು ನೀರಿನ ಶುಲ್ಕಗಳು/ ವರ್ಗಾವಣೆ ಖರ್ಚುಗಳಾದ ಮುದ್ರಾಂಕ ಸುಂಕ, ನೋಂದಣಿ ಶುಲ್ಕ ಇತ್ಯಾದಿಯನ್ನು ಭರಿಸಬೇಕು. ಬಿಡ್ ದಾರರು ಗುರುತಿನ ಚೀಟಿ, ವಿಳಾಸ/ಪ್ಯಾನ್ ಕಾರ್ಡ್ ಪ್ರತಿಯನ್ನು ಸಲ್ಲಿಸಬೇಕು.
12. ಹರಾಜಿನ ಅಡಿಯಲ್ಲಿ ತಿಳಿಸಿರುವ ಸ್ವತ್ತನ್ನು ಸ್ವತ್ತುಗಳನ್ನು ಎಲ್ಲಾ ಹೊರೆಗಳಿಂದ ಮುಕ್ತಗೊಂಡಿದೆ. ಸಾಲಗಾರರು ಭದ್ರತಾ ಸಾಲಗಾರರ ಸೂಚನೆಯಿಲ್ಲದೆ ಯಾವುದಾದರೂ ಹೊರೆಗಳನ್ನು ರಚಿಸಿದ್ದರೆ, ಯಶಸ್ವಿ ಬಿಡ್ ದಾರರ ಮೇಲೆ ಗಮನಿಸಲ್ಪಡಲಾಗುತ್ತದೆ.
13. ಘೋಷಿಸಿದ ಹರಾಜಿನಲ್ಲಿ ಯಾವುದೇ ದೋಷ, ತಪ್ಪು ಹೇಳಿಕೆಯನ್ನು ಕಂಡುಬಂದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. ಇತರೆ ನಿಯಮಗಳು ಮತ್ತು ನಿಬಂಧನೆಗಳು ಯಾವುದಾದರೂ ಇದ್ದರೆ ಹರಾಜು ನಡೆಯುವ ಸ್ಥಳದಲ್ಲಿ ತಿಳಿಸಲಾಗುವುದು.
14. ಹೆಚ್ಚಿನ ವಿವರಗಳಿಗಾಗಿ ಮೇಲಿನ ವಿಳಾಸದಲ್ಲಿ ಶಾಖಾ ವ್ಯವಸ್ಥಾಪಕರನ್ನು **ಕರ್ನಾಟಕ ಗ್ರಾಮೀಣ ಬ್ಯಾಂಕ್, (1) ದೊಡ್ಡಬಳ್ಳಾಪುರ ಶಾಖೆ: ದೂರವಾಣಿ ಸಂಖ್ಯೆ: 9030862279, (2) ಬನಶಂಕರಿ ಶಾಖೆ: ದೂರವಾಣಿ ಸಂಖ್ಯೆ: 9844090303, (3) ಹಾವನೂರು ಎಕ್ಸ್‌ಟೆನ್ಷನ್ ಶಾಖೆ: ದೂರವಾಣಿ ಸಂಖ್ಯೆ: 8147885809, (4) ಬೆಳ್ಳಂದೂರು ಶಾಖೆ: ದೂರವಾಣಿ ಸಂಖ್ಯೆ: 9590023800 ಅಥವಾ ಶ್ರೀ. ಕಾಂತೇಶ್ ಕುಮಾರ್ ಕೆ ಎನ್, ಪ್ರಾದೇಶಿಕ ಕಚೇರಿ, ದೂರವಾಣಿ ಸಂಖ್ಯೆ. 9845680406** ಅವರನ್ನು ಬೆಳಗ್ಗೆ **11.00** ಮತ್ತು ಸಂಜೆ **5.00** ರ ನಡುವಿನ ಯಾವುದೇ ಕೆಲಸದ ದಿನಗಳಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸುವುದು.
15. ಸ್ವತ್ತು ಮತ್ತು ಇತರೆ ವಿವರಗಳ ಪರಿಶೀಲನೆಗಾಗಿ, ಉದ್ದೇಶಿತ ಬಿಡ್ಡುದಾರರು ತಮ್ಮ ಸ್ವತ್ತನ್ನು ತಪಾಸಣೆ/ಮೌಲ್ಯಮಾಪನ ವಿಚಾರಣೆ ಇವೆಲ್ಲವು ಮಾಡುವ ಸ್ವಾತಂತ್ರವನ್ನು ಹೊಂದಿರುತ್ತಾರೆ.
16. ಸಾಲಗಾರರ/ ಜಾಮೀನುದಾರರಿಗೆ ಅಗತ್ಯ ಕ್ರಮಕ್ಕಾಗಿ ಸೂಚನೆಯನ್ನು ಈ ನೋಟೀಸಿನಲ್ಲಿ ತಿಳಿಸಲಾಗಿದೆ.
17. ಶಾಸನಬದ್ಧ ಅಧಿಕಾರಿಗಳು ಹರಾಜಿನ ದಿನಾಂಕದಂದು ರಜಾದಿನವನ್ನು ಘೋಷಿಸಿದರೆ, ಹರಾಜು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ನಡೆಯಲಾಗುವುದು.

ದಿನಾಂಕ : 13.05.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ, ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ, ಬೆಂಗಳೂರು.

ಸುಬೆಕ್ಸ್ ಲಿಮಿಟೆಡ್

subex New Possibilities. Now Possible.

(ಸಿಐಎನ್: L85110KA1994PLC016663)

ನೋಂದಾಯಿತ ಕಛೇರಿ: ಪ್ರಿಟೆಕ್ ಪಾರ್ಕ್ - ಎಸ್‌ಇಝೆಡ್, ಬ್ಲಾಕ್-09, 4ನೇ ಮಹಡಿ, ಬಿ ವಿಂಗ್, ಸರ್ವೇ ನಂ. 51-64/4, ಹೊರವರ್ತುಲ ರಸ್ತೆ, ಬೆಳ್ಳಂದೂರು ವಿಲೇಜ್, ವರ್ತೂರು ಹೋಬಳಿ, ಬೆಂಗಳೂರು, ಕರ್ನಾಟಕ, ಭಾರತ-560103 ದೂರವಾಣಿ: 080 3745 1377
ಇಮೇಲ್: investorrelations@subex.com ಜಾಲತಾಣ: www.subex.com

ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಪರಿಶೋಧಿತ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಪ್ರತಿ ಷೇರಿನ ದತ್ತಾಂಶ ಹೊರತುಪಡಿಸಿ ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿವರಗಳು	ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ	ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ವಾರ್ಷಿಕ	ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ
1	ಕಾರ್ಯಾಚರಣೆಗಳಿಂದ ಬಂದ ಆದಾಯ	7,296	27,906	7,060
2	ಅವಧಿಯ ನಿವ್ವಳ ಲಾಭ/(ನಷ್ಟ) (ತೆರಿಗೆ, ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ಮುನ್ನ#)	1,058	2,878	526
3	ತೆರಿಗೆಯ ಮುನ್ನ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	1,280	3,749	(1,412)
4	ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	993	2,853	(1,760)
5	ಅವಧಿಯ ಒಟ್ಟು ಸಮಗ್ರ ಆದಾಯ [ಅವಧಿಯು ಒಳಗೊಂಡ ಲಾಭ / (ನಷ್ಟ) (ತೆರಿಗೆಯ ನಂತರ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	1,584	3,736	(1,698)
6	ಪಾವತಿಸಿದ ಈಕ್ವಿಟಿ ಶೇರು ಬಂಡವಾಳ (ಮುಖಬೆಲೆ ರೂ. 5 ಪ್ರತಿಯೊಂದಕ್ಕೆ)	28,100	28,100	28,100
7	ವರ್ಷದ ಆಡಿಟೆಡ್ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವ ಮೀಸಲುಗಳು (ಮರುಮೌಲೀಕೃತ ಮೀಸಲುಗಳನ್ನು ಹೊರತುಪಡಿಸಿ)	-	6,181	-
8	ಪ್ರತಿ ಶೇರಿನ ಗಳಿಕೆ (ರೂ. 5/- ಪ್ರತಿಯೊಂದಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರೆಸಲು ಮತ್ತು ನಿಲ್ಲಿಸಿದೆ) 1. ಮೂಲ: 2. ವಿಭಜಿತ:	0.18	0.51	(0.32)

ಪ್ರತ್ಯೇಕ ಆರ್ಥಿಕ ಫಲಿತಾಂಶಗಳ ಕುರಿತು ಹೆಚ್ಚುವರಿ ಮಾಹಿತಿ ಈ ಕೆಳಗಿನಂತಿದೆ:-

ಕ್ರ. ಸಂ.	ವಿವರಗಳು	ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ	ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ವಾರ್ಷಿಕ	ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ
1	ಕಾರ್ಯಾಚರಣೆಗಳಿಂದ ಬಂದ ಆದಾಯ (ಅಸಾಧಾರಣ ವಸ್ತುಗಳು ಮತ್ತು ಇತರ ಆದಾಯದ ಮೊದಲು ಎಲ್‌ಎಲ್‌ಪಿಯಿಂದ ಬಂದ ಲಾಭದ ಪಾಲನ್ನು ಹೊರತುಪಡಿಸಿ)	6,456	25,607	6,627
2	ಅವಧಿಯ ನಿವ್ವಳ ಲಾಭ/(ನಷ್ಟ) (ತೆರಿಗೆಯ, ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ಮುನ್ನ#)	(180)	184	106
3	ತೆರಿಗೆಯ ಮುನ್ನ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	693	916	(2,021)
4	ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	604	586	(2,192)
5	ಅವಧಿಯ ಒಟ್ಟು ಸಮಗ್ರ ಆದಾಯ [ಅವಧಿಯು ಒಳಗೊಂಡ ಲಾಭ / (ನಷ್ಟ) (ತೆರಿಗೆಯ ನಂತರ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	622	575	(2,163)

ಟಿಪ್ಪಣಿ: ಎ) ಮೇಲಿನ ಸಾರಸತ್ವವು **2015**ರ ಸೆಬಿಯ (ಲಿಸ್ಟಿಂಗ್ ಬಾಧ್ಯತೆ ಮತ್ತು ಘೋಷಣೆಗಳ ಅವಶ್ಯಕತೆಗಳು) **33**ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ / ವಾರ್ಷಿಕ ಆರ್ಥಿಕ ಫಲಿತಾಂಶಗಳ ವಿಸ್ತೃತ ನಮೂನೆಯ ಸಾರಾಂಶವಾಗಿದೆ. ತ್ರೈಮಾಸಿಕ / ವಾರ್ಷಿಕ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಮತ್ತು ಕಂಪನಿಯ ವೆಬ್‌ಸೈಟ್ **www.subex.com** ನಲ್ಲಿ ಸಹ ಲಭ್ಯವಿದೆ.

ಬಿ) # - ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳನ್ನು **Ind AS** ನಿಯಮಗಳು/ **AS** ನಿಯಮಗಳ ಅನ್ವಯ ಲಾಭ ಮತ್ತು ನಷ್ಟದ ವಿವರಣೆಯಲ್ಲಿ ಯಾವುದು ಅನ್ವಯಿಸುವುದೋ ಅದಕ್ಕೆ ಸರಿಹೊಂದಿಸಲಾಗಿದೆ.

ಮಂಡಳಿಯ ಆದೇಶದ ಮೇರೆಗೆ
ಸಹಿ/-
ನಿಶಾ ದತ್
ವ್ಯವಸ್ಥಾಪಕ ನಿರ್ದೇಶಕಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
DIN: 06465957

ಸ್ಥಳ : ಬೆಂಗಳೂರು
ದಿನಾಂಕ : ಮೇ **12, 2026**

ಗಂಡನ ಕಾಮಪುರಾಣದ ಕುತಂತ್ರ ಬಿಚ್ಚಿಟ್ಟ ಹೆಂಡತಿ

ಬೆಂಗಳೂರು: ಲೇಡಿ ಇನ್ಫ್ಲುಯೆನ್ಸರ್ ಬ್ಲ್ಯಾಕ್‌ಮೇಲ್ ಮಾಡಿದ್ದ ಪ್ರಕರಣ ತಿರುವು ಪಡೆದುಕೊಂಡಿದೆ. ಯುವತಿ ದೂರು ನೀಡಿದರೆ ತಾನು ಸಿಕ್ಕಿಕೊಳ್ಳುವುದಾಗಿ ತಿಳಿದು ಮೊದಲೇ ಬ್ಲಾಕ್‌ಮೇಲ್ ಹೆಸರಲ್ಲಿ ಸುಳ್ಳು ದೂರು ನೀಡಿದ್ದಾನೆಂದು ಗಂಡನ ಕಾಮಪುರಾಣ ಮಡದಿ ಬಿಚ್ಚಿಟ್ಟಿದ್ದಾರೆ.

ಮೇಕಪ್ ಕ್ಲಿನಿಕ್ ಮಾಲೀಕ ಕಾರ್ತಿಕ್ ಪುತಾ ಎಂಬುವವರು ಸೋಶಿಯಲ್ ಮೀಡಿಯಾ ಇನ್ಫ್ಲುಯೆನ್ಸರ್ ಸಾಧನಾ ಶೆಟ್ಟಿ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿತ್ತು. ಇದೀಗ ಈ ಸಂಬಂಧ ಪತಿ ಕಾರ್ತಿಕ್ ಪುತಾ ವಿರುದ್ಧ ಪತ್ನಿ ಹರ್ಷಿತಾ ಹೈದರಾಬಾದ್, ಬೆಂಗಳೂರು ಡಿಜಿಗೆ ಪತ್ರ ಬರೆದು ಸುಳ್ಳು ಕಥೆಯ ಬಗ್ಗೆ ತಿಳಿಸಿದ್ದಾರೆ

ತಪ್ಪನ್ನು ಮುಚ್ಚಿಟ್ಟುಕೊಳ್ಳಲು ಸಾಧನಾ ಮೇಲೆ ದೂರು ನೀಡಿದ್ದ. ಕ್ಲಿನಿಕ್ ಪ್ರಮೋಶನ್ ಸಲುವಾಗಿ ಯುವತಿಯನ್ನು ಭೇಟಿ ಮಾಡಿದ್ದ. ಆಗ ಇಬ್ಬರ ಮಧ್ಯೆ ಸ್ನೇಹವಾಗಿತ್ತು. ಬಳಿಕ ಪ್ರೀತಿಯ ಹೆಸರಲ್ಲಿ ಮುಂದುವರೆಯೋದಾಗಿ ತಿಳಿಸಿ, ಸಾಕಷ್ಟು ಕಡೆ ಸುತ್ತಾಡಿಸಿ ಎಂಜಾಯ್ ಮಾಡಿದ್ದ. ಅಲ್ಲದೇ ಲೈಂಗಿಕವಾಗಿ ಬಳಸಿಕೊಂಡಿದ್ದಾನೆಂದು ಯುವತಿ ಮನೆ ಹತ್ತಿರ ಬಂದು ಗಲಾಟೆ ಮಾಡಿದ್ದಳು. ಕಳೆದ ವರ್ಷ ಯುವತಿ ಹೈದರಾಬಾದ್‌ನಲ್ಲಿ ದೂರು ನೀಡಿದ್ದಳು. ಆಗ ಆಕೆಯ ಮೊಬೈಲ್ನ್ನು ಕಳ್ಳತನ ಮಾಡಿಸಿದ್ದ. ಚಾಲಾಕಿತನ ಉಪಯೋಗಿಸಿ ತನ್ನ ಲೈಂಗಿಕ ಸಂಬಂಧ ಮುಚ್ಚಿಹಾಕಲು ಖಾಸಗಿ ಫೋಟೋ, ವಿಡಿಯೊ ಇಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾಳೆಂದು ಆರೋಪಿಸಿ ದೂರು ನೀಡಿದ್ದ ಎಂದು ಆರೋಪಿಸಿದ್ದಾರೆ.

ಮೊಬೈಲ್ ವಿಷಯಕ್ಕೆ ಹಲ್ಲೆ: ಸಾವು

ಬೆಂಗಳೂರು: ಮೊಬೈಲ್ ವಿಚಾರಕ್ಕೆ ಸ್ನೇಹಿತನಿಂದ ಹಲ್ಲೆಗೊಳಗಾದ ಯುವಕ ಸಾವನ್ನಪ್ಪಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಮೇ 10ರಂದು ಮಾರತಹಳ್ಳಿ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸ್ನೇಹಿತ ರಾಮು ಎಂಬಾತನಿಂದ ಚಾಕು ಇರಿತಕ್ಕೊಳಗಾಗಿದ್ದ ಪರಶುರಾಮ ಯಲ್ಲಪ್ಪ ಮಂಗಳಗಟ್ಟಿ (25) ಚಿಕಿತ್ಸೆ ಫಲಿಸದೇ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ.

ಹುಬ್ಬಳ್ಳಿ ಮೂಲದ ಪರಶುರಾಮ ಹಾಗೂ ರಾಮು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡಿಕೊಂಡಿದ್ದರು. ಮಾರತ್ ಹಳ್ಳಿ ಠಾಣೆ ವ್ಯಾಪ್ತಿಯ ಚೌಡೇಶ್ವರಿ ರಸ್ತೆಯಲ್ಲಿನ ಬೆಸ್ಕಾಂ ಕಚೇರಿ ಬಳಿ ಬಾಡಿಗೆ ರೂಮ್‌ನಲ್ಲಿ ವಾಸವಿದ್ದರು. ಮೇ 10ರಂದು ನೈಟ್ ಶಿಫ್ಟ್ ಮುಗಿಸಿ, ಪಾನಮತ್ತನಾಗಿ ಬಂದಿದ್ದ ರಾಮು, ಪರಶುರಾಮನ ಮೊಬೈಲ್ ಫೋನ್ ಬಚ್ಚಿಟ್ಟಿದ್ದ. ಎಚ್ಚರವಾದ ಬಳಿಕ 'ಮೊಬೈಲ್ ಎಲ್ಲಿಟ್ಟಿದ್ದೀಯಾ, ಕೊಡು' ಎಂದು ಪರಶುರಾಮ ಕೇಳಿದ್ದ. ಈ ವೇಳೆ, ರಾಮು ಮೊಬೈಲ್ ಕೊಡಲ್ಲ ಎಂದಿದ್ದಕ್ಕೆ ಇಬ್ಬರ ನಡುವೆ ವಾಗ್ವಾದವಾಗಿತ್ತು. ಸಿಟ್ಟಿಗೆದ್ದ ರಾಮು, ಅಡುಗೆ ಕೋಣೆಯಿಂದ ಚಾಕು ತಂದು ಪರಶುರಾಮನಿಗೆ ಇರಿದಿದ್ದ. ಬಳಿಕ ಆತನ ಮೊಬೈಲ್ ತೆಗೆದುಕೊಂಡು ಪರಾರಿಯಾಗಿದ್ದ. ತೀವ್ರ ರಕ್ತಸ್ರಾವದಿಂದ ಒದ್ದಾಡುತ್ತಿದ್ದವನನ್ನು ಅಕ್ಕಪಕ್ಕದವರು ಗಮನಿಸಿ ಆಸ್ಪತ್ರೆಗೆ ದಾಖಲಿಸಿದ್ದರು. ನಂತರ ಕುಟುಂಬಸ್ಥರು ಪರಶುರಾಮನನ್ನು ಹುಬ್ಬಳ್ಳಿಗೆ ಕರೆದೊಯ್ದಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಹುಬ್ಬಳ್ಳಿಯಲ್ಲಿ ಪರಶುರಾಮ ಸಾವನ್ನಪ್ಪಿದ್ದಾನೆ. ಮೃತನ ಸಹೋದರ ಗಂಗಪ್ಪನಿಂದ ದೂರು ಪಡೆದ ಮಾರತ್ ಹಳ್ಳಿ ಪೊಲೀಸರು, ಸದ್ಯ ಪ್ರಕರಣ ದಾಖಲಿಸಿಕೊಂಡು ಆರೋಪಿಗಾಗಿ ಹುಡುಕಾಟ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ.

ಫಾರಂ ನಂ. ಸಿಎಎ.2

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230(3) ಅನ್ನು ಕಂಪನಿಗಳ (ಕಾಂಪ್ರೊಮೈಸಸ್, ಅರೇಂಜ್‌ಮೆಂಟ್ಸ್ ಮತ್ತು ಅಮಲ್ಗಮೇಶನ್ಸ್) ನಿಯಮಗಳು, 2013ರ ನಿಯಮ 6 ಮತ್ತು 7 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಪ್ರಕಾರ]

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ಬೆಂಗಳೂರು ಪೀಠ ಬೆಂಗಳೂರು ಇವರ ಸಮ್ಮುಖದಲ್ಲಿ
ಕಂಪನಿ ಅರ್ಜಿ ಸಂ. ಸಿಎ (ಸಿಎಎ)/06/ಬಿಬಿ/2026
ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230 ಮತ್ತು 232 ಹಾಗೂ ಕಂಪನಿಗಳ ಕಾಯ್ದೆ, 2013ರ ಇನ್ನಿತರ ಅನ್ವಯಿಕ ನಿಯಮಗಳನ್ನು ಕಂಪನಿಗಳ (ಕಾಂಪ್ರೊಮೈಸಸ್, ಅರೇಂಜ್‌ಮೆಂಟ್ಸ್ ಮತ್ತು ಅಮಲ್ಗಮೇಶನ್ಸ್) ನಿಯಮಗಳು, 2016 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ವಿಷಯದಲ್ಲಿ
ಮತ್ತು
ಕೆಳಗಿನವುಗಳ ವಿಲೀನ ಯೋಜನೆಯ ವಿಷಯದಲ್ಲಿ

ಬಸಾಯಿ ಸ್ಟೀಲ್ ಅಂಡ್ ಪವರ್ ಪ್ರೈವೇಟ್ ಲಿಮಿಟೆಡ್
ಸಿಐಎನ್: **U27109TG2002PTC038411**
ನೋಂದಾಯಿತ ಕಚೇರಿ: ಪ್ಲಾಟ್ ನಂ. 42, ಸರ್ವೆ ನಂ. 258/1, ಶಾಪುರನಗರ, ಮುಖ್ಯರಸ್ತೆ, ರೈತು ಬಜಾರ್ ಎದುರು, ಐಡಿಎ ಜೀಡಿಮೆಲ್ಲಾ, ಹೈದರಾಬಾದ್, ತೆಲಂಗಾಣ - 500055
... ಟ್ರಾನ್ಸ್‌ಫೆರರ್ ಕಂಪನಿ-1

ಏ-ಒನ್ ಗೋಲ್ಡ್ ಪೈಪ್ಸ್ ಅಂಡ್ ಟ್ಯೂಬ್ಸ್ ಪ್ರೈವೇಟ್ ಲಿಮಿಟೆಡ್
ಸಿಐಎನ್: **U27200KA2020PTC139870**
ನೋಂದಾಯಿತ ಕಚೇರಿ: ಏ ಒನ್ ಹೌಸ್ ನಂ. 326, ಮುಂಭಾಗ, ಮೊದಲನೇ ಮಹಡಿ ಸಿಕ್ಯೂಎಲ್ ಬಡಾವಣೆ, ವಾರ್ಡ್ ನಂ. 8, ಸಹಕಾರನಗರ, ಬೆಂಗಳೂರು, ಕರ್ನಾಟಕ - 560092
... ಅರ್ಜಿದಾರ ಕಂಪನಿ-1 ಟ್ರಾನ್ಸ್‌ಫೆರರ್ ಕಂಪನಿ-2

ಏ-ಒನ್ ಸ್ಟೀಲ್ಸ್ ಇಂಡಿಯಾ ಲಿಮಿಟೆಡ್
(ಹಿಂದಿನ ಏ-ಒನ್ ಸ್ಟೀಲ್ ಅಂಡ್ ಅಲಾಯ್ಸ್ ಪ್ರೈವೇಟ್ ಲಿಮಿಟೆಡ್)
ಸಿಐಎನ್: **U28999KA2012PLC063439**
ನೋಂದಾಯಿತ ಕಚೇರಿ: ಏ ಒನ್ ಹೌಸ್ ನಂ. 326, ಸಿಕ್ಯೂಎಲ್ ಬಡಾವಣೆ, ವಾರ್ಡ್ ನಂ. 8, ಸಹಕಾರನಗರ, ಬೆಂಗಳೂರು - 560092, ಕರ್ನಾಟಕ
... ಅರ್ಜಿದಾರ ಕಂಪನಿ-2 / ಟ್ರಾನ್ಸ್‌ಫೆರೀ ಕಂಪನಿ

ಅರ್ಜಿದಾರ ಕಂಪನಿ-1 ಇವರ ಡಿಬೆಂಚರ್ ಹೋಲ್ಡರ್ಸ್ ಹಾಗೂ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆ ಕುರಿತಾ ಪ್ರಕಟಣೆ ಮತ್ತು ಜಾಹೀರಾತು ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ('ಎನ್‌ಸಿಎಲ್‌ಟಿ') ರವರ ದಿನಾಂಕ 24ನೇ ಏಪ್ರಿಲ್, 2026ರ ಆದೇಶದಲ್ಲಿ ('ಆರ್ಡರ್'), ಟ್ರಾನ್ಸ್‌ಫೆರೀ ಕಂಪನಿಯ ಜೊತೆಗೆ ಟ್ರಾನ್ಸ್‌ಫೆರ್ ಕಂಪನಿ-1 ಮತ್ತು ಟ್ರಾನ್ಸ್‌ಫೆರರ್ ಕಂಪನಿ-2 ಇವರುಗಳ ವಿಲೀನ ಯೋಜನೆಯನ್ನು ಗಪರಿಗಣಿಸುವುದಕ್ಕಾಗಿ ಮತ್ತು ಅದು ಸೂಕ್ತ ಎಂದೆನಿಸಿದಲ್ಲಿ, ಅದನ್ನು ಮಾರ್ಪಾಡುಗಳೊಂದಿಗೆ ಅಥವಾ ಮಾರ್ಪಾಡುರಹಿತವಾಗಿ ಅನುಮೋದಿಸುವ ಉದ್ದೇಶಕ್ಕಾಗಿ, ಏ-ಒನ್ ಗೋಲ್ಡ್ ಪೈಪ್ಸ್ ಅಂಡ್ ಟ್ಯೂಬ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ('ಟ್ರಾನ್ಸ್‌ಫೆರರ್ ಕಂಪನಿ-2') ಪ್ರಸಕ್ತ ಡಿಬೆಂಚರ್ ಹೋಲ್ಡರ್‌ಗಳ ಮತ್ತು ಐಎನ್‌ಆರ್ 1,00,000/- ಮತ್ತು ಮೇಲ್ಪಟ್ಟ ಮೌಲ್ಯದ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಪ್ರತ್ಯೇಕ ಸಭೆಗಳನ್ನು ಏರ್ಪಡಿಸಬೇಕೆಂದು ನಿರ್ದೇಶನ ನೀಡಲಾಗಿರುತ್ತದೆ. ಸದರಿ ಆದೇಶದ ಮೇರೆಗೆ ಮತ್ತು ಅದರಲ್ಲಿನ ನಿರ್ದೇಶನದ ಪ್ರಕಾರ, ಟ್ರಾನ್ಸ್‌ಫೆರರ್ ಕಂಪನಿ-2 ಇವರ ಡಿಬೆಂಚರ್ ಹೋಲ್ಡರ್‌ಗಳ ಮತ್ತು ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಪ್ರತ್ಯೇಕ ಸಭೆಗಳನ್ನು, ಈ ಕೆಳಗಿನಂತೆ ಏರ್ಪಡಿಸಲಾಗುತ್ತಿದೆ:

ಸಭೆಯ ವರ್ಗ	ಸಭೆಯ ದಿನ, ದಿನಾಂಕ	ಸಮಯ (ಐಎಸ್‌ಟಿ)	ಸಭೆಯ ಮಾದರಿ
ಡಿಬೆಂಚರ್ ಹೋಲ್ಡರ್ಸ್	ಸೋಮವಾರ, 15ನೇ ಜೂನ್ 2026	ಬೆಳಗ್ಗೆ 11.00 ಗಂಟೆ	ಇ-ವೋಟಿಂಗ್ ಸೌಲಭ್ಯದೊಂದಿಗೆ, ವಿಡಿಯೋ ಕಾನ್ಫರೆನ್ಸ್ (ವಿಸಿ) / ಇನ್ನಿತರೆ ಆಡಿಯೋ ವಿಷುಯಲ್ ಮಾಧ್ಯಮಗಳ (ಒಎವಿಎಂ) ಮುಖಾಂತರ ಸಭೆ ಕೈಗೊಳ್ಳಲಾಗುತ್ತದೆ
ಅನ್‌ಸೆಕ್ಯೂರ್ಡ್ ಕ್ರೆಡಿಟರ್ಸ್		ಬೆಳಗ್ಗೆ 11.30 ಗಂಟೆ	ಇ-ವೋಟಿಂಗ್ ಸೌಲಭ್ಯದೊಂದಿಗೆ, ಟ್ರಾನ್ಸ್‌ಫೆರರ್ ಕಂಪನಿ-2 ಇವರ ನೋಂದಾಯಿತ ಕಚೇರಿಯಲ್ಲಿ ಭೌತಿಕ ಸಭೆ ಕೈಗೊಳ್ಳಲಾಗುತ್ತದೆ.

ಸದರಿ ವಿಲೀನ ಯೋಜನೆಯ ಪ್ರತಿ ಮತ್ತು ಸೆಕ್ಷನ್ 230ರ ಅಡಿಯಲ್ಲಿನ ವರದಿ ಪ್ರತಿ ಹಾಗೂ ಇನ್ನಿತರ ದಾಖಲಾತಿಗಳನ್ನು, ಟ್ರಾನ್ಸ್‌ಫೆರರ್ ಕಂಪನಿ-2 ಇವರ ನೋಂದಾಯಿತ ಕಚೇರಿಯಿಂದ ನಿಶುಲ್ಕವಾಗಿ ಪಡೆದುಕೊಳ್ಳಬಹುದು. ಸಭೆಗಳಿಗೆ ಹಾಜರಾಗಿ ತಮ್ಮ ಮತ ಚಲಾಯಿಸುವ ಹಕ್ಕನ್ನು ಹೊಂದಿರುವ ವ್ಯಕ್ತಿಗಳು, ಖುದ್ದಾಗಿ ಆಗಲಿ ಅಥವಾ ತಮ್ಮ ಅಧಿಕೃತ ಪ್ರತಿನಿಧಿಗಳ ಮುಖಾಂತರವಾಗಿ ಸಭೆಗೆ (ಭೌತಿಕ ಸಭೆಗೆ) ಹಾಜರಾಗಿ ಮತ ಚಲಾಯಿಸಬಹುದು, ಆದರೆ, ಸಭೆಗೆ 48 ಗಂಟೆಗಳ ಕಾಲ ಮುಂಚಿತವಾಗಿಯೇ, ತಮ್ಮ ಎಲ್ಲಾ ಪ್ರಾಕ್ಸಿಗಳ ವಿವರಗಳನ್ನು, ನಿರ್ದಿಷ್ಟ ನಮೂನೆಯಲ್ಲಿ ಭರ್ತಿ ಮಾಡಿ, ಟ್ರಾನ್ಸ್‌ಫೆರರ್ ಕಂಪನಿ-2 ಇವರ ಮೇಲ್ಕಂಡ ವಿಳಾಸದಲ್ಲಿರುವ ನೋಂದಾಯಿತ ಕಚೇರಿಗೆ ಸಲ್ಲಿಸತಕ್ಕದ್ದು.

ಮಾನ್ಯ ನ್ಯಾಯಾಧಿಕರಣವು ಮೇಲ್ಕಂಡ ಸಭೆಗಳಿಗೆ, ವಕೀಲರಾದ ಶ್ರೀ ಅಜಯ್ ಪಿ. ಜಾನ್ಸನ್ ಇವರನ್ನು ಚೇರ್‌ಪರ್ಸನ್ ಎಂಬುದಾಗಿ ಮತ್ತು ಕಾರ್ಯನಿರತ ಕಂಪನಿ ಕಾರ್ಯದರ್ಶಿಯಾದ ಶ್ರೀ ಸರ್ವೋತ್ತಮ್ ಪಿ ಇವರನ್ನು ಪರಿಶೀಲಕರನ್ನಾಗಿಯೂ ನಿಯೋಜಿಸಿರುತದೆ. ಒಂದು ವೇಳೆ, ಮೇಲ್ಕಂಡ ವಿಲೀನ ಯೋಜನೆಯು ಸಭೆಯಲ್ಲಿ ಅನುಮೋದನೆ ಪಡೆದುಕೊಂಡಲ್ಲಿ, ಅನುಕ್ರಮವಾಗಿ ಅದು ನ್ಯಾಯಾಧಿಕರಣದ ಅನುಮೋದನೆಯ ನಿಬಂಧನೆಗೆ ಒಳಪಡುತ್ತದೆ.

ಟ್ರಾನ್ಸ್‌ಫೆರರ್ ಕಂಪನಿ-2 ಕೂಡ, ಯೋಜನೆಯನ್ನು ಅನುಮೋದಿಸುವ ಠರಾವಿಗೆ ಮತ ಚಲಾಯಿಸಲು ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಕಲ್ಪಿಸುತ್ತದೆ. ಖಾತೆಗಳ ಪುಸ್ತಕಗಳಲ್ಲಿ ದಿನಾಂಕ 31ನೇ ಜನವರಿ, 2026 ಇರುವ, ಟ್ರಾನ್ಸ್‌ಫೆರರ್ ಕಂಪನಿ-2ರಲ್ಲಿನ ಡಿಬೆಂಚರ್ ಹೋಲ್ಡರ್‌ಗಳ ಮತ್ತು ಐಎನ್‌ಆರ್ 1,00,000/- ಮತ್ತು ಮೇಲ್ಪಟ್ಟ ಮೌಲ್ಯದ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳಿಗೆ, 13ನೇ ಮೇ, 2026 ರಂದು ಪ್ರಕಟಣೆಗಳನ್ನು ರವಾನಿಸಲಾಗಿದೆ.

ಡಿಬೆಂಚರ್ ಹೋಲ್ಡರ್ಸ್ ಹಾಗೂ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳು ರಿಮೋಟ್ ಇ-ವೋಟಿಂಗ್ ಸೌಲಭ್ಯದ ಮುಖಾಂತರ ತಮ್ಮ ಚಲಾಯಿಸಿದ ಬಳಿಕವೂ ಸಭೆಯಲ್ಲಿ ಪಾಲ್ಗೊಳ್ಳಬಹುದು, ಆದರೆ ಸಭೆಯಲ್ಲಿ ಪುನಃ ಮತ ಚಲಾಯಿಸಲು ಅವಕಾಶ ಇರುವುದಿಲ್ಲ.

ಮುಂದುವರಿದಂತೆ, ನ್ಯಾಯಾಧಿಕರಣದ ಆದೇಶದ ಮೇರೆಗೆ, ಟ್ರಾನ್ಸ್‌ಫೆರರ್ ಕಂಪನಿ-2 ಇವರು ವಿಸಿ/ಒಎವಿಎಂ ವಿಧಾನದ ಮೂಲಕ ಡಿಬೆಂಚರ್ ಹೋಲ್ಡರ್ಸ್ ಸಭೆಯನ್ನು ಕೈಗೊಳ್ಳುತ್ತಿದ್ದಾರೆ. ಆದ್ದರಿಂದ, ಡಿಬೆಂಚರ್ ಹೋಲ್ಡರ್ಸ್‌ಗೆ ಈ ಕೆಳಗಿನಂತೆ ಮಾಹಿತಿ ನೀಡಲಾಗಿದೆ:

ಇ-ವೋಟಿಂಗ್ ಆರಂಭ	**ಶುಕ್ರವಾರ, 12ನೇ ಜೂನ್, 2026 ರಂದು ಬೆಳಗ್ಗೆ 09.00 ಗಂಟೆ**
ಇ-ವೋಟಿಂಗ್ ಮುಕ್ತಾಯ	**ಭಾನುವಾರ, 14ನೇ ಜೂನ್, 2026 ರಂದು ಸಂಜೆ 05.00 ಗಂಟೆ**
ಇ-ವೋಟಿಂಗ್ ವೆಬ್‌ಲಿಂಕ್	https://www.evotingindia.com/
ವಿಸಿ ಮುಖಾಂತರ ಸಭೆಗೆ ಹಾಜರಾಗುವ ವೆಬ್‌ಲಿಂಕ್	https://centraldepository.webex.com/centraldepository/j.php?MTID=ma1e8c87e5ee09e8084927d0d38a92f86

ಇ-ವೋಟಿಂಗ್ ಕುರಿತಂತೆ ಯಾವುದೇ ವಿಚಾರಣೆಗಳಿದ್ದಲ್ಲಿ ಅಥವಾ ಇನ್ಯಾವುದೇ ತಾಂತ್ರಿಕ ನೆರವು ಬೇಕಾಗಿದ್ದಲ್ಲಿ, ದಯವಿಟ್ಟು ಸಂಪರ್ಕಿಸಿ **legal@aonesteelgroup.com**

ಸೂಚನೆ: ನ್ಯಾಯಾಧಿಕರಣದ ಸದರಿ ಆದೇಶದ ಪ್ರಕಾರ, ಟ್ರಾನ್ಸ್‌ಫೆರರ್ ಕಂಪನಿ-2ರ ಇಕ್ವಿಟಿ ಷೇರುದಾರರ, ಆದ್ಯತಾ ಷೇರುದಾರರ ಮತ್ತು ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆ ಕೈಗೊಳ್ಳುವುದನ್ನು ಕೈಬಿಡಲಾಗಿದೆ.

ಮಂಡಳಿಯ ಪರವಾಗಿ
ಏ-ಒನ್ ಗೋಲ್ಡ್ ಪೈಪ್ಸ್ ಅಂಡ್ ಟ್ಯೂಬ್ಸ್ ಪ್ರೈವೇಟ್ ಲಿಮಿಟೆಡ್
ಸಹಿ/ ಸುನಿಲ್ ಜಲ್ಲಾನ್
ನಿರ್ದೇಶಕರು, ಡಿಐಎನ್: 02150846

ದಿನಾಂಕ: 13ನೇ ಮೇ, 2026
ಸ್ಥಳ: ಬೆಂಗಳೂರು

ಫಾರಂ ನಂ. ಸಿಎಎ.2

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230(3) ಅನ್ನು ಕಂಪನಿಗಳ (ಕಾಂಪ್ರೊಮೈಸಸ್, ಅರೇಂಜ್‌ಮೆಂಟ್ಸ್ ಮತ್ತು ಅಮಲ್ಗಮೇಶನ್ಸ್) ನಿಯಮಗಳು, 2013ರ ನಿಯಮ 6 ಮತ್ತು 7 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಪ್ರಕಾರ]

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ಬೆಂಗಳೂರು ಪೀಠ ಬೆಂಗಳೂರು ಇವರ ಸಮ್ಮುಖದಲ್ಲಿ
ಕಂಪನಿ ಅರ್ಜಿ ಸಂ. ಸಿಎ (ಸಿಎಎ)/06/ಬಿಬಿ/2026
ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230 ಮತ್ತು 232 ಹಾಗೂ ಕಂಪನಿಗಳ ಕಾಯ್ದೆ, 2013ರ ಇನ್ನಿತರ ಅನ್ವಯಿಕ ನಿಯಮಗಳನ್ನು, ಕಂಪನಿಗಳ (ಕಾಂಪ್ರೊಮೈಸಸ್, ಅರೇಂಜ್‌ಮೆಂಟ್ಸ್ ಮತ್ತು ಅಮಲ್ಗಮೇಶನ್ಸ್) ನಿಯಮಗಳು, 2016 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ವಿಷಯದಲ್ಲಿ
ಮತ್ತು
ಕೆಳಗಿನವುಗಳ ವಿಲೀನ ಯೋಜನೆಯ ವಿಷಯದಲ್ಲಿ

ಬಸಾಯಿ ಸ್ಟೀಲ್ ಅಂಡ್ ಪವರ್ ಪ್ರೈವೇಟ್ ಲಿಮಿಟೆಡ್
ಸಿಐಎನ್: **U27109TG2002PTC038411**
ನೋಂದಾಯಿತ ಕಚೇರಿ: ಪ್ಲಾಟ್ ನಂ. 42, ಸರ್ವೆ ನಂ. 258/1, ಶಾಪುರನಗರ, ಮುಖ್ಯರಸ್ತೆ, ರೈತು ಬಜಾರ್ ಎದುರು, ಐಡಿಎ ಜೀಡಿಮೆಲ್ಲಾ, ಹೈದರಾಬಾದ್, ತೆಲಂಗಾಣ - 500055 **... ಟ್ರಾನ್ಸ್‌ಫೆರರ್ ಕಂಪನಿ-1**

ಏ-ಒನ್ ಗೋಲ್ಡ್ ಪೈಪ್ಸ್ ಅಂಡ್ ಟ್ಯೂಬ್ಸ್ ಪ್ರೈವೇಟ್ ಲಿಮಿಟೆಡ್
ಸಿಐಎನ್: **U27200KA2020PTC139870**
ನೋಂದಾಯಿತ ಕಚೇರಿ: ಏ ಒನ್ ಹೌಸ್ ನಂ. 326, ಮುಂಭಾಗ, ಮೊದಲನೇ ಮಹಡಿ ಸಿಕ್ಯೂಎಲ್ ಬಡಾವಣೆ, ವಾರ್ಡ್ ನಂ. 8, ಸಹಕಾರನಗರ, ಬೆಂಗಳೂರು, ಕರ್ನಾಟಕ - 560092 **... ಅರ್ಜಿದಾರ ಕಂಪನಿ-1/ಟ್ರಾನ್ಸ್‌ಫೆರರ್ ಕಂಪನಿ-2**

ಏ-ಒನ್ ಸ್ಟೀಲ್ಸ್ ಇಂಡಿಯಾ ಲಿಮಿಟೆಡ್
(ಹಿಂದಿನ ಏ-ಒನ್ ಸ್ಟೀಲ್ ಅಂಡ್ ಅಲಾಯ್ಸ್ ಪ್ರೈವೇಟ್ ಲಿಮಿಟೆಡ್)
ಸಿಐಎನ್: **U28999KA2012PLC063439**
ನೋಂದಾಯಿತ ಕಚೇರಿ: ಏ ಒನ್ ಹೌಸ್ ನಂ. 326, ಸಿಕ್ಯೂಎಲ್ ಬಡಾವಣೆ, ವಾರ್ಡ್ ನಂ. 08, ಸಹಕಾರನಗರ, ಬೆಂಗಳೂರು - 560092, ಕರ್ನಾಟಕ
... ಅರ್ಜಿದಾರ ಕಂಪನಿ-2 / ಟ್ರಾನ್ಸ್‌ಫೆರೀ ಕಂಪನಿ

ಅರ್ಜಿದಾರ ಕಂಪನಿ-2 ಇವರ ಈಕ್ವಿಟಿ ಷೇರುದಾರರ, ಸೆಕ್ಯೂರ್ಡ್ ಕ್ರೆಡಿಟರ್ ಹಾಗೂ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆ ಕುರಿತಾ ಪ್ರಕಟಣೆ ಮತ್ತು ಜಾಹೀರಾತು ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ('ಎನ್‌ಸಿಎಲ್‌ಟಿ') ರವರ ದಿನಾಂಕ 24ನೇ ಏಪ್ರಿಲ್, 2026ರ ಆದೇಶದಲ್ಲಿ ('ಆರ್ಡರ್'), ಟ್ರಾನ್ಸ್‌ಫೆರೀ ಕಂಪನಿಯ ಜೊತೆಗೆ ಟ್ರಾನ್ಸ್‌ಫೆರ್ ಕಂಪನಿ-1 ಮತ್ತು ಟ್ರಾನ್ಸ್‌ಫೆರರ್ ಕಂಪನಿ-2 ಇವರುಗಳ ವಿಲೀನ ಯೋಜನೆಯನ್ನು ಪರಿಗಣಿಸುವುದಕ್ಕಾಗಿ ಮತ್ತು ಅದು ಸೂಕ್ತ ಎಂದೆನಿಸಿದಲ್ಲಿ, ಅದನ್ನು ಮಾರ್ಪಾಡುಗಳೊಂದಿಗೆ ಅಥವಾ ಮಾರ್ಪಾಡುರಹಿತವಾಗಿ ಅನುಮೋದಿಸುವ ಉದ್ದೇಶಕ್ಕಾಗಿ, **ಏ-ಒನ್ ಸ್ಟೀಲ್ಸ್ ಇಂಡಿಯಾ ಲಿಮಿಟೆಡ್**‌ನಲ್ಲಿ ('ಟ್ರಾನ್ಸ್‌ಫೆರೀ ಕಂಪನಿ') ಪ್ರಸಕ್ತ ಐಎನ್‌ಆರ್ **10,00,000/-** ಮತ್ತು ಮೇಲ್ಪಟ್ಟ ಮೌಲ್ಯದ ಈಕ್ವಿಟಿ ಹೋಲ್ಡರ್‌ಗಳ, ಸೆಕ್ಯೂರ್ಡ್ ಕ್ರೆಡಿಟರ್‌ಗಳ ಮತ್ತು ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಪ್ರತ್ಯೇಕ ಸಭೆಗಳನ್ನು ಏರ್ಪಡಿಸಬೇಕೆಂದು ನಿರ್ದೇಶನ ನೀಡಲಾಗಿರುತ್ತದೆ. ಸದರಿ ಆದೇಶದ ಮೇರೆಗೆ ಮತ್ತು ಅದರಲ್ಲಿನ ನಿರ್ದೇಶನದ ಪ್ರಕಾರ, ಟ್ರಾನ್ಸ್‌ಫೆರಿ ಕಂಪನಿಯ ಈಕ್ವಿಟಿ ಷೇರುದಾರರ, ಸೆಕ್ಯೂರ್ಡ್ ಕ್ರೆಡಿಟರ್‌ಗಳ ಮತ್ತು ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಪ್ರತ್ಯೇಕ ಸಭೆಗಳನ್ನು, ಈ ಕೆಳಗಿನಂತೆ ಏರ್ಪಡಿಸಲಾಗುತ್ತಿದೆ:

ಸಭೆಯ ವರ್ಗ	ಸಭೆಯ ದಿನ, ದಿನಾಂಕ	ಸಮಯ (ಐಎಸ್‌ಟಿ)	ಸಭೆಯ ಮಾದರಿ
ಇಕ್ವಿಟಿ ಷೇರುದಾರರ ಸಭೆ	ಸೋಮವಾರ, 15ನೇ ಜೂನ್ 2026	ಮಧ್ಯಾಹ್ನ 12.15 ಗಂಟೆ	ಇ-ವೋಟಿಂಗ್ ಸೌಲಭ್ಯದೊಂದಿಗೆ, ವಿಡಿಯೋ ಕಾನ್ಫರೆನ್ಸ್ (ವಿಸಿ) / ಇನ್ನಿತರೆ ಆಡಿಯೋ ವಿಷುಯಲ್ ಮಾಧ್ಯಮಗಳ ಮುಖಾಂತರ ಸಭೆ ಕೈಗೊಳ್ಳಲಾಗುತ್ತದೆ
ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆ		ಮಧ್ಯಾಹ್ನ 12.30 ಗಂಟೆ	ಇ-ವೋಟಿಂಗ್ ಸೌಲಭ್ಯದೊಂದಿಗೆ, ವಿಡಿಯೋ ಕಾನ್ಫರೆನ್ಸ್ (ವಿಸಿ) / ಇನ್ನಿತರೆ ಆಡಿಯೋ ವಿಷುಯಲ್ ಮಾಧ್ಯಮಗಳ (ಒಎವಿಎಂ) ಮುಖಾಂತರ ಸಭೆ ಕೈಗೊಳ್ಳಲಾಗುತ್ತದೆ
ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆ		ಮಧ್ಯಾಹ್ನ 1.15 ಗಂಟೆ	ಇ-ವೋಟಿಂಗ್ ಸೌಲಭ್ಯದೊಂದಿಗೆ, ಟ್ರಾನ್ಸ್‌ಫೆರೀ ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಭೌತಿಕ ಸಭೆ ಕೈಗೊಳ್ಳಲಾಗುತ್ತದೆ.

ಸದರಿ ವಿಲೀನ ಯೋಜನೆಯ ಪ್ರತಿ ಮತ್ತು ಸೆಕ್ಷನ್ 230ರ ಅಡಿಯಲ್ಲಿನ ವರದಿ ಪ್ರತಿ ಹಾಗೂ ಇನ್ನಿತರ ದಾಖಲಾತಿಗಳನ್ನು, ಟ್ರಾನ್ಸ್‌ಫೆರೀ ಕಂಪನಿಯ ನೋಂದಾಯಿತ ಕಚೇರಿಯಿಂದ ನಿಶುಲ್ಕವಾಗಿ ಪಡೆದುಕೊಳ್ಳಬಹುದು. ಸಭೆಗಳಿಗೆ ಹಾಜರಾಗಿ ತಮ್ಮ ಮತ ಚಲಾಯಿಸುವ ಹಕ್ಕನ್ನು ಹೊಂದಿರುವ ವ್ಯಕ್ತಿಗಳು, ಖುದ್ದಾಗಿ ಆಗಲಿ ಅಥವಾ ತಮ್ಮ ಅಧಿಕೃತ ಪ್ರತಿನಿಧಿಗಳ ಮುಖಾಂತರವಾಗಿ ಸಭೆಗೆ (ಭೌತಿಕ ಸಭೆಗೆ) ಹಾಜರಾಗಿ ಮತ ಚಲಾಯಿಸಬಹುದು, ಆದರೆ, ಸಭೆಗೆ 48 ಗಂಟೆಗಳ ಕಾಲ ಮುಂಚಿತವಾಗಿಯೇ, ತಮ್ಮ ಎಲ್ಲಾ ಪ್ರಾಕ್ಸಿಗಳ ವಿವರಗಳನ್ನು, ನಿರ್ದಿಷ್ಟ ನಮೂನೆಯಲ್ಲಿ ಭರ್ತಿ ಮಾಡಿ, ಟ್ರಾನ್ಸ್‌ಫೆರೀ ಕಂಪನಿಯ ಮೇಲ್ಕಂಡ ವಿಳಾಸದಲ್ಲಿರುವ ನೋಂದಾಯಿತ ಕಚೇರಿಗೆ ಸಲ್ಲಿಸತಕ್ಕದ್ದು.

ಮಾನ್ಯ ನ್ಯಾಯಾಧಿಕರಣವು ಮೇಲ್ಕಂಡ ಸಭೆಗಳಿಗೆ, ವಕೀಲರಾದ ಶ್ರೀ ಅಜಯ್ ಪಿ. ಜಾನ್ಸನ್ ಇವರನ್ನು, ಚೇರ್‌ಪರ್ಸನ್ ಎಂಬುದಾಗಿ ಮತ್ತು ಕಾರ್ಯನಿರತ ಕಂಪನಿ ಕಾರ್ಯದರ್ಶಿಯಾದ ಶ್ರೀ ಸರ್ವೋತ್ತಮ್ ಪಿ ಇವರನ್ನು ಪರಿಶೀಲಕರನ್ನಾಗಿಯೂ ನಿಯೋಜಿಸಿರುತದೆ. ಒಂದು ವೇಳೆ, ಮೇಲ್ಕಂಡ ವಿಲೀನ ಯೋಜನೆಯು ಸಭೆಯಲ್ಲಿ ಅನುಮೋದನೆ ಪಡೆದುಕೊಂಡಲ್ಲಿ, ಅನುಕ್ರಮವಾಗಿ ಅದು ನ್ಯಾಯಾಧಿಕರಣದ ಅನುಮೋದನೆಯ ನಿಬಂಧನೆಗೆ ಒಳಪಡುತ್ತದೆ.

ಟ್ರಾನ್ಸ್‌ಫೆರೀ ಕಂಪನಿಯು, ಸದರಿ ಯೋಜನೆಯನ್ನು ಅನುಮೋದಿಸುವ ಠರಾವಿಗೆ ಮತ ಚಲಾಯಿಸಲು ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಕೂಡ ಕಲ್ಪಿಸುತ್ತದೆ. ಖಾತೆಗಳ ಪುಸ್ತಕಗಳಲ್ಲಿ ದಿನಾಂಕ 31ನೇ ಜನವರಿ, 2026ರ, ಟ್ರಾನ್ಸ್‌ಫೆರಿ ಕಂಪನಿಯ ಐಎನ್‌ಆರ್ **10,00,000/-** ಮತ್ತು ಮೇಲ್ಪಟ್ಟ ಮೌಲ್ಯದ ಇಕ್ವಿಟಿ ಷೇರುದಾರರು, ಸೆಕ್ಯೂರ್ಡ್ ಕ್ರೆಡಿಟರ್‌ಗಳು ಮತ್ತು ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳಿಗೆ, **13ನೇ ಮೇ, 2026 ರಂದು** ಪ್ರಕಟಣೆಗಳನ್ನು ರವಾನಿಸಲಾಗಿದೆ.

ಇಕ್ವಿಟಿ ಷೇರುದಾರರು, ಸೆಕ್ಯೂರ್ಡ್ ಕ್ರೆಡಿಟರ್‌ಗಳು ಹಾಗೂ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳು ರಿಮೋಟ್ ಇ-ವೋಟಿಂಗ್ ಸೌಲಭ್ಯದ ಮುಖಾಂತರ ತಮ್ಮ ಚಲಾಯಿಸಿದ ಬಳಿಕವೂ ಸಭೆಯಲ್ಲಿ ಪಾಲ್ಗೊಳ್ಳಬಹುದು, ಆದರೆ ಸಭೆಯಲ್ಲಿ ಪುನಃ ಮತ ಚಲಾಯಿಸಲು ಅವಕಾಶ ಇರುವುದಿಲ್ಲ.

ಮುಂದುವರಿದಂತೆ, ನ್ಯಾಯಾಧಿಕರಣದ ಆದೇಶದ ಮೇರೆಗೆ, ಟ್ರಾನ್ಸ್‌ಫೆರೀ ಕಂಪನಿಯು, ವಿಸಿ/ಒಎವಿಎಂ ವಿಧಾನದ ಮೂಲಕ ತನ್ನ ಇಕ್ವಿಟಿ ಷೇರುದಾರರ, ಸೆಕ್ಯೂರ್ಡ್ ಕ್ರೆಡಿಟರ್‌ಗಳ ಮತ್ತು ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆಯನ್ನು ಕೈಗೊಳ್ಳುತ್ತಿದ್ದಾರೆ. ಆದ್ದರಿಂದ, ಇಕ್ವಿಟಿ ಷೇರುದಾರರಿಗೆ, ಸೆಕ್ಯೂರ್ಡ್ ಕ್ರೆಡಿಟರ್‌ಗಳಿಗೆ ಮತ್ತು ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳಿಗೆ, ಈ ಕೆಳಗಿನಂತೆ ಮಾಹಿತಿ ನೀಡಲಾಗಿದೆ:

ಇ-ವೋಟಿಂಗ್ ಆರಂಭ	**ಶುಕ್ರವಾರ, 12ನೇ ಜೂನ್, 2026 ರಂದು ಬೆಳಗ್ಗೆ 09.00 ಗಂಟೆ**
ಇ-ವೋಟಿಂಗ್ ಮುಕ್ತಾಯ	**ಭಾನುವಾರ, 14ನೇ ಜೂನ್, 2026 ರಂದು ಸಂಜೆ 05.00 ಗಂಟೆ**
ಇ-ವೋಟಿಂಗ್ ವೆಬ್‌ಲಿಂಕ್	https://www.evotingindia.com/
ಇಕ್ವಿಟಿ ಷೇರುದಾರರು, ವಿಸಿ ಮುಖಾಂತರ ಸಭೆಗೆ ಹಾಜರಾಗುವ ವೆಬ್‌ಲಿಂಕ್	https://centraldepository.webex.com/centraldepository/j.php?MTID=ma1e8c87e5ee09e8084927d0d38a92f86
ಸೆಕ್ಯೂರ್ಡ್ ಕ್ರೆಡಿಟರ್‌ರು, ವಿಸಿ ಮುಖಾಂತರ ಸಭೆಗೆ ಹಾಜರಾಗುವ ವೆಬ್‌ಲಿಂಕ್	https://centraldepository.webex.com/centraldepository/j.php?MTID=m26d267d5a5199156eb303ebeaaa0a11a

ಇ-ವೋಟಿಂಗ್ ಕುರಿತಂತೆ ಯಾವುದೇ ವಿಚಾರಣೆಗಳಿದ್ದಲ್ಲಿ ಅಥವಾ ಇನ್ಯಾವುದೇ ತಾಂತ್ರಿಕ ನೆರವು ಬೇಕಾಗಿದ್ದಲ್ಲಿ, ದಯವಿಟ್ಟು ಸಂಪರ್ಕಿಸಿ **legal@aonesteelgroup.com**

ಮಂಡಳಿಯ ಪರವಾಗಿ
ಏ-ಒನ್ ಸ್ಟೀಲ್ಸ್ ಇಂಡಿಯಾ ಲಿಮಿಟೆಡ್ ಪರವಾಗಿ
ಸಹಿ/
ಸುನಿಲ್ ಜಲ್ಲಾನ್
ನಿರ್ದೇಶಕರು, ಡಿಐಎನ್: 02150846

ದಿನಾಂಕ: 13ನೇ ಮೇ, 2026
ಸ್ಥಳ: ಬೆಂಗಳೂರು

ನಾಳೆ ಫೋನ್-ಇನ್ ಕಾರ್ಯಕ್ರಮ

ಬೆಂಗಳೂರು: ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕರ ಅಹವಾಲು ಆಲಿಸುವ ಉದ್ದೇಶದಿಂದ ಮೇ.15 ರಂದು ಬೆ. 7ರಿಂದ 9 ಗಂಟೆಯವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ. ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಸಾರ್ವಜನಿಕರು ಈ ಅವಧಿಯಲ್ಲಿ ನಾಗರಿಕರು ರಸ್ತೆ ಗುಂಡಿಗಳು ಹಾಗೂ ದುರಸ್ತಿ ಕಾರ್ಯಗಳು, ಬೀದಿ ದೀಪಗಳ ನಿರ್ವಹಣೆ, ಮನೆಮನೆ ಕಸ ಸಂಗ್ರಹಣೆ ಮತ್ತು ವಿಲೇವಾರಿ, ಅಪಾಯ ಕಾರಿಯಾದ ಮರಗಳು, ಸೊಳ್ಳೆ ನಿಯಂತ್ರಣ,, ಬೀದಿ ನಾಯಿಗಳ ನಿಯಂತ್ರಣ, ಉದ್ಯಾನವನಗಳ ಅಭಿವೃದ್ಧಿ, ಅನಧಿಕೃತ ಬ್ಯಾನರ್ ತೆರವು, ಇ-ಖಾತಾ ಸಂಬಂಧಿತ ಸಮಸ್ಯೆಗಳು ಸೇರಿದಂತೆ ವಿವಿಧ ನಾಗರಿಕ ಸಮಸ್ಯೆಗಳ ಕುರಿತು ಆಯುಕ್ತರೊಂದಿಗೆ ನೇರವಾಗಿ ಮಾತನಾಡಬಹುದಾಗಿದೆ. ಫೋನ್-ಇನ್ ಕಾರ್ಯಕ್ರಮದಲ್ಲಿ ಸ್ವೀಕರಿಸಲಾದ ಎಲ್ಲಾ ಅಹವಾಲುಗಳನ್ನು ಸಹಾಯ 2.0 ಪೋರ್ಟಲ್ ನಲ್ಲಿ ದಾಖಲಿಸಲಾಗುವುದು. ಸಂಪರ್ಕ ಸಂಖ್ಯೆ 9480685705, 080-22975936, 080-23636671.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಬೆಂಗಳೂರು: ಶಾಂತಿನಗರದ ಡಾ. ಅಗರವಾಲ್ ಆಸ್ಪತ್ರೆ ಹಾಗೂ ಜನರಲ್ ರಿಸರ್ಚ್ ಫೌಂಡೇಷನ್ ವತಿಯಿಂದ ಪ್ರತೀ ಮಂಗಳವಾರ ಮಧ್ಯಾಹ್ನ 1ರಿಂದ 3ರವರೆಗೆ ಶಾಂತಿನಗರದ ಡಾ. ಅಗರವಾಲ್ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ಹಾಗೂ ನೇತ್ರ ತಪಾಸಣಾ ಶಿಬಿರ ಆಯೋಜಿಸಲಾಗುತ್ತಿದೆ. ಶಿಬಿರದಲ್ಲಿ ಆಟೋಲೋಗಸ್ ಬಯಾಲಜಿಕಲ್ ಥೆರಪಿ ಹಾಗೂ ಆಟೋಲೋಗಸ್ ಇಮ್ಯೂನ್ ಬೂಸ್ಟರ್ ಇಂಜೆಕ್ಷನ್ ಕುರಿತು ಜನರಿಗೆ ಮಾಹಿತಿ ನೀಡಲಾಗುತ್ತಿದೆ ಎಂದು ಸುನೀತಾ ರಾಣಾ ಅಗರ್‌ವಾಲ್ ತಿಳಿಸಿದರು. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರೋಗಿಯದೇ ರಕ್ತದ ಹನಿ ಬಳಸಿ, ಅದರಲ್ಲಿ ಇರುವ ಜೈವಿಕ ಮಾಹಿತಿ ಹಾಗೂ ಡಿಎನ್ಎ ಆಧರಿಸಿ ಚಿಕಿತ್ಸಾ ಇಂಜೆಕ್ಷನ್ ತಯಾರಿಸಿ ಅದನ್ನೇ ರೋಗಿಗೆ ಮರು ನೀಡುವ ವಿಧಾನವೇ ಎಬಿಟಿ ವಿಧಾನವಾಗಿದೆ. ಈ ವಿಧಾನವು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ, ದೀರ್ಘಕಾಲದ ಕಾಯಿಲೆಗಳ ನಿರ್ವಹಣೆಗೆ ನೆರವಾಗಬಹುದು. ರೆಟಿನೈಟಿಸ್ ಪಿಗ್ಮೆಂಟೋಸಾ, ಸ್ಟಾರ್ಗಾರ್ಡ್‌ರ್ ಮ್ಯಾಕ್ಯುಲರ್ ಡಿಜೆನೆರೇಷನ್, ಜುವೆನೈಲ್ ಡಯಾಬಿಟಿಸ್, ಪಾರ್ಕಿನ್ಸನ್ ಹಾಗೂ ವಿಲ್ಸನ್ಸ್ ಹೆಪಟೋಲೆಂಟಿಕ್ಯುಲರ್ ಕಾಯಿಲೆಗಳಂತಹ ಸಮಸ್ಯೆಗಳ ನಿರ್ವಹಣೆಯಲ್ಲಿ ಈ ಚಿಕಿತ್ಸಾ ವಿಧಾನ ಪ್ರಮುಖ ಪಾತ್ರವಹಿಸುತ್ತಿದೆ ಎಂದರು.

ಸಮಾಚಾರ ಸಣ್ಣದಲ್ಲ

2,384 ಕೋಟಿ ರು. ಜಿಎಸ್‌ಟಿ ವಂಚನೆ: ಸೆರೆ

ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಬೃಹತ್ ಕಾರ್ಯಾಚರಣೆ ನಡೆಸಿ ಬರೋಬ್ಬರಿ 2,384 ಕೋಟಿ ರು. ನಕಲಿ ಐಟಿಸಿ (ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್) ಪಡೆದಿದ್ದ ಜಾಲವನ್ನು ಪತ್ತೆ ಹಚ್ಚಿದ್ದಾರೆ. ಈ ಅಕ್ರಮಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತ ಆರೋಪಿಗಳನ್ನು ಸಲೀಮುಲ್ಲಾ ಬೇಗ್ (59) ಮತ್ತು ಹಸೇನ್ ಬೇಗ್ (35) ಎಂದು ಗುರುತಿಸಲಾಗಿದೆ. ಆರೋಪಿಗಳು 72 ನಕಲಿ ಸರಬರಾಜು ಸಂಸ್ಥೆಗಳಿಂದ ಸಂಶಯಾಸ್ಪದ ವಹಿವಾಟು ನಡೆಸಿರುವುದು ಪತ್ತೆಯಾಗಿದೆ. ಅಲ್ಲದೇ 2,172 ಕೋಟಿ ರೂ. ವಹಿವಾಟಿನ ಮೂಲಕ ಸಲೀಮುಲ್ಲಾ 382 ಕೋಟಿ ರು. ನಕಲಿ ಐಟಿಸಿ ಪಡೆದಿದ್ದ. ಇದೇ ರೀತಿ 55 ಸಂಸ್ಥೆಗಳಿಂದ 212 ಕೋಟಿ ರು. ವಹಿವಾಟಿನಿಂದ 35 ಕೋಟಿ ರು. ಹಣವನ್ನು ಹಸೇನ್ ಪಡೆದಿದ್ದ. ಆರೋಪಿಗಳು, ಟಂಗ್ ಸ್ಟನ್ ಕಾರ್ಬೈಡ್ ಸ್ಕ್ರ್ಯಾಪ್, ಈ ವೇಸ್ಟ್ ಹಾಗೂ ಇತರೆ ಸ್ಕ್ರ್ಯಾಪ್ ಹೆಸರಿನಲ್ಲಿ ನಕಲಿ ಬಿಲ್ಲಿಂಗ್ ಮಾಡುತ್ತಿದ್ದರು. ನಕಲಿ ತೆರಿಗೆ ಬಿಲ್ ಸೃಷ್ಟಿಸಿ ಐಟಿಸಿ ಪಡೆದು ವಂಚನೆ ಮಾಡುತ್ತಿದ್ದರು. ಜಿಎಸ್‌ಟಿ ಕಾಯಿದೆಯಡಿ ಆರೋಪಿಗಳನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ. ತನಿಖೆ ವೇಳೆ 127 ನಕಲಿ ಸಂಸ್ಥೆಗಳ ಜಾಲ ಪತ್ತೆಯಾಗಿವೆ. 2,384 ಕೋಟಿ ಸಂಶಯಾಸ್ಪದ ವಹಿವಾಟಿನಿಂದ 420 ಕೋಟಿ ನಕಲಿ ಐಟಿಸಿ ಪಡೆದಿದ್ದು ಬೆಳಕಿಗೆ ಬಂದಿದೆ. ಅಲ್ಲದೇ ಎಸ್ ಕೆಎಸ್ ಟ್ರೇಡರ್ಸ್ ಮೂರು ವರ್ಷಗಳಲ್ಲಿ 50 ಕೋಟಿ ರು. ಇಂದ 900 ಕೋಟಿ ರು.ಗೆ ವಹಿವಾಟು ಏರಿಕೆಯಾಗಿದೆ. ಆದರೆ ಈ ಸಂಸ್ಥೆಯ ದಾಖಲಾತಿಗಳಲ್ಲಿ ವಹಿವಾಟು ಏರಿಕೆಯ ಸಾಕ್ಷ್ಯಗಳಿಲ್ಲ. ಈ ಹಿನ್ನೆಲೆ ನಕಲಿ ವಹಿವಾಟು ನಡೆಸಿರುವುದು ಖಾತರಿಯಾಗಿದೆ. ಕಳೆದ ಜನವರಿಯಲ್ಲಿ 1,464 ಕೋಟಿ ವಹಿವಾಟು ಸಂಬಂಧ ಐವರನ್ನು ಅಧಿಕಾರಿಗಳು ಬಂಧಿಸಿದ್ದರು. ಒಟ್ಟಾರೆ ಪ್ರಸಕ್ತ ವರ್ಷ ಬಂಧಿತರ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೀಸಲಾತಿ ವಿರುದ್ಧ ಹೋರಾಟಕ್ಕೆ ಬಿಜೆಪಿ ಕರೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಪರಿಶಿಷ್ಟ ಪಂಗಡಗಳ ಮೀಸಲಾತಿ ಮರಳಿ ಶೇ.3ಕ್ಕೆ ಇಳಿಕೆ ಮಾಡಿ ಈ ಸಮುದಾಯಕ್ಕೆ ವಂಚನೆ ಮಾಡಿದೆ. ಇದರ ವಿರುದ್ಧ ಜನಾಂದೋಲನ ನಡೆಯಲಿದ್ದು, ಬಿಜೆಪಿ ಕೂಡ ಹೋರಾಟ ಮಾಡಲಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರಕಾರವಿದ್ದಾಗ ಎಸ್‌ಸಿ ಮೀಸಲಾತಿ ಶೇ.15 ರಿಂದ 17 ಕ್ಕೆ ಹಾಗೂ ಎಸ್‌ಟಿ ಮೀಸಲಾತಿ ಶೇ.3 ರಿಂದ 7 ಕ್ಕೆ ಏರಿಸಲಾಗಿತ್ತು. ಇದನ್ನು ಜನಸಂಖ್ಯಾ ಆಧಾರದಲ್ಲಿ ತೀರ್ಮಾನಿಸಲಾಗಿತ್ತು. ಇದರಿಂದಾಗಿ ನ್ಯಾಯಯುತವಾದ ಮೀಸಲಾತಿ ಸಿಗುತ್ತಿತ್ತು. ಆದರೆ ಕಾಂಗ್ರೆಸ್ ಸರಕಾರ ಒಳಮೀಸಲಾತಿ ಹೆಸರಲ್ಲಿ ಷಡ್ಯಂತ್ರ ಮಾಡಿ ದಲಿತರ ಮೂಗಿಗೆ ತುಪ್ಪ ಸವರಿ ಮೀಸಲಾತಿ ಪ್ರಮಾಣ ಇಳಿಕೆ ಮಾಡಿದೆ. ಇಡೀ ದಲಿತ ಸಮುದಾಯಕ್ಕೆ ಕಾಂಗ್ರೆಸ್ ದ್ರೋಹ ಬಗೆದಿದೆ. ಅದರಲ್ಲೂ ಎಸ್‌ಟಿ ಸಮುದಾಯಕ್ಕೆ ಅತಿ ಹೆಚ್ಚು ಅನ್ಯಾಯವಾಗಿದ್ದು, ಮೀಸಲು ಪ್ರಮಾಣ ಮರಳಿ ಶೇ.3 ಗೆ ಬಂದಿದೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ದಲಿತ ಪರವಾದ ನೀತಿಯೇ ಎಂದು ಪ್ರಶ್ನೆ ಮಾಡಿದರು. ಡಾ. ಮನಮೋಹನ್ ಸಿಂಗ್ ಸರಕಾರವಿದ್ದಾಗ ಮೀಸಲಾತಿ ಪ್ರಮಾಣ ಏಕೆ ಹೆಚ್ಚಿಸಲಿಲ್ಲ? ಈ ಹೊಸ ಆದೇಶದಿಂದ ಎಸ್‌ಟಿ ಸಮುದಾಯಕ್ಕೆ ಅನ್ಯಾಯವಾಗಿದ್ದು, ಇದಕ್ಕೆ ಸರಕಾರ ಉತ್ತರ ಕೊಡಬೇಕಿದೆ. ಈ ಪ್ರಮಾಣ ಮತ್ತೆ ಏರಿಸಲು ಹಲವಾರು ವರ್ಷ ಪರಿಶಿಷ್ಟ ಪಂಗಡದವರು ಹೋರಾಟ ಮಾಡಬೇಕಾಗುತ್ತದೆ. ಕೂಡಲೇ ಸರಕಾರ ಇದನ್ನು ಸರಿಪಡಿಸಬೇಕು. ಇಲ್ಲವಾದರೆ ಈ ಸಮುದಾಯದ ಜನರು ಸರಕಾರ ಕಿತ್ತೊಗೆಯುತ್ತಾರೆ. ಈ ಹೋರಾಟಕ್ಕೆ ಬಿಜೆಪಿ ಬೆಂಬಲ ನೀಡಲಿದೆ ಎಂದರು.

ಜೀವನಾಂಶ ನೀಡದ ಪತಿ: ಬಂಧನ ವಾರಂಟ್

ಬೆಂಗಳೂರು: ಪತ್ನಿಗೆ ಜೀವನಾಂಶದ ಹಣ ನೀಡದೆ ವಿನಾಃಕಾರಣ ವಿಳಂಬ ಮಾಡುತ್ತಿದ್ದ ಪತಿಯ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ಆತನ ವಿರುದ್ಧ ಮಂಗಳೂರು ಕೌಟುಂಬಿಕ ನ್ಯಾಯಾಲಯ ಹೊರಡಿಸಿದ್ದ ಬಂಧನ ವಾರಂಟ್ ಅನ್ನು ಎತ್ತಿಹಿಡಿದಿದೆ.ನ್ಯಾಯಾಲಯದ ಆದೇಶ ಉಲ್ಲಂಘಿಸಿ ಜೀವನಾಂಶ ಬಾಕಿ ಉಳಿಸಿಕೊಂಡಿರುವ ಹಿನ್ನೆಲೆ ಬಂಧನ ವಾರಂಟ್ ಜಾರಿ ಮಾಡಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ, ಪತಿ ಸೈಲೇಶ್ ಎಂಬವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಾ.ಕೆ.ಮನ್ಮಥ ರಾವ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ನ್ಯಾಯಾಲಯದ ಆದೇಶ ಪಾಲಿಸದೆ ಇರುವ ಪತಿಯ ವರ್ತನೆಯು ಉದ್ದೇಶಪೂರ್ವಕ ಅವಿಧೇಯತೆಯಾಗಿದೆ ಎಂದು ತಿಳಿಸಿದೆ.

ಜಿಬಿಎ ವ್ಯಾಪ್ತಿಯ ಐದು ಕಡೆ ಅಭಿಯಾನ ಆರಂಭ | ಮೇ 16ರಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ

ಇನ್ಮುಂದೆ ಪ್ರತಿ ಶನಿವಾರ ನನ್ನ ಖಾತೆ-ನನ್ನ ಹಕ್ಕು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಸರಕಾರದ 6ನೇ ಗ್ಯಾರಂಟಿಯಾದ 'ಭೂ ಗ್ಯಾರಂಟಿ' ಮೂಲಕ ಬೆಂಗಳೂರು ನಾಗರಿಕರಿಗೆ 'ಇ' ಖಾತಾ ವಿತರಣೆ, ಕಟ್ಟಡ ಉಲ್ಲಂಘನೆ ವಿನಾಯಿತಿ ಮಿತಿ ಶೇ.5 ರಿಂದ ಶೇ.15 ಕ್ಕೆ ಹೆಚ್ಚಳ, 100 ದಿನದಲ್ಲಿ 'ಎ' ಯಿಂದ 'ಬಿ' ಖಾತಾ ಶುಲ್ಕ ಪಾವತಿಸಿದರೆ ಶೇ. 60 ರಷ್ಟು ರಿಯಾಯಿತಿ, ಶಿವರಾಂ ಕಾರಂತ ಬಡಾವಣೆಯ ಭೂ ಮಾಲೀಕರಿಗೆ 18 ಸಾವಿರ ನಿವೇಶನ ಹಂಚಿಕೆ, ಭಿಗ್ರೀನ್ ಬೆಂಗಳೂರುಭಿ ಕಾರ್ಯಕ್ರಮ, ಬಿಡಿಎ ಮನೆಗಳ ಮಾರಾಟ ಸೇರಿದಂತೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ನಾಗರಿಕರಿಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಬಂಪರ್ ಕೊಡುಗೆಯಾಗಿ ಘೋಷಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ಅಭಿವೃದ್ಧಿಗೆ ಸುಮಾರು 150 ಯೋಜನೆಗಳಿದ್ದು ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಈ ಬಗ್ಗೆ ಪ್ರತ್ಯೇಕ ಮಾಹಿತಿ ನೀಡಲಾಗುವುದು. ಮೊದಲಿಗೆ 'ನನ್ನ ಖಾತೆ, ನನ್ನ ಹಕ್ಕು' ಅಭಿಯಾನ ಮೂರು ತಿಂಗಳ ಕಾಲ ಶನಿವಾರ ನಡೆಯಲಿದೆ. ಪ್ರತಿ ಶನಿವಾರ ಬೆಂಗಳೂರಿನ ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ ತಲಾ 10 ರಂತೆ 50 ಸ್ಥಳಗಳಲ್ಲಿ ಈ ಅಭಿಯಾನ (ಇ-ಖಾತಾ ಸಿಟಿಜನ್ ಓಪನ್ ಹೌಸ್) ಕಾರ್ಯಕ್ರಮ ನಡೆಯಲಿದೆ. ಮೇ 16 ರಿಂದ ಇದಕ್ಕೆ ಚಾಲನೆ ನೀಡಲಾಗುವುದು. ಬೆಳಿಗ್ಗೆ 10 ಕ್ಕೆ ಪ್ರಾರಂಭವಾಗಿ ಸಂಜೆವರೆಗೆ ನಡೆಯುವ ಈ ಅಭಿಯಾನದ ಸ್ಥಳಗಳನ್ನು ಮುಂಚಿತವಾಗಿ ತಿಳಿಸಲಾಗುವುದು ಎಂದರು.

ನಾವು ಜಾರಿಗೆ ತಂದಿರುವ 'ಇ' ಖಾತಾ ಆಂದೋಲನ ಭಾರತದ ಅತಿದೊಡ್ಡ ಸಮಗ್ರ ಡಿಜಿಟಲ್ ನಗರ ಆಸ್ತಿ ದಾಖಲೆ ವ್ಯವಸ್ಥೆಯಾಗಿದ್ದು, 23 ಲಕ್ಷಕ್ಕೂ ಅಧಿಕ ಆಸ್ತಿ ದಾಖಲೆಗಳನ್ನು ಆನ್ಲೈನ್ ಮೂಲಕ ನೇರವಾಗಿ ನಾಗರಿಕರ ಕೈಗೆ ತಲುಪಿಸಿದೆ. ನಗರದಲ್ಲಿ ದಾಖಲೆಗಳು ಸರಿಯಿರುವ ಸುಮಾರು 16 ಲಕ್ಷ 'ಎ' ಖಾತೆಗಳಿವೆ. 7 ಲಕ್ಷ 'ಬಿ' ಖಾತೆಗಳಿವೆ. ಭೂ ಗ್ಯಾರಂಟಿಮೂಲಕ ಬೆಂಗಳೂರಿನ ಪ್ರತಿಯೊಬ್ಬ ನೈಜ ಆಸ್ತಿ ಮಾಲೀಕರಿಗೂ ಸುರಕ್ಷಿತ, ವಿಶ್ವಾಸಾರ್ಹ ಹಾಗೂ ಎಲ್ಲೆಡೆಯೂ ಲಭ್ಯವಾಗುವ ಡಿಜಿಟಲ್ ಆಸ್ತಿ ದಾಖಲೆಗಳನ್ನು ಒದಗಿಸಲಾಗುವುದು. ಇದನ್ನು ಪಾರದರ್ಶಕ, ಸುರಕ್ಷಿತ ಹಾಗೂ ನಾಗರಿಕ ಕೇಂದ್ರಿತ ಡಿಜಿಟಲ್ ಸ್ವರೂಪಕ್ಕೆ ಪರಿವರ್ತಿಸಲಾಗಿದೆ ಎಂದರು.

ಕಟ್ಟಡ ಉಲ್ಲಂಘನೆ ವಿನಾಯಿತಿ ಮಿತಿ ಶೇ.15ಕ್ಕೆ ಹೆಚ್ಚಳ: ಕಟ್ಟಡದ ಉಲ್ಲಂಘನೆ ವಿನಾಯಿತಿ ಮಿತಿಯನ್ನು (ಎತ್ತರ, ಎಫ್‌ಎಆರ್, ಸೆಟ್ ಬ್ಯಾಕ್) ಶೇ.5 ರ ಬದಲಾಗಿ ಶೇ.15 ಕ್ಕೆ ಹೆಚ್ಚಿಸಲಾಗಿದೆ. ಶೇ.15 ರಷ್ಟು ಪ್ರಮಾಣದ ಉಲ್ಲಂಘನೆಗಳಿಗೆ ದಂಡ ಪಾವತಿಸಿಕೊಂಡು ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಲು ಒಪ್ಪಿಗೆ ನೀಡಲಾಗಿದೆ. ಸುಪ್ರೀಂ ಕೋರ್ಟ್ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯದ ಕಟ್ಟಡಗಳಿಗೆ ವಿದ್ಯುತ್ ಹಾಗೂ ನೀರು ಸರಬರಾಜು ಸೌಕರ್ಯ ಒದಗಿಸಬಾರದೆಂದು ಆದೇಶಿಸಿದೆ. ಈ ಸಮಸ್ಯೆ ನಿವಾರಿಸಲು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಇದರ ಬಗ್ಗೆ ತೀರ್ಮಾನ ಮಾಡಲಾಗುತ್ತಿದೆ ಎಂದು ಹೇಳಿದರು.

ನಾವು ಅಕ್ರಮ ಅಕ್ರಮ ಮಾಡುತ್ತಿಲ್ಲ. ನಗರದಲ್ಲಿ ಭೂಮಿಯ ತೀವ್ರ ಬೇಡಿಕೆಯಿಂದ ಹಾಗೂ ದಿನೇ ದಿನೇ ಬೆಳವಣಿಗೆಗಳ ಒತ್ತಡದಿಂದ ನಿವೇಶನ/ ಸ್ವತ್ತಿನ ಮಾಲೀಕರು ನಿಯಮಾನುಸಾರ ಸೆಟ್ ಬ್ಯಾಕ್ ಬಿಡದೆ ನಕ್ಷೆ ಉಲ್ಲಂಘನೆ ಮಾಡಿ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದಾರೆ. 20/30, 30/40, 40/60 ಅಳತೆಯ ನಿವೇಶನಗಳಿಗೆ ಗರಿಷ್ಟ ಶೇ. 50 ರಷ್ಟು ಸೆಟ್ ಬ್ಯಾಕ್ ರಿಯಾಯಿತಿ ನೀಡಲು ಕಾಯ್ದೆಯಲ್ಲಿ ಅವಕಾಶವಿದೆ. ನಾವೀಗ ಶೇ. 15 ರಷ್ಟು ವಿನಾಯಿತಿ ನೀಡಿದ್ದೇವೆ ಎಂದರು.

2020ರಲ್ಲಿ ಬಿಜೆಪಿ ಸರಕಾರ '38 ಡಿ' ಎನ್ನುವ ಕಾನೂನು ಜಾರಿಗೆ ತಂದಿತ್ತು. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನ ಬಿಡಿಎ ಲೇಔಟ್ ಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದರು. ಇದರಲ್ಲಿ 570 ಜನ ಮಾತ್ರ ಅರ್ಜಿ ಸಲ್ಲಿಸಿದ್ದರು. 200 ರಿಂದ 600 ಅಡಿವರೆಗೆ ಶೇ.10 ರಷ್ಟು, 600 ರಿಂದ 900 ಅಡಿವರೆಗೆ ಶೇ.25 ರಷ್ಟು, 1200 ರಿಂದ 2400 ವರೆಗೆ ಶೇ.40 ರಷ್ಟು, 2400 ರಿಂದ 4000 ವರೆಗೂ ಶೇ.50 ರಷ್ಟು ಮಾರ್ಗಸೂಚಿ ದರದ ಮೇಲೆ ಶುಲ್ಕ ಕಟ್ಟಲು ಕಾನೂನಿನಲ್ಲಿ ಅವಕಾಶ ಮಾಡಿದ್ದರು. ಆಗ 6 ತಿಂಗಳ ಕಾಲ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಆದರೆ ಯಾರೂ ಕೂಡ ಶುಲ್ಕ ಕಟ್ಟಲು ಮುಂದೆ ಬರಲಿಲ್ಲ. ಶುಲ್ಕ ಹೆಚ್ಚಾಯಿತು ಎಂದು ಯೋಜನೆ ಪ್ರಯೋಜನ ಪಡೆಯಲಿಲ್ಲ. ಈಗಲೂ ಈ ದಾಖಲೆಗಳು ಬರೀ ಸರ್ಕಾರಿ ದಾಖಲೆಗಳಾಗಿ ಉಳಿದುಕೊಂಡಿವೆ ಎಂದರು.

ಈಗ ಅರ್ಜಿ ಹಾಕಲು ಜೂನ್ 15 ರಿಂದ ಒಟ್ಟು ಮೂರು ತಿಂಗಳ ಕಾಲ ಅವಕಾಶ ಕಲ್ಪಿಸಿಕೊಡಲಾಗುವುದು. ಓಟಿಎಸ್ ಜಾರಿ ಮಾಡಲಾಗುವುದು. ಮೊದಲ 100 ದಿನ ಅರ್ಜಿ ಸಲ್ಲಿಸಲು, 100 ದಿನ ಅರ್ಜಿ ಪರಿಶೀಲನೆಗೆ, ನಂತರ ಪಾವತಿಗೆ ಅವಕಾಶ ನೀಡಲಾಗವುದು. 1 ವರ್ಷ ಕಾಲಮಿತಿಯೊಳಗೆ ಅಂದರೆ 2027 ರ ಜೂನ್ ಗೆ ಈ ಯೋಜನೆ ಮುಕ್ತಾಯಗೊಳಿಸಲಾಗವುದು ಎಂದರು.

18 ಸಾವಿರ ನಿವೇಶನ ಹಂಚಿಕೆ

3,052 ಭೂ ಮಾಲೀಕರು ತಮ್ಮ ಆಸ್ತಿಯನ್ನು ಶಿವರಾಂ ಕಾರಂತ ಬಡಾವಣೆಗೆ ನೀಡಿದ್ದರು. ಅನೇಕ ಆಸ್ತಿ ಮಾಲೀಕರು ಬೇರೆಯವರಿಗೆ ಆಸ್ತಿ ಮಾರಾಟ ಮಾಡಿದ್ದು ಸೇರಿದಂತೆ ಅನೇಕ ತೊಡಕುಗಳಿದ್ದವು. ಈಗ ನ್ಯಾಯಾಲಯದ ಅನುಮತಿ ಪಡೆದು 18 ಸಾವಿರ ನಿವೇಶನಗಳನ್ನು ಭೂ ಮಾಲೀಕರಿಗೆ ನೀಡಲಾಗುತ್ತಿದೆ. ಮೇ 15 ನೇ ತಾರೀಕಿನಿಂದಲೇ ನಿವೇಶನ ಪಡೆದುಕೊಳ್ಳಲು ಅವಕಾಶ ನೀಡಲಾಗಿದೆ. ಕೇಂದ್ರಿಯ ಇ ಗವರ್ನೆನ್ಸ್‌ನಿಂದ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿ ಅದರ ಮೂಲಕ ಹಂಚಿಕೆ ವ್ಯವಸ್ಥೆ ಮಾಡಲಾಗಿದೆ ಎಂದರು. 1, 2 ಎಕರೆ ಅಥವಾ ಹೆಚ್ಚು ಭೂಮಿ ಹೊಂದಿದ್ದ ಮಾಲೀಕರಿಗೆ ಪ್ರತ್ಯೇಕ ಅವಕಾಶ ಕಲ್ಪಿಸಲಾಗಿದೆ. ಒಂದೇ ಜಾಗದಲ್ಲಿ ದೊಡ್ಡ ನಿವೇಶನ ಬೇಕು ಎಂದವರಿಗೂ ಅವಕಾಶ ನೀಡುತ್ತೇವೆ ಎಂದು ಹೇಳಿದ್ದೆವು. ಇದಕ್ಕೆ 7 ಜನರು ಮಾತ್ರ ಅರ್ಜಿ ಸಲ್ಲಿಕೆ ಮಾಡಿದ್ದಾರೆ. 1 ಎಕರೆ ಜಮೀನು ಇದ್ದರೆ ಒಂದೇ ಜಾಗದಲ್ಲಿ 9,583 ಚದರ ಅಡಿ ಜಾಗ ನೀಡಲಾಗುವುದು. ಇದರ ಮೂಲಕ ಎತ್ತರದ ಕಟ್ಟಡಗಳಿಗೆ ಅವಕಾಶ ಮಾಡಿಕೊಡಲು ಈ ರೀತಿ ಅನುಕೂಲ ಕಲ್ಪಿಸಲಾಗಿದೆ ಎಂದು ವಿವರಿಸಿದರು.

1.44 ಕೋಟಿಗೆ ಬಿಡಿಎ ಮನೆ

ವೈಟ್ ಫೀಲ್ಡ್ ನಲ್ಲಿ 1,900 ಮನೆಗಳನ್ನು ಕಟ್ಟಲಾಗಿದೆ. 1 ಬಿಎಚ್‌ಕೆ ಮನೆ 760 ಚದರ ಅಡಿಯಿದೆ. ಇದಕ್ಕೆ ಮೇ 15 ನೇ ತಾರೀಕಿನಿಂದ ಅರ್ಜಿ ಕರೆಯಲಾಗುತ್ತಿದೆ. 1,733 ಚದರ ಅಡಿಯ 3 ಬಿಎಚ್ ಕೆ ಮನೆಗಳಿಗೆ 8,309 ರಂತೆ 1.44ಕೋಟಿ ರು.ಗೆ ನೀಡಲಾಗುತ್ತಿದೆ ಎಂದರು. ಚೆನ್ನೈ, ಹೈದರಾಬಾದ್, ದೆಹಲಿ, ಮುಂಬೈ ಎಲ್ಲಾ ಕಡೆಯೂ ಸಂಚಾರ ದಟ್ಟಣೆ ಇದ್ದೇ ಇದೆ. ಹೆಬ್ಬಾಳದ ಬಳಿ ಸ್ವಲ್ಪ ಒತ್ತಡವನ್ನು ಕಡಿಮೆ ಮಾಡಿದ್ದೇವೆ. ಇನ್ನೂ ಸರಳ ಮಾಡಬೇಕು ಎಂದು ಮುಂದುವರೆದಿದ್ದೇವೆ. ಈಗ ಕಡಿಮೆ ಅಂತರದ ಸುರಂಗ ರಸ್ತೆಯನ್ನು ಮಾಡುತ್ತಿದ್ದೇವೆ. ಹೆಬ್ಬಾಳ ಜಂಕ್ಷನ್ ಬಳಿಯಿಂದ ಕೃಷಿ ವಿವಿ ಬಳಿ ಹಾದು ಹೋಗಲಿದೆ. ಇಲ್ಲಿ ಮೂರು ಲೈನ್ ಗಳ ಕಟ್ ಅಂಡ್ ಕರ್ವ್ ಟನಲ್ ಬರಲಿದೆ. ಒಟ್ಟು ಈ ಸುರಂಗ ಮಾರ್ಗ ಆರು ಪಥಗಳನ್ನು ಹೊಂದಿರುತ್ತದೆ. ಇದು 2.2 ಕಿಮೀ ಉದ್ದ ಇರಲಿದೆ. ಈ ಯೋಜನೆಯನ್ನು ಋತ್ವಿಕ್ ಟನಲ್ ಗೆ ನೀಡಿದ್ದು 18 ತಿಂಗಳಲ್ಲಿ ಇದನ್ನು ಪೂರ್ಣಗೊಳಿಸಬೇಕು ಎಂದು ತಿಳಿಸಲಾಗಿದೆ. ಮೇಕ್ರಿ ವೃತ್ತದ ಬಳಿ 1.7 ಕಿಮೀ ಉದ್ದದ 4 ಪಥ ಹೊಂದಿರುವ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಮಾಡಲಾಗುತ್ತದೆ. ಈ ತಿಂಗಳ ಕೊನೆಗೆ ಈ ಎರಡು ಯೋಜನೆಗಳಿಗೆ ಭೂಮಿ ಪೂಜೆ ನೆರವೇರಿಸಲಾಗುವುದು ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಕಸದ ಟೆಂಡರ್‌ನಲ್ಲಿ ದೊಡ್ಡ ಮಾಫಿಯಾವಿದೆ. ಪ್ರತಿಪಕ್ಷಗಳನ್ನು ಇವರುಗಳು ಉಪಯೋಗಿಸಿಕೊಳ್ಳುತ್ತಿದ್ದಾರೆ. 15-20 ವರ್ಷಗಳಿಂದ ಟೆಂಡರ್ ಮಾಡಲು ಬಿಟ್ಟಿಲ್ಲ. ಇದಕ್ಕೆಲ್ಲಾ ಅವಕಾಶ ನೀಡುವುದಿಲ್ಲ. ನಾವು ಕಾನೂನು ಪ್ರಕಾರ ನಡೆಯುತ್ತೇವೆ. ಅಧಿಕಾರಿಗಳು, ನನ್ನ ಮೇಲೆ ಎಲ್ಲರ ಮೇಲೂ ಆರೋಪ ಮಾಡುತ್ತಾರೆ. ಮಾಫಿಯಾಗಳು ತಿಂದು ರೂಢಿ ಮಾಡಿಕೊಂಡಿವೆ.

- ಡಿ.ಕೆ.ಶಿವಕುಮಾರ್,
ಉಪಮುಖ್ಯಮಂತ್ರಿ

ಆರ್ಟ್ ಆಫ್ ಲಿವಿಂಗ್‌ನ ಸಂಸ್ಥಾಪಕ ಶ್ರೀ ರವಿಶಂಕರ್ ಗುರೂಜಿ ಅವರನ್ನು ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಭೇಟಿಯಾಗಿ ಉಭಯ ಕುಶಲೋಪರಿ ವಿಚಾರಿಸಿದರು.

ನಾದಾಮೃತ ಕಾರ್ಯಕ್ರಮ ನಾಳೆ

ಬೆಂಗಳೂರು: ಪಂಡಿತ್ ನಂದಕುಮಾರ್ ಕುರುಡಿ ಅವರ ಅಮೃತ ಮಹೋತ್ಸವದ ಅಂಗವಾಗಿ ನಂದಕುಮಾರ್ ಕುರುಡಿ ಅಮೃತ ಮಹೋತ್ಸವ ಸಮಿತಿ ವತಿಯಿಂದ ಮೇ 15ರಂದು ಸಂಜೆ 5 ಗಂಟೆಗೆ ಜಯನಗರ 8ನೇ ಬ್ಲಾಕ್‌ನಲ್ಲಿ ಶ್ರೀ ಜಯರಾಮ ಸೇವಾ ಮಂಡಳಿಯಲ್ಲಿ ನಾದಾಮೃತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಖ್ಯಾತ ತಬಲಾ ವಾದಕ ಸತೀಶ್ ಹಂಪಿಕೊಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜೆ.ಎಸ್ ಹೆಗಡೆ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

15 ದಿನಗಳಲ್ಲಿ ಭೂ ಸಮೀಕ್ಷೆ ಪೂರ್ಣಗೊಳಿಸಲು ಆಯುಕ್ತ ಡಿ.ಎಸ್.ರಮೇಶ್ ಸೂಚನೆ

ಬೆಳ್ಳಂದೂರು ಬಫರ್ ರಸ್ತೆ ಯೋಜನೆಗೆ ವೇಗ

ಬೆಂಗಳೂರು: ಬೆಳ್ಳಂದೂರು ವೇಸ್ಟ್ ವಿಯರ್ ನಿಂದ ಓಲ್ಡ್ ಏರ್‌ಪೋರ್ಟ್ ರಸ್ತೆಯ ವರ್ಜಿನಿಯಾ ಮಾಲ್‌ವರೆಗೆ ಪ್ರಸ್ತಾಪಿತ ರಾಜಕಾಲುವೆ ಬಫರ್ ವಲಯ ಸಂರಕ್ಷಣೆ ಹಾಗೂ ಸರ್ವಿಸ್ ರಸ್ತೆ ನಿರ್ಮಾಣ ಯೋಜನೆಗೆ ಸಂಬಂಧಿಸಿದ ಭೂ ಸಮೀಕ್ಷೆ ಮತ್ತು ಆಸ್ತಿ ಗುರುತಿಸುವಿಕೆ ಕಾರ್ಯ ಚುರುಕುಗೊಳಿಸುವಂತೆ ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಬೆಳ್ಳಂದೂರು ರಾಜಕಾಲುವೆ ವ್ಯಾಪ್ತಿಯಲ್ಲಿ ಪ್ರವಾಹ ನಿಯಂತ್ರಣ, ಬಫರ್ ವಲಯ ರಕ್ಷಣೆ ಮತ್ತು ಸಂಪರ್ಕ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಪರಿಶೀಲನಾ ಸಭೆಯಲ್ಲಿ ಆಯುಕ್ತ ಡಿ.ಎಸ್. ರಮೇಶ್ ಮಾತನಾಡಿ, ಯೋಜನೆಯ ವಿಸ್ತೃತ ಯೋಜನಾ ವರದಿ ಪರಿಶೀಲನೆಯ ವೇಳೆ ಬಫರ್ ರಸ್ತೆ ಹೊರ ವರ್ತುಲ ರಸ್ತೆಯೊಂದಿಗೆ ಸಂಪರ್ಕಿಸುವುದು, ರೈಲು ಮಾರ್ಗಗಳ ಬಳಿ ರಸ್ತೆ ಸಂಪರ್ಕ ವ್ಯವಸ್ಥೆ ನಿರ್ಮಾಣ ಹಾಗೂ ರೈಲ್ವೆ ಓವರ್ ಬ್ರಿಡ್ಜ್, ಅಂಡರ್ ಬ್ರಿಡ್ಜ್ ಪ್ರಸ್ತಾಪಿತ ಬಫರ್ ರಸ್ತೆ ಯೋಜನೆ ಸುಮಾರು 18 ಕಿ.ಮೀ ಉದ್ದವಿದ್ದು, ಈ ಪೈಕಿ 2 ಕಿ. ಮೀ ವ್ಯಾಪ್ತಿಯಲ್ಲಿ ಸುಮಾರು 80 ಆಸ್ತಿ ಈಗಾಗಲೇ ಗುರುತಿಸಲಾಗಿದೆ. ಆದರೆ ಭೂ ಸಮೀಕ್ಷೆ ಮತ್ತು ದಾಖಲೆ ಕಾರ್ಯ ಕೇವಲ ಶೇ. 50ರಷ್ಟು ಮಾತ್ರ ಪೂರ್ಣಗೊಂಡಿದೆ. ಉಳಿದ ಸಮೀಕ್ಷೆ ಹಾಗೂ ದಾಖಲೆ ಸಂಗ್ರಹ ಕಾರ್ಯ ಮುಂದಿನ 15 ದಿನಗಳಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕೆಲವು ಪ್ರದೇಶಗಳಲ್ಲಿ ಕಾಲುವೆಗಳ ಅಗಲ ಕಿರಿದಿರುವುದರಿಂದ ಮಳೆಗಾಲದಲ್ಲಿ ನೀರಿನ ಹರಿವು ಅಡ್ಡಿಯಾಗುತ್ತಿವೆ. ಹೀಗಾಗಿ ಕೆಲವು ಪ್ರಮುಖ ಭಾಗಗಳಲ್ಲಿ ಕಾಲುವೆ ಅಗಲ 30 ಮೀಟರ್‌ವರೆಗೆ ವಿಸ್ತರಿಸುವ ಸಾಧ್ಯತೆ ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.ಬಫರ್ ವಲಯ ಹಾಗೂ ಸೆಟ್ ಬ್ಯಾಕ್ ನಿಯಮ ಉಲ್ಲಂಘನೆಗಳ ಕುರಿತು ಸಹ ಸಮಗ್ರ ಪರಿಶೀಲನೆ ನಡೆಸುವಂತೆ ಸೂಚನೆ ನೀಡಲಾಯಿತು. ರಾಜಕಾಲುವೆಗಳಿಗೆ ಹೊಂದಿಕೊಂಡಿರುವ ಕಟ್ಟಡಗಳ ಅನುಮೋದಿತ ನಕ್ಷೆ, ಸ್ಥಳ ಪರಿಶೀಲನಾ ವರದಿ ಹಾಗೂ ಸೂಪರ್ ಇಂಪೋಸ್ಡ್ ನಕ್ಷೆ ಪರಿಶೀಲಿಸಿ ನಿಯಮ ಉಲ್ಲಂಘನೆಗಳ ಬಗ್ಗೆ ವರದಿ ಸಿದ್ಧಪಡಿಸಲು ಆದೇಶಿಸಲಾಗಿದೆ. ಸಭೆಯಲ್ಲಿ ಅಪರ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಸೇರಿದಂತೆ ವಿವಿಧ ವಿಭಾಗಗಳ ಅಧಿಕಾರಿಗಳು ಭಾಗವಹಿಸಿದ್ದರು.

ಆಯುಕ್ತ ಡಿ.ಎಸ್. ರಮೇಶ್ ಅಧ್ಯಕ್ಷತೆಯಲ್ಲಿ ಬೆಳ್ಳಂದೂರು ಬಫರ್ ರಸ್ತೆ ಯೋಜನೆ ಕುರಿತು ಪರಿಶೀಲನೆ ಸಭೆ ನಡೆಯಿತು. ಈ ವೇಳೆ ಅಪರ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಸೇರಿದಂತೆ ವಿವಿಧ ವಿಭಾಗಗಳ ಅಧಿಕಾರಿಗಳು ಭಾಗವಹಿಸಿದ್ದರು.

ಮತ್ತೆ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ ಆದೇಶ

ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಡಿವೈ ಎಸ್‌ಪಿ ಹಾಗೂ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ ಮುಂದುವರಿದಿದೆ. ಕಳೆದ ಎರಡು ದಿನಗಳಿಂದ ಅಷ್ಟೇ ರಾಜ್ಯ ಸರಕಾರ ಬರೋಬ್ಬರಿ 293 ಇನ್‌ಸ್ಪೆಕ್ಟರ್‌ಗಳು ಹಾಗೂ 74 ಡಿವೈಎಸ್‌ಪಿಗಳನ್ನು ವರ್ಗಾವಣೆ ಮಾಡಿತ್ತು. ಇದರ ಬೆನ್ನಲ್ಲೇ ಮತ್ತೆ 12 ಡಿವೈಎಸ್‌ಪಿ, 87 ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು (ಸಿವಿಲ್) ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾ ವಣೆ ಮಾಡಿ ಪೊಲೀಸ್ ಮಹಾ ನಿರ್ದೇಶಕರು ಆದೇಶಿಸಿದ್ದಾರೆ.ಮೇ 10, 2026ರಂದು ನಡೆದ ಪೊಲೀಸ್ ಸಿಬ್ಬಂದಿ ಮಂಡಳಿಯ ಸಭೆಯಲ್ಲಿ ಕೈಗೊಂಡ ತೀರ್ಮಾನ ದಂತೆ ಈ ವರ್ಗಾವಣೆ ಆದೇಶಗಳನ್ನು ಹೊರಡಿಸಲಾಗಿದೆ. ಆಡಳಿತಾತ್ಮಕ ಹಿತ ದೃಷ್ಟಿಯಿಂದ ಹಾಗೂ ಸಾರ್ವಜನಿಕ ಸೇವೆಯ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ಪ್ರಮುಖ ಬದಲಾವಣೆಗಳನ್ನು ಮಾಡಲಾಗಿದೆ ಎಂದು ತಿಳಿದುಬಂದಿದ್ದು, ವರ್ಗಾವಣೆಗೊಂಡ ಎಲ್ಲಾ ಅಧಿಕಾರಿಗಳು ತಕ್ಷಣದಿಂದ ಜಾರಿಗೆ ಬರುವಂತೆ ತಮ್ಮ ಹಳೆಯ ಹುದ್ದೆಗಳಿಂದ ಬಿಡುಗಡೆಗೊಂಡು, ನಿಯೋಜಿತ ಹೊಸ ಸ್ಥಳಗಳಲ್ಲಿ ವರದಿ ಮಾಡಿಕೊಳ್ಳುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ಬಸವ ವೇದಿಕೆ ವತಿಯಿಂದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಅವರಿಗೆ ಬೆಂಗಳೂರಿನ ಅವರ ನಿವಾಸದಲ್ಲಿ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಸಂಸದ ಬಸವರಾಜ ಬೊಮ್ಮಾಯಿ, ಬಸವ ವೇದಿಕೆ ಅಧ್ಯಕ್ಷ ಸಿ. ಸೋಮಶೇಖರ ಹಾಗೂ ಸಾಹಿತಿ ಷಡಕ್ಷರಿ ಹಾಜರಿದ್ದರು.

ಕಾರಂತ ಬಡಾವಣೆಯಲ್ಲಿ ನಿವೇಶನ ಹಂಚಿಕೆ

ಬೆಂಗಳೂರು: ನಗರದ ಸಮಗ್ರ ಅಭಿವೃದ್ಧಿ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಲವು ಮಹತ್ವದ ಯೋಜನೆಗಳಿಗೆ ಚಾಲನೆ ನೀಡಿದ್ದು, ಡಾ.ಕೆ.ಶಿವರಾಮ ಕಾರಂತ ಬಡಾವಣೆಯ ನಿವೇಶನ ಹಂಚಿಕೆ, ಅನಧಿಕೃತ ಕಟ್ಟಡಗಳ ಸಕ್ರಮ, ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಘೋಷಿಸಿದೆ.

ಡಾ. ಕೆ. ಶಿವರಾಮ ಕಾರಂತ ಬಡಾವಣೆಯಲ್ಲಿ ಭೂಮಿ ಕಳೆದುಕೊಂಡ ಮಾಲೀಕರಿಗೆ ಅಭಿವೃದ್ಧಿಪಡಿಸಿದ ನಿವೇಶನಗಳ ಹಂಚಿಕೆ ಪ್ರಕ್ರಿಯೆ ಮೇ 15ರಿಂದ ಆರಂಭವಾಗಲಿದೆ. ಒಟ್ಟು 3,052 ಭೂಮಾಲೀಕರಿಗೆ ಸುಮಾರು 18 ಸಾವಿರ ನಿವೇಶನಗಳನ್ನು ಸೆಂಟರ್ ಫಾರ್ ಇ-ಗವರ್ನೆನ್ಸ್ ತಂತ್ರಾಂಶದ ಮೂಲಕ ಪಾರದರ್ಶಕವಾಗಿ ಹಂಚಿಕೆ ಮಾಡಲಾಗುತ್ತದೆ. ಎರಡು ಎಕರೆಗಿಂತ ಹೆಚ್ಚು ಭೂಮಿ ನೀಡಿದ 305 ಮಾಲೀಕರಿಗೆ, ಅವರ ಒಪ್ಪಿಗೆಯ ಮೇರೆಗೆ 10 ಸಾವಿರದಿಂದ 30 ಸಾವಿರ ಚದರ ಅಡಿ ವಿಸ್ತೀರ್ಣದ ನಿವೇಶನ ನೀಡುವ ಯೋಜನೆಯೂ ಪ್ರಕಟಿಸಲಾಗಿದೆ. ಬಿಡಿಎ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿರುವ ಕಟ್ಟಡಗಳನ್ನು ನಿಯಮ 38(ಡಿ) ಅಡಿಯಲ್ಲಿ ಸಕ್ರಮಗೊಳಿಸಲು ಸರಕಾರ ಸುಗ್ರೀವಾಜ್ಞೆ ಹೊರಡಿಸಲಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಕ್ರಮ ಶುಲ್ಕದಲ್ಲಿ ಶೇ.50 ರಿಯಾಯಿತಿ ನೀಡಲು ತೀರ್ಮಾನಿಸಲಾಗಿದೆ.

ನಗರದ ಸಂಚಾರ ದಟ್ಟಣೆ ನಿವಾರಣೆಗೆ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಯೋಜನೆಗೂ ವೇಗ ನೀಡಲಾಗಿದೆ. ಪಿಆರ್‌ಆರ್ 1 ಅಡಿಯಲ್ಲಿ ಭೂಮಿ ಬಿಟ್ಟುಕೊಟ್ಟವರಿಗೆ ಎಫ್ ಎಆರ್ ಹಾಗೂ ಟಿಡಿಆರ್ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪಿಆರ್‌ಪಿ 2 ಅಡಿಯಲ್ಲಿ ಹೊಸೂರು ರಸ್ತೆಯಿಂದ ಮೈಸೂರು ರಸ್ತೆಯವರೆಗೆ ಹಾಗೂ ಮಾಗಡಿ ರಸ್ತೆಯಿಂದ ತುಮಕೂರು ರಸ್ತೆಯವರೆಗೆ ಒಟ್ಟು 42 ಕಿ.ಮೀ ಉದ್ದದ ರಸ್ತೆ ನಿರ್ಮಾಣವಾಗಲಿದೆ. ಬಿಡಿಎ ಸುವರ್ಣ ಮಹೋತ್ಸವದ ಅಂಗವಾಗಿ ಜೂನ್ 27ರಂದು ಕೇವಲ 24 ಗಂಟೆಗಳಲ್ಲಿ 15 ಲಕ್ಷ ಸಸಿಗಳನ್ನು ನೆಡುವ ಬೃಹತ್ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಸಿಎಸ್‌ಆರ್ ಯೋಜನೆಯಡಿ ಸಾರ್ವಜನಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಹೆಬ್ಬಾಳ ಜಂಕ್ಷನ್‌ನಿಂದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದವರೆಗೆ 1,139 ಕೋಟಿ ರು. ವೆಚ್ಚದಲ್ಲಿ 2.22 ಕಿ.ಮೀ ಉದ್ದದ ಅವಳಿ ಸುರಂಗ ಮಾರ್ಗ ಹಾಗೂ ಮೇಖ್ರಿ ಸರ್ಕಲ್‌ವರೆಗೆ 440 ಕೋಟಿ ರು. ವೆಚ್ಚದ ಮೇಲ್ ಸೇತುವೆ ನಿರ್ಮಾಣಕ್ಕೂ ಚಾಲನೆ ನೀಡಲಾಗಿದೆ. ನಗರದ ಮೂಲಸೌಕರ್ಯ ಅಭಿವೃದ್ಧಿ, ಸಂಚಾರ ವ್ಯವಸ್ಥೆ ಸುಧಾರಣೆ ಹಾಗೂ ವಸತಿ ಸೌಲಭ್ಯ ವಿಸ್ತರಣೆಯತ್ತ ಬಿಡಿಎ ಕೈಗೊಂಡಿರುವ ಈ ಕ್ರಮಗಳು ಬೆಂಗಳೂರಿನ ಭವಿಷ್ಯ ಅಭಿವೃದ್ಧಿಗೆ ಹೊಸ ದಿಕ್ಕು ನೀಡಲಿವೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ನಿಗಮ ಆಡಳಿತ, ಕಾನೂನು ಪಾಲನೆ ಕಾರ್ಯಾಗಾರ

ಬೆಂಗಳೂರು: ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ (ಬಿಎಂಎ)ವತಿಯಿಂದ, ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ಐಸಿಎಸ್‌ಐ), ಬೆಂಗಳೂರು ಚಾಪ್ಟರ್ ಸಹಯೋಗದಲ್ಲಿ ನಿಗಮ ಆಡಳಿತ ಮತ್ತು ಕಾರ್ಮಿಕ ಕಾನೂನು ಪಾಲನೆ ವಿಷಯದ ಕುರಿತ ಕಾರ್ಯಾಗಾರ ಆಯೋಜಿಸಲಾಗಿತ್ತು.

ಕಾರ್ಯಾಗಾರವನ್ನು ಕೆಎಸ್‌ಆರ್‌ಟಿಸಿ ಸಂಸ್ಥೆಯ ನಿರ್ದೇಶಕಿ (ವ್ಯಕ್ತಿಗತ ಮತ್ತು ವಿಜಿಲೆನ್ಸ್ ವಿಭಾಗ) ಗಾಯತ್ರಿ ಐಎಎಸ್ ಉದ್ಘಾಟಿಸಿದರು. ಸಂಸ್ಥೆಗಳ ಆಡಳಿತ ಮಂಡಳಿಯ ಮಟ್ಟದ ನಿರ್ಣಯಗಳಲ್ಲಿ ಕಾರ್ಮಿಕ ವರ್ಗದ ಭಾಗವಹಿಸುವಿಕೆಯ ಮಹತ್ವ ಒತ್ತಿ ಹೇಳಿದರು. ಹೊಸ ಕಾರ್ಮಿಕ ಕಾನೂನು ಸಂಹಿತೆಗಳು ಜಾರಿಗೆ ಬರುತ್ತಿರುವ ಹಿನ್ನೆಲೆಯಲ್ಲಿ, ಪಾಲ್ಗೊಂಡವರು ಸಕ್ರಿಯವಾಗಿ ಭಾಗವಹಿಸಿ, ಪರಸ್ಪರ ಸಂವಹನ ನಡೆಸಿ, ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕೆಂದು ತಿಳಿಸಿದರು.

ಐಸಿಎಸ್‌ಐನ ಪ್ರಸನ್ನಕುಮಾರ್ ಬೇಡಿ, ನಿಗಮ ಆಡಳಿತ ಅನುಷ್ಠಾನ ಮತ್ತು ಬಲಪಡಿಸುವಲ್ಲಿ ಕಂಪನಿ ಸೆಕ್ರೆಟರಿಗಳ ಪ್ರಮುಖ ಪಾತ್ರ ವಿವರಿಸಿದರು. ಬಿಎಂಆರ್‌ಸಿಎಲ್ ಸಲಹೆಗಾರರಾದ ವಸಂತರಾವ್ ಅವರು ಸಂಸ್ಥೆಗಳ ದೀರ್ಘಕಾಲೀನ ಬೆಳವಣಿಗೆಗಾಗಿ ನೀತಿ ಪುನರ್ರಚನೆಯ ಅಗತ್ಯತೆಯ ಕುರಿತು ಮಾತನಾಡಿದರು. ತಿರುಪಾಲ್ ಗೋರಿಗೆ ಅವರು ಆರ್ಥಿಕ ಅಭಿವೃದ್ಧಿ ಮುನ್ನಡೆಸುವಲ್ಲಿ ನಿಗಮ ಆಡಳಿತದ ಮಹತ್ವ ವಿವರಿಸಿದರು.

2025ರ ಕಾರ್ಮಿಕ ಕಾನೂನು ಸಂಹಿತೆಗಳಲ್ಲಿ ನಡೆದ ಬದಲಾವಣೆಗಳು ಹಾಗೂ ಅವು ಕಂಪನಿಗಳ ಮೇಲೆ ಬೀರುವ ಪರಿಣಾಮಗಳ ಕುರಿತು ರಾಮ್ ಝುಡ್.ಕೆ. ನವರತ್ನ ಅವರು ವಿವರವಾದ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಎಂಡಿಸಿ ನಿರ್ದೇಶಕರಾದ ಎನ್.ಡಿ. ವೀರಣ್ಣಗೌಡ ಹಾಗೂ ಕಾರ್ಯಕ್ರಮದ ಅಧ್ಯಕ್ಷರಾದ ಡಾ. ಮೋಹನ್ ದಾಸ್ ಅವರು ಕಾರ್ಯಾಗಾರದಲ್ಲಿ ಪಾಲ್ಗೊಂಡ ಅಧಿಕಾರಿಗಳ ಜೊತೆ ಸಂವಾದ ನಡೆಸಿ ಅವರ ಪ್ರಶ್ನೆಗಳಿಗೆ ಉತ್ತರಿಸಿದರು.

ಈ ಕಾರ್ಯಕ್ರಮದಲ್ಲಿ ಬೆಸ್ಕಾಂನ ಕಂಪನಿ ಸೆಕ್ರೆಟರಿ ಸುಮಾ ಹಾಗೂ ಎಂಎಸ್‌ಐಎಲ್‌ನ ಶ್ರೀದೇವಿ ಸೇರಿದಂತೆ ಹಲವು ಕಂಪನಿ ಸೆಕ್ರೆಟರಿಗಳು ಭಾಗವಹಿಸಿದ್ದರು.

sagility™
Sagility Limited
(formerly known as Sagility India Limited and prior to that Sagility India Private Limited)
CIN - L72900KA2021PLC150054
Registered office: No.23 & 24 AMR Tech Park, Building 2A, First Floor, Hongasandara Village, Off Hosur Road, Bommanahalli, Bengaluru Karnataka, 560 068, India. **Telephone .:** 91- 8071251500, **E-mail:** investorservices@sagility.com; **website:** www.sagility.com

STATEMENT OF STANDALONE AND CONSOLIDATED FINANCIALS RESULTS FOR THE QUARTER AND YEAR ENDED 31 MARCH 2026

The Standalone and Consolidated financials results of Sagility Limited [formerly known as Sagility India Limited and prior to that Sagility India Private Limited] (**"the Company"**) have been reviewed and recommended by the Audit Committee and approved by the Board of Directors, at their meetings held on 12 May 2026.

The Standalone and Consolidated financials results of the Company along with Audit report of Statutory auditors are available on the BSE Limited website (URL: www.bseindia.com), the National Stock Exchange of India Limited website (URL: www.nseindia.com) and on the Company's website (URL: www.sagilityhealth.com) and can be accessed by scanning the Quick response Code (QR Code) provided below:

Date: 12 May 2026
Place: Bengaluru

Ramesh Gopalan
Managing Director and Group Chief Executive Officer
CONCEPT

ಕರ್ನಾಟಕ ರಾಜ್ಯ ಉಗ್ರಾಣ ನಿಗಮ

ಉಗ್ರಾಣ ಭವನ, ನಂ. 43, ಪ್ರಿಮ್‌ರೋಸ್ ರಸ್ತೆ, ಬೆಂಗಳೂರು-560025.
ಫ್ಯಾಕ್ಸ್: 080-29533673, ದೂರವಾಣಿ : 080-29533679
Email : kswc.eng@gmail.com

'ಇ' ಟೆಂಡರ್ ಪ್ರಕಟಣೆ

ಸಂಖ್ಯೆ: ಕರಾಉನಿ/ಅಭಿಯ/44/ಎಫ್-54/2026-27 ದಿನಾಂಕ: 13.05.2026

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಬೆಂಗಳೂರು ಇವರು ಕರ್ನಾಟಕದ 52 ಉಗ್ರಾಣ ನಿಗಮದ ಕೇಂದ್ರಗಳಲ್ಲಿ ಪಿಪಿಪಿ ವಿಧಾನದಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಬಿಎಫ್‌ಓಟಿ) ಮೇಲೆ Solar Roof Top PV System ಗಳನ್ನು ಅಳವಡಿಸಿ, ಅಭಿವೃದ್ಧಿ ಮತ್ತು ಅನುಷ್ಠಾನಕ್ಕಾಗಿ ಸೌರ ಶಕ್ತಿ ಉತ್ಪಾದಕರನ್ನು ಆಯ್ಕೆ ಮಾಡುವ ಸಲುವಾಗಿ ಇ-ಟೆಂಡರ್ ಆಹ್ವಾನಿಸಿದ್ದಾರೆ. ಟೆಂಡರ್ ದಾಖಲೆಗಳನ್ನು https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

2. ನಿಗದಿತ ಇಎಂಡಿಯನ್ನು ಟೆಂಡರ್ ಸಲ್ಲಿಸುವ ಸಮಯದಲ್ಲಿ ಆನ್‌ಲೈನ್ ಮೂಲಕ ಪಾವತಿಸಬೇಕು.

ಕಾಮಗಾರಿ ಹೆಸರು : 1) ಕ್ಲಸ್ಟರ್ 1 – ಕರ್ನಾಟಕ ರಾಜ್ಯ ಉಗ್ರಾಣ ನಿಗಮದಿಂದ ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಹೊಸದಾಗಿ ನಿರ್ಮಿಸಲಾದ ಉಗ್ರಾಣ ಕೇಂದ್ರಗಳ ಪೈಕಿ ಉತ್ತರ ಕರ್ನಾಟಕದ 23 ಸ್ಥಳಗಳಲ್ಲಿ. **ಟೆಂಡರಿಗಿಟ್ಟ ಮೊತ್ತ:** ರೂ. 174.22 ಕೋಟಿ. **ಇಎಂಡಿ:** ರೂ.87,11,000/-. **2) ಕ್ಲಸ್ಟರ್ 2** – ಕರ್ನಾಟಕ ರಾಜ್ಯ ಉಗ್ರಾಣ ನಿಗಮದಿಂದ ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಹೊಸದಾಗಿ ನಿರ್ಮಿಸಲಾದ ಉಗ್ರಾಣ ಕೇಂದ್ರಗಳ ಪೈಕಿ ದಕ್ಷಿಣ ಕರ್ನಾಟಕದ 29 ಸ್ಥಳಗಳಲ್ಲಿ. **ಟೆಂಡರಿಗಿಟ್ಟ ಮೊತ್ತ:** ರೂ. 122.40 ಕೋಟಿ. **ಇಎಂಡಿ:** ರೂ.61,20,000/-.

3. ಇ-ಟೆಂಡರ್ ಅನ್ನು "ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್" ಹೊಂದಿರುವ ದ್ವಿಲಕೋಟೆ ವ್ಯವಸ್ಥೆಯಲ್ಲಿ ಸಲ್ಲಿಸಬೇಕು. ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಬಿಡ್‌ದಾರರ ಆರ್ಥಿಕ ಬಿಡ್ ಅನ್ನು ತೆರೆಯಲಾಗುವುದು.

ವೇಳಾ ಪಟ್ಟಿ ಕೆಳಕಂಡಂತಿವೆ

1.	ಬಿಡ್ ಪೂರ್ವಭಾವಿ ಸಭೆ	28.05.2026 ರಂದು 15.00 ಗಂಟೆಗೆ
2.	ವಿಚಾರಣೆಗಳ ಸ್ಪಷ್ಟತೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	04.06.2026 ರಂದು 17.00 ಗಂಟೆ
3.	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	04.07.2026 ರ 17.30 ಗಂಟೆ
4.	ತಾಂತ್ರಿಕ ಬಿಡ್ ತೆರೆಯುವುದು	08.07.2026 ರಂದು 15.00 ಗಂಟೆಗೆ
5.	ಆರ್ಥಿಕ ಬಿಡ್ ತೆರೆಯುವುದು	ಅರ್ಹತೆ ಪಡೆದ ಬಿಡ್‌ದಾರರಿಗೆ ತಿಳಿಸಲಾಗುವುದು

4. ಬಿಡ್‌ದಾರರು ತಯಾರಿಸುವ ಪ್ರತಿಕ್ರಿಯೆ ಹಾಗೂ ಬಿಡ್‌ದಾರರು / ಅಭಿವೃದ್ಧಿದಾರರು ಬಿಡ್‌ಗಳಿಗೆ ಸಂಬಂಧಿಸಿದಂತೆ ಸಲ್ಲಿಸುವ ಎಲ್ಲಾ ಲಿಖಿತ ವ್ಯವಹಾರ ಮತ್ತು ದಾಖಲೆಗಳು ಆಂಗ್ಲ ಭಾಷೆಯಲ್ಲಿರಬೇಕು.

5. ಯಾವುದೇ ಕಾರಣ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ/ ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಕಾಯ್ದಿರಿಸುತ್ತಾರೆ.

6. ಆಸಕ್ತಿಯುಳ್ಳ ಬಿಡ್‌ದಾರರು ಹೆಚ್ಚಿನ ಮಾಹಿತಿಯನ್ನು ಟೆಂಡರ್ ಆಹ್ವಾನ ದಾಖಲೆಗಳಲ್ಲಿ ಸೂಚಿಸಲಾದ ವಿಳಾಸದಲ್ಲಿ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/638/ಆಕಾರ್/2026-27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್‌ರಾಜ್‌ಇಂಜನಿಯರಿಂಗ್ ವಿಭಾಗ,
ಮೈಸೂರು-570023

ಅಲ್ಪಾವಧಿ ಇ-ಪ್ರಕ್ಯೂರ್‌ಮೆಂಟ್-ಟೆಂಡರ್ ಪ್ರಕಟಣೆ ಸಂಖ್ಯೆ: 18/2025-26/ (3ನೇ ಕರೆ), ದಿನಾಂಕ: 27.04.2026

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ನಂಜನಗೂಡು ತಾಲ್ಲೂಕಿನ 2024-25ನೇ ಸಾಲಿನ 5054 ಮಳೆಹಾನಿ ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗೆ KW-4 ರೀತ್ಯಾ ಮರುಟೆಂಡರ್ (3ನೇ ಕರೆ) ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿ: 06.05.2026 ರಿಂದ ದಿ: 16.05.2026 ರವರೆಗೆ ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿ: 18.05.2026ರ ಸಂಜೆ 17.00 ಘಂಟೆಯ ನಂತರ ಹಾಗೂ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಟೆಂಡರ್ ಫಾರಂ ಬೆಲೆ ಇ-ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. **ಕ್ರ.ಸಂ.01. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ:** ನಂಜನಗೂಡು ತಾಲ್ಲೂಕು ತಗಡೂರು ಗ್ರಾಮದಿಂದ ಅಹಲ್ಯ ಗ್ರಾಮದವರೆಗೆ ಮಾರ್ಗ ಮಧ್ಯೆ ಬರುವ ತಗಡೂರು ಗಾಮದ ಚಂಡಿಕೇಶ್ವರ ದೇವಸ್ಥಾನದ ರಸ್ತೆ, ಅಳಗಂಚಿ, ಕಿರಗುಂದ, ಬಿಳಿಗೆರೆ, ಹಾರೋಪುರ, ಬಿಳುಗಲಿ, ಹದಿನಾರು ಮೋಳೆ, ಇಮ್ಮಾವುಹುಂಡಿ, ಕೆ.ಎಸ್.ಹುಂಡಿ, ಬಿದರಗೂಡು ಮತ್ತು ಅಹಲ್ಯ ಗ್ರಾಮ ಪರಿಮಿತಿಯಲ್ಲಿ ಸಿ.ಸಿ ಚರಂಡಿ ಮತ್ತು ಸಿ.ಸಿ. ರಸ್ತೆ ಹಾಗೂ ಡಾಂಬರು ರಸ್ತೆ ನಿರ್ಮಾಣ ಕಾಮಗಾರಿ (RDPR/2025-26/RD/WORK_INDENT21391/Call-3) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 455.00 **ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 382.08 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 5,75,500.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (KPPP) ವೆಬ್ ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಪೋನ್ ನಂ.0821-2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮೈಸೂರು
DIPR/DDMYS/169/KSMCA/134/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ
ವಿಭಾಗ ಕಾರ್ಯಾಲಯ, ವಿಜಯಪುರ
ಕನಕದಾಸ ಬಡಾವಣೆ, ಜಿಲ್ಲಾ ಪಂಚಾಯತ್ ಆವರಣ, ವಿಜಯಪುರ-586101
ದೂರವಾಣಿ ಸಂಖ್ಯೆ: 08352-277941,
ಇ-ಮೇಲ್: eerdwsd.bjp@gmail.com
ಕ್ರ.ಸಂ:ಕಾಇಂ/ಗ್ರಾ.ಕು.ನೀ.ನೈ.ವಿ/ವಿಜ/KPPP/ಟೆಂಡರ್/2025-26/187
ದಿನಾಂಕ: 12.05.2026

KPPP Portal ಮುಖಾಂತರ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು (Standard tender docuement KW-1/2/3/4) & KTPP ನಿಯಮಾನುಸಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ವಿಜಯಪುರ ವಿಭಾಗದಡಿ ಬರುವ ಗ್ರಾಮೀಣ ಜನವಸತಿಗಳಲ್ಲಿ ಬಹುಹಳ್ಳಿ ಕುಡಿಯುವ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ MVS O&M ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

ದ್ವಿ ಲಕೋಟೆ : 01 ಕಾಮಗಾರಿ.

KPPP Portal **ಮುಖಾಂತರ ಆನ್‌ಲೈನ್ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20.05.2026 ರಂದು ಸಾಯಂಕಾಲ 5.30 ಘಂಟೆವರೆಗೆ, ಪ್ರೀ ಬಿಡ್ ಸಭೆ ದಿನಾಂಕ: 19.05.2026 ಮುಂಜಾನೆ 11.00 ಘಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21.05.2026 ಸಾಯಂಕಾಲ 5.30 ಘಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 25.05.2026 ಮುಂಜಾನೆ 11.00 ರ ನಂತರ (ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ).**

ಟೆಂಡರ್ ಷರತ್ತುಗಳು ಹಾಗೂ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದು ಹಾಗೂ ಈ ವಿಭಾಗ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ&ನೈ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/93/ಕೆಎಸ್‌ಎಂಸಿಎ/2026-27

ಜಿಲೆಟಿನ್ ಪತ್ತೆ: ಶಂಕಿತ ಆರೋಪಿಗೆ ತ.ನ ನಂಟು

ಬೆಂಗಳೂರು: ನಗರದ ಹೊರವಲಯದ ತಾತಗುಣಿ ಬಳಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರುವುದು ಈಗ ತನಿಖಾ ತಂಡಗಳಲ್ಲಿ ಹಲವು ಅನುಮಾನಗಳಿಗೆ ಕಾರಣವಾಗಿದೆ. ಈ ಘಟನೆಯು ಕೇವಲ ಕಾಕತಾಳೀಯವೇ ಅಥವಾ ಇದರ ಹಿಂದೆ ಯಾವುದಾದರೂ ಉದ್ದೇಶಪೂರ್ವಕ ಸಂಚು ಅಡಗಿದೆಯೇ ಎಂಬ ನಿಟ್ಟಿನಲ್ಲಿ ಪೊಲೀಸರು ಎರಡು ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ.

ಬೆದರಿಕೆ ಕರೆ ಮಾಡಿದ್ದ ಹಿನ್ನೆಲೆಯಲ್ಲಿ ಪೊಲೀಸರ ವಶದಲ್ಲಿರುವ ಲೋಹಿತ್ ಎಂಬಾತನನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ. ಆತನ ಟ್ರಾವೆಲ್ ಹಿಸ್ಟರಿ ಪರಿಶೀಲಿಸಿದಾಗ ಸ್ಫೋಟಕ ಮಾಹಿತಿ ಲಭ್ಯವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಬೆಂಗಳೂರಿಗೆ ಭೇಟಿ ನೀಡುವ ಕೇವಲ ಒಂದು ದಿನದ (ಮೇ9) ಮೊದಲು ಲೋಹಿತ್ ತಮಿಳುನಾಡಿಗೆ ಹೋಗಿ ಬಂದಿರುವುದು ಪತ್ತೆಯಾಗಿದೆ.

ತಮಿಳುನಾಡಿನಲ್ಲಿ ಜಿಲೆಟಿನ್ ತಯಾರಿಕಾ ಘಟಕಗಳು ಮತ್ತು ಮಾರಾಟಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಆತ ಅಲ್ಲಿಗೆ ಭೇಟಿ ನೀಡಿದ್ದು ಯಾಕೆ? ಸ್ಫೋಟಕಗಳನ್ನು ತರಲು ಹೋಗಿದ್ದನೇ? ಎಂಬ ಅನುಮಾನ ಪೊಲೀಸರನ್ನು ಕಾಡುತ್ತಿದೆ.

ಪ್ರಸ್ತುತ ತಮಿಳುನಾಡಿನ ಸ್ಫೋಟಕ ಮಾರಾಟ ಗಾರರ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ. ತಾತಗುಣಿಯಲ್ಲಿ ಸಿಕ್ಕಿರುವ ಕಡ್ಡಿಗಳು ಸುಮಾರು ಎರಡು ವರ್ಷಕ್ಕಿಂತಲೂ ಹಳೆಯವು. ಸಾಮಾನ್ಯವಾಗಿ ಎರಡು ವರ್ಷ ಕಳೆದ ಜಿಲೆಟಿನ್ ಕಡ್ಡಿಗಳು ಶಕ್ತಿ ಕಳೆದುಕೊಳ್ಳುತ್ತವೆ.

ಒಂದು ವೇಳೆ ಇವುಗಳನ್ನು ಸ್ಫೋಟಿಸಿದರೂ ನಿಗದಿತ ಪ್ರಮಾಣದ ಹಾನಿ ಉಂಟುಮಾಡುವ ಸಾಮರ್ಥ್ಯ ಹೊಂದಿರುವುದಿಲ್ಲ.

ಹಾಗಾಗಿ ಸ್ಥಳೀಯ ಕಲ್ಲಿನ ಕ್ವಾರಿಗಳಲ್ಲಿ ಕೆಲಸ ಮಾಡುವವರು ಬಳಕೆಗೆ ಬಾರದ ಹಳೆಯ ಕಡ್ಡಿಗಳನ್ನು ಇಲ್ಲಿಗೆ ತಂದು ಬಿಸಾಡಿರಬಹುದು ಎನ್ನುವ ಕೋನದಲ್ಲೂ ತನಿಖೆ ನಡೆಯುತ್ತಿದೆ.

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ತಾಲ್ಲೂಕು ಕಛೇರಿ ಹತ್ತಿರ ಚನ್ನರಾಯಪಟ್ಟಣ.
ಇ-ಮೇಲ್:acfchannarayapatna@gmail.com
ಸಂಖ್ಯೆ : ಸಅಸಂ/ ಚರಾಪ/ವಿವ-01/2026-27
ದಿನಾಂಕ: 12.05.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)

2026-27ನೇ ಸಾಲಿನಲ್ಲಿ ಹಾಸನ ಪ್ರಾದೇಶಿಕ ವಿಭಾಗದ ಚನ್ನರಾಯಪಟ್ಟಣ ವಲಯದಲ್ಲಿ ಕಟ್ಟಡ ನಿರ್ಮಾಣ ಮಾಡಲು ಅಂದಾಜು 40.00 ಲಕ್ಷ ಮೊತ್ತದ 02 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಸಂಕ್ಷಿಪ್ತ ಟೆಂಡರ್ ಕರೆಯಲಾಗಿದೆ. ದಿನಾಂಕ: 25.05.2026 ರಂದು 16.00 (ಸಂಜೆ 4.00 ಗಂಟೆ) ಗಂಟೆಯವರೆವಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಪಡೆಯಬಹುದಾಗಿದೆ.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಚನ್ನರಾಯಪಟ್ಟಣ ಉಪ ವಿಭಾಗ, ಚನ್ನರಾಯಪಟ್ಟಣ

ವಾಸಾಸಂಇ/ಹಿಸನಿ/ಹಾಸನ/130/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಹಳಿಯಾಳ ವಿಭಾಗ (ಉ.ಕ)
ಇ-ಮೇಲ್: midhly@yahoo.co.in ಫೋ.ನಂ: 08284-220113
ನಂ:ಕಾನಿಅ/ಸನೀವಿಹ/ತಾವಿ/ಅಲ್ಪಾವಧಿ ಟೆಂಡರ್/4702/2026-27/245 ದಿನಾಂಕ: 07/05/2026

ಅಲ್ಪಾವಧಿ ಟೆಂಡರ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ಕೆ.ಡಬ್ಲ್ಯೂ-1&4

ಕರ್ನಾಟಕ ಲೋಕೋಪಯೊಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ KW-1&4 (ದ್ವಿ-ಲಕೋಟೆ) ಪದ್ಧತಿಯಲ್ಲಿ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ" ಮುಖಾಂತರ ಟೆಂಡರ ಕರೆಯಲಾಗಿದೆ.

(1) ಇಂಟೆಂಡ್ ನಂ: 11493 2ನೇ ಕರೆ (ಎಸ್.ಸಿ) (2) ಇಂಟೆಂಡ್ ನಂ: 11504 (3) ಇಂಟೆಂಡ್ ನಂ: 11795 (4) ಇಂಟೆಂಡ್ ನಂ: 11478

ಖಾಲಿ ಟೆಂಡರ ಫಾರಂಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ವೆಬಸೈಟ್ ವಿಳಾಸ: "https://kppp.karnataka.gov.in" ದಲ್ಲಿ ದಿನಾಂಕ: 13-05-2026 ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ: 19-05-2026 ರೊಳಗಾಗಿ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕಚೇರಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು ದಿನಾಂಕ: 22-05-2026 ರ ಸಾಯಂಕಾಲ 05.15 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 25-05-2026 ಮುಂಜಾನೆ 11.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್‌ನ ಅನುಮೋದನೆ ನಂತರ ತೆರೆಯಲಾಗುವುದು.

ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಟ ಅರ್ಹತಾ ಮಾನದಂಡಗಳನ್ನು ಕೆ.ಡಬ್ಲ್ಯೂ-1&4 ಬಿಡ್ ಡಾಕ್ಯುಮೆಂಟ್ ರಲ್ಲಿರುವಂತೆ ಪರಿಗಣಿಸಲಾಗುವುದು ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-, (ಎಂ. ನಾಗರಾಜ)
ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಹಳಿಯಾಳ ವಿಭಾಗ (ಉ.ಕ)

DIPR/KWR/KSMCA/122/
26-27 Dt: 13.05.2026

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರ ಕಾರ್ಯಾಲಯ, ಕೃಭಾಜನಿನಿ ಎಸ್.ಬಿ.ಸಿ ಪಾ&ಪೋ ವಿಭಾಗ,
ಭಿಮರಾಯನಗುಡಿ-585287 ತಾ: ಶಹಾಪೂರಜಿ: ಯದಗಿರಿ. email:kbjnleesbc@gmail.com
ಸಂ.ಕೃಭಾಜನಿನಿ/ಕಾನಿ/ಎಸ್.ಬಿ.ಸಿ/ಟಿ.ಎನ್.ಡಿ /ಯೋಶಾ/2026-27/ 86 ದಿನಾಂಕ:-11.05.2026

ತಿದ್ದುಪಡಿ/ವಿಸ್ತರಣೆ ಪ್ರಕಟಣೆ

ಉಲ್ಲೇಖ:- 1) ಈ ಕಛೇರಿ ಟೆಂಡರ್ ಪ್ರಕಟಣೆ ಸಂ:21, ದಿನಾಂಕ: 10.04.2026

ಉಲ್ಲೇಖ ಟೆಂಡರ್ ಪ್ರಕಟಣೆ ಮೂಲಕ ಈ ಕಛೇರಿಯಿಂದ ಇ-ಪ್ರಕ್ಯೂರ್‌ಮೆಂಟೆ ಪೋರ್ಟಲ್ www.eproc.karnataka.gov.in ಮುಖಾಂತರ Karnal Lift Irrigation Scheme on Turnkey Basis".(Work indent no:KBJNL/2025-26/ LI/WORK_INDENT2778)" ಕಾಮಗಾರಿಯ ಟೆಂಡರ್‌ನ್ನು ಅಹ್ವಾನಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಟೆಂಡರ್ ಅವಧಿಯ ಘಟಣಾವಳಿಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ.

ಕ್ರಸಂ	ವಿವರ	ಪ್ರಕಟಿತ ದಿನಾಂಕ	ಪರಿಷ್ಕೃತ ದಿನಾಂಕ
1	ಟೆಂಡರ್‌ಗಳನ್ನು ಇ-ಪ್ರಕ್ಯೂರ್‌ಮೆಂಟೆನಲ್ಲಿ ಡೌನ್ ಲೋಡ್ ಮಾಡಿಕೊಳ್ಳುವುದು.	15.04.2026 ರಿಂದ	ಬದಲಾವಣೆ ಇರುವುದಿಲ್ಲಾ
2	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ.	12.04.2026 ರ ಸಂಜೆ: 5.00 ತನಕ	19.05.2026 ರ ಸಂಜೆ: 5.00 ರವರೆಗೆ
3	ಪ್ರಿ ಬಿಡ್ ಸಭೆಯ ದಿನಾಂಕ.	24.05.2026 ರಂದು ಬೆಳಿಗ್ಗೆ: 11.00 ಕ್ಕೆ	ಬದಲಾವಣೆ ಇರುವುದಿಲ್ಲಾ
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ.	14.05.2026 ರಂದು ಬೆಳಿಗ್ಗೆ: 11.00 ಕ್ಕೆ	20.05.2026 ರಂದು ಸಂಜೆ: 5.30 ಗಂಟೆಗೆ
5	ಆರ್ಥಿಕ ಬಿಡ್ ತೆರೆಯುವ ದಿನಾಂಕ.	18.05.2026 ರಂದು ಬೆಳಿಗ್ಗೆ: 11.00 ಕ್ಕೆ(ತಾತ್ಕಾಲಿಕ)	25.05.2026 ರಂದು ಬೆಳಿಗ್ಗೆ: 11.00 ಗಂಟೆಗೆ ಕ್ಕೆ(ತಾತ್ಕಾಲಿಕ)

ಉಳಿದಂತೆ ಉಲ್ಲೇಖ ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿದ ಇತರೆ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಹೆಚ್ಚಿನ ವಿವರಗಳನ್ನು ಇ-ಪ್ರಕ್ಯೂರ್‌ಮೆಂಟೆ ಪೋರ್ಟಲ್ www.eproc.karnataka.gov.in ಜಾಲದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಿಂದ ಕಛೇರಿಯ ದಿನಗಳಂದು ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕಅಭಿಯಂತರು
ಕೃಭಾಜನಿನಿ, ಎಸ್.ಬಿ.ಸಿ ಪಾ&ಪೋ,ವಿಭಾಗ
ಭಿಮರಾಯನಗಯಡಿ

ವಾ.ಸಾ.ಸಂ.ಇ/ಯಾದಗಿರ/66/ಕೆ.ಎಸ್.ಎಂ.ಸಿ.&ಎ/2026-27

ಎಂಇಎಸ್ ಪ್ರಾಬಲ್ಯ ಕುಸಿತ | ಮೇಯರ್, ಉಪ ಮೇಯರ್ ಸ್ಥಾನ ಅಲಂಕರಿಸಿದ ಕನ್ನಡಿಗರು

ಸರಕಾರದ ಅಂಗಳಕ್ಕೆ ಬೆಳಗಾವಿ ಪಾಲಿಕೆ ವಿವಾದ

ವಿನಾಯಕ ಮಠಪತಿ ಬೆಳಗಾವಿ:

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ನಿರ್ಣಯ ಕೈಗೊಳ್ಳುವಂತೆ ಕನ್ನಡ ಸಂಘಟನೆಗಳ ಆಗ್ರಹಕ್ಕೆ ತಲೆಬಾಗಿದ ಬೆಳಗಾವಿ ಮಹಾನಗರ ಪಾಲಿಕೆ ಐತಿಹಾಸಿಕ ನಿರ್ಧಾರ ಕೈಗೊಳ್ಳುವ ಮೊದಲು ಸರಕಾರದ ಅಭಿಪ್ರಾಯ ಕೇಳಲು ಮುಂದಾಗಿದೆ.

ಮೊದಲಬಾರಿಗೆ ಬೆಳಗಾವಿ ಮಹಾನಗರ ಪಾಲಿಕೆ ಸಂಪೂರ್ಣವಾಗಿ ಕನ್ನಡಮಯವಾಗಿದೆ. ಎಂಇಎಸ್ ಪ್ರಾಬಲ್ಯ ಕುಸಿತ ಕಂಡಿದ್ದು ಕನ್ನಡಿಗರೇ ಬಹುಮತದಿಂದ ಮೇಯರ್ ಹಾಗೂ ಉಪ ಮೇಯರ್ ಸ್ಥಾನ ಅಲಂಕರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಠರಾವು ಪಾಸ್ ಮಾಡುವ ಮೂಲಕ ಪದೇ, ಪದೇ ಗಡಿಯಲ್ಲಿ ಉದ್ವಿಗ್ನತೆ ಸೃಷ್ಟಿಸುವ ಎಂಇಎಸ್ ಪುಂಡರಿಗೆ ಹಾಗೂ ಕನ್ನಡ ವಿರೋಧಿ ಮಹಾರಾಷ್ಟ್ರದ ರಾಜಕಾರಣಿಗಳಿಗೆ ಸರಿಯಾದ ಪಾಠ ಕಲಿಸುವಂತೆ ಕನ್ನಡ ಸಂಘಟನೆಗಳು ಆಗ್ರಹಿಸಿತ್ತಿವೆ.

ಬೆಳಗಾವಿಯಲ್ಲಿ ಕನ್ನಡ ಸಂಘಟನೆಗಳಿಂದ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಬೆಳಗಾವಿ ಮಹಾನಗರ ಪಾಲಿಕೆ ಆಡಳಿತ ಪಕ್ಷ ಬುಧವಾರ ಸಾಮಾನ್ಯ ಸಭೆ ಕರೆದಿತ್ತು. ಸಭೆ ಪ್ರಾರಂಭವಾಗುತ್ತಿದ್ದಂತೆ ನಾಮನಿರ್ದೇಶಿತ ಸದಸ್ಯರು ಬೆಳಗಾವಿಯನ್ನು ಕರ್ನಾಟಕ ಅವಿಭಾಜ್ಯ ಅಂಗವೆಂದು ಘೋಷಣೆ ಮಾಡುವಂತೆ ಸಭೆ ಗಮನಕ್ಕೆ ತಂದರು. ಗಡಿ ಜಿಲ್ಲೆ ಬೆಳಗಾವಿ ಮಹಾನಗರ ಪಾಲಿಕೆ ಇಂತಹ ಐತಿಹಾಸಿಕ ನಿರ್ಧಾರಕ್ಕೆ ಸಾಕ್ಷಿಯಾದರೆ ಕನ್ನಡ ವಿರೋಧಿ ಮನಸ್ಥಿತಿಗಳಿಗೆ ಇದರಿಂದ ದೊಡ್ಡ ಹೊಡೆತ ನೀಡಿದಂತಾಗುತ್ತದೆ ಎಂದು ಸದಸ್ಯರಾದ ರಮೇಶ್ ಸೊಂಟಕ್ಕಿ, ದಿನೇಶ್ ನಾಸಿಪುಡಿ ಸೇರಿದಂತೆ ಕೆಲವರು ಆಗ್ರಹಿಸಿದರು.

ಸದಸ್ಯರ ಆಗ್ರಗಕ್ಕೆ ಧ್ವನಿಗೂಡಿಸಿದ ಮಹಾನಗರ ಪಾಲಿಕೆ ಮೇಯರ್ ಪ್ರೀತಿ ಕಾಮಕರ್ ಅವರು ಈಗಾಗಲೇ ಬೆಳಗಾವಿ ಗಡಿ ವಿವಾದ ಸುಪ್ರೀಂ ಕೋರ್ಟ್ ಅಂಗಳದಲ್ಲಿ ಇದ್ದು ಬೆಳಗಾವಿ ಮಹಾನಗರ ಪಾಲಿಕೆಗೆ ನಿರ್ಧಾರ ಕೈಗೊಳ್ಳುವ ಅವಕಾಶ ಇದೆಯಾ ಎಂಬುದನ್ನು ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಗಮನಕ್ಕೆ ತರಲಾಗುತ್ತದೆ. ಅಲ್ಲಿಂದ ಬರುವ ಉತ್ತರವನ್ನು ಪಡೆದುಕೊಂಡು ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಠರಾವು ಪಾಸ್ ಮಾಡುವ ನಿರ್ಧಾರದ ಕುರಿತು ಚಿಂತನೆ ಮಾಡುವುದಾಗಿ ಮೇಯರ್ ತಮ್ಮ ನಿರ್ಧಾರ ಪ್ರಕಟಿಸಿದರು.

ಕನ್ನಡ ಸಂಘಟನೆಗಳಿಂದ ನಿರಂತರ ಪ್ರತಿಭಟನೆ: ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಠರಾವು ಪಾಸ್ ಮಾಡುವಂತೆ ಆಗ್ರಹಿಸಿ ಬೆಳಗಾವಿಯ ಕನ್ನಡಪರ ಸಂಘಟನೆಗಳು ಕಳೆದ ಕೆಲ ದಿನಗಳಿಂದ ಪ್ರತಿಭಟನೆ ಹಮ್ಮಿಕೊಂಡಿವೆ. ಜತೆಗೆ ಪಾಲಿಕೆ ಆಡಳಿತ ಪಕ್ಷದ ಮೇಲೆ ಒತ್ತಡ ಹೇರುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿವೆ. ಅಷ್ಟೇ ಅಲ್ಲದೆ ಮಹಾಜನ್ ವರದಿಯೇ ಅಂತಿಮ ಎಂಬ ನಿರ್ಧಾರಕ್ಕೆ ಬರುವಂತೆ ಆಗ್ರಹಗಳು ಕೇಳಿಬರುತ್ತಿವೆ. ಒಟ್ಟಿನಲ್ಲಿ ಗಡಿ ವಿಷಯಕ್ಕೆ ಸಂಬಂಧಿಸಿದಂತೆ ಮತ್ತೆ ಬೆಳಗಾವಿ ಮಹಾನಗರ ಪಾಲಿಕೆ ರಾಜ್ಯಾದ್ಯಂತ ಸದ್ದು ಮಾಡುತ್ತಿದೆ.

2005 ರಲ್ಲಿ ಪುಂಡಾಟ ಮೆರೆದಿದ್ದ ಎಂಇಎಸ್: 2005ರಲ್ಲಿ ಎಂಇಎಸ್ ಹಿಡಿತದಲ್ಲಿದ್ದ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ನಾಡವಿರೋಧಿ ನಿರ್ಣಯ ಕೈಗೊಳ್ಳಲಾಗಿತ್ತು. ಬೆಳಗಾವಿ, ಖಾನಾ ಪೂರ, ನಿಪ್ಪಾಣಿ, ಬಾಲ್ಕಿ, ಬೀದರ್ ಸೇರಿದಂತೆ ಗಡಿ ಭಾಗದ ಕೆಲ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ಸೇರ್ಪಡೆ ಮಾಡುವಂತೆ ವಿವಾದಾತ್ಮಕ ನಿರ್ಣಯ ಕೈಗೊಂಡಿತ್ತು. ಈ ವೇಳೆ ಕನ್ನಡಿಗರು ಆಕ್ರೋಶ ಹೊರ ಹಾಕಿದ್ದರು ಯಾವುದೇ ಪ್ರಯೋಜನವಾಗಿಲ್ಲ. ಆದರೆ ಈಗ ಬೆಳಗಾವಿ ಪರಿಸ್ಥಿತಿ ಸಂಪೂರ್ಣ ಭಿನ್ನವಾಗಿದೆ, ಕನ್ನಡಿಗರ ಕೈಯಲ್ಲೇ ಪಾಲಿಕೆ ಆಡಳಿತ ಚುಕ್ಕಾಣಿ ಇದ್ದು ಮುಂದೆ ಯಾವೆಲ್ಲ ಕ್ರಮ ಜರುಗಿಸುತ್ತಾರೆ ಎಂದು ಕಾದು ನೋಡಬೇಕು.

ಬೆಳಗಾವಿ ಕರ್ನಾಟಕ ಅವಿಭಾಜ್ಯ ಅಂಗ ಎಂದು ನಿರ್ಣಯ ಕೈಗೊಳ್ಳಬೇಕು, ಮಹಾಜನ್ ವರದಿ ಜಾರಿಗೆ ತರುವಂತೆ ಆಗ್ರಹಿಸಿ ಮಹಾನಗರ ಪಾಲಿಕೆ ಮುಂಭಾಗ ಕನ್ನಡ ಸಂಘಟನೆಗಳಿಂದ ಪ್ರತಿಭಟನೆ ನಡೆಯಿತು.

ತುಟಿ ಬಿಚ್ಚದ ಕಾಂಗ್ರೆಸ್ ಸದಸ್ಯರು

ಪಾಲಿಕೆಯಲ್ಲಿ ವಿಪಕ್ಷ ಸ್ಥಾನದಲ್ಲಿರುವ ಕಾಂಗ್ರೆಸ್ ಸದಸ್ಯರು ಬೆಳಗಾವಿ ಅಸ್ಮಿತೆಯ ವಿಚಾರವಾಗಿ ತುಟಿ ಬಿಚ್ಚಲಿಲ್ಲ. ಕೇವಲ ನಾಮನಿರ್ದೇಶಿತ ಸದಸ್ಯರು ಮಾತ್ರ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ನಿರ್ಣಯ ಅಂಗೀರಕಿಸುವಂತೆ ಆಗ್ರಹಿಸಿದರು. ಕನ್ನಡಿಗರ ಮತ ಪಡೆದು ಪಾಲಿಕೆ ಸದಸ್ಯರಾಗಿರುವ ಕಾಂಗ್ರೆಸ್ ಪಕ್ಷದವರ ನಡೆ ಕನ್ನಡಿಗರ ಆಕ್ರೋಶಕ್ಕೆ ಕಾರಣವಾಗಿದೆ.

ಗಡಿಯಲ್ಲಿ ಪದೇ, ಪದೇ ಭಾಷೆ ವಿಚಾರವಾಗಿ ತಂಟೆ ತಗೆಯುವ ನಾಡ ವಿರೋಧಿಗಳಿಗೆ ತಕ್ಕ ಉತ್ತರ ನೀಡುವ ಉದ್ದೇಶಕ್ಕಾಗಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ನಿರ್ಣಯ ಅಂಗೀರಿಸುವಂತೆ ನಮ್ಮ ಆಗ್ರಹವಾಗಿದೆ. ಈ ಕುರಿತು ಪಲಿಕೆ ಸೂಕ್ತ ನಿರ್ಧಾರ ಕೈಗೊಂಡು ಜನರಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕು.

- ದಿನೇಶ್ ನಾಸಿಪುಡಿ, ಬೆಳಗಾವಿ ಮಹಾನಗರ ಪಾಲಿಕೆ ನಾಮನಿರ್ದೇಶಿತ ಸದಸ್ಯ

ಆಡಳಿತ ಪಕ್ಷ ಬಿಜೆಪಿಯಿಂದ ಚಾಣಾಕ್ಷ ನಡೆ

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ನಿರ್ಣಯ ಕೈಗೊಳ್ಳುವಂತೆ ಆಗ್ರಹ ಹೆಚ್ಚುತ್ತಿದ್ದಂತೆ ಆಡಳಿತ ಪಕ್ಷ ಬಿಜೆಪಿ ಎಚ್ಚರಿಕೆ ಹೆಜ್ಜೆ ಇಟ್ಟಿದೆ. ಬೆಳಗಾವಿ ನಗರ ಪ್ರದೇಶದಲ್ಲಿರುವ ಮರಾಠಿ ಭಾಷಿಕ ಮತಗಳನ್ನೇ ನೆಚ್ಚಿಕೊಂಡಿರುವ ಬಿಜೆಪಿಗೆ ಸಧ್ಯದ ಪರಿಸ್ಥಿತಿ ತಲೆನೋವು ತರಿಸಿದೆ. ಆದರೆ ಚಾಣಾಕ್ಷತನದಿಂದ ಪರಿಸ್ಥಿತಿ ನಿಭಾಯಿಸಲಾಗಿದ್ದು ಸಂಪೂರ್ಣ ನಿರ್ಣಯವನ್ನು ರಾಜ್ಯ ಸರಕಾರದ ಹೆಗಲಿಗೆ ಏರಿಸುವ ಮೂಲಕ ಇತ್ತ ಕನ್ನಡ ಹಾಗೂ ಮರಾಠಿ ಭಾಷಿಕರಿಗೆ ನೋವಾಗದ ರೀತಿಯಲ್ಲಿ ನಿರ್ಣಯ ಕೈಗೊಂಡಿದ್ದು, ಸದ್ಯ ರಾಜ್ಯ ಸರಕಾರ ಇಕ್ಕಟ್ಟಿಗೆ ಸಿಲುಕಿದ್ದು ಸುಳ್ಳಲ್ಲ.

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ನಿರ್ಣಯ ಕೈಗೊಳ್ಳುವಂತೆ ಧ್ವನಿ ಎತ್ತಿದ ನಾಮನಿರ್ದೇಶಿತ ಸದಸ್ಯರು.

ಸೂಲಿಬೆಲೆ ವಿರುದ್ಧದ ಪ್ರಕರಣಕ್ಕೆ ತಡೆ

ಬೆಂಗಳೂರು: ಪ್ರಚೋದನಾಕಾರಿ ಭಾಷಣ ಮಾಡಿದ ಆರೋಪದ ಮೇಲೆ ಯುವ ಬ್ರಿಗೇಡ್ ಸಂಘಟನೆಯ ಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಅಲಿಯಾಸ್ ಮಿಥುನ್ ಚಕ್ರವರ್ತಿ ದೇವಿದಾಸ್ ಶೇಟ್ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

ಧಾರವಾಡ ಟೌನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದು ಕೋರಿ ಚಕ್ರವರ್ತಿ ಸೂಲಿಬೆಲೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹಂಚಾಟೆ ಸಂಜೀವ್ ಕುಮಾರ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿತು. ಅಲ್ಲದೆ, ವಿವರವಾಗಿ ವಾದ ಆಲಿಸ ಬೇಕಾದ ಅಗತ್ಯವಿರುವುದರಿಂದ ಪ್ರಕರಣಕ್ಕೆ ತಡೆ ನೀಡಲಾಗುತ್ತಿದೆ ಎಂದು ಹೇಳಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಪೊಲೀಸ್ ಕಾನ್‌ಸ್ಟೆಬಲ್ ದೂರು ನೀಡಿದ್ದು, ಅವರು ಭಾದಿತರಲ್ಲದಿರುವುದರಿಂದ ದೂರು ನೀಡುವ ಯಾವುದೇ ಹಕ್ಕು ಅವರಿಗೆ ಇಲ್ಲ. ಚಕ್ರವರ್ತಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು, ಅದು ಸಂವಿಧಾನದ 19ನೇ ವಿಧಿಯ ವ್ಯಾಪ್ತಿಗೆ ಬರುತ್ತದೆ. ಹಾಲಿ ಪ್ರಕರಣಕ್ಕೆ ಬಿಎನ್‌ಎಸ್ ಸೆಕ್ಷನ್ 196 ಅನ್ವಯಿಸುವುದಿಲ್ಲ. ಅಲ್ಲದೆ, ಘಟನೆ ನಡೆದ ನಾಲ್ಕು ದಿನಗಳ ಬಳಿಕ ಪ್ರಕರಣ ದಾಖಲು ಮಾಡಲಾಗಿದ್ದು, ಅದಕ್ಕೆ ಸೂಕ್ತ ಕಾರಣ ನೀಡಲಾಗಿಲ್ಲ. ಆದ್ದರಿಂದ ಪ್ರಕರಣ ದುರುದ್ದೇಶ ಪೂರ್ವಕವಾಗಿ ದಾಖಲಾಗಿದೆ ಎಂಬ ಅಂಶ ಗೊತ್ತಾಗಲಿದೆ ಎಂದರು.

ಅಲ್ಲದೆ, ದೂರಿನಲ್ಲಿ ವಿವರಿಸಿರುವಂತೆ ಅರ್ಜಿದಾರರ ಭಾಷಣದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುವ ಯಾವುದೇ ಅಂಶವಿಲ್ಲ. ಅಲ್ಲದೆ, ಈ ಪ್ರಕರಣದಲ್ಲಿ ಸರಕಾರ ತನ್ನ ಪ್ರತಿವಾದಿಗಳ ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವುದಕ್ಕಾಗಿ ಪೊಲೀಸರನ್ನು ಬಳಕೆ ಮಾಡಿಕೊಳ್ಳುತ್ತಿದೆ. ಆದ್ದರಿಂದ ರದ್ದು ಮಾಡಬೇಕು ಎಂದು ಕೋರಿದರು.

ಪ್ರಕರಣದ ಹಿನ್ನೆಲೆ: 2026ರ ಏಪ್ರಿಲ್ 8ರಂದು ಧಾರವಾಡದ ಸುಭಾಷ್ ರಸ್ತೆಯಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ಚಕ್ರವರ್ತಿ ಸೂಲಿಬೆಲೆ ಭಾಗ ವಹಿಸಿದ್ದರು. ಈ ಸಂದರ್ಭದಲ್ಲಿ ಅವರು ಮುಸ್ಲಿಂ ಹುಡುಗಿಯರು ಗಂಡಸರಿಗಿಂತ ಅಪಾಯಕಾರಿ. ಮುಸ್ಲಿಂ ಹುಡುಗರ ಸ್ನೇಹ ಮಾಡಿದರೂ ಪರವಾಗಿಲ್ಲ, ಮುಸ್ಲಿಂ ಹೆಣ್ಣುಮಕ್ಕಳ ಸ್ನೇಹ ಮಾಡಬಾರದು. ಇದನ್ನು ಮನೆಯಲ್ಲಿ ನಮ್ಮ ಹೆಣ್ಣುಮಕ್ಕಳಿಗೆ ಹೇಳಿಕೊಡಿ. ಮುಸ್ಲಿಂ ಸ್ನೇಹಿತೆ ಪದೇ ಪದೇ ಮನೆಗೆ ಕರೆದಳು ಎಂದು ಅವರ ಮನೆಗೆ ಹೋದರೆ, ನಮ್ಮ ಹೆಣ್ಣುಮಕ್ಕಳು ಹಾಳಾಗಿ ಹೋಗಲಿ ಎಂದು ಕುಡಿಯುವ ನೀರಿನಲ್ಲಿ ಮಬ್ಬು ಬರುವ ಔಷಧಿ ಹಾಕಿ ಕೊಟ್ಟು, ರಾಕ್ಷಸರಂತಿರುವ ತನ್ನ ಅಣ್ಣ-ತಮ್ಮಂದಿರ ಕಡೆಗೆ ಕೊಟ್ಟು ವಿಡಿಯೊ ಕಳಿಸಿದರೆ ಹೆಣ್ಣುಮಕ್ಕಳ ಕತೆ ಮುಗಿಯಿತು. ಮುಂದೆ ಅವರಿಗೆ ಜೀವನವೇ ಇರುವುದಿಲ್ಲ ಎಂಬ ಭಾಷಣ ಮಾಡಿದ್ದ ಆರೋಪ ಎದುರಾಗಿತ್ತು.

14 ಬೆಳೆಗೆ ಬೆಂಬಲ ಬೆಲೆ ಏರಿಕೆ

← ಮೊದಲಪುಟದಿಂದ

ಇದರಲ್ಲಿ ಉತ್ತಮ ತಳಿಗೆ ಕ್ವಿಂಟಲ್‌ಗೆ 8,667 ರು. ಬೆಂಬಲ ಬೆಲೆ ಸಿಗಲಿದೆ. ಇದು ಎಲ್ಲಾ ಬೆಳೆಗಳಲ್ಲಿಯೇ ಎರಡನೇ ಅತ್ಯಧಿಕ ಏರಿಕೆಯಾಗಿದೆ. ಸೂರ್ಯಕಾಂತಿ ಬೀಜಕ್ಕೆ ಕ್ವಿಂಟಲ್‌ಗೆ 622 ರುಪಾಯಿ ಹೆಚ್ಚಿಸಲಾಗಿದ್ದು, ಕ್ವಿಂಟಲ್‌ಗೆ 8,343 ರುಪಾಯಿ ಆಗಿದೆ. ಗುರೆಳ್ಳಿಗೆ 515 ರು. ಹೆಚ್ಚಳದೊಂದಿಗೆ ಕ್ವಿಂಟಲ್‌ಗೆ 10,052, ಎಳ್ಳು 500 ರು. ಹೆಚ್ಚಳದೊಂದಿಗೆ ಕ್ವಿಂಟಲ್‌ಗೆ 10,346 ರುಪಾಯಿ ಆಗಲಿದೆ. ಇತರೆ ಎಣ್ಣೆಕಾಳುಗಳಲ್ಲಿ ಸೋಯಾಬೀನ್ (ಹಳದಿ) ಕ್ವಿಂಟಲ್‌ಗೆ 380 ರುಪಾಯಿ ಏರಿಸಿದ್ದು, ಒಟ್ಟು 5,708 ರುಪಾಯಿ, ನೆಲಗಡಲೆ ಕ್ವಿಂಟಲ್‌ಗೆ 254 ರು. ಏರಿಕೆಯಾಗಿ 7,517 ರು. ಸಿಗಲಿದೆ. ದ್ವಿದಳ ಧಾನ್ಯಗಳಲ್ಲಿ, ತೊಗರಿ ಕನಿಷ್ಠ ಬೆಂಬಲ ಬೆಲೆ ಕ್ವಿಂಟಲ್‌ಗೆ 450 ರುಪಾಯಿ ಹೆಚ್ಚಿಸಲಾಗಿದೆ. ಅದು ಕ್ವಿಂಟಲ್‌ಗೆ 8,450 ರುಪಾಯಿ ಆಗಲಿದೆ. ಉದ್ದಿನ ಬೇಳೆ 400 ರುಪಾಯಿ ಏರಿಸಿದ್ದು, ಕ್ವಿಂಟಲ್‌ಗೆ 8,200 ರುಪಾಯಿ ಸಿಗಲಿದೆ. ಹೆಸರುಬೇಳೆ ಕ್ವಿಂಟಲ್‌ಗೆ 12 ರುಪಾಯಿ ಹೆಚ್ಚಿಸಿದ್ದು, 8,780 ರುಪಾಯಿ ತಲುಪಲಿದೆ.

ಜೋಳ (ಹೈಬ್ರಿಡ್) ಕ್ವಿಂಟಲ್‌ಗೆ 324 ರುಪಾಯಿ ಏರಿಕೆಯೊಂದಿಗೆ 4,023 ರುಪಾಯಿ, ಮಾಲ್ದಂಡಿ ತಳಿಗೆ 4,073 ರುಪಾಯಿ ಸಿಗಲಿದೆ. ಸಜ್ಜೆ ಕ್ವಿಂಟಲ್‌ಗೆ 125 ರುಪಾಯಿ ಹೆಚ್ಚಿಸಿದ್ದು, 2,900 ರುಪಾಯಿ ಆಗಲಿದೆ. ರಾಗಿಗೆ 319 ರುಪಾಯಿ ಹೆಚ್ಚಿಸಿ ಕ್ವಿಂಟಲ್‌ಗೆ 5,205 ರುಪಾಯಿ ಸಿಗಲಿದೆ. ಮೆಕ್ಕೆಜೋಳಕ್ಕೆ 10 ರುಪಾಯಿ ಹೆಚ್ಚಿಸಿದ್ದು, ಕ್ವಿಂಟಲ್‌ಗೆ 2,410 ರುಪಾಯಿ ಸಿಗಲಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರು ಮಾಹಿತಿ ನೀಡಿದರು.

ಕೇಂದ್ರ ಸರಕಾರವು 14 ಬೆಳೆಗಳ ಬೆಂಬಲ ಬೆಲೆಯನ್ನು ಹೆಚ್ಚಿಸಿದೆ. ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ 50 ಪ್ರತಿಶತದಷ್ಟು ಲಾಭ ರೈತರಿಗೆ ಸಿಗುವುದನ್ನು ಖಚಿತಪಡಿಸಲು ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು. ಹೆಸರುಕಾಳಿಗೆ ಶೇಕಡಾ 61, ಸಜ್ಜೆ ಮತ್ತು ಮೆಕ್ಕೆಜೋಳಕ್ಕೆ ಶೇ.56 ಮತ್ತು ತೊಗರಿಗೆ ಶೇ.54ರಷ್ಟು ಲಾಭ ಸಿಗಲಿದೆ. ಉಳಿದ ಬೆಳೆಗಳಿಗೆ, ಶೇ.50ರಷ್ಟು ಲಾಭವಾಗಲಿದೆ ಎಂದು ಅಂದಾಜಿಸಲಾಗಿದೆ. ರೈತರ ಬೆಳೆಗಳಿಗೆ ನೀಡಲು ಒಟ್ಟು 2.60 ಲಕ್ಷ ಕೋಟಿ ರುಪಾಯಿಗಳನ್ನು ಮೀಸಲಿಡಲಾಗಿದೆ. ವಾರ್ಷಿಕ ಸಂಗ್ರಹಣೆ 824.41 ಲಕ್ಷ ಟನ್ ಆಗಲಿದೆ ಎಂದು ಅಂದಾಜಿಸಲಾಗಿದೆ.

2028ಕ್ಕೆ ಎನ್‌ಡಿಎ ಸರಕಾರ: ನಿಖಿಲ್ ವಿಶ್ವಾಸ

ಮೈಸೂರು: ಸಿದ್ದರಾಮಯ್ಯ ಅವರು ಸದನದ ಒಳಗಡೆ ಜೆಡಿಎಸ್ 17 ಸ್ಥಾನದಿಂದ ಸಿಂಗಲ್ ಡಿಜಿಟ್‌ಗೆ ಬರುತ್ತೆ ಎಂದು ಅಪಹಾಸ್ಯ ಮಾಡಿದ್ದಾರೆ. ವರುಣದಲ್ಲೇ ಈ ಸವಾಲನ್ನು ಸ್ವೀಕರಿಸುತ್ತೇನೆ ಎಂದು ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ನೇರ ಸವಾಲು ಹಾಕಿದರು. ವರುಣ ಕ್ಷೇತ್ರದ ಮೆಲ್ಲಹಳ್ಳಿಯಲ್ಲಿ ನಡೆದ ಜನರೊಂದಿಗೆ ಜನತಾದಳ ಸಮಾರಂಭದಲ್ಲಿ ಮಾತನಾಡಿದ ಅವರು, 2004ರಲ್ಲಿ ಜೆಡಿಎಸ್ 58 ಸ್ಥಾನ ಪಡೆದಿತ್ತು. ಅದಕ್ಕಿಂತ ಒಂದು ಸ್ಥಾನ ಹೆಚ್ಚಾಗಿ ಪಡೆದು, 2028ಕ್ಕೆ ಎನ್‌ಡಿಎ ಸರಕಾರ ರಚನೆ ಮಾಡುತ್ತೇವೆ. ಅಹಿಂದ ನಾಯಕ ಅಂತ ಹೇಳುವವರು, ನಿಮ್ಮನ್ನು ಚಾಂಪಿಯನ್ ಮಾಡಿದ್ದು ಯಾರು ಅಂತ ಮರೆತಿದ್ದೀರಾ? ಎಂದು ಪ್ರಶ್ನಿಸಿದ ನಿಖಿಲ್, ಇಂದು ದಾಖಲೆ ಬಜೆಟ್ ಮಂಡಿಸಿದ್ದೇನೆ ಎಂದು ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಸಮಾಜವಾದಿ ಅಂತ ಗುರುತಿಸಿಕೊಳ್ಳುವುದಕ್ಕೆ ಪಕ್ಷ ಯಾವುದು? ನಾಯಕರು ಯಾರು? ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ ಅವರು, ನಮ್ಮ ಪಕ್ಷದಿಂದ ರಾಜಕೀಯವಾಗಿ ಬೆಳೆದು, ಉಂಡು ತಿಂದು ಬೆಳೆದವರು ಮನೆಗೆ ದ್ರೋಹ ಮಾಡಿದ್ದಾರೆ. ಸದನದ ಒಳಗೆ ಜೆಡಿಎಸ್ 17 ಸ್ಥಾನದಿಂದ ಸಿಂಗಲ್ ಡಿಜಿಟ್‌ಗೆ ಬರುತ್ತೆ ಎಂದು ಅಪಹಾಸ್ಯ ಮಾಡಿದರು ಎಂದು ಆರೋಪಿಸಿದರು.

ಸಮಾಚಾರ ಸಣ್ಣದಲ್ಲ

ಭಕ್ತರಿಗೆ ಭದ್ರತೆ ನೀಡಲು ಸರಕಾರ ವಿಫಲ

ಚಾಮರಾಜನಗರ: ಕೆಲವೇ ದಿನಗಳ ಅಂತರದಲ್ಲಿ 3 ಚಿರತೆ ದಾಳಿಗಳು ನಡೆದು ಇಬ್ಬರು ಅಮಾಯಕ ಭಕ್ತರ ಸಾವಾಗಿದ್ದು, ಇದು ಆಡಳಿತ ವೈಫಲ್ಯ ಅಲ್ಲವೇ? ಇದು ಸರಕಾರದ ಘೋರ ನಿರ್ಲಕ್ಷ್ಯ ಅಲ್ಲವೇ ಎಂದು ರಾಜ್ಯ ಸರಕಾರದ ವಿರುದ್ಧ ವಿಪಕ್ಷ ನಾಯಕ ಆರ್. ಅಶೋಕ್ ಕಿಡಿಕಾರಿದ್ದಾರೆ. ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದ ಇಂಡಿಗನತ್ತದಲ್ಲಿ ಚಿರತೆ ದಾಳಿಗೆ ಬಲಿಯಾದ ಘಟನೆ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ದೇವಸ್ಥಾನದ ಹೆಸರಿನಲ್ಲಿ ಸರಕಾರ ಕೋಟಿ ಕೋಟಿ ಹಣ ಸಂಗ್ರಹ ಮಾಡುತ್ತಿದೆ. ಆದರೆ ಭಕ್ತರ ಸುರಕ್ಷತೆ ಬಗ್ಗೆ ಕನಿಷ್ಠ ಕಾಳಜಿಯೂ ಇಲ್ಲದಿರುವುದು ಖಂಡನೀಯ. ಪ್ರತಿ ವಾಹನದಿಂದ ನೂರಾರು ರು. ಪ್ರವೇಶ ಶುಲ್ಕ ವಸೂಲಿ ಮಾಡುವ ಸರಕಾರಕ್ಕೆ, ಭಕ್ತರಿಗೆ ಸೂಕ್ತ ಭದ್ರತೆ ಒದಗಿಸಲು ಆಗದಿರುವುದು ವಿಪರ್ಯಾಸ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು ಇನ್ನಾದರು ಎಚ್ಚೆತ್ತುಕೊಳ್ಳಬೇಕು. ಭಕ್ತರ ಸುರಕ್ಷತೆಗೆ ಶಾಶ್ವತ ಮತ್ತು ಕಠಿಣ ಕ್ರಮಗಳನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದ್ದಾರೆ.

ಭೂಮಾಪಕರ ಸೇವೆ ಕಾಯಂ ಸಾಧ್ಯವಿಲ್ಲ



ತುಮಕೂರು: ಪರವಾನಗಿ ಭೂಮಾಪಕರ ಸೇವೆ ಕಾಯಂ ಮಾಡಲು ಸಾಧ್ಯವಿಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಳೆದ ವಾರ ಭೂಮಾಪಕರ ಜತೆ ಮಾತುಕತೆ ನಡೆಸಿದ್ದಾಗಲೇ ಈ ವಿಷಯ ಅವರ ಗಮನಕ್ಕೆ ತರಲಾಗಿದೆ. ಉಳಿದ ಎಲ್ಲ ಬೇಡಿಕೆ ಈಡೇರಿಸಲು ಸರಕಾರ ಸದಾ ಸಿದ್ಧವಿದೆ. ಭೂಮಾಪಕರು ಕಳೆದ ಮೂರು ತಿಂಗಳಿನಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಆದ್ದರಿಂದ ಕಂದಾಯ ಇಲಾಖೆ ಕೆಲಸಗಳು ನಿಧಾನ ಗತಿಯಲ್ಲಿ ಸಾಗುತ್ತಿವೆ. ಅವರ ಮನವೊಲಿಸುವ ಕೆಲಸ ಮಾಡಲಾಗುತ್ತಿದೆ. ಸೇವೆ ಕಾಯಂ ಅಥವಾ ವೇತನ ನಿಗದಿಪಡಿಸುವಂತೆ ಪರವಾನಗಿ ಭೂಮಾಪಕರು ಪಟ್ಟು ಹಿಡಿದಿದ್ದಾರೆ. ಸೇವೆ ಕಾಯಂ ಮಾಡುವ ಆಯ್ಕೆ ಸರಕಾರದ ಮುಂದಿಲ್ಲ. ಪರವಾನಗಿ ಭೂಮಾಪಕರ ಆದಾಯಕ್ಕೆ ಯಾವುದೇ ಕೊರತೆ ಆಗುತ್ತಿಲ್ಲ. ಕೆಲಸಕ್ಕೆ ತಕ್ಕಷ್ಟು ಗೌರವ ಧನ ಸಿಗುತ್ತಿದೆ. ಉತ್ತಮವಾಗಿ ಕೆಲಸ ಮಾಡುವವರಿಗೆ ಒಳ್ಳೆಯ ಸಂಭಾವನೆ ದೊರೆಯುತ್ತಿದೆ ಎಂದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ನೆರಲಗುಂಟೆ ಗ್ರಾಮ, ಚಳ್ಳಕೆರೆ
- **ಸಮಸ್ಯೆಯೇನು?:** ಚರಂಡಿ ನೀರು ರಸ್ತೆ ಮೇಲೆ ಹರಿದು ಅನೈರ್ಮಲ್ಯ ಉಂಟಾಗಿರುವ ಬಗ್ಗೆ.
- **ಪರಿಹಾರ:** ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ನೆರಲಗುಂಟೆಯ ಎಸ್‌ಸಿ ಕಾಲೋನಿಯಲ್ಲಿ ಚರಂಡಿ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ಸ್ಥಳೀಯರಿಗೆ ದುರ್ವಾಸನೆ ಬೀರಿದೆ. ನೀರನ್ನು ಹಳ್ಳಕ್ಕೆ ಹರಿಯುವಂತೆ ಹೊಸ ಚರಂಡಿ ನಿರ್ಮಾಣ ಮಾಡಲು ಗ್ರಾಪಂಗೆ ಆಗ್ರಹಿಸಲಾಗಿದೆ. ಈ ಹಿನ್ನೆಲೆ ಸ್ಥಳ ಪರಿಶೀಲನೆ ನಡೆಸಿದ ಅಧಿಕಾರಿಗಳು, ಚರಂಡಿ ಕಾಮಗಾರಿಗೆ ಡಿಪಿಆರ್ ಸಿದ್ಧಪಡಿಸಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
14.05.2026
ಸಂಜೆ: 06.55 ರಿಂದ 08.05 ರವರೆಗೆ

ಗುರುವಾರದ ಅತಿಥಿ
ಶ್ರೀಮತಿ ಪರಿಮಳ ಮೂರ್ತಿ
ವಿಷಯ
ಭಾರತೀಯ ಮಹಿಳೆಯರ ಪ್ರಗತಿ ಮತ್ತು ಸವಾಲುಗಳು.
vishwavani.news

ದಿನ ವಿಶೇಷ

14 ಮೇ 2026 ಗುರುವಾರ

» ಸೂರ್ಯೋದಯ	05-47
» ಸೂರ್ಯಾಸ್ತ	06-59
» ತಿಥಿ	ದ್ವಾದಶಿ
» ನಕ್ಷತ್ರ	ರೇವತಿ
» ಸಂವತ್ಸರ	ಪರಾಭವ
» ಅಯನ	ಉತ್ತರಾಯನ
» ಋತು	ಗ್ರೀಷ್ಮ
» ಮಾಸ	ವೈಶಾಖ
» ಪಕ್ಷ	ಕೃಷ್ಣಪಕ್ಷ

ನೀಟ್ ಪರೀಕ್ಷಾ ಪ್ರಶ್ನಾ ಪತ್ರಿಕೆ ಸೋರಿಕೆ ಹಿನ್ನೆಲೆ ಪರೀಕ್ಷಾ ರದ್ದು ವಿಚಾರವಾಗಿ ರಾಜ್ಯದ ಹಲವೆಡೆ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಬಿಜೆಪಿ ಸಂಸದರ ಮನೆಗೆ ಮುತ್ತಿಗೆಗೆ ಯತ್ನಿಸಿ ಕೇಂದ್ರ ಸರಕಾರದ ವಿರುದ್ಧ ಬುಧವಾರ ಆಕ್ರೋಶ ವ್ಯಕ್ತಪಡಿಸಿದರು. ಬೆಂಗಳೂರು, ಶಿವಮೊಗ್ಗ, ಚಿಕ್ಕಬಳ್ಳಾಪುರ, ಹುಬ್ಬಳ್ಳಿಯಲ್ಲಿ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ನೀಟ್ ಅಕ್ರಮ ಖಂಡಿಸಿ ಯುವ ಕಾಂಗ್ರೆಸ್ ಕೆಂಡ

ಸಂಸದ ಬಿ.ವೈ. ರಾಘವೇಂದ್ರ ಮನೆ ಮುಂದೆ ಆಕ್ರೋಶ | ಭದ್ರತೆ, ವಿಶ್ವಾಸಾರ್ಹತೆ ಕಾಪಾಡುವಲ್ಲಿ ಕೇಂದ್ರ ಸರಕಾರ ವಿಫಲ

ಶಿವಮೊಗ್ಗ: ಶಿವಮೊಗ್ಗದಲ್ಲೂ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಕಾರ್ಯಕರ್ತರು ಸಂಸದ ಬಿ.ವೈ. ರಾಘವೇಂದ್ರ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೋಲಿಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದರು.

2024ರಲ್ಲಿಯೂ ಪ್ರಶ್ನೆ ಪತ್ರಿಕೆ ವಿವಾದ ದೇಶಾದ್ಯಂತ ಕೇಳಿಬಂದಿತ್ತು. ಆಗ ಕೇಂದ್ರ ಸರಕಾರ ಇದನ್ನು ಮುಚ್ಚಿಹಾಕಿತ್ತು. ಈವರೆಗೂ ವಿದ್ಯಾರ್ಥಿಗಳಲ್ಲಿ ಸಂಪೂರ್ಣ ವಿಶ್ವಾಸ ಮರುಸ್ಥಾಪನೆಯಾಗಿಲ್ಲ. ರಾಷ್ಟ್ರ ಮಟ್ಟದ ಪರೀಕ್ಷೆಯ ಭದ್ರತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡುವಲ್ಲಿ ಕೇಂದ್ರ ಸರಕಾರ ವಿಫಲವಾಗಿದೆ. ಕೂಡಲೆ ಕೇಂದ್ರ ಸರಕಾರವನ್ನು ವಜಾಗೊಳಿಸಿ ವಿದ್ಯಾರ್ಥಿಗಳಲ್ಲಿ ಹಾಗೂ ಪೋಷಕರಲ್ಲಿ ಮತ್ತು ಸಾರ್ವಜನಿಕರಲ್ಲಿ ವಿಶ್ವಾಸ ಮೂಡುವಂತೆ ಮಾಡಬೇಕೆಂದು ಯುವ ಕಾಂಗ್ರೆಸ್ ರಾಷ್ಟ್ರಪತಿಗಳನ್ನು ಒತ್ತಾಯಿಸಿದೆ.

ಈ ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹರ್ಷಿತ ಗೌಡ, ಯುವ ಮುಖಂಡ ಮಧುಸೂದನ್, ಪಾಲಿಕೆ ಮಾಜಿ ಸದಸ್ಯೆ ಯಮುನಾ ರಂಗೇಗೌಡ, ಪ್ರಮುಖರಾದ ಚರಣ್, ಪ್ರವೀಣ್, ಅಬ್ದುಲ್ ಸತ್ತಾರ್, ಮಲವಗೊಪ್ಪ ಶಿವು, ಆಕಾಶ್, ಗಿರೀಶ್, ಸಕ್ಲೇನ್, ಅಶೋಕ್, ರವಿ, ವಿಷ್ಣು, ಬಾಬು, ತೌಫಿಕ್, ಮನೋಜ್, ಅನಂತ್ ಮತ್ತಿತರರಿದ್ದರು.

> ಪ್ರಶ್ನೆ ಪತ್ರಿಕೆ ಸೋರಿಕೆಯಾದ ರಾಜ್ಯಗಳಲ್ಲಿ ಮಾತ್ರ ಮರು ಪರೀಕ್ಷೆ ಮಾಡಿ. ಇಲ್ಲವಾದರೆ ಲಕ್ಷಾಂತರ ಬಡ ವಿದ್ಯಾರ್ಥಿಗಳ ಭವಿಷ್ಯಕ್ಕೆ ಹಾನಿಯಾಗಲಿದ್ದು, ಅವರ ವಿದ್ಯಾರ್ಥಿ ಜೀವನವೇ ಗೊಂದಲಕ್ಕೀಡಾಗುತ್ತದೆ. ನಮ್ಮ ರಾಜ್ಯದಲ್ಲೇ 2.5ಲಕ್ಷ ಮಕ್ಕಳು ಪರೀಕ್ಷೆ ಬರೆದಿದ್ದಾರೆ. ನೀಟ್ ಪರೀಕ್ಷೆಯನ್ನು ರದ್ದು ಮಾಡಿ ಮೊದಲಿನ ಹಾಗೆ ರಾಜ್ಯಕ್ಕೆ ಪೂರ್ಣ ಅಧಿಕಾರ ನೀಡಬೇಕು.
>
> -ಆರ್.ಪ್ರಸನ್ನಕುಮಾರ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ

ಸಂಸದ ಕೆ. ಸುಧಾಕರ್ ಮನೆಗೆ ಮುತ್ತಿಗೆ ಯತ್ನ

ಬೆಂಗಳೂರು: ಬೆಂಗಳೂರಿನ ಸದಾಶಿವ ನಗರದಲ್ಲಿರುವ ಸಂಸದ ಡಾ.ಕೆ.ಸುಧಾಕರ್ ಅವರ ನಿವಾಸದ ಮುಂದೆ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಕೆ. ಸುಧಾಕರ್ ಮನೆಗೆ ನುಗ್ಗಲು ನಡೆಸಿದ ಯತ್ನವನ್ನು ಪೊಲೀಸರು ವಿಫಲಗೊಳಿಸಿ, ಕಾರ್ಯಕರ್ತರನ್ನು ವಶಕ್ಕೆ ಪಡೆದರು.

ರಾಜಸ್ಥಾನ ಮತ್ತು ಉತ್ತರಾಖಂಡದಲ್ಲಿ ನಡೆದ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಲಾಗಿದೆ. ಪರೀಕ್ಷೆಯಲ್ಲಿ ಪಾರದರ್ಶಕತೆ ಕಾಪಾಡಲು ಕೇಂದ್ರ ಸರಕಾರ ಹಾಗೂ ಎನ್‌ಟಿಎ ವಿಫಲವಾಗಿದೆ. ಪರೀಕ್ಷಾ ಅಕ್ರಮ ಒಪ್ಪಿಕೊಂಡ ಕೇಂದ್ರ ಸರಕಾರ ಪರೀಕ್ಷೆಯನ್ನೇ ರದ್ದು ಮಾಡಿ 23 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಜತೆ ಚೆಲ್ಲಾಟವಾಡಿದೆ ಎಂದು ಆರೋಪಿಸಿದರು.

ಗ್ರಾಮೀಣ, ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳು ತಮ್ಮ ಕುಟುಂಬದ ಆರ್ಥಿಕ ಸಂಕಷ್ಟದ ನಡುವೆಯೂ ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಕನಸು ಕಂಡು ಅನೇಕ ವರ್ಷಗಳ ಕಾಲ ಹಗಲು ರಾತ್ರಿ ಪರಿಶ್ರಮ ಪಟ್ಟು ಪರೀಕ್ಷೆ ಬರೆದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಮತ್ತು ಪೋಷಕರ ನಂಬಿಕೆ ಮತ್ತು ವಿಶ್ವಾಸವನ್ನೇ ಕೇಂದ್ರ ಸರಕಾರ ಹಾಳು ಮಾಡಿದೆ ಎಂದು ಯುವ ಕಾಂಗ್ರೆಸ್ ಕಾರ್ಯಕರ್ತರು ಕಿಡಿಕಾರಿದರು.

ಸಂಸದ ಬಿ.ವೈ.ರಾಘವೇಂದ್ರ ಅವರ ಶಿವಮೊಗ್ಗ ನಿವಾಸದ ಮುಂದೆ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಎಐಡಿಎಸ್‌ಒ ಖಂಡನೆ

ತುಮಕೂರು: ಪದೇ ಪದೇ ಮರುಕಳಿಸುತ್ತಿರುವ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಕೇವಲ ಒಂದು ಪರೀಕ್ಷಾ ಸಂಸ್ಥೆಯ ವೈಫಲ್ಯವಲ್ಲ, ಇದು ಲಕ್ಷಾಂತರ ಪ್ರಾಮಾಣಿಕ ವಿದ್ಯಾರ್ಥಿಗಳ ಬೆವರು ಮತ್ತು ಕನಸುಗಳ ಮೇಲೆ ಎಸಗುತ್ತಿರುವ ಘೋರ ದೌರ್ಜನ್ಯವಾಗಿದೆ. ಕೇವಲ ಮೂರು ವರ್ಷಗಳಲ್ಲಿ ಎರಡನೇ ಬಾರಿಗೆ, ವೈದ್ಯಕೀಯ ಶಿಕ್ಷಣದ ಕನಸು ಹೊತ್ತವರ ಆಶೋತ್ತರಗಳನ್ನು ಅತಿ ಹೆಚ್ಚು ಹಣ ನೀಡುವವರಿಗೆ ಹರಾಜು ಹಾಕಲಾಗಿದೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಕೋಚಿಂಗ್ ಮಾಫಿಯಾದ ಕೈಗೊಂಬೆಯಂತೆ ವರ್ತಿಸುತ್ತಿರುವುದು ಇಡೀ ವ್ಯವಸ್ಥೆಯ ಹದಗೆಟ್ಟ ಸ್ಥಿತಿಯನ್ನು ತೋರಿಸುತ್ತಿದೆ. ಈ ವ್ಯವಸ್ಥೆಯು ವಿದ್ಯಾರ್ಥಿಗಳಲ್ಲಿ ತೀವ್ರ ಆತಂಕ ಮತ್ತು ಹತಾಶೆಯನ್ನು ಮೂಡಿಸಿದೆ. ಕೇವಲ ಕೆಲವರ ಲಾಭಕ್ಕಾಗಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ನಾಶಪಡಿಸುತ್ತಿರುವುದನ್ನು ಎಐಡಿಎಸ್‌ಒ ಖಂಡಿಸಿದೆ. ವಿದ್ಯಾರ್ಥಿಗಳ ಭವಿಷ್ಯದ ಅಡಿಪಾಯವನ್ನೇ ಭ್ರಷ್ಟಾಚಾರ ಮತ್ತು ಆಡಳಿತಾತ್ಮಕ ನಿರ್ಲಕ್ಷ್ಯಕ್ಕೆ ಬಲಿ ನೀಡಲಾಗುತ್ತಿದೆ. ಶಿಕ್ಷಣ ವ್ಯವಸ್ಥೆಯನ್ನು ಮಾರುಕಟ್ಟೆಯನ್ನಾಗಿ ಮಾಡಿಕೊಂಡಿರುವವರಿಂದ ಇಂತಹ ಸಮಸ್ಯೆಗಳು ಪದೇ ಪದೇ ಮರುಕಳಿಸುತ್ತಿವೆ. ಪಾರದರ್ಶಕವಾಗಿ, ಸುರಕ್ಷಿತವಾಗಿ ಪರೀಕ್ಷೆಗಳನ್ನು ನಡೆಸುವಲ್ಲಿ ಪದೇ ಪದೇ ವಿಫಲವಾಗಿ ನಂಬಿಕೆ ಕಳೆದುಕೊಂಡಿರುವ ಎನ್‌ಟಿಎ ಅನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕೆಂದು ಎಐಡಿಎಸ್‌ಒ ಒತ್ತಾಯಿಸಿದೆ.

ಯದುವೀರ್ ಕಚೇರಿಗೆ ಮುತ್ತಿಗೆ

ಮೈಸೂರು: ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ನೀಟ್ ಪರೀಕ್ಷಾ ಪತ್ರಿಕೆ ಸೋರಿಕೆ ಹಾಗೂ ಮರುಪರೀಕ್ಷೆಯ ನಿರ್ಧಾರವನ್ನು ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಕೆ.ಆರ್. ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾದ ಹೊಯ್ಸಳ ಎಂ.ಆರ್ ಅವರ ನೇತೃತ್ವದಲ್ಲಿ ಮೈಸೂರು-ಕೊಡಗು ಸಂಸದ ಯದುವೀರ್ ದತ್ತ ಒಡೆಯರ್ ಕಚೇರಿಗೆ ಮುತ್ತಿಗೆ ಹಾಕಿ, ಕೇಂದ್ರದ ನಿರ್ಲಕ್ಷ್ಯದ ಧೋರಣೆಯ ವಿರುದ್ಧ ಆಕ್ರೋಶ ಹೊರಹಾಕಲಾಯಿತು. ಈ ಹೋರಾಟದಲ್ಲಿ ಜಿಲ್ಲಾ ಉಪಾಧ್ಯಕ್ಷ ಶಶಾಂಕ್ ಗೌಡ, ರೋಹಿತ್ ಸಿಂಗ್, ಬಸವಣ್ಣ, ಸಯ್ಯದ್ ಸಕ್ಲೇನ್, ಕರಣ್ ಶ್ರೀಕಂಠಯ ಸೇರಿದಂತೆ ಹಲವು ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿ ಅಕ್ರಮಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು.

> ನೀಟ್ ಪರೀಕ್ಷೆ ಪಾರದರ್ಶಕವಾಗಿ ನಡೆಯಬೇಕು. ಪ್ರಶ್ನೆ ಪತ್ರಿಕೆಯ ಸೋರಿಕೆ ಆಗಿದೆ, ತಪ್ಪಾಗಿದೆ. ಕೇಂದ್ರ ಸರಕಾರ ಪ್ರಕರಣದ ತನಿಖೆಗಾಗಿ ಸಿಬಿಐಗೆ ಕೊಟ್ಟಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ರಾಜ್ಯದಲ್ಲೂ ಸಾಕಷ್ಟು ಸಲ ಆಗಿದೆ. ಎಷ್ಟು ಸಲ ನಮ್ಮ ರಾಜ್ಯದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಅಂತ ರಾಜ್ಯ ಸರಕಾರ ಹೇಳಲಿ. ಕಾಂಗ್ರೆಸ್ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದೆ, ಮೊದಲು ಅದನ್ನು ನೋಡಲಿ.
>
> -ಆರ್.ಅಶೋಕ್ ಪ್ರತಿಪಕ್ಷದ ನಾಯಕ

ವಿದ್ಯಾರ್ಥಿಗಳ ಭವಿಷ್ಯದ ಜತೆ ಕೇಂದ್ರ ಚೆಲ್ಲಾಟ

ಚಿಕ್ಕಬಳ್ಳಾಪುರ: ಕೇಂದ್ರ ಸರಕಾರ ನೀಟ್ ಪರೀಕ್ಷೆ ರದ್ದುಪಡಿಸುವ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಬದುಕಿನೊಂದಿಗೆ ಚೆಲ್ಲಾಟ ಆಡುತ್ತಿರುವುದು ಸರ್ವಥಾ ಸರಿಯಲ್ಲ. ಕೇಂದ್ರದ ಆಡಳಿತ ವೈಫಲ್ಯವೇ ಪ್ರಶ್ನೆಪತ್ರಿಕೆ ಸೋರಿಕೆಗೆ ನೇರ ಕಾರಣವಾಗಿದ್ದು ಇದರ ಹೊಣೆಹೊತ್ತು ಕೇಂದ್ರ ಪ್ರಧಾನಿ ನರೇಂದ್ರ ಮೋದಿ ರಾಜೀನಾಮೆ ನೀಡಬೇಕು ಎಂದು ಯುವ ಕಾಂಗ್ರೆಸ್ ಅಧ್ಯಕ್ಷ ಕುಬೇರ್ ಅಚ್ಚು ಆಕ್ರೋಶ ವ್ಯಕ್ತಪಡಿಸಿದರು. ನಗರದ ವಾಪಸಂದ್ರದಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿ ಎದುರು ಬುಧವಾರ ನೀಟ್ ಪರೀಕ್ಷೆ ರದ್ದು ವಿರೋಧಿಸಿ ಬೃಹತ್ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಕಾರ್ಯಕರ್ತರು ಧಿಕ್ಕಾರ ಕೂಗಿದರು. ಈ ವೇಳೆ ಮಾತನಾಡಿದ ಯುವ ಕಾಂಗ್ರೆಸ್ ಅಧ್ಯಕ್ಷ ಕುಬೇರ್ ಅಚ್ಚು, ದೇಶದಾದ್ಯಂತ ವೈದ್ಯರಾಗಬೇಕೆಂದು ಕನಸುಕಂಡು ಹಗಲಿರುಳು ಪರಿಶ್ರಮದಿಂದ ವ್ಯಾಸಾಂಗ ಮಾಡಿದ್ದ ಅಮಾಯಕ ವಿದ್ಯಾರ್ಥಿಗಳ ಬದುಕಿನೊಂಡಿಗೆ ಚೆಲ್ಲಾಟ ಆಡುತ್ತಿರುವ ಕೇಂದ್ರ ಸರಕಾರದ ವಿರುದ್ಧ ಧಿಕ್ಕಾರದ ಘೋಷಣೆ ಮೊಳಗಿಸಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಚಿಕ್ಕಬಳ್ಳಾಪುರ ನಗರದ ಬಿಜೆಪಿ ಕಚೇರಿ ಎದುರು ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ನಿವಾಸದವರೆಗೆ ಪ್ರತಿಭಟನಾ ರ‍್ಯಾಲಿ

ಹುಬ್ಬಳ್ಳಿ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಹಾಗೂ ವಿದ್ಯಾರ್ಥಿಗಳಿಗೆ ಶೀಘ್ರ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿ ಹುಬ್ಬಳ್ಳಿ ಧಾರವಾಡ ಮಹಾನಗರ ಯುವ ಕಾಂಗ್ರೆಸ್ ನೇತೃತ್ವದಲ್ಲಿ ನಗರದಲ್ಲಿಯೂ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ರಮೇಶ ಭವನದಿಂದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ನಿವಾಸದವರೆಗೆ ಪ್ರತಿಭಟನಾ ರ‍್ಯಾಲಿ ನಡೆಸಿ, ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು. ಆಗ ಪೊಲೀಸರು ಕಾಂಗ್ರೆಸ್ ಕಾರ್ಯಕರ್ತರನ್ನು ವಶಕ್ಕೆ ಪಡೆದುಕೊಂಡರು. ಈ ವೇಳೆ, ಕಾರ್ಯಕರ್ತರು ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿ, ಕೇಂದ್ರ ಸರಕಾರ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳು ಮಾಡಿದೆ. ಇದು ದೇಶದಲ್ಲಿ ನಡೆದ ಬೃಹತ್ ಹಗರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಹುಬ್ಬಳ್ಳಿ-ಧಾರವಾಡ ಯುವ ಕಾಂಗ್ರೆಸ್ ಅಧ್ಯಕ್ಷ ಅರ್ಜುನ ಪಾಟೀಲ್, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಡಬೇಕು. ಅವರು ಸಚಿವರಾದ ನಂತರ ಎರಡನೇ ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ. ಇದೀಗ ಮತ್ತೊಮ್ಮೆ ಮರುಪರೀಕ್ಷೆ ಕರೆಯಲಾಗುತ್ತಿದೆ. ಇದೊಂದು ಕಮರ್ಷಿಯಲ್ ಪರೀಕ್ಷೆ ಆಗುತ್ತಿದೆ. ವಿದ್ಯಾರ್ಥಿಗಳಿಗೆ ಪರಿಹಾರ ಕೊಡಬೇಕು. ಈ ವ್ಯವಸ್ಥೆಯಿಂದಾಗಿ ವಿದ್ಯಾರ್ಥಿಗಳು ಪರೀಕ್ಷೆ ಮೇಲೆ ನಂಬಿಕೆ ಕಳೆದುಕೊಳ್ಳುವ ಹಾಗೇ ಆಗಿದೆ. ಕೂಡಲೇ ನೀಟ್ ಪರೀಕ್ಷೆಯನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ವಚನಾನಂದ ಶ್ರೀ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲು

ದಾವಣಗೆರೆ: ಹರಿಹರ ಹೊರವಲಯದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪದಚ್ಯುತ ಪೀಠಾಧಿಪತಿ ವಚನಾನಂದ ಸ್ವಾಮೀಜಿ ಅವರ ವಿರುದ್ಧ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಗಂಭೀರ ಆರೋಪ ಕೇಳಿಬಂದಿದ್ದು, ಈ ಸಂಬಂಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಬಾಲಕನ ತಾಯಿ ಮೇ 7ರಂದು ಗದಗ ಜಿಲ್ಲೆಯ ಲಕ್ಷ್ಮೇಶ್ವರ ಠಾಣೆಯಲ್ಲಿ ದೂರು ನೀಡಿದ್ದರು. ಕೃತ್ಯ ನಡೆದ ಸ್ಥಳ ಹರಿಹರ ಗ್ರಾಮಾಂತರ ಠಾಣೆ ವ್ಯಾಪ್ತಿಗೆ ಬರುವುದರಿಂದ ಅಲ್ಲಿ ಮೊದಲು 'ಜೀರೋ ಎಫ್‌ಐಆರ್' ದಾಖಲಿಸಿಕೊಂಡು, ನಂತರ ಪ್ರಕರಣ ಹರಿಹರಕ್ಕೆ ವರ್ಗಾಯಿಸಲಾಯಿತು. ಮೇ 8ರಂದು ಹರಿಹರ ಗ್ರಾಮಾಂತರ ಪೊಲೀಸರು ಪೋಕ್ಸೊ ಕಾಯ್ದೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಎಚ್.ಟಿ. ಶೇಖರ್ ಅವರು, ಪ್ರಕರಣದ ತನಿಖೆ ಆರಂಭವಾಗಿದ್ದು ಶೀಘ್ರ, ಸಂತ್ರಸ್ತ ಬಾಲಕನ ಹೇಳಿಕೆ ಪಡೆಯಲಾಗುವುದು ಎಂದು ತಿಳಿಸಿದ್ದಾರೆ. 2021 ರಿಂದ 2024ರ ಅವಧಿಯಲ್ಲಿ ಮಠದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಮಕ್ಕಳಿಗೆ ಈ ದೌರ್ಜನ್ಯ ನಡೆದಿದೆ. ಸ್ವಾಮೀಜಿಯವರು ಮಕ್ಕಳಿಂದ ತಮ್ಮ ಮಸಾಜ್ ಮಾಡಿಸಿಕೊಳ್ಳುತ್ತಿದ್ದರು ಎಂಬ ಅಂಶ ದೂರಿನಲ್ಲಿದೆ. ಅಲ್ಲದೆ, ಈ ವಿಷಯವನ್ನು ಯಾರಿಗಾದರೂ ತಿಳಿಸಿದರೆ ಜೀವ ತೆಗೆಯುವುದಾಗಿ ಸ್ವಾಮೀಜಿ ಮಕ್ಕಳಿಗೆ ಬೆದರಿಕೆ ಹಾಕುತ್ತಿದ್ದರು ಎಂದು ದೂರಿನಲ್ಲಿ ವಿವರಿಸಲಾಗಿದೆ.

ಬಂಧನ ಭೀತಿಯಿಂದ ಪಾರು

ಈ ಬೆಳವಣಿಗೆಯ ಮುನ್ಸೂಚನೆ ಅರಿತಿದ್ದ ಸ್ವಾಮೀಜಿ ಏ.21 ರಂದೇ ದಾವಣಗೆರೆಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ಮೇ 2 ರಂದು ಜಾಮೀನು ಮಂಜೂರು ಮಾಡಿದ್ದರಿಂದ ಸದ್ಯಕ್ಕೆ ಶ್ರೀಗಳಿಗೆ ಬಂಧನದ ಭೀತಿಯಿಲ್ಲ. ಆದರೂ, ಪ್ರಕರಣವು ಅತ್ಯಂತ ಸೂಕ್ಷ್ಮವಾಗಿರುವುದರಿಂದ ಪೊಲೀಸರು ಯಾವುದೇ ಕ್ರಮಕ್ಕೆ ಮುಂದಾಗದೆ ಸಾಕ್ಷ್ಯಧಾರಗಳ ಸಂಗ್ರಹಕ್ಕೆ ಒತ್ತು ನೀಡಿದ್ದಾರೆ ಎನ್ನಲಾಗಿದೆ.

ಹಿರಿಯ ಭಾಗವತ ಸುಬ್ರಾಯ ಇನ್ನಿಲ್ಲ

ಬೆಂಗಳೂರು/ಉತ್ತರ ಕನ್ನಡ: ಯಕ್ಷಗಾನ ಲೋಕದ ಕಪ್ಪೆಕೆರೆ ಸುಬ್ರಾಯ ಹೆಗಡೆ (79) ಅವರು ಬುಧವಾರ ವಿಧಿವಶರಾಗಿದ್ದಾರೆ. ಅವರ ಅಗಲಿಕೆಯಿಂದ ಬಡಗುತಿಟ್ಟು ಯಕ್ಷಗಾನ ರಂಗದ ಒಂದು ಸುವರ್ಣಯುಗ ಅಂತ್ಯಗೊಂಡಂತಾಗಿದೆ.

1947ರಲ್ಲಿ ಹೊನ್ನಾವರ ತಾಲೂಕಿನ ಹಡಿನಬಾಳದಲ್ಲಿ ಈಶ್ವರ ಹೆಗಡೆ ಮತ್ತು ಗೋಪಿ ಹೆಗಡೆ ದಂಪತಿಗಳ ಪುತ್ರನಾಗಿ ಜನಿಸಿದ ಸುಬ್ರಾಯರು, ಮೂಲತಃ ಯಕ್ಷಗಾನದ ಮನೆಯಿಂದಲೇ ಬಂದವರು. ಹಿರಿಯ ಸಹೋದರ ಕಪ್ಪೆಕೆರೆ ಮಹಾದೇವ ಹೆಗಡೆಯವರ ಹಾದಿಯಲ್ಲೇ ಸಾಗಿದ ಇವರು, ಕೆರೆಮನೆ ಮಹಾಬಲ ಹೆಗಡೆ ಮತ್ತು ಗಣಪತಿ ಹೆಗಡೆಯವರಲ್ಲಿ ಕಲೆ ಅಭ್ಯಾಸ ಮಾಡಿದರು.

ಯಕ್ಷಗಾನ ರಂಗದಲ್ಲಿ ಕಪ್ಪೆಕೆರೆ ಭಾಗವತರು ಎಂದು ಪ್ರಸಿದ್ಧರಾದ ಇವರು ಈ ರಂಗಭೂಮಿಗೆ ಯುಗಪುರುಷನಂತೆ ಕಾಣಿಸಿದರು. ಗುಂಡಬಾಳ, ಕೆರೆಮನೆ, ಕಮಲಶಿಲೆ, ಸಾಲಿಗ್ರಾಮ, ಶಿರಸಿ, ಬಚ್ಚಗಾರು ಮೊದಲಾದ ಹಲವು ಪ್ರಮುಖ ಮೇಳಗಳಲ್ಲಿ ತನ್ನ ಭಾಗವತಿಕೆಯ ಸೊಗಸನ್ನು ತೋರಿದವರು. ಕೆರೆಮನೆ ಶಿವರಾಮ ಹೆಗಡೆ, ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ , ಕೆರೆಮನೆ ಗಜಾನನ ಹೆಗಡೆ ಮೊದಲಾದ ಯಕ್ಷಗಾನದ ಕೆರೆಮನೆ ಕಲಾವಿದರ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಜಲವಳ್ಳಿ ವೆಂಕಟೇಶ್ ರಾವ್, ಹದಿನಬಾಳ ಮೊದಲಾದವರ ಅಪ್ರತಿಮ ಪ್ರತಿಭಾ ಪ್ರದರ್ಶನದಲ್ಲಿ ಇವರ ಕೊಡುಗೆ ಸದಾ ಸ್ಮರಣೀಯ.

ಶ್ರೀ ರಾಮಚಂದ್ರಾಪುರ ಮಠದಲ್ಲಿ ಸೇವೆ

ಶ್ರೀ ರಾಮಚಂದ್ರಾಪುರ ಮಠದ ಶಿಷ್ಯರಾದ ಇವರು ಶ್ರೀ ರಾಘವೇಶ್ವರ ಭಾರತಿ ಮಹಾಸ್ವಾಮಿಗಳವರ ಕಲ್ಪನೆಯ ವಿಷ್ಣುಗುಪ್ತ ವಿಶ್ವವಿದ್ಯಾಪೀಠದಲ್ಲಿ ಯಕ್ಷಗಾನದ ಪ್ರಧಾನ ಆಚಾರ್ಯರಾಗಿ ಸೇವೆ ಸಲ್ಲಿಸಿದ್ದು ಕೂಡ ಅವರ ಬದುಕಿನ ಮಹೋನ್ನತ ಕ್ಷಣ. ಮಂಗಳೂರು ವಿಶ್ವವಿದ್ಯಾಲಯದಿಂದ ಸಂದ ಗೌರವ, ಉಡುಪಿಯ ಕಲಾರಂಗದ ಗೌರವ, ಹಲವಾರು ಮಠಮಾನ್ಯಗಳ ಗೌರವ ಇವೆಲ್ಲ ಅವರ ಅವರ ಅಪ್ಪಟ ಪ್ರತಿಭೆಗೆ ಸಂದ ಗೌರವ. ಸಹಜವಾಗಿ ಮಾತನಾಡುವಾಗ ಸಾವಿರಾರು ವಿನೋದ ಪ್ರಸಂಗ, ವಿಚಾರಗಳನ್ನು ಗುರು ಭಾವವನ್ನು ಅವರು ತೋರುವ ಪರಿ ಅನನ್ಯ. ಯಕ್ಷಗಾನದ ಹಿಮ್ಮೇಳಕ್ಕೆ ತಾರಾಮೌಲ್ಯವನ್ನು ತಂದುಕೊಟ್ಟ ಭಾಗವತರುಗಳಲ್ಲಿ ಇವರು ಸಹ ಅಗ್ರಗಣ್ಯರು. ಆ ಹಿರಿಯ ಚೇತನ ಅಸ್ತಂಗತವಾಗಿದೆ. ಅವರಿಗೆ ಭಗವದನುಗ್ರಹ, ಶ್ರೀ ಗುರುಗಳ ಕೃಪೆ ಯಿಂದ ಸದ್ಗತಿ ಸಿಗಲಿ ಎಂದು ಶ್ರೀರಾಮಚಂದ್ರಪುರ ಮಠದ ಮೋಹನ ಭಾಸ್ಕರ ಹೆಗಡೆ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಕಸಾಪ: ಜೋಶಿ ಅಧ್ಯಕ್ಷ ಸ್ಥಾನದಿಂದ ಇಳಿಸಿದ್ದೆ ಷಡ್ಯಂತ್ರ?

ನಿವೃತ್ತಿ ಹೊಂದಿದ ಅಧಿಕಾರಿಯಿಂದ ಕಡತಕ್ಕೆ ಸಹಿ | ಆರ್‌ಟಿಐನಲ್ಲಿ ದಾಖಲೆ ಬಹಿರಂಗ, ದೂರು ದಾಖಲು

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿದ್ದ ನಾಡೋಜ ಮಹೇಶ್ ಜೋಶಿ ಅವರ ಸ್ಥಾನಕ್ಕೆ ಕುತ್ತು ತರುವ ಉದ್ದೇಶದಿಂದ ದಾಖಲೆಗಳನ್ನು ತಿರುಚಿರುವುದು ಆರ್‌ಟಿಐ ದಾಖಲೆಗಳಲ್ಲಿ ಬಹಿರಂಗವಾಗಿದೆ.

ಕಸಾಪದಲ್ಲಿ ಮಹೇಶ್ ಜೋಶಿ ಹಾಗೂ ಇತರರ ವಿರುದ್ಧ ಕೇಳಿಬಂದಿರುವ ಏಳು ಕೋಟಿ ರು.ಗಳ ಅವ್ಯವಹಾರದ ತನಿಖೆ ನಡೆದು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವಾಗಲೇ ಮಹೇಶ್ ಜೋಶಿ ಹಾಗೂ ಇತರರ ಸದಸ್ಯತ್ವ ವಜಾಗೊಳಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕಸಾಪದ ಆಡಳಿತಾಧಿಕಾರಿಗಳು ಹಾಗೂ ವ್ಯವಸ್ಥಾಪಕರು ಅಲ್ಲಿನ ಸಿಬ್ಬಂದಿ ಬಳಸಿಕೊಂಡು ಅಧಿಕಾರ ದುರುಪಯೋಗ, ನಕಲಿ, ಅಪರಾಧಿಕ ಷಡ್ಯಂತ್ರ, ದಾಖಲೆಗಳನ್ನು ತಿರುಚುವುದು ಹಾಗೂ ಇನ್ನಿತರ ಗಂಭೀರ ಸ್ವರೂಪದ ಅಪರಾಧ ಎಸಗಲು ಮುಂದಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿವೃತ್ತ ಪ್ರಭಾರಿ ವ್ಯವಸ್ಥಾಪಕ ಪಾರ್ಶ್ವನಾಥ, ಪ್ರಥಮ ದರ್ಜೆ ಸಹಾಯಕ ಬಿ.ರವಿಕುಮಾರ್ ಹಾಗೂ ಪರಿಷತ್ತಿನ ಹಿಂದಿನ ಆಡಳಿತಾಧಿಕಾರಿ ಕೆ.ಎಂ. ಗಾಯತ್ರಿ, ಅವರ ವಿರುದ್ಧ ಕಸಾಪ ನಿಕಟಪೂರ್ವ ಅಧ್ಯಕ್ಷ ಮಹೇಶ್ ಜೋಶಿ ವಿವಿ ಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ವಿವಿ ಪುರಂ ಪೊಲೀಸರು ದೂರು ಸ್ವೀಕರಿಸಿ ಪ್ರಾಥಮಿಕ ವಿಚಾರಣೆ ಕೈಗೊಂಡಿದ್ದಾರೆ.

ಕಸಾಪದಲ್ಲಿ ಪ್ರಭಾರಿ ವ್ಯವಸ್ಥಾಪಕರಾಗಿದ್ದ ಪಾರ್ಶ್ವನಾಥ ಅವರು ಸೇವೆಯಿಂದ ನಿವೃತ್ತಿ ಹೊಂದಿದ ಬಳಿಕವೂ ಮಹೇಶ್ ಜೋಶಿ ಹಾಗೂ ಇತರರನ್ನು ಕಸಾಪ ಸದಸ್ಯತ್ವದಿಂದ ವಜಾಗೊಳಿಸುವಂತೆ ಆಡಳಿತಾಧಿಕಾರಿಗಳಿಗೆ ಕಡತ ಮಂಡಿಸಿದ್ದಾರೆ. ಈ ಸಂಬಂಧ ಸಲ್ಲಿಕೆಯಾದ ಕಡತದ ಮೇಲೆ ಸಂಖ್ಯೆ ನಮೂದಾಗಿಲ್ಲ. ಟಿಪ್ಪಣಿಯಲ್ಲಿ ಯಾವುದೇ ದಿನಾಂಕ ಮತ್ತು ಕಡತ ಸಂಖ್ಯೆ ನಮೂದು ಮಾಡಲಾಗಿಲ್ಲ. ಪಾರ್ಶ್ವನಾಥ ಅವರು ಸೇವೆಯಿಂದ ಜ.31ರಂದೇ ಸೇವಾ ನಿವೃತ್ತಿ ಹೊಂದಿದ ಬಳಿಕವೂ ಈ ಟಿಪ್ಪಣಿಯನ್ನು ಕಸಾಪ ಕಚೇರಿ ಪ್ರಥಮ ದರ್ಜೆ ಸಹಾಯಕ ರವಿಕುಮಾರ್ ಮೂಲಕ ಅನುಮೋದನೆಗಾಗಿ ಹಿಂದಿನ ಆಡಳಿತಾಧಿಕಾರಿ ಗಾಯತ್ರಿ ಅವರಿಗೆ ಸಲ್ಲಿಸಿದ್ದಾರೆ. ಇದು ಕೇವಲ ದುರುದ್ದೇಶದಿಂದ ತಮ್ಮ ಹಾಗೂ ಇತರ ಪದಾಧಿಕಾರಿಗಳ ವಿರುದ್ಧ ಮೂವರು ನಡೆಸಿದ ಷಡ್ಯಂತ್ರವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ವಿರುದ್ಧ ಎಫ್‌ಐಆರ್: ದೀರ್ಘಕಾಲದಿಂದ ಬಾಕಿ ಇರುವ ಬಾಕಿ ಹಣವನ್ನು ಪಾವತಿಸಲು ಕೇಳಿದ ತನ್ನ ಮೇಲೆ ದೌರ್ಜನ್ಯ ನಡೆದಿದೆ ಎಂದು ಆರೋಪಿಸಿ ದಲಿತ ಕಲಾವಿದರೊಬ್ಬರು ನೀಡಿದ ದೂರಿನ ಮೇರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯತ್ರಿ ಅವರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಮತ್ತು ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ನ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಬೆಂಗಳೂರಿನ ಎಸ್.ಜೆ.ಪಾರ್ಕ್ ಪೊಲೀಸ್ ಠಾಣೆಯಲ್ಲಿ 55 ವರ್ಷದ ಜೋಗಿಲ ಸಿದ್ದರಾಜು ದೂರು ದಾಖಲಿಸಿದ್ದಾರೆ. ಕಳೆದ ಮೂರು ವರ್ಷಗಳಿಂದ ಕಲಾವಿದರ ಗುಂಪಿಗೆ ನೀಡಬೇಕಿದ್ದ ಸಂಭಾವನೆಯನ್ನು ಬಿಡುಗಡೆ ಮಾಡಲು ನಿರ್ದೇಶಕರ ಕಚೇರಿಗೆ ಭೇಟಿ ನೀಡಿದ್ದಾಗ ಸಿದ್ದರಾಜು ಆರೋಪಿಸಿದ್ದಾರೆ.

ಚುನಾಯಿತ ಅಧ್ಯಕ್ಷರ ಅಮಾನತು ಸರಿಯಲ್ಲ

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರಗಳು ಸಾಬೀತಾಗಿದ್ದು, ಕನ್ನಡ ಸಾಹಿತ್ಯ ಪರಿಷತ್‌ನ ಆಡಳಿತಾಧಿಕಾರಿ ಮಹೇಶ್ ಜೋಶಿ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ. ಸಾಹಿತ್ಯ ಪರಿಷತ್‌ನಲ್ಲಿ ನಡೆದಿರುವ ಕಾಮಗಾರಿಗಳು, ಸಾಹಿತ್ಯ ಸಮ್ಮೇಳನದ ಖರ್ಚು-ವೆಚ್ಚಗಳ ಸಂಬಂಧ ತನಿಖೆ ನಡೆಸಿರುವ ತನಿಖಾಧಿಕಾರಿ ಬರೀ ಆರ್ಥಿಕ ನಷ್ಟವೆಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಇದಕ್ಕೆ ಪ್ರತಿಯಾಗಿ ನಾಡೋಜ ಮಹೇಶ್ ಜೋಶಿ ಅವರು ಎಲ್ಲದ್ದಕ್ಕೂ ಉತ್ತರ ನೀಡಲಿದ್ದಾರೆ. ವರದಿಯಲ್ಲಿ ಎಲ್ಲೂ ಭ್ರಷ್ಟಾಚಾರ ಅಥವಾ ಅವ್ಯವಹಾರದ ಪ್ರಸ್ತಾಪವಿಲ್ಲವಾಗಿದೆ ಎಂದು ಮಾಹಿತಿ ಮೂಲಗಳು ತಿಳಿಸಿವೆ.



> ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ಹೈಕೋರ್ಟ್ ಗಮನಕ್ಕೆ ತಂದು ನ್ಯಾಯಾಲಯ ನೀಡುವ ತೀರ್ಪಿಗೆ ತಲೆಬಾಗುವೆ. ಸಾಹಿತ್ಯ ಪರಿಷತ್ ಎನ್ನುವುದು ಕನ್ನಡಿಗರ ಅಸ್ಮಿತೆಯ ಸಂಕೇತ. ಇದು ಸರಸ್ವತಿಯ ದೇಗುಲ. ಇಲ್ಲಿ ಈ ತರಹದ ಅಪರಾಧ ಕೃತ್ಯ ನಿಜಕ್ಕೂ ಅತ್ಯಂತ ನೋವು ಹಾಗೂ ಬೇಸರದ ಸಂಗತಿ. ನನಗೆ ಯಾರ ಮೇಲೆಯೂ ವೈಯಕ್ತಿಕ ದ್ವೇಷವಿಲ್ಲ. ಆದರೆ ಇಂತಹ ಕೃತ್ಯ ಮಾಡಿದಾಗ ಇಡೀ ಕನ್ನಡಿಗರ ಭಾವನೆಗೆ ಕೊಡಲಿ ಪೆಟ್ಟು ಹಾಕಿದಂತಾಗಿದೆ. ಈ ಷಡ್ಯಂತ್ರದ ಹಿಂದೆ ಇರುವ ಕಾಣದ ಕೈಗಳನ್ನು ಕನ್ನಡಿಗರು ಎಂದಿಗೂ ಸಹಿಸುವುದಿಲ್ಲ.
>
> -ನಾಡೋಜ ಮಹೇಶ್ ಜೋಶಿ

ಅಧಿಕಾರಿಗಳ ವಿರುದ್ಧ ಲೋಕಾಯುಕ್ತಕ್ಕೆ ದೂರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಕೆ.ಎಂ. ಗಾಯತ್ರಿ, ಇಲಾಖೆಯ ಕಾರ್ಯದರ್ಶಿ ವೆಂಕಟೇಶ್ ಅವರ ಕರ್ತವ್ಯ ಲೋಪದ ವಿರುದ್ಧ ನಾಡೋಜ ಮಹೇಶ್ ಜೋಶಿ ಅವರು ಲೋಕಾಯುಕ್ತದಲ್ಲಿ ಪ್ರಕರಣ ದಾಖಲಿಸಿದ್ದಾರೆ. ಈಗಾಗಲೇ ನಾಲ್ಕು ಬಾರಿ ಈ ಅಧಿಕಾರಿಗಳಿಗೆ ನೋಟಿಸ್ ನೀಡಿದ್ದರೂ ಇದುವರೆಗೂ ಲೋಕಾಯುಕ್ತರ ಮುಂದೆ ಹಾಜರಾಗದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಸಂಪಾದಕೀಯ

ಹಿಜಾಬ್ ಜೇನುಗೂಡಿಗೆ ಕಲ್ಲು

ಕರ್ನಾಟಕದ ಶಾಲಾ ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ಅನುಮತಿ ನೀಡಲಾಗಿದೆ. ಜತೆಗೆ ಹಿಂದೂ ಧರ್ಮದ ಪವಿತ್ರ ದಾರ, ರುದ್ರಾಕ್ಷಿ, ಜನಿವಾರ, ಸಿಕ್ಖರ ಪೇಟ ಸೇರಿ ಎಲ್ಲಾ ಧರ್ಮಗಳ ಧಾರ್ಮಿಕ ವಸ್ತುಗಳಿಗೂ ಅವಕಾಶವಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. 2022ರಲ್ಲಿ ಈ ವಿಚಾರ ರಾಜ್ಯದಾದ್ಯಂತ ದೊಡ್ಡ ಮಟ್ಟದ ಧರ್ಮದಂಗಲ್‌ಗೆ ಕಾರಣವಾಗಿತ್ತು. ಉಡುಪಿಯ ಸರ್ಕಾರಿ ಪಿಯು ಕಾಲೇಜಿನಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿದ್ದಕ್ಕೆ ಪ್ರತಿಯಾಗಿ ಇತರ ವಿದ್ಯಾರ್ಥಿಗಳು ಕೇಸರಿ ಶಾಲ್ ಧರಿಸಿ ಕಾಲೇಜಿಗೆ ಬಂದಿದ್ದರಿಂದ ಹುಟ್ಟಿಕೊಂಡ ವಿವಾದ, ಕಾನೂನು ಸಮರಕ್ಕೂ ಕಾರಣವಾಗಿತ್ತು. ದೊಡ್ಡ ಮಟ್ಟದ ಪರ-ವಿರೋಧ ಚರ್ಚೆಗಳಿಗೆ ದಾರಿ ಮಾಡಿಕೊಟ್ಟಿತ್ತು. ಸರ್ಕಾರದ ಈ ನಿರ್ಧಾರ ಮತ್ತೊಮ್ಮೆ ಜೇನುಗೂಡಿಗೆ ಕಲ್ಲು ಎಸೆದಂತಾಗಿದೆ. ಈ ವಿಚಾರ ಈಗಾಗಲೇ ಕೋರ್ಟ್‌ನಲ್ಲಿ ಒಂದು ಮಟ್ಟದ ಇತ್ಯರ್ಥವಾಗಿತ್ತು. ಅಂದಿನ ಬಿಜೆಪಿ ಸರ್ಕಾರ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅಡಿಯಲ್ಲಿ ಆದೇಶ ಹೊರಡಿಸಿ, ಸಮಾನತೆ, ಸಮಗ್ರತೆ ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುವಂತಹ ಯಾವುದೇ ಧಾರ್ಮಿಕ ಉಡುಪುಗಳನ್ನು ಧರಿಸಿ ತರಗತಿಯೊಳಗೆ ಬರುವಂತಿಲ್ಲ ಎಂದು ತಿಳಿಸಿತ್ತು. ಸರ್ಕಾರದ ಈ ಆದೇಶ ಪ್ರಶ್ನಿಸಿ ವಿದ್ಯಾರ್ಥಿನಿಯರು ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್‌ನ ತ್ರಿಸದಸ್ಯ ಪೀಠವು, ಹಿಜಾಬ್ ಧರಿಸುವುದು ಇಸ್ಲಾಂ ಧರ್ಮದ ಅತ್ಯಗತ್ಯ ಆಚರಣೆಯಲ್ಲ ಎಂದು ಅಭಿಪ್ರಾಯಪಟ್ಟು, ಸರ್ಕಾರದ ಸಮವಸ್ತ್ರ ಕಡ್ಡಾಯ ಆದೇಶವನ್ನು ಎತ್ತಿಹಿಡಿದಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಯಿತು. ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠ ವಿಭಜಿತ ತೀರ್ಪು ನೀಡಿತ್ತು. ಅಂತಿಮ ತೀರ್ಪಿಗಾಗಿ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಲಾಗಿತ್ತು. ಇದರ ನಡುವೆಯೇ ಈ ಆದೇಶ ಹೊರಡಿಸಲಾಗಿದೆ. ಈಗ ಇದು ಅಗತ್ಯವಿತ್ತೇ ಎಂಬುದು ಪ್ರಶ್ನೆ. ಸರಕಾರ ಬದಲಾದಂತೆ ಪಠ್ಯವೂ ಬದಲಾಗುವುದನ್ನು ನೋಡುತ್ತ ಬಂದಿದ್ದೇವೆ. ಈಗ ವಸ್ತ್ರಸಂಹಿತೆಯೂ ಬದಲಾಗುವ ಚಾಳಿ ಆರಂಭವಾಗಿದೆ. ಇದು ಒಳ್ಳೆಯ ರೂಢಿಯಲ್ಲ. ಮುಂದೆ ಇನ್ನೊಂದು ಸರಕಾರ ಬಂದರೆ, ಈ ಆದೇಶವನ್ನು ಮತ್ತೆ ಬದಲಾಯಿಸಿದರೆ ಪ್ರಶ್ನಿಸುವಂತಿಲ್ಲ. ಇದರ ನಡುವೆ ಗೊಂದಲದಿಂದ ನಲುಗುವವರು ವಿದ್ಯಾರ್ಥಿಗಳು ಎಂಬುದನ್ನು ಮರೆಯಕೂಡದು. ಈ ಆದೇಶದ ಹಿಂದೆ ಬಿಜೆಪಿಯ ವಿರುದ್ಧದ ಜಿದ್ದು ಇದ್ದಂತಿದೆಯೇ ಹೊರತು, ವಿದ್ಯಾರ್ಥಿಗಳ ಹಿತಚಿಂತನೆಯನ್ನು ಮಾಡಿ ಈ ನಿರ್ದೇಶನ ನೀಡಿದಂತೆ ಕಾಣಿಸುತ್ತಿಲ್ಲ.

ಸೊಂಪಾದಕೀಯ

ಬುರುಡೆಗಾಗಿ ಅಗೆದವರಿಗೆ ಚಿಪ್ಪು

'ಧರ್ಮಸ್ಥಳದಲ್ಲಿ ಅರಣ್ಯ ಪ್ರದೇಶದಲ್ಲಿ ಶವಗಳನ್ನು ಹೂತಿಡಲಾಗಿದೆ' ಎಂದು ಬುರುಡೆ ಹಿಡಿದುಕೊಂಡು ಬಂದ ಚಿನ್ನಯ್ಯ ಎಂಬಾತ ಹೇಳಿದ ಮಾತನ್ನು ನಂಬಿ ತನಿಖೆಗೆ ಎಸ್‌ಐಟಿ ರಚಿಸಿ, ಆತ ತೋರಿಸಿದ ಕಡೆಯೆಲ್ಲಾ ಪಾಯಿಂಟ್‌ಗಳನ್ನು ಮಾಡಿ ತಿಂಗಳುಗಟ್ಟಲೆ ಕಾಲ ಅಗೆಯಲಾಗಿತ್ತು. ಕಡೆಗೆ ಅವುಗಳಲ್ಲಿ ಏನೂ ಸಿಗದೆ, ಈ ಹೊಂಡಗಳನ್ನು ಹಾಗೇ ಬಿಡಿ, ಇಂಗುಗುಂಡಿಗಳಾಗಿ ಉಪಯೋಗವಾಗುತ್ತವೆ ಎಂದು ಜನ ತಮಾಷೆ ಮಾಡುವಂತಾಗಿತ್ತು. ಇದೀಗ ಹೊಸ ವಿಷಯ ಎಂದರೆ ಹೀಗೆ ಗುಂಡಿ ಅಗೆದ ಕೂಲಿಗಳಿಗೆ ಎಂಬತ್ತು ಸಾವಿರ ರೂ. ಕೂಲಿ ಬಾಕಿ ಉಳಿಸಿ ಕೊಳ್ಳಲಾಗಿದೆಯಂತೆ. ಜೊತೆಗೆ ಜೆಸಿಬಿಯವರಿಗೆ ಎಪ್ಪತ್ತು ಸಾವಿರ ಬಾಕಿಯಿದೆ. ಶಾಮಿಯಾನ, ನೀರು, ವಾಹನ ಬಾಡಿಗೆ ಹೀಗೆ ಹಲವು ಖರ್ಚು ಸೇರಿಸಿ ಒಟ್ಟಾರೆ ಎರಡು ಲಕ್ಷಕ್ಕೂ ಅಧಿಕ ಬಿಲ್ ಬಾಕಿಯಿದೆಯಂತೆ. ಬುರುಡೆಗಾಗಿ ಅಗೆದವರ ಕೈಗೆ ಕಾಸು ಕೊಡದೆ ಬರೀ ಚಿಪ್ಪು ಕೊಡಲಾಗಿದೆ ಎಂದು ಜನ ಆಡಿಕೊಂಡು ನಗುವ ಹಾಗಾಗಿದೆ. ಈಗ ಈ ಬಿಲ್ ಯಾಕೆ ಬಾಕಿಯಾಗಿದೆ ಎಂದು ತನಿಖೆ ನಡೆಸಲು ಒಂದು ಎಸ್‌ಐಟಿ ರಚಿಸಬೇಕು. ಅವರಿಗೆ ಒಂದು ಆಫೀಸು, ಓಡಾಡಲು ವಾಹನ ಎಲ್ಲ ನೀಡಬೇಕು ಎಂದು ಧರ್ಮಸ್ಥಳದ ಆಸುಪಾಸಿನವರು ಆಗ್ರಹಿ ಸುತ್ತಿದ್ದಾರೆ ಎಂಬುದು ಸುಳ್ಳಿರಲಾರದು. ಅಥವಾ ಬಿಲ್ ಪಾವತಿಯಾಗಿದ್ದು, ಅದು ಯಾರ ಕೈಗೂ ಸಿಗದಂತೆ ಎಲ್ಲಾದರೂ ನೆಲದಡಿಯಲ್ಲಿ ಹೂತು ಹಾಕಲಾ ಗಿದೆಯೊ? ಅದನ್ನೂ ಪರಿಶೀಲಿಸಬೇಕು. ಅಂದು ಮಳೆಯಲ್ಲಿ ಭೂಮಿ ಅಗೆಯುವವರಿಗೆ ಬಹಳ ಕಷ್ಟವಾಗಿತ್ತು. ಈಗ ಮಳೆಗಾಲ ಶುರುವಾ ಗುವುದಕ್ಕೂ ಮೊದಲೇ ಈ ಕಾರ್ಯವನ್ನು ಕೈಗೊಂಡರೆ ಆ ಸಮಸ್ಯೆ ಇರುವುದಿಲ್ಲ.

ಸಂಪಾದಕರ ಸದ್ಯಶೋಧನೆ

ಲಕ್ಷ್ಮಣ್ ಈ ನಿರ್ಧಾರ ತೆಗೆದುಕೊಂಡಿದ್ದೇಕೆ?

ಖ್ಯಾತ ಕಾರ್ಟೂನಿಸ್ಟ್ ಆರ್.ಕೆ. ಲಕ್ಷ್ಮಣ್ ಅವರು ಭಾರತೀಯ ರಾಜಕಾರಣದ ನಾಡಿಮಿಡಿತವನ್ನು ಅರಿತಿದ್ದವರು. ದಶಕಗಳ ಕಾಲ 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಮುಖಪುಟದಲ್ಲಿ 'You Said It' ಅಂಕಣದ ಮೂಲಕ ಸಾಮಾನ್ಯ ಮನುಷ್ಯನ ಧ್ವನಿಯಾಗಿದ್ದರು. ಆದರೆ, ತಮ್ಮ ವೃತ್ತಿಜೀವನದ ಉತ್ತರಾರ್ಧದಲ್ಲಿ ಅವರು ರಾಜಕಾರಣಿಗಳ ವ್ಯಂಗ್ಯಚಿತ್ರಗಳನ್ನು ಬಿಡಿಸುವ ಬಗ್ಗೆ ಒಂದು ವಿಶಿಷ್ಟ ಮತ್ತು ತುಸು ಬೇಸರದ ಮಾತನ್ನಾಡಿದ್ದರು. 'ರಾಜಕಾರಣಿಗಳು ತಾವೇ ಸ್ವತಃ ಕಾರ್ಟೂನ್‌ಗಳಂತೆ ವರ್ತಿಸಲು ಶುರುಮಾಡಿದ ಮೇಲೆ, ನಾನು ಅವರ ವ್ಯಂಗ್ಯಚಿತ್ರ ಬಿಡಿಸುವುದನ್ನು ನಿಲ್ಲಿಸಿದೆ' ಎಂಬುದು ಅವರ ಮಾರ್ಮಿಕ ನುಡಿಯಾಗಿತ್ತು. ಲಕ್ಷ್ಮಣ್ ಪ್ರಕಾರ, ವ್ಯಂಗ್ಯಚಿತ್ರ ಕಲೆ ಎಂಬುದು ವ್ಯಕ್ತಿಯೊಬ್ಬನ ಗುಣಲಕ್ಷಣಗಳನ್ನು ಅಥವಾ ನಡೆವಳಿಕೆಯನ್ನು ಉತ್ಪ್ರೇಕ್ಷಿಸಿ, ತೋರಿಸುವ ಕಲೆ. ಒಬ್ಬ ರಾಜಕಾರಣಿ ಗಂಭೀರವಾಗಿರುವಾಗ ಅವರಲ್ಲಿರುವ ಸಣ್ಣಪುಟ್ಟ ವಿಚಿತ್ರಗಳನ್ನು ಹೆಕ್ಕಿ ತೆಗೆದು ಚಿತ್ರಿಸುವುದು ವ್ಯಂಗ್ಯಚಿತ್ರಕಾರನ ಜಾಣ್ಮೆ. ಆದರೆ, ರಾಜಕಾರಣಿಗಳ ಮಾತು, ಕೃತಿ ಮತ್ತು ನಡೆವಳಿಕೆಗಳೇ ಎಷ್ಟು ಹಾಸ್ಯಾಸ್ಪದವಾಗಿವೆ ಎಂದರೆ, ಅವುಗಳನ್ನು ಮತ್ತಷ್ಟು ಉತ್ಪ್ರೇಕ್ಷಿಸಲು ವ್ಯಂಗ್ಯಚಿತ್ರಕಾರನಿಗೆ ಜಾಗವೇ ಇಲ್ಲದಂತಾಗಿದೆ. ಅಂದರೆ, ವಾಸ್ತವವೇ ವ್ಯಂಗ್ಯಕ್ಕಿಂತ ಮಿಗಿಲಾಗಿ ಬೆಳೆದಿದೆ ಎಂಬುದು ಅವರ ಆತಂಕವಾಗಿತ್ತು. ರಾಜಕೀಯ ಕ್ಷೇತ್ರವು ಹಿಂದೆ ಒಂದು ಘನತೆಯನ್ನು ಹೊಂದಿತ್ತು. ನೆಹರು, ಶಾಸ್ತ್ರಿ ಅಥವಾ ಇಂದಿರಾ ಗಾಂಧಿಯವರ ಕಾಲದಲ್ಲಿ ರಾಜಕಾರಣಿಗಳು ಒಂದು ತತ್ವಕ್ಕೆ ಬದ್ಧರಾಗಿದ್ದರು. ಆಗ ಅವರ ನೀತಿಗಳನ್ನು ಟೀಕಿಸಲು ಕಾರ್ಟೂನ್‌ಗಳು ಪ್ರಬಲ ಅಸ್ತ್ರವಾಗಿದ್ದವು. ಜವಾಹರಲಾಲ್ ನೆಹರು ಅವರಂತೂ ಲಕ್ಷ್ಮಣ್ ಅವರ ಕಾರ್ಟೂನ್‌ಗಳನ್ನು ನೋಡಿ ಆನಂದಿಸುತ್ತಿದ್ದರು ಮತ್ತು 'ನನ್ನನ್ನು ಬಿಡಬೇಡಿ, ಇನ್ನೂ ಚೆನ್ನಾಗಿ ಟೀಕಿಸಿ' ಎಂದು ಪ್ರೋತ್ಸಾಹಿಸುತ್ತಿದ್ದರು. ಆದರೆ ಕಾಲಾನಂತರದಲ್ಲಿ ರಾಜಕೀಯದ ಗುಣಮಟ್ಟ ಕುಸಿಯಿತು. ಸಂಸತ್ತಿನಲ್ಲಿ ನಡೆಯುವ ಗದ್ದಲಗಳು, ರಾಜಕಾರಣಿಗಳ ಹಗುರವಾದ ಹೇಳಿಕೆಗಳು ತಾವಾಗಿಯೇ ಪ್ರಹಸನಗಳಂತಾದವು. ಒಬ್ಬ ಕಾರ್ಟೂನಿಸ್ಟ್‌ಗೆ ಸೃಜನಶೀಲತೆ ಮುಖ್ಯ. ಆದರೆ ಸಮಾಜದಲ್ಲಿ ಅಥವಾ ರಾಜಕೀಯದಲ್ಲಿ ಸಂಭವಿಸುವ ಘಟನೆಗಳು ಈಗಾಗಲೇ 'ಕ್ಯಾರಿಕೇಚರ್' ರೂಪದಲ್ಲಿದ್ದರೆ, ಅಲ್ಲಿ ಕಲೆಗೆ ಮಿತಿಯಿರುತ್ತದೆ. ಆರ್.ಕೆ. ಲಕ್ಷ್ಮಣ್ ಅವರು ಗಮನಿಸಿದಂತೆ, ರಾಜಕಾರಣಿಗಳು ಅಧಿಕಾರಕ್ಕಾಗಿ ಪಕ್ಷಾಂತರ ಮಾಡುವುದು, ಸದನದಲ್ಲಿ ವರ್ತಿಸುವ ರೀತಿ ಮತ್ತು ಸಾರ್ವಜನಿಕವಾಗಿ ನೀಡುವ ತರ್ಕಹೀನ ಹೇಳಿಕೆಗಳು ಜನರಲ್ಲಿ ನಗು ಉಕ್ಕಿಸುತ್ತಿದ್ದವು. ಈ 'ಜೀವಂತ ಕಾರ್ಟೂನ್'ಗಳ ಮುಂದೆ ಪೆನ್ನಿನಿಂದ ಬಿಡಿಸುವ ಚಿತ್ರಗಳು ಮಸುಕಾಗತೊಡಗಿದವು. ಲಕ್ಷ್ಮಣ್ ಈ ಹೇಳಿಕೆಯ ಹಿಂದೆ ವ್ಯವಸ್ಥೆಯ ಬಗ್ಗೆ ಒಂದು ರೀತಿಯ ಹತಾಶೆಯೂ ಇತ್ತು. ವ್ಯಂಗ್ಯಚಿತ್ರ ಎಂಬುದು ಕೇವಲ ನಗಿಸುವುದಲ್ಲ, ಅದು ವ್ಯವಸ್ಥೆಯನ್ನು ತಿದ್ದುವ ಕನ್ನಡಿಯಾಗಬೇಕು. ಆದರೆ ಕನ್ನಡಿ ತೋರಿಸಿದರೂ ಬದಲಾಗದ ಅಥವಾ ಕನ್ನಡಿಯನ್ನೇ ಹಾಸ್ಯ ಮಾಡುವಂಥ ಸ್ಥಿತಿ ನಿರ್ಮಾಣವಾದಾಗ ಕಲಾವಿದನಿಗೆ ನಿರಾಸಕ್ತಿಯುಂಟಾಗುವುದು ಸಹಜ. ರಾಜಕಾರಣಿಗಳು ತಮ್ಮ ಘನತೆಯನ್ನು ಕಳೆದುಕೊಂಡು ಕೇವಲ ಪ್ರಚಾರಕ್ಕಾಗಿ ಹಾಸ್ಯಾಸ್ಪದವಾಗಿ ವರ್ತಿಸುವುದು ಪ್ರಜಾಪ್ರಭುತ್ವದ ದುರಂತ ಎಂದು ಅವರು ಭಾವಿಸಿದ್ದರು. ಲಕ್ಷ್ಮಣ್ ಅವರ 'ಕಾಮನ್ ಮ್ಯಾನ್' ಸದಾ ಮೌನವಾಗಿರುತ್ತಿದ್ದ. ಆತ ಎಲ್ಲವನ್ನೂ ಗಮನಿಸುವ ಪ್ರೇಕ್ಷಕ ಮಾತ್ರ. ರಾಜಕಾರಣಿಗಳು ಕಾರ್ಟೂನ್‌ಗಳಾದಾಗ ಈ ಸಾಮಾನ್ಯ ಮನುಷ್ಯನ ಸ್ಥಿತಿ ಗಂಭೀರವಾಯಿತು. ಸಮಾಜದಲ್ಲಿ ಗಂಭೀರ ಚರ್ಚೆಯಾಗಬೇಕಾದ ವಿಷಯಗಳು ಹಾಸ್ಯದ ವಸ್ತುವಾದಾಗ, ದೇಶದ ಭವಿಷ್ಯದ ಬಗ್ಗೆ ಕಾಳಜಿ ಹೊಂದಿದ್ದ ಲಕ್ಷ್ಮಣ್ ಅವರಿಗೆ ಕಾರ್ಟೂನ್ ಬಿಡಿಸುವುದು ಕೇವಲ ವೃತ್ತಿಯಾಗಿ ಉಳಿಯಲಿಲ್ಲ. ಅದು ಅರ್ಥಹೀನವೆನಿಸಲು ಶುರುವಾಯಿತು. ಕಾರ್ಟೂನ್ ಎನ್ನುವುದು ಬುದ್ಧಿವಂತರ ಆಟ. ಅದನ್ನು ಅರ್ಥಮಾಡಿಕೊಳ್ಳಲು ಮತ್ತು ಅದರಲ್ಲಿರುವ ಟೀಕೆಯನ್ನು ಸ್ವೀಕರಿಸಲು ಕನಿಷ್ಠ ಮಟ್ಟದ ಬೌದ್ಧಿಕ ಪ್ರೌಢಿಮೆ ಬೇಕು. ಆದರೆ ರಾಜಕೀಯ ಅತಿರೇಕಕ್ಕೆ ಹೋದಾಗ, ಅಲ್ಲಿ ತರ್ಕಕ್ಕಿಂತ ಅಸಂಬದ್ಧತೆಯೇ ಜಾಸ್ತಿಯಾದಾಗ ವ್ಯಂಗ್ಯಚಿತ್ರಕಾರ ಸೋಲುತ್ತಾನೆ. 'ರಾಜಕಾರಣಿಗಳು ತಾವೇ ಕಾರ್ಟೂನ್ ಆದರು' ಎಂಬ ಮಾತಿನ ಅರ್ಥ, ರಾಜಕೀಯದಲ್ಲಿ ಗಾಂಭೀರ್ಯ ನಾಪತ್ತೆಯಾಗಿದೆ ಮತ್ತು ಅದು ಕೇವಲ ಒಂದು ಪ್ರದರ್ಶನ ಕಲೆಯಾಗಿ ಬದಲಾಗಿದೆ ಎಂಬುದು. ಲಕ್ಷ್ಮಣ್ ಅವರು ತಮ್ಮ ವೃತ್ತಿಜೀವನದುದ್ದಕ್ಕೂ ಯಾರನ್ನೂ ವೈಯಕ್ತಿಕವಾಗಿ ದ್ವೇಷಿಸಲಿಲ್ಲ, ಅವರ ಟೀಕೆಗಳು ಯಾವಾಗಲೂ ವ್ಯವಸ್ಥೆಯ ಲೋಪದೋಷಗಳ ಮೇಲೆ ಇರುತ್ತಿದ್ದವು. ಆದರೆ ರಾಜಕಾರಣದಲ್ಲಿ ವ್ಯಕ್ತಿತ್ವಗಳೇ ಹಾಸ್ಯಾಸ್ಪದವಾಗಿ ಮಾರ್ಪಟ್ಟಾಗ, ಅವರಿಗೆ ವಿಷಯಗಳ ಕೊರತೆಗಿಂತ ಹೆಚ್ಚಾಗಿ 'ಗುಣಮಟ್ಟದ' ವಿಷಯಗಳ ಕೊರತೆ ಕಾಡಿತು. ಅತಿರೇಕವೇ ವಾಸ್ತವವಾದಾಗ, ಉತ್ಪ್ರೇಕ್ಷೆಗೆ ಅರ್ಥವಿರುವುದಿಲ್ಲ ಎಂಬುದು ಅವರ ಸಿದ್ಧಾಂತವಾಗಿತ್ತು.

ರಸ್ತೆಗಿಂತ ಆಕಾಶವೇ ಸುರಕ್ಷಿತ: ಗಗನಯಾನದ ಅಸಲಿ ಮುಖ

ವಿಮಾನಯಾನದಷ್ಟು ಸುರಕ್ಷಿತವಾದುದು ಯಾವುದೂ ಇಲ್ಲ. ಒಂದು ವಿಮಾನ ಬಿದ್ದ ಮಾತ್ರಕ್ಕೆ ನಮ್ಮ ಅಭಿಪ್ರಾಯವನ್ನೇ ಬದಲಿಸಿಕೊಳ್ಳಬೇಕಿಲ್ಲ. ಯಾವ ವಿಮಾನಯಾನ ಸಂಸ್ಥೆಯೂ ಸುರಕ್ಷತೆ ವಿಷಯದಲ್ಲಿ ನಿರ್ಲಕ್ಷ್ಯ ವಹಿಸುವುದಿಲ್ಲ ಅಥವಾ ರಾಜಿ ಮಾಡಿಕೊಳ್ಳುವುದಿಲ್ಲ. ಸುರಕ್ಷತೆ ಕಡೆಗಣಿಸಿದರೆ ಎಂಥ ಬೆಲೆ ತೆರಬೇಕಾಗುತ್ತದೆ ಎಂಬುದನ್ನು ಯಾವ ಏರ್ ಲೈನ್ಸ್‌ಗೂ ಉಪದೇಶ ಹೇಳಬೇಕಿಲ್ಲ. ಪಾಲಿಸಬೇಕಾದ ನಿಯಮಗಳ ಮೇಲ್ವಿಚಾರಣೆ ಮಾಡಲು ಸಾಕಷ್ಟು ಸಂಸ್ಥೆಗಳಿವೆ, ಹತ್ತಾರು ಕಣ್ಗಾವಲುಗಳಿವೆ.

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಏರ್ ಲೈನ್ಸ್ ಸಂಸ್ಥೆಗಳಲ್ಲಿ ಒಂದು ನಂಬಿಕೆಯಿದೆ. ಒಂದು ವಿಮಾನ ಅಪಘಾತ ಸಂಭವಿಸಿದರೆ, ಜಗತ್ತಿನೆಲ್ಲೆಡೆ ಇರುವ ವಿಮಾನ ಪ್ರಯಾಣಿಕರಲ್ಲಿ ಭೀತಿ ಹುಟ್ಟಿಕೊಳ್ಳುತ್ತದಂತೆ. ಜನ ವಿಮಾನ ಹತ್ತಲು ಹೆದರುತ್ತಾರಂತೆ. ಅಂಥವರು ತಿಂಗಳ ಮೊದಲೇ ಮಾಡಿದ ಬುಕಿಂಗ್‌ನ್ನು ರದ್ದುಪಡಿಸುತ್ತಾರಂತೆ. ಒಂದು ವಿಮಾನ ಬಿದ್ದ ಮಾತ್ರಕ್ಕೆ ಅಂಥ ನಿರ್ಧಾರ ತೆಗೆದುಕೊಳ್ಳಬೇಕಿಲ್ಲ ಎಂದರೂ ಕೇಳುವುದಿಲ್ಲ. ಅಂಥವರು ವಿಮಾನವನ್ನು ಕಂಡರೆ 'ಹಾರಾಡುವ ಶವಪೆಟ್ಟಿಗೆ' ಕಂಡವರಂತೆ ಭಯಭೀತರಾಗುತ್ತಾರೆ. ಈ ರೀತಿಯ ಸಮೂಹಸನ್ನಿ ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲವಂತೆ. ವಿಮಾನ ಪ್ರಯಾಣಕ್ಕೆ ಮಾತ್ರ ಇದು ಅತಿ ಹೆಚ್ಚು ಅನ್ವಯ.

ಮಲೇಶಿಯನ್ ಏರ್ ಲೈನ್ಸ್ ವಿಮಾನ ಅಪಘಾತಕ್ಕೀಡಾಗಿ ಒಂದು ವರ್ಷದವರೆಗೂ ಆ ವಿಮಾನವನ್ನು ಹತ್ತಲು ಜನ ಭಯಪಡುತ್ತಿದ್ದರು. ನಾನು ಮಲೇಶಿಯಾದ ಕೌಲಾಲಂಪುರದಿಂದ ಲಂಕಾವಿಗೆ ಹೋಗುವಾಗ, ಮಲೇಶಿಯನ್ ಏರ್ ಲೈನ್ಸ್ ವಿಮಾನ ಹತ್ತಬೇಕೆಂಬ ಕಾರಣದಿಂದ ಸ್ನೇಹಿತರೊಬ್ಬರು ನನ್ನೊಂದಿಗೆ ಬರಲಿಲ್ಲ. ಇಂದಿಗೂ ಅವರು ಆ ಏರ್ ಲೈನ್ಸ್ ಅಂದ್ರೆ, ಭಯಬೀಳುತ್ತಾರೆ. ಹಿಂದಿನ ವರ್ಷ ಏರ್ ಇಂಡಿಯಾ ವಿಮಾನ ಬಿದ್ದ ನಂತರ ಆ ವಿಮಾನಯಾನ ಸಂಸ್ಥೆಗೆ ಸೇರಿದ ವಿಮಾನವೇರಲು ಬಹಳ ಜನ ಹೆದರುತ್ತಿದ್ದರು. ಶೇ.ಅರವತ್ತರಷ್ಟು ಬುಕಿಂಗ್ಸ್ ರದ್ದಾಯಿತು. ಈ ಮಧ್ಯೆ, ಒಂದಾದ ನಂತರ ಒಂದರಂತೆ ಹತ್ತಕ್ಕೂ ಹೆಚ್ಚು ವಿಮಾನಗಳಲ್ಲಿ ತಾಂತ್ರಿಕ ದೋಷ ಕಂಡು ಬಂದು ಮತ್ತಷ್ಟು ಗಾಬರಿಪಟ್ಟರು.

ಬಸ್ಸು ಕಂದಕಕ್ಕೆ ಬಿದ್ದರೆ, ಯಾರೂ ಬಸ್ ಹತ್ತದೇ ಇರುವುದಿಲ್ಲ. ರೈಲು ದುರಂತವಾದರೆ, ರೈಲಿನಲ್ಲಿ ಹೋಗಲು ಭಯಪಡುವುದಿಲ್ಲ. ಹಾಗೆ ಕಾರು ಅಪಘಾತ ಸುದ್ದಿ ಓದಿದವರು ಆರಾಮಾಗಿ ಕಾರು ಓಡಿಸಿಕೊಂಡು ಹೋಗುತ್ತಾರೆ. ಆದರೆ ಈ ಮಾತು ವಿಮಾನ ದುರಂತಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಯಾವ ವಿಮಾನಯಾನ ಸಂಸ್ಥೆಯೂ ಸುರಕ್ಷತೆ ವಿಷಯದಲ್ಲಿ ನಿರ್ಲಕ್ಷ್ಯ ವಹಿಸುವುದಿಲ್ಲ ಅಥವಾ ರಾಜಿ ಮಾಡಿಕೊಳ್ಳುವುದಿಲ್ಲ. ಸುರಕ್ಷತೆ ವಿಷಯದಲ್ಲಿ ಕಡೆಗಣನೆ ಮಾಡಿದರೆ ಅದಕ್ಕೆ ಎಂಥ ಬೆಲೆ ತೆರಬೇಕಾಗುತ್ತದೆ ಎಂಬುದನ್ನು ಯಾವ ಏರ್ ಲೈನ್ಸ್‌ಗೂ ಉಪದೇಶ ಹೇಳಬೇಕಿಲ್ಲ. ಅದಕ್ಕಿಂತ ಹೆಚ್ಚಾಗಿ, ಸುರಕ್ಷತೆ ವಿಷಯದಲ್ಲಿ ಪಾಲಿಸಬೇಕಾದ ನಿಯಮಗಳ ಮೇಲ್ವಿಚಾರಣೆ ಮಾಡಲು ಸಾಕಷ್ಟು ಸಂಸ್ಥೆಗಳಿವೆ, ಹತ್ತಾರು ಕಣ್ಗಾವಲುಗಳಿವೆ. ಅವು ಕಾಲಕಾಲಕ್ಕೆ ಏರ್ ಲೈನ್ಸ್ ಸಂಸ್ಥೆಗಳನ್ನು ಎಚ್ಚರಿಸುತ್ತಲೇ ಇರುತ್ತವೆ. ವಿಮಾನ ತಯಾರಿಕಾ ಸಂಸ್ಥೆಗಳೂ ಸುರಕ್ಷತೆ ನಿರ್ವಹಣೆ ವಿಷಯದಲ್ಲಿ ಒಂದು ಕಣ್ಣಿಟ್ಟಿರುತ್ತವೆ. ಒಂದು ಸಣ್ಣ ಲೋಪ ಕಂಡು ಬಂದರೂ ಅದು ಅಂತಾರಾಷ್ಟ್ರೀಯ ಸುದ್ದಿಯಾಗುತ್ತದೆ ಎಂಬುದು ಏರ್ ಲೈನ್ಸ್ ಸಂಸ್ಥೆಗಳಿಗೆ ಗೊತ್ತಿಲ್ಲದ ಸಂಗತಿಯೇನೂ ಅಲ್ಲ. ಅಂಥ ಸಣ್ಣ-ಪುಟ್ಟ ಘಟನೆಗಳಾದಾಗ ಜನರ ಪ್ರತಿಕ್ರಿಯೆ ಉಗ್ರವಾಗಿರುತ್ತವೆ. ಇದರಿಂದ ಸ್ವಾಭಾವಿಕವಾಗಿ ಪ್ರಯಾಣಿಕರು ಗಾಬರಿಯಿಂದ ಕಲ್ಲವಿಲರಾಗುತ್ತಾರೆ. ಹೀಗಾಗಿ ಎಲ್ಲ ಏರ್ ಲೈನ್ಸ್‌ಗಳೂ ಸುರಕ್ಷತೆ, ನಿರ್ವಹಣೆ, ಭದ್ರತೆ ವಿಷಯದಲ್ಲಿ ನಿರ್ದಿಷ್ಟ ಮಾನದಂಡಗಳಿಗೆ ಬದ್ಧವಾಗಿರುತ್ತವೆ. ಈ ವಿಷಯದಲ್ಲಿ ಯಾರೂ ಉಪೇಕ್ಷೆ ಮಾಡುವುದಿಲ್ಲ. ಎಲ್ಲಸಲ ಅಪಘಾತಕ್ಕೆ ನಾವೊಂದೇ ಕಾರಣರಾಗಿರುವುದಿಲ್ಲ. ಬೇರೆಯವರ ಅಜಾಗರೂಕತೆಯೂ ದುರಂತಕ್ಕೆ ಕಾರಣವಾಗಬಹುದು. ಮೂವತ್ತು ವರ್ಷಗಳ ಸೇವೆಯಲ್ಲಿ ಒಂದೂ ಅಪಘಾತ ಮಾಡದಿರುವುದಕ್ಕೆ ಪ್ರಶಸ್ತಿ ಪಡೆದ ಚಾಲಕ, ಆ ದಿನ ಮನೆಗೆ ಮರಳುವಾಗ ಅಪಘಾತ ಮಾಡಬಹುದು. ಇಲ್ಲಿ ಅನುಭವವೊಂದೇ ಲೆಕ್ಕಕ್ಕೆ ಬರುವುದಿಲ್ಲ.

ಇಷ್ಟಾಗಿಯೂ ಹೇಳುತ್ತೇನೆ, ವಿಮಾನಯಾನದಷ್ಟು ಸುರಕ್ಷಿತವಾದುದು ಯಾವುದೂ ಇಲ್ಲ. ಒಂದು ವಿಮಾನ ಬಿದ್ದ ಮಾತ್ರಕ್ಕೆ ನಮ್ಮ ಅಭಿಪ್ರಾಯವನ್ನೇ ಬದಲಿಸಿಕೊಳ್ಳಬೇಕಿಲ್ಲ. ಈ ಮಾತಿಗೆ ಪುಷ್ಟಿ ನೀಡಬೇಕೆಂದರೆ ನಿಮಗೆ ಒಂದಿಷ್ಟು ವಿಷಯ, ಮಾಹಿತಿ ನೀಡಬೇಕು.

2023ನೇ ವರ್ಷವು ವಿಮಾನ ಪ್ರಯಾಣದಲ್ಲಿ ದಾಖಲೆ ಮಾಡಿದ ವರ್ಷ. ಆ ವರ್ಷ ಅತಿ ಹೆಚ್ಚು ಜನ ವಿಮಾನ ಪಯಣ ಮಾಡಿದರು. ಅದೊಂದೇ ವರ್ಷ ಜಗತ್ತಿನೆಲ್ಲೆಡೆ 37 ದಶಲಕ್ಷ ವಿಮಾನಗಳು ಟೇಕಾಫ್ ಮತ್ತು ಲ್ಯಾಂಡ್ ಆದವು. ಗಮನಾರ್ಹ ಸಂಗತಿ ಅಂದ್ರೆ, ಇದು ಅತ್ಯಂತ ಸುರಕ್ಷಿತ ವರ್ಷವೂ ಆಗಿತ್ತು. ನೇಪಾಳದಲ್ಲಿ ಕೇವಲ ಒಂದು ಪ್ರೊಪೆಲ್ಲರ್ ಜೆಟ್ ಅಪಘಾತಕ್ಕೀಡಾಗಿ 72 ಜನರು ಸಾವನ್ನಪ್ಪಿದ್ದನ್ನು ಹೊರತುಪಡಿಸಿದರೆ, ಆ ವರ್ಷ ಯಾವುದೇ ಮಾರಕ ಅಪಘಾತಗಳು ಸಂಭವಿಸಲಿಲ್ಲ. ಇದನ್ನು ಗಮನಿಸಿದರೆ, ವಾಣಿಜ್ಯ ವಿಮಾನದಲ್ಲಿ ಪ್ರಯಾಣಿಕರು ಸಾಯುವ ಸಾಧ್ಯತೆ ಸರಿಸುಮಾರು 13.7 ದಶಲಕ್ಷಕ್ಕೆ ಒಂದು! ಇದು ಹೆಚ್ಚು-ಕಮ್ಮಿ ನಗಣ್ಯ ಅಂತಾನೇ ಹೇಳಬೇಕು. ರಸ್ತೆ ಅಪಘಾತಕ್ಕೆ ಹೋಲಿಸಿದರೂ, ಇದು ನಗಣ್ಯವೇ. ರಸ್ತೆಗಳಲ್ಲಿ ಪ್ರತಿ ಐದು ಸಾವಿರ ಪ್ರಯಾಣದಲ್ಲಿ ಒಂದು ಅಪಘಾತವಾಗುತ್ತದೆ. ಅಂದರೆ ಪ್ರತಿದಿನದಂತೆ 1,03,239 ವರ್ಷ ವಿಮಾನದಲ್ಲಿ ಪ್ರಯಾಣಿಸಿದರೆ ಒಂದು ಅಪಘಾತವಾಗಬಹುದು. ಆದರೆ ರಸ್ತೆಗಳಲ್ಲಿ ಸೀಟ್ ಬೆಲ್ಟ್ ಕಟ್ಟಿಕೊಳ್ಳದೇ, ರಸ್ತೆ ನಿಯಮ ಪಾಲಿಸದೇ, ಬೇರೆಯವರನ್ನು ಸಾಯಿಸಲು ಲೈಸೆನ್ಸ್ ಪಡೆದವರಂತೆ ಹುಚ್ಚರಂತೆ ವಾಹನ ಓಡಿಸುವವರನ್ನು ನಿತ್ಯವೂ ನೋಡಬಹುದು.



ಇಂದು ವಾಣಿಜ್ಯ ವಿಮಾನ ಪ್ರಯಾಣವು ನಿರ್ವಿವಾದವಾಗಿ ಸುರಕ್ಷಿತವಾಗಿದೆ. ಐವತ್ತೈದು ವರ್ಷಗಳ ಹಿಂದಕ್ಕೆ ಹೋಗಿ ವಿಮಾನ ಪ್ರಯಾಣವನ್ನು ನೋಡೋಣ. 1970ರಲ್ಲಿ ಬೋಯಿಂಗ್ 747 ತನ್ನ ಸೇವೆಯನ್ನು ಪ್ರಾರಂಭಿಸಿತು. ಅದು ವೈಡ್‌ಬಾಡಿ ಪ್ರಯಾಣದ ಇನ್ನೂ ಹೆಚ್ಚು ಐಷಾರಾಮಿ ಯುಗಕ್ಕೆ ನಾಂದಿ ಹಾಡಿತು. ಕೇವಲ 9.5 ದಶಲಕ್ಷ ವಿಮಾನಗಳಲ್ಲಿ, 78 ಮಾರಕ ಅಪಘಾತಗಳು ಸಂಭವಿಸಿದವು. ಆ ವರ್ಷ 1,475 ಪ್ರಯಾಣಿಕರು ಸತ್ತರು. ಅಂದರೆ ಪ್ರತಿ 122,000 ಪ್ರಯಾಣದಲ್ಲಿ ಒಂದು ಸಾವು ಸಂಭವಿಸಿತ್ತು. ಇದು ಇಂದಿನ ರಸ್ತೆ ಚಾಲನೆಗಿಂತ ಎಷ್ಟೋ ಪಾಲು ಉತ್ತಮವಾಗಿದೆ. ಆ ವರ್ಷ 78 ಅಪಹರಣ (ಹೈಜಾಕ್)ಗಳು ಮತ್ತು ಆ ಘಟನೆಗಳಿಂದ ಏಳು ಸಾವುಗಳು ಸಂಭವಿಸಿದ್ದವು. ಆ ದಿನಗಳಲ್ಲಿ ವಿಮಾನ ಅಪಹರಣಗಳು ಸಾಮಾನ್ಯವಾಗಿದ್ದವು.

ಇಂದು ವಿಮಾನಯಾನ ತಂತ್ರಜ್ಞಾನ ಊಹೆಗೂ ಮೀರಿದ ಪ್ರಗತಿ ಮತ್ತು ಅಭಿವೃದ್ಧಿಯನ್ನು ಸಾಧಿಸಿದೆ. ಸುರಕ್ಷತೆ ಮತ್ತು ಭದ್ರತೆ ಜತೆಗೆ ಆರಾಮ (Comfort)ಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಒಂದು ದಿನದಲ್ಲಿ ಜಗತ್ತಿನ ಯಾವ ದೇಶವನ್ನಾದರೂ ತಲುಪುವುದು ಸಾಧ್ಯವಾಗಿದೆ. ವಿಮಾನ ಪ್ರಯಾಣಿಕರಿಗೆ ಸಮಯ ಅಂದ್ರೆ ಆಸ್ತಿ. ಆಧುನಿಕ ಜೆಟ್‌ಗಳು ಜಗತ್ತಿನಾದ್ಯಂತ ಹೆಚ್ಚು ಪರಿಣಾಮಕಾರಿಯಾಗಿ ಸಂಚರಿಸುತ್ತಿವೆ. ಇಂದು ವಿಶ್ವದ ಅತಿ ದೀರ್ಘ ತಡೆರಹಿತ ಹಾರಾಟವೆಂದರೆ ಸಿಂಗಾಪುರದಿಂದ ನ್ಯೂಯಾರ್ಕ್‌ಗೆ (JFK) ವಿಶೇಷವಾಗಿ ವಿನ್ಯಾಸಗೊಳಿಸಲಾದ ಮತ್ತು ಶಾಂತವಾದ ಏರ್‌ಬಸ್ A350-900ULRನಲ್ಲಿ 9,537 ಮೈಲುಗಳಷ್ಟು ದೂರದ ಬೆರಗುಗೊಳಿಸುವ ಹಾರಾಟ. 1977ರಲ್ಲಿ ಸಿಂಗಾಪುರ್ ಏರ್ ಲೈನ್ಸ್ ಮೊದಲು ಅಮೆರಿಕಕ್ಕೆ ಹಾರಲು ಆರಂಭಿಸಿದಾಗ, ಸ್ಯಾನ್ ಫ್ರಾನ್ಸಿಸ್ಕೋ ತಲುಪುವ ಮೊದಲು ಮತ್ತು ನ್ಯೂಯಾರ್ಕ್ ನಗರಕ್ಕೆ ಹಾಂಗ್ ಕಾಂಗ್, ಗುವಾಮ್ ಮತ್ತು ಹೊನೊಲುಲು ಮೂಲಕ ಹಾರಬೇಕಾಗಿತ್ತು.

ಕೆಲವು ವಿಮಾನಗಳಲ್ಲಿನ ಬಿಜಿನೆಸ್ ಮತ್ತು ಫಸ್ಟ್ ಕ್ಲಾಸ್, ಮೂವತ್ತೆಂಟು ಸಾವಿರ ಅಡಿ ಎತ್ತರದಲ್ಲಿ ಪಂಚತಾರಾ ಹೋಟೆಲಿಗಿಂತ ಉತ್ತಮ ಸೌಲಭ್ಯ ಮತ್ತು ಆಹ್ಲಾದಕರ ವ್ಯವಸ್ಥೆಯನ್ನು ನೀಡುವುದನ್ನು ಊಹಿಸಲೂ ಸಾಧ್ಯವಿಲ್ಲ. ನಿಮ್ಮ ಆಫೀಸಿನಲ್ಲಿ, ಮನೆಯಲ್ಲಿ ಇರುವುದಕ್ಕಿಂತ comfort ಆಗಿ ವಿಮಾನದಲ್ಲಿ ಇರಬಹುದು. ಈಗಿನ ವಿಮಾನಗಳಲ್ಲಿ ವೈ-ಫೈ ಸೌಲಭ್ಯವಿರುವುದರಿಂದ, ನೀವು ವಿಮಾನದಲ್ಲಿರಲಿ, ಆಫೀಸಿನಲ್ಲಿರಲಿ, ಹೆಚ್ಚು ವ್ಯತ್ಯಾಸವಿಲ್ಲ. ಆಫೀಸಿನಲ್ಲಿ ಮಾಡುವ ಎಲ್ಲ ಕೆಲಸಗಳನ್ನು, ವಿಮಾನದಲ್ಲೂ ಮಾಡಬಹುದು. ಮೊನ್ನೆ ನಾನು ಫಿಲಿಫೈನ್ಸ್‌ನ ರಾಜಧಾನಿ ಮನಿಲಾದಿಂದ ಸಿಂಗಾಪುರ ಮಾರ್ಗವಾಗಿ ಬೆಂಗಳೂರಿಗೆ ಬರುವಾಗ, ಭಾನುವಾರದ ನನ್ನ ಎರಡು ಅಂಕಣ (ಪತ್ರಿಕೆಯಲ್ಲಿ ಇಡೀ ಪುಟಕ್ಕಾಗುವಷ್ಟು) ಗಳನ್ನು ವಿಮಾನದಲ್ಲಿಯೇ ಬರೆದು, ಬೆಂಗಳೂರಿನಲ್ಲಿ ಲ್ಯಾಂಡ್ ಆಗುವ ಮುನ್ನವೇ, ಡೆಡ್ ಲೈನ್ ಒಳಗೆ ಆಫೀಸಿಗೆ ಕಳಿಸಿದ್ದೆ.

ಇಂದು ವಿಮಾನಗಳು ಹೆಚ್ಚು ಪರಿಣಾಮಕಾರಿ ಮತ್ತು ಸುರಕ್ಷಿತವಾಗಿವೆ ಮಾತ್ರವಲ್ಲದೆ, ಅವು 'ಹಳೆಯ ದಿನಗಳಿಗಿಂತ' ಉತ್ತಮ ಪ್ರಯಾಣ ಅನುಭವಗಳನ್ನು ಒದಗಿಸುತ್ತವೆ. ಇಂದಿನ ವಿಮಾನಗಳು ಹೆಚ್ಚು ನಿಶ್ಯಬ್ದವಾಗಿವೆ. (ಇದು ಸ್ವತಃ ಆರೋಗ್ಯಕರವಾಗಿದೆ. ಏಕೆಂದರೆ ಹೆಚ್ಚಿನ ಅಧ್ಯಯನಗಳು ಅತಿಯಾದ ಶಬ್ದವನ್ನು ಆರೋಗ್ಯಕ್ಕೆ ಅಪಾಯಕಾರಿ ಅಂಶವೆಂದು ಸೂಚಿಸುತ್ತವೆ). ಹೆಚ್ಚಿನ ಅಂತರಖಂಡ ಜೆಟ್‌ಗಳು ಈಗ ಹಾಸಿಗೆಗಳನ್ನು ಹೊಂದಿವೆ. ಕೆಲವು ವಿಮಾನಗಳು 19 ಗಂಟೆಗಳಿಗಿಂತ ಹೆಚ್ಚು ಕಾಲ ನಿರಂತರವಾಗಿ ಹಾರಿದರೂ, ನಿರಾತಂಕವಾಗಿ, ಆರಾಮವಾಗಿ ಪಯಣದ ಸುಖವನ್ನು ಅನುಭವಿಸಬಹುದು.

ಆಧುನಿಕ ಬಿಜಿನೆಸ್ ಮತ್ತು ಪ್ರಥಮ ದರ್ಜೆಯ ಸೂಟ್‌ಗಳಲ್ಲಿರುವ ರೆಕ್ಲೈನರ್‌ಗಳು ಈಗ ಗರಿಷ್ಠ ವಿಶ್ರಾಂತಿ ಸುಖವನ್ನು ನೀಡಬಲ್ಲವು. ಪ್ರಥಮ ದರ್ಜೆ ಪ್ರಯಾಣಿಕರು ಗೌಪ್ಯ ಕೋಣೆ, ವೇಗದ ವೈ-ಫೈ ಮತ್ತು ಲೆಕ್ಕವಿಲ್ಲದಷ್ಟು ಗಂಟೆಗಳ ಚಲನಚಿತ್ರಗಳನ್ನು ವೀಕ್ಷಿಸಬಹುದಾಗಿದೆ. ಫಸ್ಟ್ ಕ್ಲಾಸ್ ಪ್ರಯಾಣಿಕರಾದರೆ, ಇಪ್ಪತ್ತು ನಿಮಿಷಗಳ ಕಾಲ ವಿಮಾನದಲ್ಲಿಯೇ ಸ್ನಾನ (ಶವರ್)ವನ್ನೂ ಮಾಡಬಹುದು. ಕೆಲವು ಆಧುನಿಕ ಜೆಟ್‌ಗಳು ಆನ್-ಬೋರ್ಡ್ ಬಾರ್‌ಗಳನ್ನು ಸಹ ಹೊಂದಿವೆ. ಇಂದಿನ ಎಕಾನಮಿ ಕ್ಲಾಸ್ ಅನುಭವವು ಕಡಿಮೆ ಆಕರ್ಷಕವಾಗಿದೆ ಎಂಬುದನ್ನು ಒಪ್ಪಿಕೊಳ್ಳಬೇಕು. ಆದರೆ 1970ರ ಎಕಾನಮಿ ಕ್ಲಾಸ್ ಅನ್ನು ಇಂದಿನ ಬೆಲೆಗೆ ಹೋಲಿಸಲಾಗುವುದಿಲ್ಲ. ಏಕೆಂದರೆ ಅಂದಿನ ಎಕಾನಮಿ ಕ್ಲಾಸ್ ಬೆಲೆಯು ಇಂದಿನ ಮೊದಲ ದರ್ಜೆಯಷ್ಟಿತ್ತು. ಪ್ರಸ್ತುತ ಪ್ರಯಾಣದ ಆಯ್ಕೆಗಳಲ್ಲಿ ಬೆಲೆ ನಿಗದಿಯೂ ಒಂದು ಪ್ರಮುಖ ಅಂಶ. ಆ ದಿನಗಳಲ್ಲಿ ಸರಾಸರಿಯಾಗಿ, ರೌಂಡ್-ಟ್ರಿಪ್ ದೇಶೀಯ ವಿಮಾನಯಾನಕ್ಕೆ ಸರಾಸರಿ ವಾರ್ಷಿಕ ಸಂಬಳದ ಶೇ. ಐದರಷ್ಟು ವೆಚ್ಚವಾಗುತ್ತಿತ್ತು. ಆದರೆ ಈಗ ಅದು ಶೇ. ಒಂದರ ಅರ್ಧದಷ್ಟು.

ಇಂದು ಶೇ. 90ರಷ್ಟು ಅಮೆರಿಕನ್ನರು ವಿಮಾನ ಪ್ರಯಾಣವನ್ನೇ ನೆಚ್ಚಿಕೊಂಡಿದ್ದಾರೆ. 1971ರಲ್ಲಿ, ಅದು ಕೇವಲ ಶೇ. 49ರಷ್ಟು ಆಗಿತ್ತು. ನಗದು ರೂಪದಲ್ಲಿ ಪಾವತಿಸುವಾಗ ವಿಮಾನ್ ಟಿಕೆಟ್ ಕಾಯ್ದಿರಿಸುವುದು ಹೆಚ್ಚು ಕೈಗೆಟುಕುತ್ತದೆ. ಹಣದುಬ್ಬರಕ್ಕೆ ಸರಿ ಹೊಂದಿಸಿದಾಗ, 2024ರಲ್ಲಿ ಅಮೆರಿಕದ ದೇಶೀಯ ವಿಮಾನ ಪ್ರಯಾಣದ ವೆಚ್ಚವು 2000ದಿಂದ ಶೇ.28.3ರಷ್ಟು ಕಡಿಮೆಯಾಗಿದೆ. 2010ರಿಂದ ಇಂದಿನವರೆಗಿನ ದಿನವನ್ನು ವಿಮಾನ ಪ್ರಯಾಣದ 'ಪ್ಲಾಟಿನಂ ಯುಗ' ಎಂದು ಹೇಳಬಹುದು. ಕ್ರೆಡಿಟ್ ಕಾರ್ಡ್‌ಗಳ ಪ್ರಸರಣವು ವಿಶ್ವದ ಅತ್ಯಂತ ಮೌಲ್ಯಯುತ ಕರೆನ್ಸಿಗಳಲ್ಲಿ ಒಂದನ್ನಾಗಿ ಮಾಡಿದ್ದರಿಂದ ವಿಮಾನಯಾನ ಉದ್ಯಮಕ್ಕೆ ನಿರ್ಣಾಯಕ ಆದಾಯದ ಮೂಲವನ್ನಾಗಿ ಮಾಡಿದ ಅಭೂತಪೂರ್ವ ಕಾಲ ಎಂದು ಹೇಳಬಹುದು.

ಈ ಯುಗವು ವ್ಯವಸ್ಥೆಯಿಂದ ಹೇಗೆ ಗರಿಷ್ಠ ಪ್ರಯೋಜನ ಪಡೆಯಬೇಕೆಂದು ತಿಳಿದಿರುವ ಹೊಸ ಪೀಳಿಗೆಯ ವಿಜೇತರನ್ನು ಸೃಷ್ಟಿಸಿತು. ಬುದ್ಧಿವಂತ ಗ್ರಾಹಕರು ತಮ್ಮ ಉತ್ತಮ ಕ್ರೆಡಿಟ್ ಅನ್ನು ಬಳಸಿಕೊಂಡು ಕಡಿಮೆ ವೆಚ್ಚದಲ್ಲಿ ಜಗತ್ತಿನೆಲ್ಲೆಡೆ ಪ್ರಯಾಣಿಸಬಹುದು ಎಂಬುದನ್ನು ಕಂಡುಕೊಂಡರು. ಉದ್ಯಮಶೀಲ ಕಾಲೇಜು ವಿದ್ಯಾರ್ಥಿಗಳು ಆರ್ಥಿಕತೆಯ ಕೊನೆಯ ಸಾಲಿನಲ್ಲಿರುವ ತಮ್ಮ ಸಹಪಾಠಿಗಳಿಗಿಂತ ಕಡಿಮೆ ಹಣದಲ್ಲಿ ವಿದೇಶದಲ್ಲಿ ಅಧ್ಯಯನ ಮಾಡಲು ಪ್ರಥಮ ದರ್ಜೆಯಲ್ಲಿ ಪಯಣಿಸುವ ಚಮತ್ಕಾರದ ಸಾಧ್ಯತೆ ಕಂಡುಕೊಂಡರು. ಪಾಯಿಂಟ್‌ಗಳ ಆರ್ಥಿಕತೆಯು ಅದನ್ನು ಇನ್ನಷ್ಟು ಸಮಾನಗೊಳಿಸಿತು. ಮೈಲುಗಳು ಮತ್ತು ಪಾಯಿಂಟ್‌ಗಳನ್ನು ಪಡೆದುಕೊಳ್ಳುವ ಅವಕಾಶಗಳು ಹೆಚ್ಚಾದವು. ಇದರಿಂದ ವಿಮಾನ ದರಗಳು ಗಣನೀಯವಾಗಿ ಕುಸಿದವು. ಪ್ರಯಾಣದ ಸುವರ್ಣ ಯುಗದಲ್ಲಿ ಶ್ರೀಮಂತರು ಮಾತ್ರ ಪಯಣಿಸಬಹುದಾದ ಸಮಯಕ್ಕಿಂತ ಭಿನ್ನವಾಗಿ, ಪ್ಲಾಟಿನಂ ಯುಗದಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಜನರನ್ನು ಒಳಗೊಂಡಿತು. ವಿದೇಶಗಳಿಗೆ ವಿಮಾನದಲ್ಲಿ ಪಯಣಿಸುವುದು ಈ ಜನ್ಮದಲ್ಲಿ ಸಾಧ್ಯವಿಲ್ಲವೇನೋ ಎಂದು ಭಾವಿಸಿದವರ ಕನಸುಗಳು ಅವರು ನಿರೀಕ್ಷಿಸಿದ್ದಕ್ಕಿಂತ ಮುಂಚೆಯೇ ಈ ಜನ್ಮದಲ್ಲಿಯೇ ನನಸಾದವು.

ಮುಂದಿನ ಐದು ವರ್ಷಗಳಲ್ಲಿ ವಿಮಾನಯಾನ, ಕಳೆದ ಮೂವತ್ತು ವರ್ಷಗಳಲ್ಲಿ ಕಾಣದ ಸುಧಾರಣೆಗಳನ್ನು ಕಾಣಲಿದೆ. ಒಂದು ಅಪಘಾತದಿಂದ ನಾವು ಧೃತಿಗೆಡಬಾರದು. ಅಪಘಾತದಿಂದ ಹೆಚ್ಚು ಘಾಸಿಯಾಗುವವರು ವಿಮಾನಯಾನ ಸಂಸ್ಥೆಗಳು ಹಾಗೂ ವಿಮಾ ಕಂಪನಿಗಳು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅಷ್ಟಕ್ಕೂ ವಿಮಾನ ಅಪಘಾತಗಳ ಬಗ್ಗೆ ಯೋಚಿಸಿದಾಗಲೆಲ್ಲ ಅದ್ಯಾವನೋ ಹೇಳಿದ ಒಂದು ಮಾತು ಮತ್ತೆ ಮತ್ತೆ ನೆನಪಾಗುತ್ತದೆ – If black boxes survive air crashes & why don't they make the whole plane out of that stuff?

ಅಮಿತ್ ಶಾ ಹೆಣೆದ ರಣವ್ಯೂಹ, ಮಂಡಿಯೂರಿದ ದೀದಿ!

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮತ್ತೊಮ್ಮೆ ತಾನು ಆಧುನಿಕ ಭಾರತದ ಚಾಣಕ್ಯ ಎಂಬುದನ್ನು ಸಾಬೀತುಪಡಿಸಿದ್ದಾರೆ. ಬಂಗಾಳದಲ್ಲಿ ಮಮತಾ ಸರಕಾರವನ್ನು ಕಿತ್ತೊಗೆದು ಬಿಜೆಪಿಯನ್ನು ಅಧಿಕಾರಕ್ಕೆ ತರುವುದಾಗಿ ಅವರು 2014ರಲ್ಲೇ ಶಪಥ ಮಾಡಿದ್ದರು. ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಜೋಡಿ ನಿಜಕ್ಕೂ ಅಸಾಮಾನ್ಯವಾಗಿದೆ. ಗೆಲವಿನ ಮೇಲೆ ಗೆಲವು ಸಿಗುತ್ತಿದ್ದರೂ ಅವರು ವಿಶ್ರಾಂತಿ ತೆಗೆದುಕೊಳ್ಳುತ್ತಿಲ್ಲ. ಅದರ ಬದಲಿಗೆ, ಒಂದು ರಾಜ್ಯವನ್ನು ಗೆದ್ದ ತಕ್ಷಣ ಇನ್ನೊಂದು ರಾಜ್ಯದ ಗೆಲವಿಗೆ ಯೋಜನೆ ಆರಂಭಿಸುತ್ತಿದ್ದಾರೆ.

ಸಂಗತ

ಡಾ. ವಿಜಯ್ ದರಡಾ
vveditoped@gmail.com

ಕಳೆದ ಮೂರ್ನಾಲ್ಕು ತಿಂಗಳಲ್ಲಿ ನಾನು ಭೇಟಿಯಾದ ಪ್ರತಿಯೊಬ್ಬ ಬಿಜೆಪಿಯೇತರ ನಾಯಕರೂ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅಲಿಯಾಸ್ ದೀದಿಯನ್ನು ಸೋಲಿಸುವುದು ಬಹಳ ಅಂದರೆ ಬಹಳ ಕಷ್ಟ ಎಂದೇ ಹೇಳುತ್ತಿದ್ದರು. ಬಂಗಾಳದಲ್ಲಿ ವೋಟುಗಳಿಸಲು ಬೇಕಾದ ಪ್ರತಿಯೊಂದು ರಾಜಕೀಯ ತಂತ್ರಗಾರಿಕೆಯೂ ಮಮತಾಗೆ ಕರಗತವಾಗಿದೆ, ಮನವೊಲಿಕೆಯಿಂದ ಹಿಡಿದು ದಬಾವಣೆಯ ತನಕ ಎಲ್ಲ ರೀತಿಯ ರಣತಂತ್ರಗಳನ್ನೂ ಆಕೆ ಬಳಸುತ್ತಾರೆ, ಬಂಗಾಳದ ನಾಡಿಮಿಡಿತವೇ ಅವರ ನಿಯಂತ್ರಣದಲ್ಲಿದೆ ಎಂದು ಹೇಳುತ್ತಿದ್ದರು. ಕೆಲ ಬಿಜೆಪಿ ನಾಯಕರು ಕೂಡ ಗುಟ್ಟಾಗಿ ಈ ಬಾರಿ ದೀದಿಯೇ ಗೆಲ್ಲುವ ಸಾಧ್ಯತೆಯಿದೆ ಎಂದು ಹೇಳಿದ್ದರು. ಆದರೂ ನನ್ನ ಲೆಕ್ಕಾಚಾರ ಭಿನ್ನವಾಗಿತ್ತು. ಈ ಬಾರಿ ಅಮಿತ್ ಶಾ ಹೆಣೆದ ಸಂಕೀರ್ಣವಾದ ರಾಜಕೀಯ ತಂತ್ರಗಾರಿಕೆಯನ್ನು ಭೇದಿಸುವುದು ಮಮತಾಗೆ ಸುಲಭವಿಲ್ಲ ಎಂದೇ ನಾನು ನಂಬಿದ್ದೆ. ಪಶ್ಚಿಮ ಬಂಗಾಳದಲ್ಲಿ ರೋಡ್‌ಶೋ ನಡೆಸಿ ವಾಪಸಾದ ಬಳಿಕ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಕೂಡ, 'ಈ ಬಾರಿ ಬಂಗಾಳದಲ್ಲಿ ಬಿಜೆಪಿ 200ಕ್ಕೂ ಹೆಚ್ಚು ಸ್ಥಾನ ಪಡೆದರೆ ಆಶ್ಚರ್ಯ ಪಡಬೇಕಿಲ್ಲ' ಎಂದು ಹೇಳಿದ್ದರು.

ಕೊಲ್ಕತ್ತಾ ಹಾಗೂ ಪಶ್ಚಿಮ ಬಂಗಾಳದಾದ್ಯಂತ ಇರುವ ಕೆಲ ನನ್ನ ಸ್ನೇಹಿತರ ಜತೆಗೆ ಚುನಾವಣೆಯುದ್ದಕ್ಕೂ ಸಂಪರ್ಕದಲ್ಲಿದ್ದೆ. ಅವರೆಲ್ಲರೂ ಈ ಬಾರಿ ಹೆಚ್ಚುಕಮ್ಮಿ ಇದೇ ಮಾತು ಹೇಳುತ್ತಿದ್ದರು, ತೃಣಮೂಲ ಕಾಂಗ್ರೆಸ್‌ನ ತೋಳ್ಬಲ ಹಾಗೂ ದಾದಾಗಿರಿಯನ್ನು ಮಟ್ಟಹಾಕಿದರೆ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಕೊನೆಗೆ ಆಗಿದ್ದು ಕೂಡ ಅದೇ. ಅಮಿತ್ ಶಾ ಎಷ್ಟು ಬಿಗಿಯಾಗಿ ಪಶ್ಚಿಮ ಬಂಗಾಳದ ರಾಜಕೀಯ ಹಿಂಸಾಚಾರಕ್ಕೆ ಕಡಿವಾಣ ಹಾಕಿದರು ಅಂದರೆ, ಚುನಾವಣೆ ಮುಗಿಯುವವರೆಗೂ ತೃಣಮೂಲ ಕಾಂಗ್ರೆಸ್‌ನ ಕುಸ್ತಿಪಟುಗಳು ತಮ್ಮ ಬಿಲದಿಂದ ಹೊರಬರುವುದಕ್ಕೇ ಆಗದೆ ಒದ್ದಾಡಿದರು.

ಇಡೀ ರಾಜ್ಯದಲ್ಲಿ ಯಾವೊಬ್ಬ ಮತದಾರನನ್ನೂ ಮತದಾನ ಮಾಡದಂತೆ ಯಾರೊಬ್ಬರೂ ತಡೆಯಬಾರದು ಎಂದು 2,50,000 ಕೇಂದ್ರೀಯ ಭದ್ರತಾ ಪಡೆಗಳ ಯೋಧರನ್ನು ನಿಯೋಜಿಸಿದ್ದರು. ಈ ಬಾರಿ ಚುನಾವಣಾ ಆಯೋಗ ಕೂಡ ದೇಶಾದ್ಯಂತ ಚುನಾವಣಾ ವೀಕ್ಷಕರಾಗಿ ಕೆಚ್ಚೆದೆಯ ಅಧಿಕಾರಿಗಳನ್ನೇ ನಿಯೋಜಿಸಿತ್ತು. ನೀವು ಉತ್ತರ ಪ್ರದೇಶದ ಡಿಐಜಿ ಅಜಯ್ ಪಾಲ್ ಶರ್ಮಾ ಅವರ ವಿಡಿಯೊ ನೋಡಿರುತ್ತೀರಿ. ಅವರನ್ನು ಪಶ್ಚಿಮ ಬಂಗಾಳಕ್ಕೆ ಚುನಾವಣಾ ವೀಕ್ಷಕರನ್ನಾಗಿ ಕಳುಹಿಸಲಾಗಿತ್ತು. ಅವರು ಜಹಾಂಗೀರ್ ಎಂಬ ಅಭ್ಯರ್ಥಿಯ ಕ್ಷೇತ್ರದಲ್ಲಿ ಸ್ವತಃ ತಾವೇ ಕಾಲ್ನಡಿಗೆಯಲ್ಲಿ ಹೋಗಿ, 'ಮತದಾರರಿಗೆ ಯಾರಾದರೂ ತೊಂದರೆ ನೀಡಿದರೆ ಪರಿಣಾಮ ನೆಟ್ಟಗಿರುವುದಿಲ್ಲ' ಎಂದು ಎಚ್ಚರಿಕೆ ನೀಡಿದ್ದರು. ಬಿಜೆಪಿಗೆ ವೋಟು ಹಾಕಿದರೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು ಇದೇ ಜಹಾಂಗೀರ್ ಮತದಾರರಿಗೆ ಧಮಕಿ ಹಾಕುತ್ತಿದ್ದ.

ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಜಹಾಂಗೀರ್‌ಗೆ ಬಹಳ ಪ್ರಭಾವವಿತ್ತು. ಆತ ಮಮತಾ ಬ್ಯಾನರ್ಜಿಯ ಸೋದರ ಸಂಬಂಧಿ ಅಭಿಷೇಕ್ ಬ್ಯಾನರ್ಜಿಯ ಖಾಸಾ ವ್ಯಕ್ತಿಯಾಗಿದ್ದ. ಆದರೆ, ಅಜಯ್ ಪಾಲ್ ಶರ್ಮಾ ಅಂತಿಂತಹ ಅಧಿಕಾರಿಯಲ್ಲ. ಅವರ ಹೆಸರು ಕೇಳಿದರೇ ಕ್ರಿಮಿನಲ್‌ಗಳು ನಡುಗುತ್ತಿದ್ದರು. ಅವರಿಗೆ ಎನ್‌ಕೌಂಟರ್ ಸ್ಪೆಷಲಿಸ್ಟ್ ಎಂಬ ಖ್ಯಾತಿ ಬೇರೆ ಇತ್ತು.

ಒಂದೆಡೆ ಚುನಾವಣಾ ಆಯೋಗ ಪಶ್ಚಿಮ ಬಂಗಾಳದಲ್ಲಿ ನಿರ್ಭೀತ ಮತ್ತು ನ್ಯಾಯಯುತ ಚುನಾವಣೆ ನಡೆಸಲು ಟೊಂಕ ಕಟ್ಟಿತ್ತು. ಇನ್ನೊಂದೆಡೆ ಅಮಿತ್ ಶಾ ಅವರು ಬಿಜೆಪಿ ಕಾರ್ಯಕರ್ತರಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸ ತುಂಬಿ, ಯಾವುದೇ ರಾಜಕೀಯ ಪಕ್ಷದಿಂದ ಬೆದರಿಕೆ ಬಂದರೂ ಕೆಚ್ಚೆದೆಯಿಂದ ಎದುರಿಸಿ ಎಂದು ಹುರಿದುಂಬಿಸಿದ್ದರು. 15 ದಿನಗಳನ್ನು ಅಮಿತ್ ಶಾ ಪಶ್ಚಿಮ ಬಂಗಾಳದಲ್ಲಿ ಕಳೆದಿದ್ದರು. ಬೇರೆ ಬೇರೆ ವಲಯಗಳಲ್ಲಿ ರಾತ್ರಿ ವಾಸ್ತವ್ಯ ಮಾಡಿ, ತಡರಾತ್ರಿಯವರೆಗೂ ಸಭೆಗಳನ್ನು ನಡೆಸಿದ್ದರು. ಅವರ ಸೂಚನೆ ಸ್ಫಟಿಕದಷ್ಟೇ ಸ್ಪಷ್ಟವಾಗಿತ್ತು, ಬಿಜೆಪಿಯ ಪ್ರತಿಯೊಂದು ಮತವೂ ಮತದಾನದ ದಿನ ಬೆಳಗ್ಗೆ 11 ಗಂಟೆಯೊಳಗೆ ಚಲಾವಣೆಯಾಗಬೇಕು. ಮತದಾರರ ಪಟ್ಟಿಯಿಂದ 91 ಲಕ್ಷದಷ್ಟು ನಕಲಿ ಮತದಾರರ ಹೆಸರುಗಳನ್ನು ತೆಗೆದಿದ್ದರಿಂದ ಚುನಾವಣೆಗೂ ಮೊದಲೇ ಮಮತಾ ಬ್ಯಾನರ್ಜಿಯ ಶಕ್ತಿ ಗಣನೀಯವಾಗಿ ಕುಸಿದಿತ್ತು. ಶಾ ಹೆಣೆದ ತಂತ್ರಗಾರಿಕೆ ಚುನಾವಣೆಯ ಪ್ರಚಾರದ ವೇಳೆ ಮಮತಾ ಬ್ಯಾನರ್ಜಿ ಮಂಡಿಯೂರುವಂತೆ ಮಾಡಿತ್ತು. ಹಾಗೆ ನೋಡಿದರೆ ಮಮತಾ ಬ್ಯಾನರ್ಜಿಯೇನೂ ಕಡಿಮೆ ಹೋರಾಟಗಾರ್ತಿಯಲ್ಲ. ಆದರೆ, ಈ ಬಾರಿ ಆಕೆಯ ಶತ್ರು, ಇನ್ನೂ ಶಕ್ತಿಶಾಲಿ ಹೋರಾಟಗಾರನಾಗಿದ್ದ.

ಬಿಡುವಿಲ್ಲದ ಕೆಲಸಗಳ ನಡುವೆಯೂ ಅಮಿತ್ ಶಾ ಪಶ್ಚಿಮ ಬಂಗಾಳದಲ್ಲಿ 50ಕ್ಕೂ ಹೆಚ್ಚು ರ್‍ಯಾಲಿ ಮತ್ತು ರೋಡ್‌ಶೋಗಳಲ್ಲಿ ಪಾಲ್ಗೊಂಡಿದ್ದರು. ಅವರ ಕೆಲವು ಘೋಷಣೆಗಳು ಮತದಾರರನ್ನು ನೇರವಾಗಿ ತಟ್ಟಿದ್ದವು. ಗೂಂಡಾಗಳು ಮನೆಯೊಳಗೆ ಬಾಗಿಲು ಮುಚ್ಚಿಕೊಂಡು ಕುಳಿತುಕೊಳ್ಳಬೇಕು, ಹೊರಗೇನಾದರೂ ಬಂದರೆ ಅವರ ಸ್ಥಿತಿ ನೆಟ್ಟಗಿರುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದರು. ಬಂಗಾಳದ ಮಣ್ಣಿನಲ್ಲಿ ಇನ್ನೊಂದು ಬಾಬ್ರಿ ಮಸೀದಿ ತಲೆಯೆತ್ತಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದೂ ಅವರು ಗುಡುಗಿದ್ದರು. ಬಿಜೆಪಿ ಸರಕಾರ ರಚನೆ ಮಾಡಿದ ನಂತರ ಭಾರತ-ಬಾಂಗ್ಲಾದೇಶದ ಗಡಿಯುದ್ದಕ್ಕೂ 45 ದಿನಗಳ ಒಳಗೆ ಬೇಲಿ ನಿರ್ಮಿಸಲಾಗುವುದು. ಮಮತಾ ಸರಕಾರ ಬೇಕಂತಲೇ ಗಡಿಯಲ್ಲಿ ಬೇಲಿ ನಿರ್ಮಿಸಲು ಜಾಗ ನೀಡದೆ ನುಸುಳುಕೋರರಿಗೆ ನೆರವಾಗಿತ್ತು ಎಂದು ಅಮಿತ್ ಶಾ ಚುನಾವಣಾ ಪ್ರಚಾರದ ವೇಳೆ ಆರೋಪಿಸಿದ್ದರು. ಗಡಿಯಲ್ಲಿ ಬೇಲಿ ಇಲ್ಲದಿರುವ ಕಾರಣದಿಂದಲೇ ಬಂಗಾಳಕ್ಕೆ ಬಾಂಗ್ಲಾದೇಶದ ನುಸುಳುಕೋರರು ಸಲೀಸಾಗಿ ಪ್ರವೇಶಿಸುತ್ತಿದ್ದಾರೆ, ರಾಜ್ಯ ಸರಕಾರದ ನೆರವಿನಿಂದ ಅವರು ಭಾರತೀಯ ಪ್ರಜೆಗಳಾಗಿ ಪರಿವರ್ತನೆ ಹೊಂದಿ, ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಲು ಮತದಾರರ ಪಟ್ಟಿಯಲ್ಲೂ ಜಾಗ ಪಡೆಯುತ್ತಿದ್ದಾರೆ ಎಂದು ಹೇಳಿದ್ದರು.

ಇದೇ ವೇಳೆ ಅಮಿತ್ ಶಾ ಅವರು ಪ್ರಧಾನಿ ನರೇಂದ್ರ ಮೋದಿಯವರ ಪ್ರಚಾರ ರ್‍ಯಾಲಿಗಳನ್ನು ಕೂಡ ಅಷ್ಟೇ ನಿಖರವಾಗಿ ಮತ್ತು ಚಾಣಾಕ್ಷತನದಿಂದ ಪ್ಲಾನ್ ಮಾಡಿದ್ದರು. ಬಂಗಾಳದ ಎಲ್ಲ ಪ್ರದೇಶಗಳ ಜನರಿಗೂ ಮೋದಿಯವರ ಭಾಷಣ ಕೇಳುವ ಅವಕಾಶ ಸಿಗುವಂತೆ ಅವರು ಬಹಿರಂಗ ಸಭೆಗಳನ್ನು ಆಯೋಜಿಸಿದ್ದರು. 250ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡ 19 ಜಿಲ್ಲೆಗಳ, 24 ಸ್ಥಳಗಳಲ್ಲಿ ಪ್ರಧಾನಿ ಭಾಷಣ ಮಾಡಿ, ರೋಡ್ ಶೋ ನಡೆಸಿದ್ದರು. ಚುನಾವಣೆಯ ಫಲಿತಾಂಶ ಬಂದ ಬಳಿಕ ನರೇಂದ್ರ ಮೋದಿಯವರು ಬಂಗಾಳದಲ್ಲಿ ಬಿಜೆಪಿ ಜಯದ ನಿಜವಾದ ರೂವಾರಿ ಅಮಿತ್ ಶಾ ಎಂದು ಬಹಿರಂಗವಾಗಿ ಹೇಳಿದರು. 2014ರಲ್ಲೇ ಅಮಿತ್ ಶಾ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯವರ ಸರಕಾರವನ್ನು ಕಿತ್ತೊಗೆಯುವುದಾಗಿ ಶಪಥ ಮಾಡಿದ್ದರು ಎಂಬುದು ಬಹಳ ಜನರಿಗೆ ನೆನಪಿರಲಿಕ್ಕಿಲ್ಲ. ಅವರ ಪ್ರತಿಜ್ಞೆ ಈಡೇರಲು 12 ವರ್ಷಗಳೇ ಹಿಡಿದಿರಬಹುದು,

ಆದರೆ ಕೊನೆಗೂ ಅವರು ಮಾತು ಉಳಿಸಿಕೊಂಡಿದ್ದಾರೆ. 2016ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಕೇವಲ ಮೂರು ಸೀಟುಗಳನ್ನು ಗೆದ್ದಿತ್ತು. ಅದು 2021ರಲ್ಲಿ 77ಕ್ಕೆ ಏರಿಕೆಯಾಗಿ, 2026ರಲ್ಲಿ ಬರೋಬ್ಬರಿ 207ನ್ನು ತಲುಪಿದೆ. ಶ್ಯಾಮ ಪ್ರಸಾದ ಮುಖರ್ಜಿಯವರ ಕನಸನ್ನು ಅಮಿತ್ ಶಾ ನನಸು ಮಾಡಿದ್ದಾರೆ.

ಸೋಲಿನ ಬಳಿಕ ಮಮತಾ ಬ್ಯಾನರ್ಜಿ ಬಿಜೆಪಿ 100 ಸ್ಥಾನಗಳನ್ನು ಲೂಟಿ ಮಾಡಿದೆ ಎಂದು ಆರೋಪಿಸಿದ್ದಾರೆ. ರಾಹುಲ್ ಗಾಂಧಿ, ಇದು ಮತಚೋರಿಯ ಫಲಿತಾಂಶ ಎಂದು ಕರೆದಿದ್ದಾರೆ. ಹೆಚ್ಚುಕಮ್ಮಿ ಐದು ದಶಕಗಳ ಕಾಲ ರಾಜಕಾರಣವನ್ನು ಹತ್ತಿರದಿಂದ ನೋಡಿದ ಅನುಭವದಲ್ಲಿ ಹೇಳುವುದಾದರೆ, ಈ ಹಿಂದೆಯೂ ಸೋತ ನಾಯಕರು ತಮ್ಮ ಘನತೆ ಕಾಪಾಡಿಕೊಳ್ಳಲು ಏನಾದರೊಂದು ನೆಪ ಹುಡುಕುತ್ತಿದ್ದರು. ಆದರೆ ಅದೇ ವೇಳೆ ಅವರು ಸೋಲಿಗೆ ಕಾರಣಗಳನ್ನೂ ವಿಶ್ಲೇಷಣೆ ಮಾಡುತ್ತಿದ್ದರು. ಆದರೆ ಇಂದು ಆತ್ಮಾವಲೋಕನ ಎಂಬುದೇ ಇಲ್ಲವಾಗಿದೆ. ಕೇವಲ ಆರೋಪಗಳು ಉಳಿದಿವೆ. ಆದರೆ, ಬರೀ ದೂಷಣೆ ಮಾಡುವುದರಿಂದ ಎದುರಾಳಿ ಕುಸ್ತಿಪಟುವಿನ ಶಕ್ತಿ ಕಡಿಮೆಯಾಗುವುದಿಲ್ಲ ಎಂಬುದು ನಮಗೆ ಗೊತ್ತಿರಬೇಕು. ಕುಸ್ತಿಪಟುವನ್ನು ಸೋಲಿಸಬೇಕು ಅಂದರೆ ಇನ್ನೊಬ್ಬ ಕುಸ್ತಿಪಟು ತನ್ನನ್ನು ತಾನು ಗಟ್ಟಿಯಾಗಿಸಿಕೊಂಡು, ಅಗತ್ಯವಿರುವ ತಂತ್ರಗಳು ಮತ್ತು ಪಟ್ಟುಗಳನ್ನು ಕರಗತ ಮಾಡಿಕೊಳ್ಳಬೇಕು. ಅದೇ ವೇಳೆ, ಯಾವುದೇ ರಾಜಕಾರಣಿಯು ರಾಷ್ಟ್ರೀಯ ಹಿತಾಸಕ್ತಿಯ ಜತೆಗೆ ರಾಜಿ ಮಾಡಿಕೊಳ್ಳಬಾರದು. ಹಾಗೇನಾದರೂ ರಾಜಿ ಮಾಡಿಕೊಂಡರೆ ಪಶ್ಚಿಮ ಬಂಗಾಳದಲ್ಲಿ ಯಾವ ಫಲಿತಾಂಶ ಬಂದಿದೆಯೋ ಅದೇ ಬರುತ್ತದೆ. ಚುನಾವಣೆ ಮುಗಿದ ಬಳಿಕ ಅನೇಕರು 'ಅಮಿತ್ ಶಾ ಬಂಗಾಳವನ್ನು ಕಾಪಾಡಿದರು' ಎಂದು ಹೇಳುವುದನ್ನು ಕೇಳಿದ್ದೇನೆ.

ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಜೋಡಿ ನಿಜಕ್ಕೂ ಅಸಾಮಾನ್ಯವಾಗಿದೆ. ಗೆಲವಿನ ಮೇಲೆ ಗೆಲವು ಸಿಗುತ್ತಿದ್ದರೂ ಅವರು ವಿಶ್ರಾಂತಿ ತೆಗೆದುಕೊಳ್ಳುತ್ತಿಲ್ಲ. ಅದರ ಬದಲಿಗೆ, ಒಂದು ರಾಜ್ಯವನ್ನು ಗೆದ್ದ ತಕ್ಷಣ ಇನ್ನೊಂದು ರಾಜ್ಯದ ಗೆಲವಿಗೆ ಯೋಜನೆ ಆರಂಭಿಸುತ್ತಿದ್ದಾರೆ. ಎಲ್ಲಾದರೂ ಸೋಲು ಅನುಭವಿಸಿದರೆ ಮುಂದಿನ ಸಮರಕ್ಕಾಗಿ ಹೊಸ ಸ್ಫೂರ್ತಿ ಮತ್ತು ದೃಢ ನಿರ್ಧಾರದೊಂದಿಗೆ ಕೆಲಸ ಶುರು ಮಾಡುತ್ತಾರೆ. ಇಬ್ಬರೂ ದಿನದ 24 ಗಂಟೆ, ವಾರದ ಏಳು ದಿನ ದಣಿವರಿಯದೆ ಕೆಲಸ ಮಾಡುವ ನಾಯಕರು. ಇಂತಹ ಜೋಡೆತ್ತು ವಿಪಕ್ಷಗಳಲ್ಲಿ ಇವೆಯಾ? ಹೇಳಿದ್ದನ್ನೇ ಹೇಳುವುದು ಮತ್ತು ವಿರೋಧಿಗಳ ವಿರುದ್ಧ ಆರೋಪಗಳನ್ನು ಮಾಡುವುದರಿಂದಲೇ ಚುನಾವಣೆಗಳನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ವಿಪಕ್ಷಗಳಿಗೆ ಯಾರಾದರೂ ಹೇಳಬೇಕು.

ಗೆಲ್ಲಬೇಕು ಅಂದರೆ ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆಯಬೇಕು, ವಿಶ್ರಾಂತಿಯಿಲ್ಲದೆ ಕಷ್ಟಪಟ್ಟು ಕೆಲಸ ಮಾಡಬೇಕು. ಆಗ ಮಾತ್ರ ಏನಾದರೂ ಸಾಧನೆ ಮಾಡಲು ಸಾಧ್ಯ. ತಮಿಳುನಾಡಿನಲ್ಲಿ ವಿಜಯ್ ಗೆಲವು ಏಕೆ ಆ ಪರಿಯ ಆಶಾಭಾವನೆ ಮೂಡಿಸಿದೆ? ಏಕೆಂದರೆ ಅವರು ಸಾಂಪ್ರದಾಯಿಕ ದ್ರಾವಿಡ ರಾಜಕಾರಣದಿಂದ ಅಂತರ ಕಾಯ್ದುಕೊಂಡು, ಚುನಾವಣೆಯಲ್ಲಿ ತಮ್ಮದೇ ಆದ ಜಾತ್ಯತೀತ ರಾಜಕಾರಣದ ಹೊಸ ಮಾದರಿಯನ್ನು ಜನರ ಮುಂದಿಟ್ಟು ಗೆದ್ದಿದ್ದಾರೆ. ಪ್ರತಿಯೊಬ್ಬ ಜನಸಾಮಾನ್ಯನ ಆಶೋತ್ತರಗಳನ್ನು ಈಡೇರಿಸುವ ಶಪಥ ಮಾಡಿದ್ದಾರೆ. ಅಸ್ಸಾಂನಲ್ಲಿ ಏಕೆ ಬಿಜೆಪಿ ಸತತ ಮೂರನೇ ಬಾರಿ ಅಧಿಕಾರಕ್ಕೆ ಬಂದಿದೆ? ಏಕೆಂದರೆ ಅದು ಈ ಹಿಂದೆ ತಾನು ಕೊಟ್ಟಿದ್ದ ಭರವಸೆಗಳನ್ನು ಈಡೇರಿಸಿದೆ. ಇನ್ನು, ಕಟ್ಟಕಡೆಯ ರಾಜ್ಯವಾದ ಕೇರಳದಲ್ಲೂ ಎಡಪಕ್ಷಗಳ ಯುಗ ಅಂತ್ಯವಾಗಿದ್ದು ಏಕೆ? ಏಕೆಂದರೆ, ಭಾರತದ ಕಮ್ಯುನಿಸ್ಟರು ಇಲ್ಲಿನ ವಾಸ್ತವಗಳನ್ನು ಅರ್ಥ ಮಾಡಿಕೊಳ್ಳಲು ಹೋಗದೆ ಬಹಳ ವರ್ಷಗಳಿಂದ ಚೀನಾ ಅಥವಾ ರಷ್ಯಾದಲ್ಲಿ ಮಳೆಯಾದರೆ ಇಲ್ಲಿ ಕೊಡೆ ಬಿಚ್ಚುವ ಕೆಲಸ ಮಾಡುತ್ತಿದ್ದಾರೆ.

ಇವೆಲ್ಲದರ ಸಾರ ಇಷ್ಟೆ, ಜನರ ಹೃದಯದಲ್ಲಿ ಸ್ಥಾನ ಗಳಿಸಲು ನೀವು ಬಯಸಿದರೆ ಅದಕ್ಕೂ ಮೊದಲು ಜನರ ನಾಡಿಮಿಡಿತವನ್ನು ತಿಳಿದುಕೊಳ್ಳಬೇಕು. ಮೋದಿ ಮತ್ತು ಅಮಿತ್ ಶಾಗೆ ಜನರ ನಾಡಿಮಿಡಿತ ಗೊತ್ತಿದೆ. ಅದೇ ರೀತಿ, ಅವರಿಗೆ ನಮ್ಮ ದೇಶದ ಹೃದಯದ ಬಡಿತವೂ ತಿಳಿದಿದೆ. ಆದ್ದರಿಂದಲೇ ಒಂದಾದ ಮೇಲೊಂದು ಚುನಾವಣೆಗಳನ್ನು ಗೆಲ್ಲುತ್ತಿದ್ದಾರೆ.

ಭಟ್ಟರ್ ಸ್ಕಾಚ್

- **ನಾಗರಾಜ ಶೆಟ್ಟಿ, ಧಾರವಾಡ**
ಭಟ್ರೇ, ಗೂಗಲ್ ಮ್ಯಾಪ್ ಯಾಕೆ ಕೆಲವೊಮ್ಮೆ ತಪ್ಪು ದಾರಿ ತೋರಿಸುತ್ತದೆ?
– **ಅದಕ್ಕೂ ಪಾಪ, ನಮ್ಮ ಊರಿನ ಗುಂಡಿಗಳ ಬಗ್ಗೆ ಐಡಿಯಾ ಇರಲ್ಲ!**

- **ಹರೀಶ ದೇವ, ಹುಬ್ಬಳ್ಳಿ**
ಭಟ್ರೇ, ಹೋಟೆಲ್ ಮೆನು ಕಾರ್ಡ್‌ನಲ್ಲಿ ಬೆಲೆ ಯಾಕೆ ಬಲಗಡೆ ಇರುತ್ತೆ?
– **ಎಡಗಡೆ ಇರೋ ಪದಾರ್ಥ ನೋಡಿ ಖುಷಿ ಪಡಲಿ, ಬೆಲೆ ನೋಡಿ ಸುಮ್ಮನಾಗಲಿ ಅಂತ!**

- **ನಾಗೇಶ ವಾಲಿ, ಗದಗ**
ಭಟ್ರೇ, ಎಕ್ಸಾಂ ಹಾಲಿನಲ್ಲಿ ಫ್ಯಾನ್ ಯಾಕೆ ಜೋರಾಗಿ ತಿರುಗುತ್ತಿರುತ್ತದೆ?
– **ಸ್ಟೂಡೆಂಟ್ಸ್ ತಲೆಯಲ್ಲಿ ಏನೂ ಇರಲ್ಲ, ಗಾಳಿ ತುಂಬಲಿ ಅಂತ!**

- **ನೂಲಿ ವಾಸು, ನೂಲಿ**
ಭಟ್ರೇ, ಡಯಟ್ ಮಾಡುವವರು ಯಾಕೆ ರಾತ್ರಿ ಬೇಗ ಮಲಗುತ್ತಾರೆ?
– **ಎಚ್ಚರವಿದ್ದರೆ ಫ್ರಿಡ್ಜ್ ಕಡೆ ಹೋಗುವ ಸಂಭವ ಜಾಸ್ತಿ ಅಂತ!**

- **ಸುಧಾ, ಬೆಂಗಳೂರು**
ಭಟ್ರೇ, ರಾಜಕಾರಣಿ ಮತ್ತು ಹವಾಮಾನ ವರದಿಯ ನಡುವೆ ವ್ಯತ್ಯಾಸವೇನು?
– **ವ್ಯತ್ಯಾಸವೇ ಇಲ್ಲ, ಎರಡೂ ಯಾವಾಗ ಬದಲಾಗುತ್ತೆ ಅಂತ ಯಾರಿಗೂ ಗೊತ್ತಿಲ್ಲ!**

- **ಪಂಕಜಾ, ಕುಣಿಗಲ್**
ಭಟ್ರೇ, ಇತಿಹಾಸ ಮತ್ತು ಗಣಿತ ವಿಷಯಗಳ ನಡುವೆ ಇರುವ ವ್ಯತ್ಯಾಸವೇನು?
– **ಇತಿಹಾಸದಲ್ಲಿ ಸತ್ತವರ ಕಾಟ, ಗಣಿತದಲ್ಲಿ ಇನ್ನೂ ಬದುಕಿರೋ ನಮಗೆ 'X'ನ ಕಾಟ!**

- **ನಟೇಶ್ ರಾಜು, ಹೆಬ್ಬೂರು**
ಭಟ್ರೇ, ಗೂಗಲ್ ಹತ್ತಿರ ಎಲ್ಲದಕ್ಕೂ ಉತ್ತರ ಇರುತ್ತೆ, ಆದ್ರೆ ಯಾವುದು ಇರಲ್ಲ?
– **ಹೆಂಡತಿ ಯಾಕೆ ಕೋಪ ಮಾಡಿಕೊಂಡಿದ್ದಾಳೆ ಅನ್ನೋ ಪ್ರಶ್ನೆಗೆ ಮಾತ್ರ ಗೂಗಲ್ ಹತ್ತಿರವೂ ಉತ್ತರವಿಲ್ಲ!**

- **ಸಂದೀಪ ರೆಡ್ಡಿ, ಕೋಗಿಲು**
ಭಟ್ರೇ, ಆಫೀಸಿನಲ್ಲಿ ಬಾಸ್ ಯಾವಾಗಲೂ ಯಾಕೆ ಗಂಭೀರವಾಗಿ ಇರುತ್ತಾರೆ?
– **ನಕ್ಕರೆ ಎಲ್ಲಿ ತಮಗೆ ಕೆಲಸ ಬರಲ್ಲ ಅಂತ ಜನ ತಿಳ್ಕೊಳ್ತಾರೋ ಅನ್ನೋ ಭಯ!**

- **ರಮ್ಯಾ, ಮೈಸೂರು**
ಭಟ್ರೇ, ಬ್ಯಾಂಕ್ ಲೋನ್ ಮತ್ತು ಪ್ರೀತಿಯ ನಡುವೆ ಇರುವ ಸಾಮ್ಯತೆ ಏನು?
– **ಎರಡರಲ್ಲೂ ಶುರುವಿನಲ್ಲಿ ತುಂಬಾ ಇಂಟರೆಸ್ಟ್ ಇರುತ್ತೆ, ಆಮೇಲೆ ಕಂತು ಕಟ್ಟೋಕೆ ಆಗಲ್ಲ!**

- **ಸಿ.ಪಿ.ಸಿದ್ದು, (ಇಮೇಲ್ ಮೂಲಕ)**
ಭಟ್ರೇ, ಮನುಷ್ಯನಿಗೆ ಅತಿ ಹೆಚ್ಚು ಜ್ಞಾನೋದಯ ಆಗುವುದು ಯಾವಾಗ?
– **ಎಕ್ಸಾಂ ಹಾಲ್‌ನಿಂದ ಆಚೆ ಬಂದಾಗ!**

ಭಯವಾಗುತ್ತದೆ ಎಂಬ ಬರಹಗಾರರಿಗೆ ಎರಡು ಮಾತು

ಕಾಡುದಾರಿ
ಹರೀಶ್ ಕೇರ
vveditoped@gmail.com

ಭಯವಾಗುತ್ತಿದೆ. ಮುಂದೇನೂ ಬರೆಯಲಾರೆ ಎನಿಸುತ್ತಿದೆ. ರೈಟರ್ಸ್ ಬ್ಲಾಕ್ ಅಂತೀವಲ್ಲ- ಲೇಖಕನ ಲಕ್ವ-ಹಾಗಾಗಿಬಿಟ್ಟಿದೆ. ಏನು ಬರೆಯುವುದು ಎಂಬ ಸಂಕಷ್ಟ ಒಂದು ಕಡೆ. ಎಐ ಆತಂಕ ಇನ್ನೊಂದು ಕಡೆ. ಎಲ್ಲ ಕಡೆಯೂ ಎಐ ಬರುತ್ತಿದೆ. ಮನುಷ್ಯ ರಂತೆಯೇ ಬರೆಯುತ್ತದೆ. ಕೆಲವೊಮ್ಮೆ ಮನುಷ್ಯರಿ ಗಿಂತ ಅಚ್ಚುಕಟ್ಟಾಗಿ, ಯಾವುದೇ ದೋಷಗಳಿಲ್ಲದೆ ಬರೆದುಕೊಡುತ್ತದೆ. ಸೊಗಸಾಗಿ ಅನುವಾದ ಮಾಡುತ್ತದೆ. ನಾವು ಅಪ್ರಸ್ತುತರಾಗುತ್ತೇವೇನೋ ಅನಿಸುತ್ತಿದೆ. ಹಾಗಂತ ಬರಹಗಾರ ಗೆಳೆಯನೊಬ್ಬ ಅಳಲು ತೋಡಿಕೊಳ್ಳುತ್ತಿದ್ದ.

ಅದೇ ಆತಂಕದಲ್ಲೇ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್‌ನ ಒಂದು ಸಂದರ್ಶನ ನೋಡುತ್ತಿದ್ದರೆ, ಅವನು ಹೀಗೆ ಹೇಳಿದ್ದು ಕಾಣಿಸಿತು– 'ನಾನು ಏನನ್ನು ಬರೆಯಬೇಕೆಂದು ಮೊದಲೇ ನಿರ್ಧರಿಸಿದ್ದೆ. ಆದರೆ ಅದರಲ್ಲಿ ಏನೋ ಒಂದು ಕೊರತೆಯಿತ್ತು. ಅದೇನು ಅಂತ ಗೊತ್ತಾಗುತ್ತಿರಲಿಲ್ಲ. ಕೊನೆಗೂ ಒಂದು ದಿನ ನನಗೆ ಆ ಸರಿಯಾದ ಆ ಧಾಟಿ ಅಥವಾ ಧ್ವನಿ ಸಿಕ್ಕಿತು. ಅದೇ ಧಾಟಿಯನ್ನು ನಾನು ಮುಂದೆ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಪುಸ್ತಕದಲ್ಲಿ ಬಳಸಿದೆ. ಅದು ನನ್ನ ಅಜ್ಜಿ ಕಥೆ ಹೇಳುತ್ತಿದ್ದ ರೀತಿಯನ್ನು ಆಧರಿಸಿತ್ತು. ಆಕೆ ನಂಬಲಸಾಧ್ಯವಾದ ಮತ್ತು ಅದ್ಭುತವಾದ ಕತೆಗಳನ್ನು ಹೇಳುತ್ತಿದ್ದಳು. ಆದರೆ ಅದನ್ನು ತುಂಬಾ ಸಹಜವಾಗಿ ಹೇಳುತ್ತಿದ್ದಳು. ನನಗೆ ಆ ಧಾಟಿ ಸಿಕ್ಕಿದ ತಕ್ಷಣ ನಾನು ಸತತ ಹದಿನೆಂಟು ತಿಂಗಳ ಕಾಲ ಪ್ರತಿದಿನ ಕುಳಿತು ಬರೆದೆ. ಅದಕ್ಕೂ ಮೊದಲು ಈ ಕೃತಿ ಬರೆಯಲು ಪ್ರಯತ್ನಿಸಿದಾಗಲೆಲ್ಲಾ, ನನಗೆ ಆ ಕಥೆಯ ಮೇಲೆ ನಂಬಿಕೆಯೇ ಇರಲಿಲ್ಲ. ನಾನು ಮಾಡಬೇಕಾದ್ದು ಇಷ್ಟೇ ಎಂದು ನಂತರ ಅರಿವಾಯಿತು– ಮೊದಲು ನಾನು ಹೇಳಲಿರುವ ಕಥೆಗಳನ್ನು ನಾನೇ ನಂಬಬೇಕು. ನಂತರ ನನ್ನ ಅಜ್ಜಿ ಮಾಡುತ್ತಿದ್ದ ಹಾಗೆ ನಿರ್ಭಾವದಿಂದ ಕಥೆ ಹೇಳಬೇಕು.'

ಮಾರ್ಕ್ವೆಜ್ ಇನ್ನೂ ಮುಂದುವರಿದು ಹೇಳುತ್ತಾನೆ– ಕೊನೆಗೂ ಸಾಹಿತ್ಯ ಅನ್ನೋದು ಬಡಗಿ ಕೆಲಸ ಮಾಡಿದಂತೆಯೇ. ಎರಡೂ ತುಂಬಾ ಕಷ್ಟದ ಕೆಲಸಗಳು. ಒಂದು ಬರಹ ಬರೆಯುವುದು, ಮೇಜು ತಯಾರಿಸುವಷ್ಟೇ ಕಷ್ಟ. ಎರಡರಲ್ಲೂ ನಾವು ನಿಜವಾದ ವಸ್ತುಗಳ ಜೊತೆ ಕೆಲಸ ಮಾಡುತ್ತೇವೆ. ಮರ ಎಷ್ಟು ಗಟ್ಟಿಯೋ, ಜೀವನವೂ ಅಷ್ಟೇ ಗಟ್ಟಿ. ಎರಡರಲ್ಲೂ ತಂತ್ರಗಳು, ಕೌಶಲ್ಯಗಳು ಬೇಕಾಗುತ್ತವೆ. ನಿಜ ಹೇಳುವುದಾದರೆ ಇದರಲ್ಲಿ ಮ್ಯಾಜಿಕ್ ತುಂಬಾ ಕಡಿಮೆ. ಕಠಿಣ ಪರಿಶ್ರಮವೇ ಹೆಚ್ಚು. ಹತ್ತು ಶೇಕಡ ಸ್ಫೂರ್ತಿ ಇದ್ದರೆ, ತೊಂಬತ್ತು ಶೇಕಡ ಬೆವರು ಸುರಿಸುವಿಕೆ ಇರುತ್ತದೆ. ನಾನು ಯಾವತ್ತೂ ಮರದ ಕೆಲಸ ಮಾಡಿಲ್ಲ, ಆದರೆ ನನಗೆ ಅತ್ಯಂತ ಗೌರವಯುತ ಕೆಲಸ ಅದೇ ಅನಿಸುತ್ತದೆ. ಯಾರಿಂದಲೂ ಅದನ್ನು ಸುಲಭವಾಗಿ ಮಾಡಿಸಿಕೊಳ್ಳಲು ಸಾಧ್ಯವಿಲ್ಲ.

ಇನ್ನು ಸ್ಫೂರ್ತಿಯ ಬಗ್ಗೆ ಮಾರ್ಕ್ವೆಜ್ ಹೇಳುವ ಮಾತು ಅರ್ಥಪೂರ್ಣವಾಗಿದೆ– ನಿಮಗೆ ನಿಜವಾಗಿಯೂ ಇಷ್ಟವಾಗುವ ಒಂದು ವಿಷಯ ಸಿಕ್ಕಾಗ 'ಸ್ಫೂರ್ತಿ' ಸಿಗುತ್ತದೆ. ಅದು ನಿಮ್ಮ ಕೆಲಸವನ್ನು ಸುಲಭವಾಗಿಸುತ್ತದೆ. ಕಥೆಗಳನ್ನು ಬರೆಯಲು 'ಅಂತಃಪ್ರಜ್ಞೆ' (Intuition) ಬಹಳ ಮುಖ್ಯ. ಯಾವುದು ವಾಸ್ತವ ಎಂಬುದನ್ನು ಅರ್ಥಮಾಡಿಕೊಳ್ಳಲು ಈ ವಿಶೇಷ ಗುಣ ಸಹಾಯ ಮಾಡುತ್ತದೆ. ಅದಕ್ಕೆ ಯಾವುದೇ ವೈಜ್ಞಾನಿಕ ಜ್ಞಾನ ಅಥವಾ ವಿಶೇಷ ಕಲಿಕೆಯ ಅಗತ್ಯವಿಲ್ಲ. ಗುರುತ್ವಾಕರ್ಷಣೆಯ ನಿಯಮಗಳನ್ನು ವಿಜ್ಞಾನಕ್ಕಿಂತ ಹೆಚ್ಚಾಗಿ ಅಂತಃಪ್ರಜ್ಞೆಯ ಮೂಲಕ ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಇದು ಯಾವುದೇ ಹೋರಾಟವಿಲ್ಲದೆಯೇ ಅನುಭವ ಪಡೆಯುವ ಒಂದು ದಾರಿ. ಕಾದಂಬರಿಕಾರನಿಗೆ ಅಂತಃಪ್ರಜ್ಞೆ ಅತ್ಯಗತ್ಯ. ಮೂಲತಃ ಇದು 'ಬೌದ್ಧಿಕತೆ'ಗೆ (intellectualism) ವಿರುದ್ಧವಾದುದು. ಜಗತ್ತಿನಲ್ಲಿ ನಾನು ಅತ್ಯಂತ ಹೆಚ್ಚು ದ್ವೇಷಿಸುವ ವಿಷಯವೆಂದರೆ ಈ ಬೌದ್ಧಿಕತೆ– ಅಂದರೆ ವಾಸ್ತವ ಜಗತ್ತನ್ನು ಕೇವಲ ಒಂದು ಬದಲಾಗದ ಸಿದ್ಧಾಂತವನ್ನಾಗಿ ನೋಡುವುದು. ಅಂತಃಪ್ರಜ್ಞೆಯಲ್ಲಿ ಒಂದು ಲಾಭವಿದೆ: ಅದು ಇದ್ದರೆ ಇದೆ, ಇಲ್ಲದಿದ್ದರೆ ಇಲ್ಲ. ಅಲ್ಲಿ ನೀವು ವೃತ್ತಾಕಾರದ ಮೊಳೆಯನ್ನು ಚೌಕಾಕಾರದ ರಂಧ್ರಕ್ಕೆ ತುರುಕಲು ವ್ಯರ್ಥ ಪ್ರಯತ್ನ ಮಾಡುವುದಿಲ್ಲ.

ಮಾರ್ಕ್ವೆಜ್ ಮಾತುಗಳಿಂದ ನಮಗೆ ಮೂರು ಅಂಶಗಳು ಸಿಕ್ಕಿದವು– ಅಂತಃಪ್ರಜ್ಞೆ, ಸ್ಫೂರ್ತಿ ಮತ್ತು ಪರಿಶ್ರಮ. ಇವು ಎಐಯಲ್ಲಿ ಇಲ್ಲ. ಆದ್ದರಿಂದ ಎಐ ಬಗ್ಗೆ ಭಯಪಡಬೇಕಿಲ್ಲ ಎಂದು ಆ ಬರಹಗಾರನಿಗೆ ತಿಳಿಸಿದೆ. ಇದಾದ ಮೇಲೆ ಅರ್ನೆಸ್ಟ್ ಹೆಮಿಂಗ್ವೇ ಮತ್ತು ವಿಲಿಯಂ ಫಾಕ್ನರ್ ಕುರಿತು ಮಾರ್ಕ್ವೆಜ್ ಹೇಳಿದ ಈ ಮಾತುಗಳನ್ನೂ ಗಮನಿಸಬೇಕಾಯಿತು–

'ಹೆಮಿಂಗ್ವೇ ಬರೆದ ಒಂದು ಮಾತು ನನ್ನ ಮೇಲೆ ಬಹಳ ಪ್ರಭಾವ ಬೀರಿತ್ತು: ಅವರಿಗೆ ಬರವಣಿಗೆ ಎನ್ನುವುದು 'ಬಾಕ್ಸಿಂಗ್' ಇದ್ದಂತೆ. ಅವರು ತಮ್ಮ ಆರೋಗ್ಯ ಮತ್ತು ಕ್ಷೇಮದ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದರು. ಫಾಕ್ನರ್‌ಗೆ ಕುಡುಕ ಎಂಬ ಹೆಸರಿತ್ತು. ಆದರೆ ಅವರು ಸಂದರ್ಶನದಲ್ಲಿ 'ಕುಡಿದಾಗ ಒಂದು ಸಾಲನ್ನೂ ಬರೆಯಲು ಸಾಧ್ಯವಿಲ್ಲ' ಎಂದು ಹೇಳುತ್ತಿದ್ದರು. ಹೆಮಿಂಗ್ವೇ ಕೂಡ ಇದನ್ನೇ ಹೇಳಿದ್ದರು. ನನ್ನ ಕೆಲವು ಕೃತಿಗಳನ್ನು ಓದಿದ ಕೆಟ್ಟ ಓದುಗರು, ನಾನು ಮಾದಕ ದ್ರವ್ಯ ಸೇವಿಸಿ ಇವುಗಳನ್ನು ಬರೆದಿದ್ದೇನೆಯೇ ಎಂದು ಕೇಳಿದ್ದುಂಟು. ಇದು ಅವರಿಗೆ ಸಾಹಿತ್ಯದ ಬಗ್ಗೆಯಾಗಲಿ ಅಥವಾ ಮಾದಕ ದ್ರವ್ಯಗಳ ಬಗ್ಗೆಯಾಗಲಿ ಏನೂ ತಿಳಿದಿಲ್ಲ ಎಂಬುದನ್ನು ತೋರಿಸುತ್ತದೆ. ಉತ್ತಮ ಬರಹಗಾರನಾಗಲು, ಬರೆಯುವ ಪ್ರತಿಯೊಂದು ಕ್ಷಣದಲ್ಲೂ ನಿಮ್ಮ ಮತಿ ಬಹಳ ಸ್ಪಷ್ಟವಾಗಿರಬೇಕು. ಮತ್ತು ನೀವು ಆರೋಗ್ಯವಾಗಿರಬೇಕು. ಬರವಣಿಗೆ ಎನ್ನುವುದು ಒಂದು 'ತ್ಯಾಗ' ಎಂದು ನಂಬುವ ಹಳೆಯ ಕಾಲದ ರೊಮ್ಯಾಂಟಿಕ್ ಕಲ್ಪನೆಯನ್ನು ನಾನು ವಿರೋಧಿಸುತ್ತೇನೆ. ಅಂದರೆ, ಬಡತನದಲ್ಲಿದ್ದಾಗ ಅಥವಾ ಮಾನಸಿಕವಾಗಿ ಕುಗ್ಗಿದಾಗ ಮಾತ್ರ ಉತ್ತಮ ಸಾಹಿತ್ಯ ಮೂಡಿಬರುತ್ತದೆ ಎಂಬುದು ತಪ್ಪು. ನನ್ನ ಪ್ರಕಾರ, ನೀವು ಬರೆಯುವಾಗ ದೈಹಿಕವಾಗಿ ಮತ್ತು ಮಾನಸಿಕವಾಗಿ ಉತ್ತಮ ಸ್ಥಿತಿಯಲ್ಲಿರಬೇಕು. ಸಾಹಿತ್ಯ ಸೃಷ್ಟಿಗೆ ಒಳ್ಳೆಯ ಆರೋಗ್ಯ ಬೇಕು. ಹಿಂದಿನ ಬರಹಗಾರರಿಗೆ ಇದು ತಿಳಿದಿತ್ತು. ಅವರು ಜೀವನವನ್ನು ಪ್ರೀತಿಸುತ್ತಿದ್ದವರು.'

ಇಂಥದೇ ಮಾತುಗಳನ್ನು ಹೆಮಿಂಗ್ವೇಯಂಥ ಹಲವು ಸಾಹಿತಿಗಳು ಹೇಳುತ್ತಾರೆ. ಅದನ್ನಿಟ್ಟುಕೊಂಡು ಪ್ರಸ್ತುತ ಏನಾಗುತ್ತಿದೆ ಎಂದು ನೋಡಬಹುದು. ಎಐ ಸಿದ್ಧಪಡಿಸಿದ ಬರಹಗಳು ಹೆಚ್ಚಾಗಿ ಯಾಂತ್ರಿಕ. ಅವುಗಳಲ್ಲಿ ವಾಕ್ಯ ರಚನೆಗಳು ಪುನರಾವರ್ತಿತವಾಗಿರುತ್ತವೆ. ಧಾಟಿ ಏಕತಾನ. ಶೈಲಿಯನ್ನು ಮೊದಲೇ ಊಹಿಸಬಹುದು. ಎಐ ಬರವಣಿಗೆ ತಾಂತ್ರಿಕವಾಗಿ ಸರಿಯಾಗಿಯೇ ಇರುತ್ತದೆ. ಸಮಸ್ಯೆ ಏನೆಂದರೆ, ಅದರ ಎಲ್ಲ ಬರಹಗಳು ಒಂದೇ ಥರ. ಅಮೆರಿಕದ ಪಾಯಿಂಟರ್ ಇನ್‌ಸ್ಟಿಟ್ಯೂಟ್‌ನ ಮುಖ್ಯ ಎಐ ಬೋಧಕ ಅಲೆಕ್ಸ್ ಮಹದೇವನ್ ಅವರು ಎಐ ಬರವಣಿಗೆಯನ್ನು 'ಆತ್ಮವಿಲ್ಲದ ಮತ್ತು ಸಾಧಾರಣ ಗುಣಮಟ್ಟದ' ಬರಹ ಎಂದು ವರ್ಣಿಸುತ್ತಾರೆ. ಅದು ವ್ಯಾಕರಣಬದ್ಧವಾಗಿ ಸರಿಯಿರಬಹುದು, ಆದರೆ ಅದರಲ್ಲಿ ಕಲೆ ಇರುವುದಿಲ್ಲ.

ಆದರೆ ಇನ್ನೊಂದು ವಿಚಿತ್ರ ಬೆಳವಣಿಗೆ ಆಗುತ್ತಿದೆ. ಇಂದಿನ ಇಂಟರ್ನೆಟ್ ಇಂತಹ ಸಂವಹನವನ್ನೇ ಹೆಚ್ಚು ಇಷ್ಟಪಡುತ್ತಿದೆ. ತುಂಬಾ ಅಚ್ಚುಕಟ್ಟಾದ ಮತ್ತು ನಯವಾದ ಬರಹಗಳು ಹೆಚ್ಚುತ್ತಿವೆ. ಹೆಚ್ಚು ವೃತ್ತಿಪರವಾಗಿ, ಸಮರ್ಥವಾಗಿ ಮತ್ತು ಅಲ್ಗಾರಿದಂಗಳಿಗೆ ಪೂರಕವಾಗಿ ಇರುತ್ತವೆ. ಈ ಹಿಂದೆ ಕೇವಲ ಲಿಂಕ್ಡ್‌ಇನ್ ಪೋಸ್ಟ್‌ಗಳು ಅಥವಾ ಕಂಪನಿ ಇಮೇಲ್‌ಗಳಿಗೆ ಸೀಮಿತವಾಗಿದ್ದ ಅತ್ಯಂತ ವೃತ್ತಿಪರ ಭಾಷೆ, ಈಗ ಅಂತರ್ಜಾಲದಲ್ಲಿ ನಮ್ಮ ದೈನಂದಿನ ಪೋಸ್ಟ್‌ಗಳಲ್ಲೂ ಕಾಣಿಸಿಕೊಳ್ಳುತ್ತಿದೆ. ನೀವು ಫೇಸ್ ಬುಕ್ ನೋಡಿದರೆ, ಅದು ಕೂಡ ಇಂಥ ಪೋಸ್ಟ್‌ಗಳನ್ನು ಪ್ರಮೋಟ್ ಮಾಡುವುದನ್ನು ಕಾಣಬಹುದು.

ಮನುಷ್ಯರೂ ಅದನ್ನೇ ಅನುಕರಿಸತೊಡಗುವುದು ಇದರ ದೊಡ್ಡ ಅಪಾಯ. ನಾವು ಸಹಜವಾಗಿಯೇ ಸುತ್ತಮುತ್ತ ಸದಾ ಕೇಳುವ ಅಥವಾ ಕಾಣುವ ಸಂವಹನ ಶೈಲಿಗಳನ್ನು ಅನುಕರಿಸುತ್ತೇವೆ. ಭಾಷಾ ತಜ್ಞರು ಇದನ್ನು ಎಕ್ಸ್‌ಪೋಶರ್ ಎಫೆಕ್ಟ್ ಎನ್ನುತ್ತಾರೆ. ಕಾಲಾನಂತರದಲ್ಲಿ ಜನ ಅಥವಾ ಲೇಖಕರು ತಮಗೇ ತಿಳಿಯದಂತೆ ಎಐ ವಾಕ್ಯಗಳ ಲಯ, ಪದಗಳು, ಧಾಟಿಯನ್ನು ಅನುಕರಿಸಲು ಪ್ರಾರಂಭಿಸುತ್ತಾರೆ. ಈಗ ಎಐ ಸಿದ್ಧಪಡಿಸಿದ ಬರಹಗಳು ಅಂತರ್ಜಾಲ ಮಾಹಿತಿಯಲ್ಲಿ



ಹಾಸುಹೊಕ್ಕಾಗಿವೆ. ಹಾಗಾಗಿ ಈ ಶೈಲಿಗಳು ಜನ ಪ್ರತಿದಿನ ಬಳಸುವ ಡಿಜಿಟಲ್ ಪರಿಸರದ ಭಾಗವಾಗುತ್ತಿವೆ. ನಿಧಾನವಾಗಿ ನೇರವಾಗಿ ಎಐ ಬಳಸಿ ಬರೆಯದವರೂ ಸಹ ಅರಿಯದಂತೆ ಎಐ ರೀತಿಯಲ್ಲೇ ಬರೆಯಲು ಶುರುಮಾಡಬಹುದು. ಅಥವಾ, ತಾನು ಬರೆದದ್ದು ಎಐಯಂತಿದೆ ಎಂದು ಕಳವಳಪಡ ಲೂಬಹುದು.

ಇದೆಲ್ಲದರಿಂದ ಬಲ ಬಂದಿರುವುದೀಗ ಮನುಷ್ಯ ಸಹಜ ದೋಷ, ಅಪರಿಪೂರ್ಣತೆ, ತಪ್ಪುಗಳಿಗೆ. ಹಿಂದೆ, ತಪ್ಪುಗಳು ಇರಬಾರದೆನ್ನಲಾಗುತ್ತಿತ್ತು. ಈಗ ಅದು ಇದ್ದರೇ ಅಥೆಂಟಿಕ್ ಮನುಷ್ಯಕೃತಿ ಎನ್ನಬಹುದು. ಅಕ್ಷರ ತಪ್ಪುಗಳು, ವ್ಯಾಕರಣ ದೋಷಗಳು, ಮಾತಿನ ಶೈಲಿ, ಭಾವನಾತ್ಮಕ ಅಸ್ಪಷ್ಟತೆ– ಇವೆಲ್ಲವೂ ಈಗ ಅಚ್ಚುಕಟ್ಟಾದ ಬರವಣಿಗೆಗಿಂತ ಹೆಚ್ಚು 'ಮನುಷ್ಯ ಸಹಜ'ವಾಗಿ ಕಾಣುತ್ತವೆ. ಅವುಗಳಲ್ಲಿ ವೈಯಕ್ತಿಕ ಅನುಭವ, ಅಚ್ಚರಿ, ಅನಿರೀಕ್ಷಿತ ತಿರುವುಗಳು, ಒರಟುತನ ಎಲ್ಲ ಇರುತ್ತವೆ. ಇಂದು ನಾವೆಲ್ಲರೂ ಇಂಥ ಬರವಣಿಗೆಯನ್ನು ಹುಡುಹುಡುಕಿ ಸವಿಯಬೇಕಾಗಿದೆ. ಅಂದರೆ, ದೋಷಪೂರಿತವಾಗಿದ್ದರೂ, ಏರಿಳಿತಗಳಿಂದ ಕೂಡಿದ್ದರೂ, ಅತ್ಯಂತ ಗಾಢವಾದ ಮಾನವೀಯ ಅಭಿವ್ಯಕ್ತಿ ಇರುವ ಬರವಣಿಗೆ. ಇದನ್ನು ನಕಲು ಮಾಡಲು ಎಐಗೆ ಸಾಧ್ಯವಿಲ್ಲ. ಮನುಷ್ಯನ ಬರವಣಿಗೆಯಲ್ಲಿ ಅನಿರೀಕ್ಷಿತ ಅಂಶಗಳು ಮತ್ತು ವೈವಿಧ್ಯ ಇರುತ್ತದೆ. ಏಕೆಂದರೆ ಮನುಷ್ಯನೇ ಆಲೋಚನೆಗಳೇ ಹಾಗೆ ಏರಿಳಿತ, ಅಡೆತಡೆಗಳು, ಅಸಮತೋಲನದಿಂದ ಕೂಡಿದ್ದು.

ಸಲ್ಮಾನ್ ರಶ್ದಿ ಬರವಣಿಗೆಯ ಕೌಶಲದ ಬಗ್ಗೆ ಹೇಳುತ್ತ ಈ ಮುಂದಿನ ಮಾತುಗಳನ್ನು ಹೇಳುತ್ತಾರೆ– 'ನಿಮ್ಮ ಬರವಣಿಗೆಯ ಕೌಶಲ ಉತ್ತಮಗೊಳಿಸಿಕೊಳ್ಳಲು ಒಂದು ಅತ್ಯುತ್ತಮ ಮಾರ್ಗ ಇದೆ. ಅದ್ಯಾವುದು ಅಂದ್ರೆ, ನಿಮ್ಮ ಬಗ್ಗೆ ನಿಮಗೇ ಆಳವಾದ ಅರಿವಿರುವುದು ಮತ್ತು ನಿಮಗೆ ಯಾವುದು ಹೆಚ್ಚು ಮುಖ್ಯ ಎಂಬುದು ತಿಳಿದಿರುವುದು. ನೀವು ಯಾರು? ಈ ಜಗತ್ತಿಗೆ ನೀವು ಏನು ಹೇಳಬೇಕಿದೆ? ಇದನ್ನು ನೀವು ಎಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತೀರೋ, ಅಷ್ಟು ಚೆನ್ನಾಗಿ ನಿಮ್ಮ ಬರವಣಿಗೆಯ ಕೌಶಲ ಅರಳುತ್ತದೆ.' ಮೇಲೆ ಹೇಳಿದ ಮಾರ್ಕ್ವೆಜ್ ಅವರ ವಿಚಾರಗಳಿಗೂ ಮತ್ತು ರಶ್ದಿ ಅವರ ಈ ಮಾತುಗಳಿಗೂ ಒಂದು ಸಾಮ್ಯ ಇದೆ. ಮಾರ್ಕ್ವೆಜ್ 'ಅಜ್ಜಿ ಹೇಳುತ್ತಿದ್ದ ಕಥೆಗಳ ಧಾಟಿ' ಅಥವಾ 'ಅಂತಃಪ್ರಜ್ಞೆ'ಯ ಬಗ್ಗೆ ಮಾತನಾಡಿದರೆ, ರಶ್ದಿ 'ಆತ್ಮಜ್ಞಾನ'ದ ಬಗ್ಗೆ ಮಾತನಾಡುತ್ತಿದ್ದಾರೆ. ಎರಡೂ ಹೇಳುತ್ತಿರುವುದು ಒಂದನ್ನೇ. ಬರವಣಿಗೆ ಎಂಬುದು ಹೊರಗಿನ ತಂತ್ರಕ್ಕಿಂತ ಹೆಚ್ಚಾಗಿ ನಿಮ್ಮ ಒಳಗಿನಿಂದ ಬರಬೇಕಾದ ಧ್ವನಿ ಎಂಬುದನ್ನು.

ನಮ್ಮ ಕನ್ನಡದ ಕಥೆಗಾರ ಜಯಂತ ಕಾಯ್ಕಿಣಿ ಆಗಾಗ ಹೇಳುತ್ತಿರುತ್ತಾರೆ– 'ಕಥೆ ಬರೆಯಲು ಕುಳಿತುಕೊಳ್ಳುವಾಗ ನನ್ನ ತಲೆಯಲ್ಲಿ ಬೇರೇನೂ ಇರುವುದಿಲ್ಲ. ಮೊದಲ ಸಾಲು ಹುಟ್ಟಿಕೊಳ್ಳುತ್ತದೆ. ಅದನ್ನು ಬರೆಯುತ್ತೇನೆ. ಮೊದಲ ಸಾಲಿನಿಂದ ಎರಡನೇ ಸಾಲು ಹುಟ್ಟಿಕೊಳ್ಳುತ್ತದೆ. ಹೀಗೆ ಯಾವುದೂ ಮೊದಲೇ ನಿಶ್ಚಿತವಾಗಿರುವುದಿಲ್ಲ. ಏನು ಬರೆಯಬೇಕಿದೆ ಎಂಬುದು ಮೊದಲೇ ತಿಳಿದಿರುವುದಿಲ್ಲ' ಎಂದು. ಯಶವಂತ ಚಿತ್ತಾಲರ ಒಂದು ಮಾತನ್ನೂ ಅವರು ಕೋಟ್ ಮಾಡುತ್ತಾರೆ. 'ಕೃತಿಯಲ್ಲಿ ಏನಾಗಲಿದೆ ಎಂಬುದನ್ನು ಮೊದಲೇ ತಿಳಿದುಕೊಂಡು ನಾನು ಬರೆಯುವುದಿಲ್ಲ, ತಿಳಿಯುವುದಕ್ಕಾಗಿಯೇ ಅದನ್ನು ಬರೆಯುತ್ತೇನೆ' ಎಂಬುದದು.

ಹೆಚ್ಚು ಕಡಿಮೆ ಇದೇ ಅರ್ಥ ಬರುವ ಮಾತನ್ನು ಜಪಾನಿ ಕಾದಂಬರಿಕಾರ ಹರೂಕಿ ಮುರಾ ಕಮಿಯೂ ಹೇಳುತ್ತಾನೆ– 'ನಾನು ಬರೆಯುತ್ತಿ ರುವಾಗ, ಕತೆಯಲ್ಲಿ ಯಾರು ಯಾವ ಕೃತ್ಯ ಎಸಗಿದ್ದಾರೆ ಎಂಬುದು ನನಗೂ ತಿಳಿದಿರೋದಿಲ್ಲ. ಓದುಗರು ಮತ್ತು ನಾನು ಒಂದೇ ನೆಲೆಯಲ್ಲಿ ರುತ್ತೇವೆ. ನಾನು ಕಥೆ ಬರೆಯಲು ಪ್ರಾರಂಭಿಸಿ ದಾಗ, ಮುಂದೆ ಏನಾಗಲಿದೆ, ಅಂತ್ಯ ಏನು ಎಂದು ನನಗೆ ತಿಳಿದಿರುವುದಿಲ್ಲ. ಕೊಲೆ ಪ್ರಕರಣವಿದ್ದರೆ, ಕೊಲೆಗಾರ ಯಾರೆಂದೂ ನನಗೆ ತಿಳಿಯದು. ನಾನು ಪುಸ್ತಕವನ್ನು ಬರೆಯುವುದು ಏಕೆಂದರೆ, ಅದನ್ನು ಕಂಡುಹಿಡಿಯಲು. ಕೊಲೆಗಾರ ಯಾರೆಂದು ನನಗೆ ಮೊದಲೇ ತಿಳಿದಿದ್ದರೆ ನಾನು ಕಥೆ ಯಾಕೆ ಬರೆಯ ಬೇಕು?' ಈ ಮಾತುಗಳ ಸಾಮ್ಯತೆ ನಮ್ಮನ್ನು ಚಕಿತಗೊಳಿಸುವಂತಿದೆ. ಓದುಗರ ಹೃದಯ ಸ್ಪರ್ಶಿಸುವಂತೆ ಬರೆಯುವ ಸಾಹಿತಿಗಳು ವಿಶ್ವದು ದ್ದಗಲಕ್ಕೂ ಬೇರೆ ಬೇರೆ ಥರ ಇದ್ದರೂ ಒಂದೇ ಥರ ಎನ್ನಬಹುದೋ ಏನೋ.

ಆಮೇಲೆ, ನಮ್ಮ ದೇವನೂರು ಮಹಾದೇವ ಅವರು ಹೇಳಬಹುದಾದಂಥ ಒಂದು ಮಾತನ್ನೂ ಮುರಾಕಮಿ ಹೇಳುತ್ತಾನೆ. ಅದು ಹೀಗಿದೆ– ನಾನು ಕಾದಂಬರಿಗಳನ್ನು ಬರೆಯುವುದಕ್ಕೆ ಒಂದೇ ಒಂದು ಕಾರಣ ಇದೆ. ಪ್ರತಿಯೊಬ್ಬ ಮಾನವನ ಆತ್ಮದ ಗೌರವದತ್ತ ಬೆಳಕು ಚೆಲ್ಲುವುದು. ಕಥೆಯ ಉದ್ದೇಶ ಎಚ್ಚರಿಕೆಯ ಗಂಟೆ ಬಾರಿಸುವಂತದ್ದು. ವ್ಯವಸ್ಥೆ ಎಂಬ ದೊಡ್ಡ ಶಕ್ತಿ ನಮ್ಮ ಆತ್ಮವನ್ನು ತನ್ನ ಬಲೆಗೆ ಸಿಕ್ಕಿಸಿ ಅವಮಾನ ಮಾಡದಂತೆ ಅದರ ಮೇಲೆ ಸದಾ ಬೆಳಕು ಹರಿಸುವುದು ಕಥೆಯ ಕೆಲಸ. ಪ್ರತಿಯೊಬ್ಬರ ಆತ್ಮವೂ ವಿಭಿನ್ನ, ವಿಶೇಷ ಎಂಬುದನ್ನು ಕಥೆಗಳ ಮೂಲಕ ಸ್ಪಷ್ಟಪಡಿಸುವುದು ಕಾದಂಬರಿಕಾರನ ಕೆಲಸ ಎಂದು ನಾನು ನಂಬುತ್ತೇನೆ. ಜೀವನ, ಸಾವಿನ ಕಥೆಗಳು, ಪ್ರೀತಿಯ ಕಥೆಗಳು, ಜನರನ್ನು ಅಳಿಸುವ ಕಥೆಗಳು, ಭಯದಿಂದ ನಡುಗಿಸುವ ಕಥೆಗಳು, ನಗುವಿನಿಂದ ಕದಲಿಸುವ ಕಥೆಗಳು – ಇವೆಲ್ಲವನ್ನೂ ಬರೆಯುವುದು ಅದಕ್ಕಾಗಿಯೇ. ಆ ಕಾರಣಕ್ಕೇ ನಾವು ಪ್ರತಿ ದಿನ ತುಂಬಾ ಗಂಭೀರವಾಗಿ ಕಲ್ಪಿತ ಕಥೆಗಳನ್ನು ರಚಿಸುತ್ತಾ ಮುಂದುವರೆಯುತ್ತೇವೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವೇತನ ಎಲ್ಲಿ ಹೋಗುತ್ತಿದೆ?

ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯ ಕೊಠಡಿ ಮೇಲ್ವಿಚಾರಕರ ಸಂಭಾವನೆಯನ್ನು ಆ ದಿನದ ಪರೀಕ್ಷೆಯ ಕೊನೆಯ ದಿನದಲ್ಲಿ ನೀಡಲಾಗುತ್ತಿತ್ತು. ಆದರೆ, ಈ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಯಾವ ಸ್ಪರ್ಧಾತ್ಮಕ ಪರೀಕ್ಷೆಯ ಕೊಠಡಿ ಮೇಲ್ವಿಚಾರಕರ ವೇತನವನ್ನು ಹದಿನೈದು ದಿನವಾದರೂ ನೀಡಲಾಗುತ್ತಿಲ್ಲ. ವಿದ್ಯಾರ್ಥಿಗಳು ಅಥವಾ ಅಭ್ಯರ್ಥಿಗಳು ಪರೀಕ್ಷೆಯ ಮೂರ್ನಾಲ್ಕು ತಿಂಗಳು ಮೊದಲೇ ಹಣವನ್ನು ಕಟ್ಟಿದ್ದರೂ ಆ ಹಣವನ್ನು ಸೂಕ್ತವಾಗಿ ಬಳಸಿಕೊಳ್ಳದೆ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎನ್ನುವ ಸಂಶಯ ಬರುತ್ತಿದೆ. ಇತ್ತೀಚೆಗೆ ಪಿಯುಸಿ ವಿದ್ಯಾರ್ಥಿಗಳ ಸಿಇಟಿ ಪರೀಕ್ಷೆ ಮುಗಿದರೂ ಕೊಠಡಿ ಮೇಲ್ವಿಚಾರಕರು ಸೇರಿದಂತೆ ಎಲ್ಲ ಸಿಬ್ಬಂದಿ ವರ್ಗದವರಿಗೆ ಹಣ ನೀಡಿಲ್ಲ. ಸಾಲ ಮಾಡಿದ ಆಸಾಮಿ ಇನ್ನೊಬ್ಬರ ಹತ್ತಿರ ಸಾಲ ಮಾಡಿ ಮೊದಲ ಸಾಲವನ್ನು ತೀರಿಸಿದಂತೆ ಸರಕಾರವೂ ಕೂಡ ಹಣವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ರವಾನಿಸಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಹಾಗೆ ಕಾಣುತ್ತಿದೆ. ಇನ್ನು ಮೌಲ್ಯಮಾಪನದ ವೇತನಕ್ಕೆ ಬಂದರೆ ಮೌಲ್ಯಮಾಪನ ಮುಗಿದ ತಿಂಗಳೊಳಗೆ ಮೌಲ್ಯಮಾಪಕರ ವೇತನ ತಲುಪುತ್ತಿತ್ತು. ಆದರೆ ಕಳೆದ ಮೂರು ವರ್ಷದಿಂದ ಅಂದರೆ ಕಾಂಗ್ರೆಸ್ ಸರಕಾರ ಬಂದಾಗಿನಿಂದ ಆ ಹಣ ಕೈ ಸೇರಲು ವರ್ಷ ವಾಗುತ್ತಿದೆ. ಕಳೆದ ವರ್ಷ ಅಂದರೆ 2025–26ರಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಕೊಠಡಿ ಮೇಲ್ವಿಚಾರಕರ ಒಂದು ದಿನದ ಪರೀಕ್ಷೆಯ ವೇತನ ರು.120 ಇರುತ್ತದೆ ಆ ಹಣವನ್ನು ಕೂಡ ವರ್ಷವೇ ಕಳೆದು ಹೋದರೂ ನೀಡಿಲ್ಲವೆಂದರೆ ಈ ಅತಿ ಚಿಕ್ಕ ಹಣವನ್ನು ನೀಡಲಾಗದ ದುಸ್ಥಿತಿಗೆ ಬಂದಿದೆ ಸರಕಾರಕ್ಕೆ ಎಂದು ಅರ್ಥ. ಹಣ ಡಿಡಿಪಿಯು ಕಚೇರಿಗೆ ನೀಡಲಾಗಿದೆ ಎಂದು ಎಲ್ಲ ಸಿಬ್ಬಂದಿ ವರ್ಗದವರಿಗೂ ಮೊಬೈಲ್ ಮುಖಾಂತರ ಸಂದೇಶ ಬಂದಿದ್ದರೂ ಕಾಲೇಜಿನ ಪ್ರಾಂಶುಪಾಲರು, ಡಿಡಿಪಿಯು ಕಚೇರಿಯವರು ನಮಗೆ ಹಣ ಬಂದಿಲ್ಲ, ಗೊತ್ತಿಲ್ಲ ಎಂಬ ಉತ್ತರ ನೀಡುತ್ತಿದ್ದಾರೆ. ಹಾಗಾದರೆ ಹಣ ಕದಿಯುತ್ತಿರುವವರು ಯಾರು? ಶಿಕ್ಷಣ ಸಚಿವರೇ? ದಯವಿಟ್ಟು ನಿಮ್ಮ ಇಲಾಖೆಯ ಈ ಅವ್ಯವಸ್ಥೆಯನ್ನು ಸರಿಪಡಿಸಿ ಆಯಾ ಸಿಬ್ಬಂದಿ ವರ್ಗಕ್ಕೆ ಹಣ ತಲುಪುವಂತೆ ಮಾಡಿ.

– ಪಾಂಚಜನ್ಯ ಪ್ರದೀಪ್, ಮೈಸೂರು

ಸಕಾಲಿಕ ಸಲಹೆಗಳು ಅವಶ್ಯ

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಇತ್ತೀಚೆಗೆ ದೇಶದ ಜನರಿಗೆ ಕೆಲವು ಮಿತವ್ಯಯ ಸಲಹೆಗಳನ್ನು ನೀಡಿರುವುದು ಸರಿಯಾಗಿದೆ. ಮಧ್ಯಪ್ರಾಚ್ಯದಲ್ಲಿ ಕಳೆದ ಎರಡು ತಿಂಗಳಿನಿಂದ ಅಮೆರಿಕದ–ಇಸ್ರೇಲ್, ಇರಾನ್ ವಿರುದ್ಧ ನಡೆಸು ತ್ತಿರುವ ಯುದ್ಧ ವಿಶ್ವದ ಬಹುತೇಕ ದೇಶಗಳ ಮೇಲೆ ತನ್ನದೇ ಆದ ದುಷ್ಪರಿಣಾಮ ಬೀರುತ್ತಿದೆ. ನಮ್ಮ ದೇಶ ಕೂಡ ಇದಕ್ಕೆ ಹೊರತಾಗಿಲ್ಲ. ನಮ್ಮ ದೇಶದಲ್ಲಿ ವಾಣಿಜ್ಯ ಅಡುಗೆ ಅನಿಲದ ವಿತರಣೆಯ ಮೇಲೆ ಸಾಕಷ್ಟು ದುಷ್ಪರಿಣಾಮವಾಗಿದೆ. ಈ ಯುದ್ಧ ದಿನ ಬಳಕೆಯ ಅಗತ್ಯ ವಸ್ತುಗಳ ಬೆಲೆ ಏರಿಕೆ, ಪೆಟ್ರೋಲಿಯಂ ಉತ್ಪನ್ನಗಳ ಕೊರತೆ, ಮುಂತಾದ ಹತ್ತು ಹಲವು ಸಂಕಷ್ಟಗಳ ಸರಮಾಲೆಯನ್ನೇ ತಂದಿದೆ. ಕೊಲ್ಲಿಯುದ್ಧ ಪರೋಕ್ಷವಾಗಿ ಉದ್ಯೋಗ ಕಡಿತವನ್ನು ಸಹಾ ಉಂಟುಮಾಡಿದೆ. ಬೆಂಗಳೂರು ಸೇರಿದಂತೆ ದೇಶಾದ್ಯಂತ ಹಲವಾರು ಹೋಟೆಲ್, ಪ್ರವಾಸಿತಾಣಗಳು ಮುಚ್ಚುತ್ತಿವೆ. ದೇಶದ ವಿದೇಶಿ ವಿನಿಮಯ ಕಳವಳಕಾರಿ ಹಂತ ತಲುಪಿದೆ. ಕೊಲ್ಲಿ ಯುದ್ಧದಿಂದಾಗಿ, 3 ಸರಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ 10 ವಾರಗಳಲ್ಲಿ ಲಕ್ಷ ಕೋಟಿ ರುಪಾಯಿಗಳ ನಷ್ಟಉಂಟಾಗಿದೆ. ಈ ಹಿನ್ನೆಲೆ ಯಲ್ಲಿ ದೇಶದ ಪ್ರತಿಯೊಬ್ಬ ಪ್ರಜೆ ಕೂಡ, ತನ್ನ ಜವಾಬ್ದಾರಿ ಅರಿತು ನಡೆಯಬೇಕಾಗಿದೆ. 1991 ರಲ್ಲಿ ಪಿ.ವಿ. ನರಸಿಂಹ ರಾವ್, ಪ್ರಧಾನಿ ಯಾಗಿ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಹಳಿತಪ್ಪಿದ್ದ ಅಂದಿನ ಅರ್ಥವ್ಯವಸ್ಥೆಗೆ ಕಾಯಕಲ್ಪ ನೀಡಲು ಖ್ಯಾತ ಆರ್ಥಿಕ ತಜ್ಞರಾಗಿದ್ದ ಡಾ. ಮನಮೋಹನ್ ಸಿಂಗ್ ಅರ್ಥ ಸಚಿವರನ್ನಾಗಿ ನೇಮಿಸಿ, ದೇಶದಲ್ಲಿ ನೂತನ ಅರ್ಥ ನೀತಿಗಳನ್ನು ಜಾರಿಗೆ ತಂದದ್ದು ಈಗ ಗತ ಇತಿಹಾಸ. ಆದ್ದರಿಂದ ಮೋದಿಯವರ ಸಲಹೆಗಳಿಗೆ ವಿಶೇಷ ಅರ್ಥ ಕಲ್ಪಿಸದೇ ವಿಶಾಲ ದೃಷ್ಟಿಯಿಂದ ನೋಡಬೇಕಿದೆ. ಇದರ ಜತೆಗೆ ಕೇಂದ್ರ ಸರಕಾರ ಕೂಡ ಸರಕಾರಿ ವೆಚ್ಚದ ಮೇಲೆ ಕಡಿವಾಣ ಹಾಕುವುದು, ಅನಗತ್ಯ ಸಭೆ ಸಮಾರಂಭಗಳನ್ನು ನಿಷೇಧಿಸುವುದು, ಪ್ರವಾಸಗಳನ್ನು ನಿರ್ಬಂಧಿಸುವುದು, ಅನಗತ್ಯ ಹುದ್ದೆಗಳನ್ನು ತುಂಬದೇ ಇರುವುದು ಮುಂತಾದ ಹತ್ತು ಹಲವು ಮಿತವ್ಯಯ ಕ್ರಮಗಳನ್ನು ಅನುಸರಿಸಿ, ಇಡೀ ದೇಶದ ಜನರಿಗೆ ಮಾದರಿಯಾಗಬೇಕಾಗಿದೆ.

– ಕೆ.ವಿ.ವಾಸು, ವಿವೇಕಾನಂದ ನಗರ.

ಪಶ್ಚಿಮ ಬಂಗಾಳದಲ್ಲಿ ಪುಟಿದೆದ್ದ ಪ್ರಚಂಡಶಕ್ತಿ ಭಾರತೀಯ ಜನತಾ ಪಕ್ಷ!

ಪಶ್ಚಿಮ ಬಂಗಾಳದಲ್ಲಿ ಭಾರತೀಯ ಜನತಾ ಪಕ್ಷದ ವಿಕಸನವೂ ಭಾರತದ ರಾಜಕೀಯದ ಅತ್ಯಂತ ಮಹತ್ವದ ಅಧ್ಯಾಯಗಳಲ್ಲಿ ಒಂದಾಗಿದೆ. ದಶಕಗಳ ಕಾಲ ಎಡಪಂಥೀಯ ಹಾಗೂ ಪ್ರಾದೇಶಿಕ ರಾಜಕೀಯದ ಪ್ರಭಾವದಲ್ಲಿದ್ದ ರಾಜ್ಯದಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಿಂತನೆ ಆಧಾರಿತ ರಾಜಕೀಯ ಬಲವಾಗಿ ಬೆಳೆಯುವುದು ಒಂದು ದೀರ್ಘ ರಾಜಕೀಯ ಯಾತ್ರೆಯ ಫಲ.

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಭಾರತೀಯ ರಾಜಕೀಯದ ಇತಿಹಾಸದಲ್ಲಿ ಕೆಲವು ಚುನಾವಣೆಗಳು ಕೇವಲ ಅಧಿಕಾರ ಬದಲಾವಣೆಯಷ್ಟೇ ಅಲ್ಲ; ಅವು ಚಿಂತನೆ, ಸಾಂಸ್ಕೃತಿಕ ಧೋರಣೆ, ಹಾಗೂ ರಾಷ್ಟ್ರದ ರಾಜಕೀಯ ಮನೋಭಾವದ ದಿಕ್ಕನ್ನೇ ಬದಲಿಸುವ ಕ್ಷಣಗಳಾಗುತ್ತವೆ. ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಿಂತನೆಯಿಂದ ಬೆಳೆದ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೇರಿದ ಕ್ಷಣವೂ ಅಂತಹದೇ ಒಂದು ಐತಿಹಾಸಿಕ ಘಟನೆಯಾಗಿ ಪರಿಗಣಿಸಬಹುದು.

ಒಮ್ಮೆ ಕಮ್ಯುನಿಸಮ್‌ನ ಕೋಟೆ, ಬಳಿಕ ಪ್ರಾದೇಶಿಕ ರಾಷ್ಟ್ರವಾದದ ಗಢ, ಹಾಗೂ ದೀರ್ಘಕಾಲ ಹಿಂದುತ್ವ ರಾಜಕೀಯಕ್ಕೆ ಅಸಾಧ್ಯ ನೆಲ ಎಂದು ಕರೆಯಲ್ಪಟ್ಟಿದ್ದ ಈ ರಾಜ್ಯದಲ್ಲಿ ಬಿಜೆಪಿ ಏರಿಕೆಯಾಗುವುದು ಸಾಮಾನ್ಯ ರಾಜಕೀಯ ಘಟನೆಯಲ್ಲ. ಅದು ದಶಕಗಳ ಸಂಘರ್ಷ, ಸಂಘಟನೆ, ತಾತ್ವಿಕ ಹೋರಾಟ ಮತ್ತು ರಾಷ್ಟ್ರೀಯ ರಾಜಕೀಯದ ಬದಲಾವಣೆಯ ಪ್ರತಿಫಲ.

ಬಂಗಾಳ, ಚಿಂತನೆಗಳ ಯುದ್ಧಭೂಮಿ: ಪಶ್ಚಿಮ ಬಂಗಾಳ ಭಾರತಕ್ಕೆ ಕೇವಲ ಒಂದು ರಾಜ್ಯವಲ್ಲ, ಅದು ಸಾಹಿತ್ಯ, ಕ್ರಾಂತಿ, ರಾಷ್ಟ್ರೀಯತೆ ಮತ್ತು ಬೌದ್ಧಿಕ ಚರ್ಚೆಗಳ ನೆಲ. ರವೀಂದ್ರನಾಥ ಟ್ಯಾಗೋರ್, ಸುಭಾಷ್ ಚಂದ್ರ ಬೋಸ್, ಸ್ವಾಮಿ ವಿವೇಕಾನಂದ, ಬಂಕಿಮಚಂದ್ರ ಚಟ್ಟೋಪಾಧ್ಯಾಯ ಮುಂತಾದ ಮಹನೀಯರು ಹುಟ್ಟಿದ ನೆಲವೇ ಬಂಗಾಳ. ಸ್ವಾತಂತ್ರ್ಯಾನಂತರ ಇಲ್ಲಿ ಕಮ್ಯುನಿಸ್ಟ್ ಚಳವಳಿ ಬಲವಾಗಿ ಬೆಳೆಯಿತು. ಸುಮಾರು 34 ವರ್ಷಗಳ ಕಾಲ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್) ನೇತೃತ್ವದ ಎಡಪಂಥೀಯ ಸರಕಾರ ಅಧಿಕಾರದಲ್ಲಿತ್ತು. ನಂತರ ಮಮತಾ ಬ್ಯಾನರ್ಜಿ ನೇತೃತ್ವದ ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್ ರಾಜ್ಯದ ರಾಜಕೀಯದ ಕೇಂದ್ರಬಿಂದುವಾಯಿತು. ಈ ಹಿನ್ನೆಲೆಯಲ್ಲೇ ಬಿಜೆಪಿ ಬಂಗಾಳದಲ್ಲಿ ಬೆಳೆಯುವುದು ಅನೇಕರಿಗೆ ಅಸಾಧ್ಯವೆನಿಸಿತ್ತು.

ಅದರಲ್ಲೂ ಸಿಂಗೂರು ಚಳವಳಿಯಿಂದ ಟಿಎಂಸಿ ಬೆಳೆದ ಪರಿ ಭಾರತದ ಹಾಗೂ ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಒಂದು ವಿಶೇಷ ಅಧ್ಯಾಯ. ಒಮ್ಮೆ ಬೌದ್ಧಿಕ ಚರ್ಚೆಗಳ ನೆಲ, ಕ್ರಾಂತಿಕಾರರ ತವರೂರು, ಎಡಪಂಥೀಯ ಚಿಂತನೆಯ ಕೋಟೆಯಾಗಿದ್ದ ಈ ರಾಜ್ಯ, ಕಳೆದ ಎರಡು ದಶಕಗಳಲ್ಲಿ ತೀವ್ರ ರಾಜಕೀಯ ಹಿಂಸೆ, ಬೀದಿ ಸಂಘರ್ಷ, ಸಾಂಸ್ಕೃತಿಕ ಧ್ರುವೀಕರಣ ಮತ್ತು ಆಡಳಿತಾತ್ಮಕ ವಿವಾದಗಳ ಕೇಂದ್ರವಾಗಿ ಮಾರ್ಪಟ್ಟಿತು.

ಈ ಬದಲಾವಣೆಯ ಪ್ರಮುಖ ತಿರುವು ಎಂದರೆ ಸಿಂಗೂರು ಮತ್ತು ನಂದಿಗ್ರಾಮ ಚಳವಳಿಗಳು. ಅಲ್ಲಿಂದ ಆರಂಭವಾದ ರಾಜಕೀಯ ಪಯಣವು ಮಮತಾ ಬ್ಯಾನರ್ಜಿ ಅವರನ್ನು ರಾಜ್ಯದ ಅತಿ ದೊಡ್ಡ ನಾಯಕಿಯಾಗಿ ರೂಪಿಸಿತು. ಆದರೆ, ಅದೇ ಸಮಯದಲ್ಲಿ, ಬಂಗಾಳ ರಾಜಕೀಯದಲ್ಲಿ ಹಿಂಸೆ, ಪ್ರತೀಕಾರ ಮತ್ತು ಕ್ಯಾಡರ್ ಸಂಸ್ಕೃತಿ ಮತ್ತಷ್ಟು ಗಾಢವಾಯಿತು ಎಂಬ ಟೀಕೆಯೂ ಹೆಚ್ಚಾಯಿತು.

ಟಾಟಾ ಯೋಜನೆ ಮತ್ತು ಸಿಂಗೂರು ಚಳವಳಿ: 2006ರಲ್ಲಿ ಟಾಟಾ ಮೋಟಾರ್ಸ್ ತನ್ನ ನ್ಯಾನೋ ಕಾರು ಯೋಜನೆಗಾಗಿ ಹೂಗ್ಲಿ ಜಿಲ್ಲೆಯ ಸಿಂಗೂರಿನಲ್ಲಿ ಕಾರ್ಖಾನೆ ಸ್ಥಾಪಿಸಲು ಮುಂದಾಯಿತು. ಆಗ ರಾಜ್ಯದಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್) ನೇತೃತ್ವದ ಎಡಪಂಥೀಯ ಸರಕಾರ ಅಧಿಕಾರದಲ್ಲಿತ್ತು. ಸರಕಾರ ಇದನ್ನು ಕೈಗಾರಿಕಾ ಅಭಿವೃದ್ಧಿಯ ಹೆಜ್ಜೆ ಎಂದು ಬಿಂಬಿಸಿತು. ಆದರೆ, ಸಾವಿರಾರು ರೈತರು ಭೂಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸಿದರು. ಕೃಷಿಭೂಮಿಯನ್ನು ಬಲವಂತವಾಗಿ ಕಸಿದುಕೊಳ್ಳಲಾಗುತ್ತಿದೆ ಎಂಬ ಆರೋಪ ಜೋರಾಯಿತು.

ಈ ಸಂದರ್ಭದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ಮುನ್ನಡೆದ ಈ ಹೋರಾಟ ರಾಜ್ಯ ರಾಜಕೀಯದ ದಿಕ್ಕನ್ನೇ ಬದಲಿಸಿತು. ರೈತರ ಹಕ್ಕು, ಭೂ ರಕ್ಷಣೆ ಮತ್ತು ಸಾಮಾನ್ಯ ಜನರ ಬದುಕಿನ ಪ್ರಶ್ನೆಗಳನ್ನು ಕೇಂದ್ರವಾಗಿಸಿಕೊಂಡು ತೃಣಮೂಲ ಕಾಂಗ್ರೆಸ್ ದೊಡ್ಡ ಜನಾಂದೋಲನ ನಿರ್ಮಿಸಿತು. ಸಿಂಗೂರು ಮತ್ತು ಬಳಿಕದ ನಂದಿ ಗ್ರಾಮ ಹೋರಾಟಗಳು ಎಡಪಂಥೀಯ ಸರಕಾರದ ನೈತಿಕ ಬಲ ಕುಂದಿಸಿದವು. 34 ವರ್ಷಗಳ ಕಾಲ ನಿರಂತರ ಆಡಳಿತ ನಡೆಸಿದ್ದ ಎಡಪಂಥೀಯರು ಜನಪರ ಸರಕಾರ ಎಂಬ ಇಮೇಜ್ ಹೊಂದಿದ್ದರು. ಆದರೆ, ಭೂಸ್ವಾಧೀನ ವಿವಾದ, ಪೊಲೀಸ್ ದಮನ ಮತ್ತು ಗ್ರಾಮೀಣ ಅಸಮಾಧಾನದಿಂದ ಅವರ ಜನಾಧಾರ ಕುಸಿಯತೊಡಗಿತು. 2011ರ ಚುನಾವಣೆಯಲ್ಲಿ ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್ ಭಾರೀ ಜಯಗಳಿಸಿ ಅಧಿಕಾರಕ್ಕೆ ಬಂತು. ಇದು ಕೇವಲ ಸರಕಾರ ಬದಲಾವಣೆ ಅಲ್ಲ; ಬಂಗಾಳದ ರಾಜಕೀಯ ಮನೋಭಾವದ ದೊಡ್ಡ ತಿರುವಾಗಿತ್ತು. ಆದರೆ, ಹಲವಾರು ವಿಶ್ಲೇಷಕರ ಪ್ರಕಾರ, ಎಡ ಪಂಥೀಯ ಕ್ಯಾಡರ್ ಸಂಸ್ಕೃತಿಯೇ ನಂತರ ತೃಣಮೂಲ ವ್ಯವಸ್ಥೆಯೊಳಗೆ ಸೇರಿಕೊಂಡಿತು. ಪಕ್ಷ ಬದಲಾಗಿದ್ದರೂ, ನೆಲಮಟ್ಟದ ರಾಜಕೀಯ ವಿಧಾನಗಳು ಬಹುಪಾಲು ಅದೇ ರೀತಿಯಲ್ಲಿ ಮುಂದು ವರಿದವು ಎಂಬ ಆರೋಪ ಕೇಳಿಬಂದಿತು.

ರಾಜಕೀಯ ಹಿಂಸೆಯ ಹೊಸ ಅಧ್ಯಾಯ: ತೃಣಮೂಲ ಸರಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ರಾಜಕೀಯ ಹಿಂಸೆ ಹೆಚ್ಚಾಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘ, ಬಿಜೆಪಿಯ ಕಾರ್ಯಕರ್ತರ ಮೇಲೆ ದಾಳಿ, ಮನೆಗಳ ಮೇಲೆ ಬಾಂಬ್ ಎಸೆತ, ಗ್ರಾಮಗಳಲ್ಲಿ ಬೆದರಿಕೆ, ಪಕ್ಷ ಬದಲಾಯಿಸಲು ಒತ್ತಡ ಇಂತಹ ಆರೋಪಗಳು, ಪ್ರಕರಣಗಳು ಹಲವು ಜಿಲ್ಲೆಗಳಲ್ಲಿ ದಾಖಲಾಗಿದ್ದವು. ಅದರಲ್ಲೂ ವಿಶೇಷವಾಗಿ ಬೀರ್ಭೂಮ್, ಮುರ್ಷಿದಾಬಾದ್, ಉತ್ತರ 24 ಪರಗಣಾ, ಕೂಚ್ ಬಿಹಾರ್, ನಂದಿ ಗ್ರಾಮ ಇಂತಹ ಪ್ರದೇಶಗಳು ನಿರಂತರ ರಾಜಕೀಯ ಘರ್ಷಣೆಯ ಕೇಂದ್ರಗಳಾಗಿದ್ದವು.

ಆರ್‌ಎಸ್‌ಎಸ್ ಬೀಜ ಬಿತ್ತಿದ ಸಂಘಟನೆ: ರಾಷ್ಟ್ರೀಯ ಸ್ವಯಂಸೇವಕ ಸಂಘ ತನ್ನ ಆರಂಭಿಕ ದಿನಗಳಿಂದಲೇ ಬಂಗಾಳದಲ್ಲಿ ಕಾರ್ಯಕರ್ತರ ಜಾಲವನ್ನು ನಿರ್ಮಿಸಲು ಪ್ರಯತ್ನಿಸಿತು. ಆದರೆ, ಎಡಪಂಥೀಯ ಚಿಂತನೆಗಳ ಬಲವಾದ ಪ್ರಭಾವದಿಂದ ಸಂಘದ ಬೆಳವಣಿಗೆ ನಿಧಾನ ಗತಿಯಲ್ಲಿತ್ತು. ಆದರೂ ಸಂಘದ ಕಾರ್ಯಕರ್ತರು ಗ್ರಾಮೀಣ ಪ್ರದೇಶಗಳಲ್ಲಿ, ವಿದ್ಯಾರ್ಥಿ ವಲಯದಲ್ಲಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ತಮ್ಮ ನೆಲೆಯನ್ನು ಬಲಪಡಿಸುತ್ತಿದ್ದರು. ಅನೇಕ ಬಾರಿ ಹಿಂಸೆ, ರಾಜಕೀಯ ದಾಳಿ ಮತ್ತು ಸಾಮಾಜಿಕ ವಿರೋಧವನ್ನೂ ಎದುರಿಸಿದರು. ಬಿಜೆಪಿಯು ರಾಜಕೀಯವಾಗಿ ಬಂಗಾಳದಲ್ಲಿ ಬೆಳೆಯಲು ಅತಿ ದೊಡ್ಡ ಶಕ್ತಿ ಇದೇ ದೀರ್ಘಕಾಲದ ಸಂಘಟನಾ ಕಾರ್ಯವಾಗಿದೆ.

ತೊಂಬತ್ತರ ದಶಕದವರೆಗೆ ಬಿಜೆಪಿ ಬಂಗಾಳದಲ್ಲಿ ಅತಿ ಸಣ್ಣ ಶಕ್ತಿಯಾಗಿತ್ತು. ವಿಧಾನಸಭೆಯಲ್ಲಿ ಸ್ಥಾನಗಳೇ ಇಲ್ಲದ ಸ್ಥಿತಿ. ಆದರೆ, 2014ರ ನಂತರ ಪರಿಸ್ಥಿತಿ ಬದಲಾಗತೊಡಗಿತು. ನರೇಂದ್ರ ಮೋದಿ ಅವರ ರಾಷ್ಟ್ರೀಯ ಜನಪ್ರಿಯತೆ, ಕೇಂದ್ರ ಸರಕಾರದ ಯೋಜನೆಗಳು, ಹಾಗೂ ತೃಣಮೂಲ ಸರಕಾರದ ವಿರುದ್ಧ ಹೆಚ್ಚಿದ ಅಸಮಾಧಾನ ಬಿಜೆಪಿಗೆ ಅವಕಾಶ ನೀಡಿದವು. ಹಿಂದೂ ಮತಗಳ ಏಕೀಕರಣ, ಗಡಿ ಪ್ರದೇಶಗಳ ಭದ್ರತೆ, ಅಕ್ರಮ ವಲಸೆ, ರಾಜಕೀಯ ಹಿಂಸೆ, ಹಾಗೂ ಬಂಗಾಳದ ಮೂಲ ಸಂಸ್ಕೃತಿ ರಕ್ಷಣೆ ಎಂಬ ವಿಚಾರಗಳನ್ನು ಬಿಜೆಪಿ ಬಲವಾಗಿ ಮುಂದಿಟ್ಟಿತು.

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ದೊಡ್ಡ ಮಟ್ಟದ ಮತ ಪ್ರಮಾಣ ಮತ್ತು ಸ್ಥಾನಗಳನ್ನು ಗಳಿಸಿದಾಗಲೇ ಬಂಗಾಳ ರಾಜಕೀಯದಲ್ಲಿ ದೊಡ್ಡ ಬದಲಾವಣೆ ಸಂಭವಿಸುತ್ತಿದೆ ಎಂಬ ಸಂದೇಶ ದೇಶಕ್ಕೆ ತಲುಪಿತು.ಅಸಾಧ್ಯವನ್ನು ಸಾಧ್ಯ ಮಾಡಿದ ಸಂಘಟನೆ: ಬಿಜೆಪಿಯ ಬಂಗಾಳ ವಿಜಯದ ಪ್ರಮುಖ ಕಾರಣ ಕೇವಲ ಚುನಾವಣಾ ಪ್ರಚಾರವಲ್ಲ; ಅದು ಕಾರ್ಯಕರ್ತರ ತಳಮಟ್ಟದ ಹೋರಾಟ. ಗ್ರಾಮ ಗ್ರಾಮಕ್ಕೆ ತಲುಪಿದ ಕಾರ್ಯಕರ್ತರು, ಬೂತ್ ಮಟ್ಟದ ಸಂಘಟನೆ, ಸಾಮಾಜಿಕ ಮಾಧ್ಯಮಗಳ ಪರಿಣಾಮಕಾರಿ ಬಳಕೆ, ಯುವಕರ ಸೆಳೆತ, ಹಾಗೂ ಕೇಂದ್ರ ನಾಯಕತ್ವದ ನಿರಂತರ ಗಮನ ಇವೆಲ್ಲವೂ ಪಕ್ಷದ ಬಲವರ್ಧನೆಗೆ ಕಾರಣವಾದವು. ಬಂಗಾಳದ ರಾಜಕೀಯದಲ್ಲಿ ದೀರ್ಘಕಾಲದಿಂದ ನಡೆಯುತ್ತಿದ್ದ ಕ್ಯಾಡರ್ ರಾಜಕೀಯ ಮಾದರಿಯನ್ನು ಬಿಜೆಪಿ ತನ್ನ ರೀತಿಯಲ್ಲಿ ಎದುರಿಸಿತು.

ಸಾಂಸ್ಕೃತಿಕ ಹಾಗೂ ರಾಜಕೀಯದ ಪುನರುತ್ಥಾನ: ಬಿಜೆಪಿ ಬಂಗಾಳದಲ್ಲಿ ಕೇವಲ ರಾಜಕೀಯ ಭಾಷಣಗಳನ್ನೇ ಮಾಡಲಿಲ್ಲ; ಅದು ಸಾಂಸ್ಕೃತಿಕ ಗುರುತಿನ ವಿಚಾರವನ್ನೂ ಮುಂದಿಟ್ಟಿತು. ಸ್ವಾಮಿ ವಿವೇಕಾನಂದ, ಸುಭಾಷ್ ಚಂದ್ರ ಬೋಸ್, ಶ್ಯಾಮ ಪ್ರಸಾದ್ ಮುಖರ್ಜಿ ಮುಂತಾದ ನಾಯಕರ ಪರಂಪರೆಯನ್ನು ರಾಷ್ಟ್ರವಾದಿ ಬಂಗಾಳದ ರೂಪದಲ್ಲಿ ಪ್ರಸ್ತುತಪಡಿಸಿತು. ವಿಶೇಷವಾಗಿ ಶ್ಯಾಮ ಪ್ರಸಾದ್ ಮುಖರ್ಜಿ ಅವರ ಹೆಸರು ಮತ್ತೆ ರಾಜಕೀಯ ಚರ್ಚೆಯ ಕೇಂದ್ರವಾಯಿತು. ಏಕೆಂದರೆ ಅವರು ಬಂಗಾಳದವರೇ ಆಗಿದ್ದು, ನಂತರ ಭಾರತೀಯ ಜನಸಂಘ ಸ್ಥಾಪಕರಲ್ಲಿ ಪ್ರಮುಖರಾಗಿದ್ದರು. ಇದೇ ಪಕ್ಷ ಮುಂದೆ ಬಿಜೆಪಿ ಆಗಿ ರೂಪಾಂತರಗೊಂಡಿತು.

ಬಂಗಾಳದ ರಾಜಕೀಯದ ಮೇಲೆ ಪರಿಣಾಮ: ಬಿಜೆಪಿಯ ಬೆಳವಣಿಗೆಯಿಂದ ಬಂಗಾಳದ ರಾಜಕೀಯ ಸಂಪೂರ್ಣ ದ್ವಿಧ್ರುವೀಯವಾಗಿದೆ. ಒಮ್ಮೆ ಎಡಪಂಥೀಯರು ಹಾಗೂ ಕಾಂಗ್ರೆಸ್ ಪ್ರಮುಖ ಶಕ್ತಿಗಳಾಗಿದ್ದರೆ, ಈಗ ಬಿಜೆಪಿ ಮತ್ತು ತೃಣಮೂಲ ನಡುವೆ ನೇರ ಪೈಪೋಟಿ ನಿರ್ಮಾಣವಾಗಿದೆ. ಇದರಿಂದ, ಎಡಪಂಥೀಯ ರಾಜಕೀಯ ದುರ್ಬಲವಾಯಿತು. ಕಾಂಗ್ರೆಸ್ ಹಿನ್ನಡೆಯಾಯಿತು. ರಾಷ್ಟ್ರೀಯ ರಾಜಕೀಯದ ಪ್ರಭಾವ ಬಂಗಾಳದಲ್ಲಿ ಹೆಚ್ಚಾಯಿತು. ಹಿಂದುತ್ವ ಮತ್ತು ಪ್ರಾದೇಶಿಕತೆಯ ನಡುವೆ ಹೊಸ ಚರ್ಚೆ ಆರಂಭವಾಯಿತು.

ಬಿಜೆಪಿ ಬೆಳವಣಿಗೆ ಮತ್ತು ಸಂಘರ್ಷ: 2014ರ ನಂತರ ಭಾರತೀಯ ಜನತಾ ಪಕ್ಷ ಬಂಗಾಳದಲ್ಲಿ ವೇಗವಾಗಿ ಬೆಳೆಯ ತೊಡಗಿತು. ಹಿಂದಿನ ಎಡಪಂಥೀಯ ಮತ್ತು ಕಾಂಗ್ರೆಸ್ ಮತಬ್ಯಾಂಕ್‌ನ ಒಂದು ಭಾಗ ಬಿಜೆಪಿ ಕಡೆ ತಿರುಗಿತು. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ದೊಡ್ಡ ಪ್ರಮಾಣದ ಸ್ಥಾನಗಳನ್ನು ಗಳಿಸಿದಾಗ, ಬಂಗಾಳದ ರಾಜಕೀಯ ನೇರವಾಗಿ ಬಿಜೆಪಿ ವಿರುದ್ಧ ತೃಣಮೂಲ ಎಂಬ ರೂಪಕ್ಕೆ ಬದಲಾಗಿತು. ಈ ಅವಧಿಯಲ್ಲಿ, ರಾಜಕೀಯ ಹತ್ಯೆಗಳು, ಬೂತ್ ಮಟ್ಟದ ಘರ್ಷಣೆ, ಚುನಾವಣೆ ನಂತರದ ಹಿಂಸೆ, ಪಕ್ಷ ಕಚೇರಿಗಳ ಧ್ವಂಸ, ಮನೆಗಳ ಮೇಲೆ ದಾಳಿಯಂತಹ ಇತ್ಯಾದಿ ಘಟನೆಗಳು ರಾಷ್ಟ್ರಮಟ್ಟದ ಚರ್ಚೆಗೆ ಕಾರಣವಾದವು. ಕೇಂದ್ರ ತನಿಖಾ ಸಂಸ್ಥೆಗಳ ಪ್ರವೇಶ, ರಾಜ್ಯ–ಕೇಂದ್ರ ಘರ್ಷಣೆ ಮತ್ತು ಆಡಳಿತಾತ್ಮಕ ಸಂಘರ್ಷಗಳು ಕೂಡ ಹೆಚ್ಚಾದವು.

ತೃಣಮೂಲ ಸರಕಾರದ ವಿರುದ್ಧ ಹಲವಾರು ಭ್ರಷ್ಟಾಚಾರದ ಆರೋಪಗಳು ಕೇಳಿಬಂದವು. ಮುಖ್ಯವಾಗಿ, ಶಿಕ್ಷಕರ ನೇಮಕಾತಿ ಹಗರಣ, ಕಲ್ಲಿದ್ದಲು ಪ್ರಕರಣ, ಗೋವು ಕಳ್ಳಸಾಗಣೆ ಪ್ರಕರಣ, ಕಟ್ ಮನಿ ಸಂಸ್ಕೃತಿ ಇವು ರಾಜ್ಯ ರಾಜಕೀಯದಲ್ಲಿ ದೊಡ್ಡ ವಿವಾದಗಳಾದವು. ಕೆಲ ತೃಣಮೂಲ ನಾಯಕರ ಬಂಧನ ಹಾಗೂ ಕೇಂದ್ರ ತನಿಖಾ ಸಂಸ್ಥೆಗಳ ಕ್ರಮಗಳು ರಾಜ್ಯ ರಾಜಕೀಯವನ್ನು ಮತ್ತಷ್ಟು ಕಾವುಗೊಳಿಸಿದವು.

ಆರ್‌ಜಿಕರ್ ಮೆಡಿಕಲ್ ಕಾಲೇಜು ಪ್ರಕರಣ: ಬಂಗಾಳ ಸರಕಾರದ ವಿರುದ್ಧದ ಅಸಮಾಧಾನವನ್ನು ತೀವ್ರಗೊಳಿಸಿದ ಪ್ರಮುಖ ಘಟನೆಗಳಲ್ಲಿ ಒಂದು ಆರ್‌ಜಿಕರ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಸಂಬಂಧಿತ ಅತ್ಯಾಚಾರ ಮತ್ತು ಹತ್ಯೆ ಪ್ರಕರಣ. ಈ ಘಟನೆ ರಾಜ್ಯದಾದ್ಯಂತ ಆಕ್ರೋಶ ಉಂಟುಮಾಡಿತು. ವೈದ್ಯರು, ವಿದ್ಯಾರ್ಥಿಗಳು, ಮಹಿಳಾ ಸಂಘಟನೆಗಳು ಹಾಗೂ ಸಾಮಾನ್ಯ ಜನರು ದೊಡ್ಡ ಮಟ್ಟದ ಪ್ರತಿಭಟನೆ ನಡೆಸಿದರು. ಪ್ರಕರಣದ ತನಿಖೆ, ಸಾಕ್ಷ್ಯ ನಿರ್ವಹಣೆ ಮತ್ತು ಆಡಳಿತದ ಪ್ರತಿಕ್ರಿಯೆ ಕುರಿತು ಹಲವಾರು ಪ್ರಶ್ನೆಗಳು ಎದ್ದುವು. ವಿರೋಧ ಪಕ್ಷಗಳು ಸರಕಾರವನ್ನು ತೀವ್ರವಾಗಿ ಟೀಕಿಸಿದವು.ಈ ಪ್ರಕರಣ ಒಂದು ಅಪರಾಧ ಪ್ರಕರಣವನ್ನು ಮೀರಿಸಿ, ಮಹಿಳಾ ಸುರಕ್ಷತೆ, ಆಸ್ಪತ್ರೆಗಳ ಭದ್ರತೆ, ಆಡಳಿತದ ಹೊಣೆಗಾರಿಕೆ, ರಾಜಕೀಯ ಪ್ರಭಾವ ಇವುಗಳ ಕುರಿತು ದೊಡ್ಡ ರಾಷ್ಟ್ರೀಯ ಚರ್ಚೆಗೆ ಕಾರಣವಾಯಿತು.

ಬಂಗಾಳದ ರಾಜಕೀಯವು ಭಯ ಮತ್ತು ಭಾವನೆಗಳ ನಡುವಿನ ಹೋರಾಟವಾಗಿ ರೂಪುಗೊಂಡಿತು. ಇಂದಿನ ಬಂಗಾಳ ರಾಜಕೀಯವು ಕೇವಲ ಚುನಾವಣಾ ಪೈಪೋಟಿಯಲ್ಲ, ಅದು ಪ್ರಾದೇಶಿಕತೆ ವಿರುದ್ಧ ರಾಷ್ಟ್ರವಾದ, ಕ್ಯಾಡರ್ ರಾಜಕೀಯ ವಿರುದ್ಧ ಸಂಘಟನೆ ರಾಜಕೀಯ, ಸಾಂಸ್ಕೃತಿಕ ಗುರುತು ವಿರುದ್ಧ ರಾಜಕೀಯ ಧ್ರುವೀಕರಣ ಇವುಗಳ ಮಿಶ್ರಣವಾಗಿದೆ.

ರಾಜ್ಯದಲ್ಲಿ ಪ್ರಜಾಪ್ರಭುತ್ವ ಕುಸಿಯುತ್ತಿದೆ ಎಂದು ಅಲ್ಲಿ ನಡೆಯುತ್ತಿದ್ದ ಸಂಘರ್ಷಗಳು ಸಾಕ್ಷಿಯಾಗಿ ದೇಶದ ತುಂಬ ಮಮತಾ ಬಂಗಾಳವನ್ನು ತೋರಿಸುತ್ತಿದ್ದವು. ಬಾಂಗ್ಲಾ ನುಸುಳುಖೋರರನ್ನು ಚುನಾವಣಾ ಆಯೋಗವು ಹತ್ತಿಕ್ಕಿದ್ದೇ ಪ್ರಜಾಪ್ರಭುತ್ವವನ್ನು ಬಂಗಾಳದಲ್ಲಿ ಮರುಸ್ಥಾಪನೆಗೊಳಿಸಲು ಬಹುದೊಡ್ಡ ಬುನಾದಿಯಾಯಿತು.

ಪಶ್ಚಿಮ ಬಂಗಾಳದಲ್ಲಿ ಭಾರತೀಯ ಜನತಾ ಪಕ್ಷದ ಏರಿಕೆಯು ಭಾರತದ ರಾಜಕೀಯದ ಅತ್ಯಂತ ಮಹತ್ವದ ಅಧ್ಯಾಯಗಳಲ್ಲಿ ಒಂದಾಗಿದೆ. ದಶಕಗಳ ಕಾಲ ಎಡಪಂಥೀಯ ಹಾಗೂ ಪ್ರಾದೇಶಿಕ ರಾಜಕೀಯದ ಪ್ರಭಾವದಲ್ಲಿದ್ದ ರಾಜ್ಯದಲ್ಲಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಚಿಂತನೆ ಆಧಾರಿತ ರಾಜಕೀಯ ಬಲವಾಗಿ ಬೆಳೆಯುವುದು ಒಂದು ದೀರ್ಘ ರಾಜಕೀಯ ಯಾತ್ರೆಯ ಫಲ.

ಇದು ಕೇವಲ ಒಂದು ಪಕ್ಷದ ವಿಜಯವಲ್ಲ. ಭಾರತೀಯ ರಾಜಕೀಯದ ಬದಲಾಗುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ತಾತ್ವಿಕ ಸಮೀಕರಣಗಳ ಪ್ರತಿಬಿಂಬ. ಬಂಗಾಳದ ಭವಿಷ್ಯ ಹೇಗಿರುತ್ತದೆ ಎಂಬುದು ಮುಂದಿನ ರಾಜಕೀಯ ಬೆಳವಣಿಗೆಗಳ ಮೇಲೆ ಅವಲಂಬಿತವಾಗಿದ್ದರೂ, ಬಿಜೆಪಿ ಏರಿಕೆಯು ಭಾರತೀಯ ರಾಜಕೀಯದ ಇತಿಹಾಸದಲ್ಲಿ ಶಾಶ್ವತವಾಗಿ ದಾಖಲಾಗುವ ಘಟನೆ ಎಂಬುದರಲ್ಲಿ ಸಂಶಯವಿಲ್ಲ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:118

ಸಮಾಚಾರ ಸಣ್ಣದಲ್ಲ

ಸೋನಿಯಾ ಗಾಂಧಿ ಆರೋಗ್ಯ ತಪಾಸಣೆ

ದೆಹಲಿ: 79 ವರ್ಷದ ರಾಜ್ಯಸಭಾ ಸದಸ್ಯೆ, ಕಾಂಗ್ರೆಸ್‌ನ ಹಿರಿಯ ನಾಯಕಿ ಸೋನಿಯಾ ಗಾಂಧಿ ಅವರು ಗುರುಗ್ರಾಮದ ಖಾಸಗಿ ಆಸ್ಪತ್ರೆಗೆ ಬುಧವಾರ ತೆರಳಿ ತಪಾಸಣೆಗೆ ಒಳಗಾಗಿ ಬಳಿಕ

ಮನೆಗೆ ಮರಳಿದ್ದಾರೆ. ಸೋನಿಯಾ ಅವರು ಇತ್ತೀಚಿನ ವರ್ಷಗಳಲ್ಲಿ ಹಲವು ಆರೋಗ್ಯ ಸಮಸ್ಯೆಗಳನ್ನು ಎದುರಿಸಿದ್ದಾರೆ. ದೆಹಲಿ ಸೇರಿದಂತೆ ವಿವಿಧೆಡೆಯ ಆಸ್ಪತ್ರೆಗಳಲ್ಲಿ ಅನೇಕ ಬಾರಿ ಚಿಕಿತ್ಸೆ ಪಡೆದಿದ್ದಾರೆ. ಮಾರ್ಚ್‌ನಲ್ಲಿ ಅಸ್ವಸ್ಥತೆ ಕಾರಣ ದೆಹಲಿಯ ಸರ್ ಗಂಗಾರಾಮ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅದಕ್ಕೂ ಮೊದಲು ಜನವರಿಯಲ್ಲಿ ಉಸಿರಾಟದ ತೊಂದರೆ ಎದುರಾಗಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. 2025ರಲ್ಲಿ ಉದರ ಸಂಬಂಧಿ ಸಮಸ್ಯೆ ಕಾರಣ ಶಿಮ್ಲಾ ಮತ್ತು ದೆಹಲಿಯಲ್ಲಿ 3 ಬಾರಿ ಆಸ್ಪತ್ರೆಗೆ ದಾಖಲಾಗಿದ್ದರು.

ಪಾಕಿಸ್ತಾನ ನಂಟು: 40 ಕಡೆ ಎಟಿಎಸ್ ಶೋಧ

ಮುಂಬೈ: ಪಾಕಿಸ್ತಾನ ಮೂಲದ ಗ್ಯಾಂಗ್‌ಸ್ಟರ್ ಶಹತಾಜ್ ಭಟ್ಟಿಯ ಜತೆ ನಂಟು ಹೊಂದಿರುವವರು ರಾಜ್ಯದಲ್ಲಿ ನೆಲೆಗೊಂಡಿದ್ದು, ದೇಶ ವಿರೋಧಿ ಕೃತ್ಯಕ್ಕೆ ಸಂಚು ನಡೆಸಿದ್ದಾರೆ ಎಂಬ ಶಂಕೆಯ ಮೇರೆಗೆ ಮಹಾರಾಷ್ಟ್ರದ 'ಭಯೋತ್ಪಾದನಾ ನಿಗ್ರಹ ದಳ'(ಎಟಿಎಸ್) ಮುಂಬೈ ಮಹಾನಗರ ಸೇರಿದಂತೆ ರಾಜ್ಯದ 40 ಕಡೆಗಳಲ್ಲಿ ದಾಳಿ ನಡೆಸಿ ಶೋಧನೆ ಮಾಡಿದೆ. 40ಕ್ಕೂ ಅಧಿಕ ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದೆ.

ಉದಯನಿಧಿ ಹೇಳಿಕೆ ಕಡತದಿಂದ ತೆಗೆಯಿರಿ

ಚೆನ್ನೈ: ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷದ ಶಾಸಕ ಉದಯನಿಧಿ ಸ್ಟಾಲಿನ್ ತಮಿಳುನಾಡು ವಿಧಾನಸಭೆಯಲ್ಲಿ ಸೋಮವಾರ ನೀಡಿರುವ ಸನಾತನ ಧರ್ಮವನ್ನು ನಾಶಪಡಿಸುವ ಹೇಳಿಕೆಗಳನ್ನು ವಿಶ್ವ ಹಿಂದೂ ಪರಿಷತ್ ಖಂಡಿಸಿದೆ. ಅಲ್ಲದೇ, ಸದನದ ದಾಖಲೆಗಳ ಕಡತದಿಂದ ಆ ಹೇಳಿಕೆಗಳನ್ನು ಕೂಟಲೇ ತೆಗೆದುಹಾಕಬೇಕು ಎಂದು ಒತ್ತಾಯಿಸಿದೆ. ಬೇರೆ ಧರ್ಮಗಳ ವಿರುದ್ಧವೂ ಇದೇ ರೀತಿಯ ದ್ವೇಷಪೂರಿತ ಹೇಳಿಕೆಗಳನ್ನು ನೀಡಲು ಉದಯನಿಧಿಗೆ ಧೈರ್ಯ ಇದೆಯೇ? ಎಂದು ಆರ್‌ಎಸ್‌ಎಸ್ ಪ್ರಶ್ನೆ ಮಾಡಿದೆ. ಸನಾತನ ಹಿಂದೂ ಧರ್ಮ ಮತ್ತು ಹಿಂದೂಗಳ ನಂಬಿಕೆಗಳಿಗೆ ಪದೇ ಪದೇ ಅವಮಾನ ಮಾಡಲಾಗುತ್ತಿದೆ. ಇದು ಸಂವಿಧಾನದ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದು ಹಿರಿಯ ವಕೀಲ ಮತ್ತು 'ವಿಹಿಂಪ'ದ ಅಂತಾರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ಟೀಕಿಸಿದ್ದಾರೆ. ಇಂತಹ ಹೇಳಿಕೆಗಳು ಅತ್ಯಂತ ಆಕ್ಷೇಪಾರ್ಹ. ವಿಧಾನಸಭಾ ದಾಖಲೆಗಳಿಂದ ತಕ್ಷಣವೇ ತೆಗೆದುಹಾಕಬೇಕು ಮತ್ತು ಭವಿಷ್ಯದಲ್ಲಿ ಇಂಥ ಘಟನೆ ಮರುಕಳಿಸದಂತೆ ತಡೆಯಬೇಕು ಎಂದೂ ಅವರು ಒತ್ತಾಯಿಸಿದ್ದಾರೆ. 2023ರ ಸೆಪ್ಟೆಂಬರ್‌ನಲ್ಲಿಯೂ ಉದಯನಿಧಿ ಇದೇ ರೀತಿ ಸನಾತನ ಧರ್ಮ ವಿರೋಧಿ ಹೇಳಿಕೆ ನೀಡಿದ್ದರು.

ರಾಹುಲ್-ಪ್ರಿಯಾಂಕಾ ಮತ್ತೆ ಇಲ್ಲಿ ಗೆಲ್ಲಲಾರಿರಿ

ವಯನಾಡ್: ಕೇರಳ ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾಗಿ 9 ದಿನಗಳೇ ಕಳೆದಿದ್ದರೂ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಆಯ್ಕೆ ಮಾಡದ ಕಾಂಗ್ರೆಸ್ ವರಿಷ್ಠರ ವಿರುದ್ಧ ಕಾಂಗ್ರೆಸ್ ಬೆಂಬಲಿಗರು, ಮುಖ್ಯವಾಗಿ ವಯನಾಡು ಕ್ಷೇತ್ರದ ಮತದಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತು ವಯನಾಡ್ ಲೋಕಸಭಾ ಕ್ಷೇತ್ರದ ಸದಸ್ಯೆ ಪ್ರಿಯಾಂಕಾ ವಾದ್ರಾ ವಿರುದ್ಧ ಕಿಡಿಕಾರಿದ್ದಾರೆ. ಕಾಂಗ್ರೆಸ್ ವಯನಾಡ್ ಕಚೇರಿ ಹೊರಗೆ 'ರಾಹುಲ್ ಮತ್ತು ಪ್ರಿಯಾಂಕಾ ಅವರೇ, ವಯನಾಡ್ ಕ್ಷೇತ್ರವನ್ನು ಮರೆತುಬಿಡಿ. ನೀವಿಬ್ಬರೂ ಮತ್ತೆ ಇಲ್ಲಿ ಗೆಲ್ಲುವುದಿಲ್ಲ' ಎಂಬ ಪೋಸ್ಟರ್‌ಗಳನ್ನು ಅಂಟಿಸಿ ಸಿಟ್ಟು ಹೊರಹಾಕಿದ್ದಾರೆ. ಮತ್ತೊಂದು ಪೋಸ್ಟರ್‌ನಲ್ಲಿ ಇದು ಎಚ್ಚರಿಕೆಯಷ್ಟೇ ಅಲ್ಲ, ಈ ಪ್ರಮಾದಕ್ಕಾಗಿ ಕೇರಳ ನಿಮ್ಮನ್ನು ಎಂದೂ ಕ್ಷಮಿಸುವುದಿಲ್ಲ ಎಂದೂ ಬರೆಯಲಾಗಿದೆ. ಮುಖ್ಯಮಂತ್ರಿ ನೇಮಕ ಮತ್ತು ಸರಕಾರ ರಚನೆಯಲ್ಲಿ ಕಾಂಗ್ರೆಸ್ ವರಿಷ್ಠರು ತೀವ್ರ ವಿಳಂಬ ಮಾಡುತ್ತಿದ್ದಾರೆ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದಾರೆ.

{ **ರಾಹುಲ್ ಗಾಂಧಿ** } ಪ್ರತಿಪಕ್ಷ ನಾಯಕ

ಕೇಂದ್ರೀಯ ತನಿಖಾ ದಳ(ಸಿಬಿಐ) ನಿರ್ದೇಶಕರ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗಿಯಾಗಲು ಲೋಕಸಭೆ ಪ್ರತಿಪಕ್ಷ ನಾಯಕನಿಗೂ ಸರಿಯಾದ ಅವಕಾಶವಿರಬೇಕು. ಅವರೇನೂ ರಬ್ಬರ್ ಸ್ಟ್ಯಾಂಪ್ ಅಲ್ಲ. ಈ ಆಯ್ಕೆ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳ ಅಂತಿಮ ಪಟ್ಟಿ ಬಗ್ಗೆ ಸರಿಯಾದ ಮಾಹಿತಿ ನೀಡಲಾಗಿಲ್ಲ. ಹಾಗಾಗಿ ಈ ಆಯ್ಕೆ ಪ್ರಕ್ರಿಯೆಯೇ ಒಂದು ಅಣಕವಾಗಿದೆ.

ತೆಲಂಗಾಣದ ಹೈದರಾಬಾದ್ ಸಮಾರಂಭದಲ್ಲಿ 7 ಅಂಶಗಳ ಮಿತವ್ಯಯಕ್ಕೆ ಕರೆ | ತಕ್ಷಣದಿಂದಲೇ ತಮ್ಮ ಬೆಂಗಾವಲು ವಾಹನಗಳ ಸಂಖ್ಯೆ ಕಡಿಮೆ ಮಾಡಿದ ಪ್ರಧಾನಿ ಮೋದಿ | ಮೋದಿ ಮಾರ್ಗದಲ್ಲೇ ಸಾಗಲಾರಂಭಿಸಿದ ಕೇಂದ್ರ ಸಚಿವರು, ಎನ್‌ಡಿಎ ಸಿಎಂಗಳು

ತಮ್ಮದೇ ಮಿತವ್ಯಯ ಕರೆ ಅನುಸರಿಸಿದ ಮೋದಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಎರಡು ದಿನಗಳ ಹಿಂದೆ ತೆಲಂಗಾಣದ ರಾಜಧಾನಿ ಹೈದರಾಬಾದ್‌ನಲ್ಲಿ ದೇಶವಾಸಿಗಳಿಗೆ ಯುದ್ಧ ಕಾಲದಲ್ಲಿ ಮಿತವ್ಯಯಕ್ಕೆ ಕರೆ ನೀಡಿದ್ದರು. ಮಿತವ್ಯಯಕ್ಕಾಗಿ 7 ಕ್ರಮಗಳನ್ನು ಸೂಚಿಸಿದ್ದರು. ಅದರಲ್ಲೊಂದು ಪೆಟ್ರೋಲ್-ಡೀಸೆಲ್ ವಾಹನಗಳ ಬಳಕೆ ತಗ್ಗಿಸುವುದು. ಆ ಮೂಲಕ ದೇಶದ ಮೇಲಿನ ಕಚ್ಚಾತೈಲ ಆಮದು ಹೊರೆಯನ್ನು ಕಡಿಮೆ ಮಾಡುವುದು ಪ್ರಧಾನಿ ಮೋದಿ ಅವರ ಕರೆಯ 7 ಅಂಶಗಳಲ್ಲೊಂದು. ಅದೇ ಕಾರಣವಾಗಿ ಪ್ರಧಾನಿ ಮೋದಿ ಅವರೂ ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ತಗ್ಗಿಸಿದ್ದಾರೆ.

ಹೈದರಾಬಾದ್‌ನಲ್ಲಿ ದೇಶವಾಸಿಗಳಿಗೆ ನೀಡಿದ ಮಿತವ್ಯಯ ಕರೆಯ ಪ್ರಕಾರವೇ ಪ್ರಧಾನಿ ಮೋದಿ ಅವರೂ ನಡೆದುಕೊಳ್ಳಲು ಆರಂಭಿಸಿದ್ದಾರೆ. ಮೊದಲ ಹೆಜ್ಜೆಯಾಗಿ ತನ್ನ ಬೆಂಗಾವಲು ಪಡೆಯ ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡಲು ಸೂಚನೆ ನೀಡಿದ್ದಾರೆ. ಅಲ್ಲದೇ, ಸಾಧ್ಯವಿರುವೆಡೆಯಲ್ಲೆಲ್ಲಾ ಆದಷ್ಟೂ ವಿದ್ಯುತ್ ಚಾಲಿತ ವಾಹನಗಳನ್ನೇ ಬಳಸುವಂತೆಯೂ ತಮ್ಮ ಬೆಂಗಾವಲು ಪಡೆ ಮತ್ತು ಸ್ಪೆಷಲ್ ಪ್ರೊಟೆಕ್ಷನ್ ಗ್ರೂಪ್(ಎಸ್‌ಪಿಜಿ)ಗೆ ನಿರ್ದೇಶನ ನೀಡಿದ್ದಾರೆ. ಹಾಗೆಂದು ಹೊಸದಾಗಿ ಎಲೆಕ್ಟ್ರಿಕ್ ವಾಹನ(ಇವಿ)ಗಳ ಖರೀದಿಗೆ ಮುಂದಾಗಬಾರದು. ಸದ್ಯ ಸರಕಾರದ ಇಲಾಖೆಗಳ ಬಳಿ ಇರುವ 'ಎವಿ'ಗಳನ್ನು ಬಳಸಿಕೊಂಡೇ ಬೆಂಗಾವಲು ವಾಹನ ವ್ಯವಸ್ಥೆ ಮಾಡುವಂತೆಯೂ ಮೋದಿ ನಿರ್ದೇಶನ ನೀಡಿದ್ದಾರೆ.

ಬೆಂಗಾವಲು ಪಡೆಯ ವಾಹನಗಳನ್ನು ಕಡಿಮೆ ಮಾಡಿದರೂ ಕೂಡಾ ಶಿಷ್ಟಾಚಾರ ಮತ್ತು ಭದ್ರತಾ ವ್ಯವಸ್ಥೆಯಲ್ಲಿ ಕಾಯ್ದುಕೊಳ್ಳಬೇಕಾದ ನಿಯಮಗಳನ್ನು ರೂಢಿಗತ ಕ್ರಮದಂತೆಯೇ ಮುಂದುವರಿಸಲು ಸೂಚನೆ ನೀಡಲಾಗಿದೆ ಎಂದು ವರದಿಯಾಗಿದೆ.

ಅದೇ ಪ್ರಕಾರವಾಗಿ ಹೈದರಾಬಾದ್ ನಗರ ಭೇಟಿಯ ನಂತರ ಗುಜರಾತ್ ರಾಜ್ಯದ ವಡೋದರಾಕ್ಕೆ ಮತ್ತು ಅಸ್ಸಾಂ ರಾಜ್ಯದ ಗುವಾಹಟಿಗೆ ಭೇಟಿ ನೀಡಿದ್ದಾಗಲೇ ಪ್ರಧಾನಿ ಮೋದಿ ಅವರ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿತ್ತು ಎಂದು ವರದಿಯಾಗಿದೆ. ಈ ಮೊದಲು ಪ್ರಧಾನಿ ಮೋದಿ ಅವರ ಕಾರಿನ ಹೊರತಾಗಿ 12-13 ಬೆಂಗಾವಲು ವಾಹನಗಳು ಸಾಮಾನ್ಯವಾಗಿ ಇರುತ್ತಿದ್ದವು.

ಮೆಟ್ರೊದಲ್ಲಿ ಅಠಾವಳೆ: ಬಿಜೆಪಿ ಹೊರತಾಗಿ, ಎನ್‌ಡಿಎ ಮಿತ್ರಪಕ್ಷ 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ'(ಆರ್‌ಪಿಐ)ದ ಲೋಕಸಭಾ ಸದಸ್ಯ, ಕೇಂದ್ರದ ಸಚಿವ ರಾಮದಾಸ್ ಅಠಾವಳೆ ಅವರು ಇವರೆಲ್ಲರಿಗಿಂತ ಮತ್ತೂ ಒಂದು ಹೆಜ್ಜೆ ಮುಂದೆ ಇದ್ದಾರೆ. ಅವರು ಬೆಂಗಾವಲು ವಾಹನಗಳ ಸಂಚಾರದ ಗೋಜಿಲ್ಲದಂತೆ ಮಾಡಲು ಸಾಧ್ಯವಿರುವ ಕಡೆಯಲ್ಲೆಲ್ಲಾ ಮೆಟ್ರೊ ರೈಲಿನಲ್ಲೇ ಸಂಚರಿಸಲು ಆರಂಭಿಸಿದ್ದಾರೆ.




ಮೊದಲು ಪ್ರಧಾನಿ ನರೇಂದ್ರ ಮೋದಿ ಬೆಂಗಾವಲಾಗಿ 12ಕ್ಕೂ ಅಧಿಕ ಕಾರುಗಳು ಸಾಗುತ್ತಿದ್ದವು. ಬುಧವಾರ ದೆಹಲಿಯಲ್ಲಿ ಪ್ರಧಾನಿ ವಾಹನದ ಜತೆ ಒಂದು ಬೆಂಗಾವಲು ವಾಹನವಷ್ಟೇ ಕಂಡುಬಂತು.

ಅಮಿತ್ ಶಾ ವಾಹನ ಸಂಖ್ಯೆ ಅರ್ಧಕ್ಕೆ ಇಳಿಕೆ

ಇದೇ ವೇಳೆ, ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರೂ ಪ್ರಧಾನಿ ಮೋದಿ ಅವರ ಹಾದಿಯಲ್ಲಿ ಸಾಗಿ ಮಿತವ್ಯಯಕ್ಕೆ ಮುಂದಾಗಿದ್ದಾರೆ. ತಮ್ಮ ಬೆಂಗಾವಲು ಪಡೆಯಲ್ಲಿನ ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡಲು ಸೂಚನೆ ನೀಡಿದ್ದಾರೆ. ತಮ್ಮ ಬೆಂಗಾವಲು ಪಡೆಯ ವಾಹನಗಳ ಸಂಖ್ಯೆಯನ್ನು ಅರ್ಧಕ್ಕೆ ಇಳಿಸುವಂತೆ ಸ್ವತಃ ಗೃಹ ಸಚಿವರೇ ಸೂಚನೆ ನೀಡಿದ್ದಾರೆ ಎಂದು ಎಸ್‌ಪಿಜಿ ಅಧಿಕಾರಿಗಳು ತಿಳಿಸಿದ್ದಾರೆ. ಲಭ್ಯ ಕೇಂದ್ರ ಸರಕಾರದ ಮಾಹಿತಿ ಪ್ರಕಾರ ಅಮಿತ್ ಶಾ ಅವರ ಬೆಂಗಾವಲು ಪಡೆಯಲ್ಲಿ ಆಯಾ ಪ್ರದೇಶ, ಸಂದರ್ಭ ಆಧರಿಸಿ ಕನಿಷ್ಠ 10ರಿಂದ ಗರಿಷ್ಠ 30 ವಾಹನಗಳು ಸಾಗುತ್ತವೆ. ಈ ವಾಹನಗಳಲ್ಲಿ ಎಸ್‌ಪಿಜಿ ಮಾತ್ರವಲ್ಲದೇ, ಸ್ಥಳೀಯ ಪೊಲೀಸ್ ಅಧಿಕಾರಿಗಳು ಮತ್ತು ಮೀಸಲು ಪೊಲೀಸ್ ಪಡೆ, ಮೊಬೈಲ್ ಜಾಮರ್, ಆಂಬ್ಯುಲೆನ್ಸ್, ಗೃಹ ಸಚಿವಾಲಯದ ಅಧಿಕಾರಿಗಳ ವಾಹನಗಳೂ ಸೇರಿರುತ್ತವೆ. ಈಗ ಆ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಅರ್ಧಕ್ಕೆ ಇಳಿಸಿರುವುದರಿಂದ ಶಾ ಬೆಂಗಾವಲು ವಾಹನಗಳ ಸಂಖ್ಯೆ 5ರಿಂದ 15ರ ಆಸುಪಾಸಿನಲ್ಲಿರಲಿದೆ ಎನ್ನಲಾಗಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೂ ತಮ್ಮ ಬೆಂಗಾವಲು ಪಡೆ ವಾಹನಗಳ ಸಂಖ್ಯೆಯನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಿದ್ದಾರೆ. ಮತ್ತೊಬ್ಬ ಕೇಂದ್ರ ಸಚಿವ ಸಿ.ಆರ್.ಪಾಟೀಲ್ ಅವರೂ ತಮ್ಮ ಬೆಂಗಾವಲು ಪಡೆ ವಾಹನಗಳ ಸಂಖ್ಯೆ ಕಡಿಮೆ ಮಾಡಲು ಸೂಚನೆ ನೀಡಿದ್ದಾರೆ.

ಎನ್‌ಡಿಎ ಸಿಎಂಗಳಿಂದಲೂ ಮಿತವ್ಯಯ ಕ್ರಮ ಪಾಲನೆ

ಕೇಂದ್ರ ಸಚಿವರಷ್ಟೇ ಅಲ್ಲದೇ, ಎನ್‌ಡಿಎ ಆಡಳಿತದ ಹಲವು ರಾಜ್ಯಗಳಲ್ಲಿನ ಮುಖ್ಯಮಂತ್ರಿಗಳು ಕೂಡಾ ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಕಡಿಮೆ ಮಾಡಿಕೊಂಡಿದ್ದಾರೆ. ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ಬೆಂಗಾವಲು ವಾಹನಗಳ ಸಂಖ್ಯೆ ಶೇ.50ರಷ್ಟು ಕಡಿಮೆ ಆಗಿದೆ. ತಮಗಷ್ಟೇ ಅಲ್ಲದೇ, ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳ ಬೆಂಗಾವಲು ವಾಹನಗಳ ಸಂಖ್ಯೆಯನ್ನೂ ಯೋಗಿ ಕಡಿಮೆ ಮಾಡಿಸಿದ್ದಾರೆ. ಅಷ್ಟೇ ಅಲ್ಲದೇ, ಸಚಿವರು ಮತ್ತು ಶಾಸಕರು ವಾರಕ್ಕೊಮ್ಮೆ ಕಡ್ಡಾಯವಾಗಿ ಸಾರ್ವಜನಿಕ ಸಾರಿಗೆಯನ್ನು ಬಳಸಬೇಕು ಎಂದೂ ಸೂಚನೆ ನೀಡಿದ್ದಾರೆ. ರಾಜ್ಯದಲ್ಲಿ ವರ್ಕ್ ಫ್ರಂ ಹೋಮ್ ವ್ಯವಸ್ಥೆಗೆ ಉತ್ತೇಜನ ಕೊಡಲು ಮತ್ತು ಹೆಚ್ಚು ಸಿಬ್ಬಂದಿ ಇರುವ ಸಂಸ್ಥೆಗಳಲ್ಲಿ ವಾರಕ್ಕೆ 2 ದಿನಗಳ ಅವಧಿಗೆ 'ವರ್ಕ್ ಫ್ರಂ' ಮಾಡಲು ಶಿಫಾರಸು ಮಾಡುವಂತೆ ಸಿಎಂ ಯೋಗಿ ಸೂಚನೆ ಹೊರಡಿಸಿದ್ದಾರೆ.

ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್, ತಮ್ಮ ಬೆಂಗಾವಲು ವಾಹನಗಳ ಸಂಖ್ಯೆ ಕಡಿಮೆ ಮಾಡಿಸಿದ್ದಾರೆ. ಸಂಪುಟ ಸಹೋದ್ಯೋಗಿಗಳಿಗೂ ಮಿತವ್ಯಯದ ಕಿವಿಮಾತು ಹೇಳಿದ್ದಾರೆ.

ರಾಜಸ್ಥಾನ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಅವರೂ ಭದ್ರತೆ ಹೆಸರಲ್ಲಿ ಬಳಸುವ ಅನಗತ್ಯ ವಾಹನಗಳ ಸಂಚಾರವನ್ನು ನಿಲ್ಲಿಸಲು ಸೂಚನೆ ನೀಡಿದ್ದಾರೆ. ಅಲ್ಲದೇ, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಎಲ್ಲಾ ಇಲಾಖೆಗಳ ಉನ್ನತ ಅಧಿಕಾರಿಗಳಿಗೂ ಮಿತವ್ಯಯ ಕ್ರಮಕ್ಕೆ ನಿರ್ದೇಶನ ನೀಡಿದ್ದಾರೆ.

ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಸರಕಾರ ಅಧಿಕೃತ ಕೆಲಸಗಳಿಗೆ ಕನಿಷ್ಠ ವಾಹನ ಬಳಸುವುದಾಗಿ ಹೇಳಿದ್ದಾರೆ. ದೆಹಲಿಯ ಎಲ್ಲಾ ಬಿಜೆಪಿ ಶಾಸಕರು ಮತ್ತು ಅಧಿಕಾರಿಗಳು 'ಕಾರ್ ಪೂಲಿಂಗ್'ಗೆ ಮತ್ತು ಸಾರ್ವಜನಿಕ ಸಾರಿಗೆ ಬಳಕೆಗೆ ಸೂಚಿಸಿರುವುದಾಗಿ ಸಿಎಂ ರೇಖಾ ಅವರೇ ಸುದ್ದಿಸಂಸ್ಥೆಗೆ ಬುಧವಾರ ಮಾಹಿತಿ ನೀಡಿದ್ದಾರೆ.

ಮಹಾರಾಷ್ಟ್ರ ಸರಕಾರ ಸಿಎಂ, ಸಚಿವರು, ಉನ್ನತ ಅಧಿಕಾರಿಗಳ ಮಟ್ಟದಲ್ಲಿ ಅನಗತ್ಯ ವಿಮಾನ ಮತ್ತು ಹೆಲಿಕಾಪ್ಟರ್ ಬಳಕೆಗೆ ತಡೆ ಹಾಕಿದೆ. ಸಚಿವರೇನಾದರೂ ತುರ್ತು ಕೆಲಸಗಳಿಗಾಗಿ ವಿಮಾನದಲ್ಲಿ ಸಂಚರಿಸಬೇಕಿದ್ದರೆ ಸಿಎಂ ದೇವೇಂದ್ರ ಫಡ್ನವಿಸ್ ಅವರ ಕಚೇರಿಯಿಂದ ಪೂರ್ವಾನುಮತಿ ಕಡ್ಡಾಯಗೊಳಿಸಲಾಗಿದೆ.

ಬಿಹಾರ ಉಪ ಮುಖ್ಯಮಂತ್ರಿ ವಿಜಯ್ ಕುಮಾರ್ ಚೌಧರಿ ಅವರೂ ವೈಯಕ್ತಿಕ ಬಳಕೆಯ ವಾಹನಗಳ ಸಂಖ್ಯೆಯನ್ನು ಅರ್ಧದಷ್ಟು ಕಡಿಮೆ ಮಾಡಿಸಿದ್ದಾರೆ. ಅತ್ಯಗತ್ಯ ಎನಿಸಿದಾಗಷ್ಟೇ ಅಧಿಕೃತ ಪ್ರವಾಸ ಕೈಗೊಳ್ಳುವುದಾಗಿ ಘೋಷಿಸಿದ್ದಾರೆ.

ಗುಜರಾತ್ ರಾಜ್ಯಪಾಲರು ರಾಜ್ಯದಲ್ಲಿನ ಸಂಚಾರಕ್ಕೆ ಹೆಲಿಕಾಪ್ಟರ್ ಅಥವಾ ವಿಮಾನ ಬಳಸದೇ ಇರಲು ನಿರ್ಧರಿಸಿದ್ದಾರೆ. ಬದಲಾಗಿ ರಾಜ್ಯದೊಳಗೆ ರೈಲು ಮತ್ತು ಎಸಿ ಬಸ್‌ಗಳನ್ನು ಬಳಸಲು ನಿರ್ಧರಿಸಿದ್ದಾರೆ. ಉಪ ಮುಖ್ಯಮಂತ್ರಿ ಹರ್ಷ ಸಂಘವಿ ಅವರು ನಿಗದಿತ ಅಮೆರಿಕ ಪ್ರವಾಸವನ್ನೇ ರದ್ದುಗೊಳಿಸಿದ್ದಾರೆ. ಆ ಮೂಲಕ ಮಿತವ್ಯಯಕ್ಕೆ ಕಠಿಣ ಕ್ರಮ ಕೈಗೊಂಡಿದ್ದಾರೆ.

ಪ್ರಧಾನಿ, ಕೇಂದ್ರ ಸಚಿವರು, ರಾಜ್ಯಪಾಲರು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ಮಿತವ್ಯಯಕ್ಕೆ ಕ್ರಮ ಕೈಗೊಂಡು ಇಂಧನ ಉಳಿತಾಯ ಮತ್ತು ಸರಕಾರದ ಹಣ ವೆಚ್ಚವಾಗುವುದನ್ನು ಕಡಿಮೆ ಮಾಡಲು ಮುಂದಾಗಿರುವುದಕ್ಕೆ ದೇಶದ ನಾಗರಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮುಲಾಯಂ ಸಿಂಗ್ ಯಾದವ್ ಪುತ್ರ ಪ್ರತೀಕ್ ಸಂಶಯಾಸ್ಪದವಾಗಿ ನಿಧನ

ಲಖನೌ: ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ, ಸಮಾಜವಾದಿ ಪಕ್ಷದ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರ ಪುತ್ರ, ಅಖಿಲೇಶ್ ಯಾದವ್ ಅವರ ಮಲಸಹೋದರ ಪ್ರತೀಕ್ ಯಾದವ್ ಲಖನೌ ಸಿವಿಲ್ ಆಸ್ಪತ್ರೆಯಲ್ಲಿ ಬುಧವಾರ ಬೆಳಗ್ಗೆ ನಿಧನರಾದರು.

38 ವರ್ಷ ಪ್ರಾಯದ ಪ್ರತೀಕ್ ಯಾದವ್ ದೇಹದ ಫಿಟ್ನೆಸ್ ಬಗ್ಗೆ ವಿಪರೀತ ಆಸಕ್ತಿ ಹೊಂದಿದ್ದರು. ಬುಧವಾರ ನಸುಕಿನ 4 ಗಂಟೆಯಲ್ಲಿ ಮನೆಯ ಅಡುಗೆಕೋಣೆ ಯಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪ್ರತೀಕ್ ಯಾದವ್ ಕಂಡುಬಂದಿದ್ದರು. ಅವರ ದೇಹದ ಮೇಲೆ ಗಾಯಗಳಾಗಿರುವುದು ಕಂಡುಬಂದಿದೆ. ಬಳಿಕ ಆಸ್ಪತ್ರೆಗೆ ಕರೆದೊಯ್ದಾಗ, ಪರೀಕ್ಷಿಸಿದ ವೈದ್ಯರು ಅವರು ಈಗಾಗಲೇ ಕೊನೆಯುಸಿರೆಳೆದಿದ್ದಾರೆ ಎಂದು ಹೇಳಿದರು.

ಹೆಪ್ಪುಗಟ್ಟಿದ ರಕ್ತ: ಶ್ವಾಸಕೋಶ, ಹೃದಯ ಮತ್ತು ಮುಖ್ಯ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿದೆ. ಈ ಅಂಶವೇ ಪ್ರತೀಕ್ ಯಾದವ್ ಸಾವಿಗೆ ಕಾರಣವಾಗಿದೆ ಎಂದು ಮರಣೋತ್ತರ ವರದಿಯಲ್ಲಿ ವೈದ್ಯರು ತಿಳಿಸಿದ್ದಾರೆ. ಸಮಾಜವಾದಿ ಪಕ್ಷದ ಸಂಸ್ಥಾಪಕರ ಕುಟುಂಬಕ್ಕೆ ಸೇರಿದ್ದರೂ ಪ್ರತೀಕ್ ರಾಜಕಾರಣದಿಂದ ದೂರವೇ ಉಳಿದಿದ್ದರು. ಆದರೆ ಅವರ ಪತ್ನಿ ಅಪರ್ಣಾ ಯಾದವ್ ಭಿನ್ನ ನಿಲುವು ಹೊಂದಿದ ಕಾರಣಕ್ಕೆ ಬಿಜೆಪಿ ನಾಯಕಿಯಾಗಿ ದ್ದಾರೆ. ಸಮಾಜವಾದಿ ಪಕ್ಷ 'ಎಕ್ಸ್' ಖಾತೆಯಲ್ಲಿ ಅಧಿಕೃತ ಹೇಳಿಕೆ ಬಿಡುಗಡೆ ಮಾಡಿದ್ದು, ಪ್ರತೀಕ್ ನಿಧನಕ್ಕೆ ಸಂತಾಪ ಸೂಚಿಸಿದೆ. ಭಗವಂತನು ಅಗಲಿದ ಆತ್ಮಕ್ಕೆ ಶಾಂತಿ ನೀಡಲಿ ಎಂದು ಬರೆದಿದೆ. ಮಾಜಿ ಸಿಎಂ ಅಖಿಲೇಶ್ ಯಾದವ್ ಅವರೂ ಮಲಸೋದರನ ಸಾವಿಗೆ ಶೋಕ ವ್ಯಕ್ತಪಡಿಸಿದ್ದಾರೆ.

1 ಮತದ ಶಾಸಕಗೆ ಹೈ ತಡೆ: ಸುಪ್ರೀಂ ಕೋರ್ಟ್ ಕಿಡಿ

ದೆಹಲಿ: ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಕೇವಲ 1 ಮತದ ಅಂತರದಿಂದ ಜಯಶಾಲಿಯಾಗಿರುವ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಶಾಸಕ ಶ್ರೀನಿವಾಸ ಸೇತುಪತಿ ವಿಧಾನಸಭೆಯಲ್ಲಿ ಬುಧವಾರ ಟಿವಿಕೆ ಪಕ್ಷದ ಬಹುಮತ ಸಾಬೀತು ವೇಳೆ ಹಾಜರಾಗ ದಂತೆ ತಡೆಯಾಜ್ಞೆ ನೀಡಿದ್ದ ಮದ್ರಾಸ್ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಬುಧವಾರ ತಡೆ ನೀಡಿದೆ. ಹೈಕೋರ್ಟ್ ಆದೇಶ ಪ್ರಶ್ನಿಸಿ ಶ್ರೀನಿವಾಸ್ ಸೇತುಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ವಿಕ್ರಂನಾಥ್, ನ್ಯಾ. ಸಂದೀಪ್ ಮೆಹ್ತಾ ಮತ್ತು ನ್ಯಾ.ವಿಜಯ್ ಬಿಷ್ಣೋಯ್ ಅವರ ತ್ರಿಸದಸ್ಯ ಪೀಠ, ಹೈಕೋರ್ಟ್ ಆದೇಶ ಅಮಾನವೀಯ ನಡೆ ಎಂದು ಅಭಿಪ್ರಾಯಪಟ್ಟಿದೆ. ಹಾಗಾಗಿ ಸೇತುಪತಿ ವಿಧಾನಸಭೆಗೆ ಹಾಜರಾಗಲು ಅವಕಾಶವಾಗಿದೆ. ಕೆಲವು ರಿಟ್ ಅರ್ಜಿ ವಿಚಾರಣೆ ನಡೆಸುವುದಕ್ಕೆ ಹೈಕೋರ್ಟ್ ಅಧಿಕಾರ ವ್ಯಾಪ್ತಿಯ ಬಗ್ಗೆ ಸಂವಿಧಾನದ 226ನೇ ವಿಧಿ ವಿಷದೀಕರಿಸುತ್ತದೆ. ಹಾಗಾಗಿ ಚುನಾವಣೆಗೆ ಸಂಬಂಧಿಸಿದ ಈ ಅರ್ಜಿಗೆ ಸಂಬಂಧಿಸಿ ಮದ್ರಾಸ್ ಹೈಕೋರ್ಟ್‌ನಲ್ಲಿ ಬಾಕಿ ಇರುವ ವಿಚಾರಣೆಗೂ ಸುಪ್ರೀಂಕೋರ್ಟ್ ತಡೆ ನೀಡಿದೆ. ಟಿವಿಕೆ ಅಭ್ಯರ್ಥಿ ಸೇತುಪತಿ, ಡಿಎಂಕೆ ನಾಯಕ, ಮಾಜಿ ಸಚಿವ ಕೆ.ಆರ್.ಪೆರಿಯಕರುಪ್ಪನ್ ವಿರುದ್ಧ ಶಿವಗಂಗ ಜಿಲ್ಲೆಯ ತಿರುಪತ್ತೂರು ಕ್ಷೇತ್ರದಲ್ಲಿ 1 ಮತದ ಅಂತರದಿಂದ ಗೆದ್ದಿದ್ದಾರೆ. ಮರು ಮತದಾನ ಸರಿಯಾಗಿ ನಡೆದಿಲ್ಲ ಎಂದು ಪೆರಿಯಕರುಪ್ಪನ್ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ.

ಮತ್ತೆ ದಾಳಿ ಮಾಡಿದರೆ ಅಣ್ವಸ್ತ್ರಕ್ಕೆ ಸಿದ್ಧತೆ

ಡೊನಾಲ್ಡ್ ಟ್ರಂಪ್‌ಗೆ ಇರಾನ್ ಸಂಸತ್ ಎಚ್ಚರಿಕೆ | ಯುರೇನಿಯಂ ದಾಸ್ತಾನು ಅಣ್ವಸ್ತ್ರವಾಗಿ ಪರಿವರ್ತಿಸುವ ಬೆದರಿಕೆ | ಇರಾನ್ ಸಂಗ್ರಹದ 441 ಕೆಜಿ ಪರಮಾಣು 60% ಉನ್ನತೀಕರಣ

ಟೆಹರಾನ್: ಅಮೆರಿಕ ಅಥವಾ ಇಸ್ರೇಲ್ ಸೇನಾಪಡೆಗಳೇನಾದರೂ ಮತ್ತೊಮ್ಮೆ ದಾಳಿ ಮಾಡಿದರೆ ನಮ್ಮಲ್ಲಿರುವ ಯುರೇನಿಯಂ ದಾಸ್ತಾನನ್ನು ಶೇ.90ರಷ್ಟು ಪರಿಶುದ್ಧತೆಗೆ ಹಾಗೂ ಶಸ್ತ್ರಾಸ್ತ್ರ ದರ್ಜೆಗೆ ಸಂವರ್ಧಿಸಿ ಅಣ್ವಸ್ತ್ರ ಸಿದ್ಧಪಡಿಸುತ್ತೇವೆ ಎಂದು ಇರಾನ್ ಎಚ್ಚರಿಕೆ ನೀಡಿದೆ.

ಟ್ರಂಪ್ ಮೊದಲ ಅವಧಿಯಲ್ಲಿ ಅಮೆರಿಕ ಅಧ್ಯಕ್ಷರಾಗಿದ್ದಾಗ ಟೆಹ್ರಾನ್ ಜತೆಗಿನ ಪರಮಾಣು ಒಪ್ಪಂದದಿಂದ ವಾಷಿಂಗ್ಟನ್ ಹೊರಬಂದಿತ್ತು. ಆನಂತರದಲ್ಲಿ ಇರಾನ್ 22 ಸಾವಿರ ಪೌಂಡ್‌ಗಳು ಅಥವಾ 11 ಸಾವಿರ ಕೆಜಿಯಷ್ಟು ಪುಷ್ಟೀಕರಿಸಿದ ಯುರೇನಿಯಂ ಸಂಗ್ರಹಿಸಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಆದರೆ, ಇರಾನ್ ಬಳಿ ಇರುವುದು ಪರಮಾಣು ಧೂಳು ಅಷ್ಟೇ ಎಂದು ಟ್ರಂಪ್ ವ್ಯಂಗ್ಯವಾಡಿದ್ದಾರೆ. ಅದಕ್ಕೆ ಪ್ರತಿಕ್ರಿಯೆಯಾಗಿ, ಇರಾನ್ ಸಂಸದೀಯ ಆಯೋಗದ ವಕ್ತಾರ ಇಬ್ರಾಹಿಂ ರೆಜೈ, ನಮ್ಮ ಮುಂದಿನ ಆಯ್ಕೆಗಳ ಕುರಿತು ಸಂಸತ್ತಿನಲ್ಲಿ ಪರಿಶೀಲಿಸುತ್ತೇವೆ ಎಂದು ಹೇಳಿದ್ದಾರೆ.

ಇರಾನ್ ಇತ್ತೀಚೆಗೆ ಶಾಂತಿ ಸ್ಥಾಪನೆ ಕುರಿತು ಮಂಡಿಸಿದ ಎಲ್ಲಾ ಪ್ರಸ್ತಾವನೆಗಳನ್ನೂ ಅಮೆರಿಕ ತಿರಸ್ಕರಿಸಿದೆ. ಸದ್ಯ ಪಶ್ಚಿಮ ಏಷ್ಯಾ ಸಂಘರ್ಷದ ಕದನ ವಿರಾಮ ಈಗ ಲೈಫ್ ಸಪೋರ್ಟ್‌ನಲ್ಲಿದೆ ಎಂದು ಟ್ರಂಪ್ ಹೇಳಿದ್ದಾರೆ.

ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತೊಯ್ಯಬಲ್ಲ ಕ್ಷಿಪಣಿಗಳ ಮಾದರಿಗಳ ಇರಾನ್ ಪ್ರದರ್ಶನ.

ಇರಾನ್ ಬಳಿ ಶೇ.60 ಪರಿಶುದ್ಧ ಪರಮಾಣು

ಇರಾನ್ ಬಳಿಯ ಪರಮಾಣ ದಾಸ್ತಾನು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ ಎಂದು ವಿಶ್ವಸಂಸ್ಥೆಯ ಪರಮಾಣು ಕಾವಲು ಸಂಸ್ಥೆ, ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ(ಐಎಇಎ) ಈ ಹಿಂದೆಯೇ ಕಳವಳ ವ್ಯಕ್ತಪಡಿಸಿತ್ತು. ಇರಾನ್ ತನ್ನ ಬಳಿ ಇರುವ 440.9 ಕೆಜಿ(972 ಪೌಂಡ್) ಪರಮಾಣ ದಾಸ್ತಾನನ್ನು ಶೇ.60ರಷ್ಟು ಪರಿಶುದ್ಧತೆಗೆ ಉನ್ನತೀಕರಿಸಲಾಗಿದೆ. ಇದು ಶಸ್ತ್ರಾಸ್ತ್ರ-ದರ್ಜೆಯ ಪರಮಾಣು ಮಟ್ಟ ಶೇ.90ಕ್ಕೆ ಹೋಲಿಸಿದರೆ ಕೇವಲ ಶೇ.30ರಷ್ಟು ಕಡಿಮೆ ಇದೆ ಎಂದು 'ಐಎಇಎ' ಗ್ರಹಿಸಿದೆ. ಈ ಪರಮಾಣು ಸಂಗ್ರಹ ಇಸ್ಫಹಾನ್ ಪ್ರದೇಶದಲ್ಲಿ ನೆಲದಾಳದಲ್ಲಿ ಅಡಗಿಸಿಡಲಾಗಿದೆ ಎಂಬ ಅಂದಾಜಿದೆ. ಇರಾನ್ ಮಾಜಿ ಅಧ್ಯಕ್ಷ ಹಸನ್ ರೂಹಾನಿ, ಟೆಹರಾನ್ ತನ್ನ ಪರಮಾಣು ರಿಯಾಕ್ಟರ್‌ಗಳಿಗೆ ಅಗತ್ಯವಿದ್ದರೆ ಯುರೇನಿಯಂ ಸಂಗ್ರಹವನ್ನು ಶೇ.90ರ ಮಟ್ಟಕ್ಕೆ ಉನ್ನತೀಕರಿಸಬಹುದು ಎಂದು 2021ರ ಜೂನ್‌ನಲ್ಲಿ ಹೇಳಿದ್ದರು. 2006ರಲ್ಲಿ ಕೈಗಾರಿಕಾ ಪ್ರಮಾಣದ ಯುರೇನಿಯಂ ಪುಷ್ಟೀಕರಣ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಅದರ ಗುರಿ ಶಾಂತಿ ಕಾಯ್ದುಕೊಳ್ಳುವುದಾಗಿದೆ ಎಂದು ಇರಾನ್ ಕೂಡಾ ಹೇಳಿಕೊಂಡಿತ್ತು.

ವಿಧಾನಸಭೆ ಮೆಟ್ಟಿಲಿಗೆ ಹಣೆಹಚ್ಚಿ ನಮಸ್ಕರಿಸಿದ ಸಿಎಂ ಸುವೇಂದು

ಕೋಲ್ಕತ್ತ: ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿ, ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರು ಪ್ರಜಾಪ್ರಭುತ್ವದ ದೇವಾಲಯ ಎಂದೇ ಕರೆಸಿಕೊಳ್ಳುವ ವಿಧಾನಸಭೆಯ ಪ್ರವೇಶ ದ್ವಾರದ ಬಳಿ ಇರುವ ಮೆಟ್ಟಿಲುಗಳಿಗೆ ಮಂಡಿಯೂರಿ, ಹಣೆ ಹಚ್ಚಿ ನಮಸ್ಕಾರ ಮಾಡಿ ಆ ಬಳಿಕ ವಿಧಾನಸಭೆ ಭವನವನ್ನು ಪ್ರವೇಶಿಸಿದರು. ಬಳಿಕ ಸದನದಲ್ಲಿ ಮೊದಲಿಗರಾಗಿ ವಿಧಾನಸಭಾ ಸದಸ್ಯರಾಗಿ ಬುಧವಾರ ಬೆಳಗ್ಗೆ ಪ್ರಮಾಣವಚನ ಸ್ವೀಕರಿಸಿದರು.



ನಂದಿಗ್ರಾಮ ವಿಧಾನಸಭಾ ಕ್ಷೇತ್ರ ಮತ್ತು ಟಿಎಂಸಿ ನಾಯಕಿ, ಮಾಜಿ ಸಿಎಂ ಮಮತಾ ಬ್ಯಾನರ್ಜಿ ಅವರ ಭದ್ರಕೋಟೆ ಎನಿಸಿಕೊಂಡಿದ್ದ ಭವಾನಿಪುರ ಕ್ಷೇತ್ರ ಎರಡೂ ಕಡೆ ಭರ್ಜರಿ ಗೆಲುವು ಸಾಧಿಸಿರುವ ಸುವೇಂದು ಅಧಿಕಾರಿ, ವಿಧಾನಸಭೆಗೆ ಗೌರವ ಸೂಚಿಸಿದ ಪರಿಗೆ ಪಶ್ಚಿಮ ಬಂಗಾಳ ನಾಗರಿಕರಿಂದ ಪ್ರಶಂಸೆ ವ್ಯಕ್ತವಾಗಿದೆ. ಪ್ರತಿಪಕ್ಷ ನಾಯಕರಾಗಿದ್ದಾಗ ಅಮಾನತುಗೂ ಒಳಗಾಗಿದ್ದರು, ಹಲವು ಸವಾಲುಗಳನ್ನು ಎದುರಿಸಿದ್ದರು. ಈಗ ಅವರ ನಡವಳಿಕೆ ವಿನಯದ ಪ್ರತೀಕವಾಗಿದೆ ಎಂದು ನೆಟ್ಟಿಗರು ಪ್ರಶಂಸಿಸಿದ್ದಾರೆ.

ನಂದಿಗ್ರಾಮಕ್ಕೆ ರಾಜೀನಾಮೆ: ಪಶ್ಚಿಮ ಬಂಗಾಳದ ನಂದಿಗ್ರಾಮ ಮತ್ತು ಭವಾನಿಪುರ ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಭಾರೀ ಬಹುಮತದಿಂದ ಚುನಾಯಿತರಾಗಿರುವ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಒಂದು ಕ್ಷೇತ್ರವನ್ನು ತ್ಯಜಿಸಬೇಕಿದೆ. ಸುವೇಂದು ಅವರು ಕಳೆದ ಚುನಾವಣೆವರೆಗೂ ಟಿಎಂಸಿ ನಾಯಕಿ, ಮಾಜಿ ಸಿಎಂ ಮಮತಾ ಬ್ಯಾನರ್ಜಿ ಅವರ ಭದ್ರಕೋಟೆ ಎನಿಸಿಕೊಂಡಿದ್ದ ಭವಾನಿಪುರ ವಿಧಾನಸಭಾ ಕ್ಷೇತ್ರವನ್ನೇ ಉಳಿಸಿಕೊಳ್ಳುವುದಾಗಿ ಬುಧವಾರ ಹೇಳಿದ್ದು, ನಂದಿಗ್ರಾಮ ಕ್ಷೇತ್ರದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ದುರ್ಗಾ ಸ್ಟಾಲಿನ್‌ರ ಕೊಲ್ಲೂರು ದೇಗುಲ ಭೇಟಿ ಫೋಟೊ ವೈರಲ್

ಕೊಲ್ಲೂರು: ತಮಿಳುನಾಡು ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕ, ಡಿಎಂಕೆ ಶಾಸಕ, ಮಾಜಿ ಡಿಸಿಎಂ ಉದಯನಿಧಿ ಸ್ಟಾಲಿನ್, 17ನೇ ವಿಧಾನಸಭೆಯ ಮೊದಲ ಅಧಿವೇಶನದ ಮೊದಲ ದಿನವಾದ ಸೋಮವಾರ ಸದನದಲ್ಲಿ ಮಾತನಾಡಿ, 'ಈ ನೆಲದಿಂದ ಸನಾತನ ಧರ್ಮವನ್ನು ನಾಶಪಡಿಸಬೇಕು' ಎಂದು ವೀರಾವೇಶದಿಂದ ಮಾತನಾಡಿದ್ದರು. ಅದರ ಬೆನ್ನಲ್ಲೇ ಅವರ ತಾಯಿ ದುರ್ಗಾ ಸ್ಟಾಲಿನ್ ಮತ್ತು ಸೋದರ ಸಂಬಂಧಿ ಶಬರೀಶನ್, ಕರ್ನಾಟಕದ ಪ್ರಸಿದ್ಧ ಕೊಲ್ಲೂರು ಮೂಕಾಂಬಿಕಾ ದೇಗುಲಕ್ಕೆ ಮಾ.8ರಂದು ಭೇಟಿ ನೀಡಿ ದೇವರ ದರ್ಶನ ಪಡೆದ, ಹರಕೆಗಳನ್ನು ತೀರಿಸಿದ ಸಂದರ್ಭದ ಹಲವಾರು ಫೋಟೋಗಳು ವೈರಲ್ ಆಗಿವೆ. ಅಷ್ಟೇ ಅಲ್ಲದೇ, ನೆಟ್ಟಿಗರು ಉದಯನಿಧಿಯನ್ನು ತರಾಟೆಗೂ ತೆಗೆದುಕೊಂಡಿದ್ದಾರೆ.



'ಸನಾತನ ಧರ್ಮವನ್ನು ತಮಿಳುನಾಡಿನಿಂದ ನಾಶ ಮಾಡುವ ನಿನ್ನ ವೀರಾವೇಶದ ಮಾತುಗಳು ಒತ್ತಟ್ಟಿಗಿರಲಿ. ಮೊದಲು ನಿನ್ನ ಮನೆಯಿಂದ ಸನಾತನ ಧರ್ಮವನ್ನು ಹೊರಗೆ ಹಾಕಲು ಸಾಧ್ಯವೇ ಪರೀಕ್ಷೆ ಮಾಡಿನೋಡು?' ಎಂದು ಸವಾಲೆಸೆದಿದ್ದಾರೆ. ಅದರ ಜತೆಗೇ ಉದಯನಿಧಿಯ ತಾಯಿ, ಮಾಜಿ ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಅವರ ಪತ್ನಿ ದುರ್ಗಾ ಸ್ಟಾಲಿನ್ ಅವರ ಕೊಲ್ಲೂರು ಮುಕಾಂಬಿಕೆ ದೇಗುಲ ದರ್ಶನದ ಫೋಟೊಗಳನ್ನೂ ಪೋಸ್ಟ್ ಮಾಡಿದ್ದಾರೆ. ಉದಯನಿಧಿ ಮಾತ್ರವಲ್ಲ ಈ ಹಿಂದೆ ಎಂಕೆ ಸ್ಟಾಲಿನ್ ಕೂಡ ಸನಾತನ ವಿರೋಧಿ ಹೇಳಿಕೆಗಳನ್ನು ನೀಡಿ ಸುದ್ದಿಗೆ ಗ್ರಾಸವಾಗಿದ್ದರು. ಈಗ ಅವರ ಪತ್ನಿ ದುರ್ಗಾ ಅವರೇ ಸನಾತನ ಧರ್ಮವನ್ನು ಮನೆಯಲ್ಲಿ, ಮನೆಯ ಹೊರಗೂ ಪಾಲನೆ ಮಾಡುತ್ತಿದ್ದಾರೆ. ತಮ್ಮ ಧಾರ್ಮಿನ ವಿಧಿ ವಿಧಾನ, ಹಿರಿಯರು(ಅತ್ತೆ) ನಡೆಸಿಕೊಂಡು ಬಂದಿದ್ದ ಸಂಪ್ರದಾಯ ಮುಂದುವರೆಸಿದ್ದಾರೆ. ಪೂಜೆ ಪುನಸ್ಕಾರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ಎಂದಿನಂತೆ ತೊಡಗಿಸಿಕೊಂಡಿದ್ದಾರೆ. ಇದೇ ಕಾರಣಕ್ಕೆ ಸ್ಟಾಲಿನ್ ಮತ್ತು ಉದಯನಿಧಿ ಸ್ಟಾಲಿನ್ ಅವರನ್ನು ಜಾಲತಾಣಗಳಲ್ಲಿ ನೆಟ್ಟಿಗರು ಟೀಕಿಸಲಾರಂಭಿಸಿದ್ದಾರೆ.

ಎನ್.ರಂಗಸ್ವಾಮಿ ಐದನೇ ಬಾರಿ ಪುದುಚೇರಿ ಸಿಎಂ ಆಗಿ ಪ್ರಮಾಣ

ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ಕೈಲಾಶನಾಥನ್ ಅವರು ಸಿಎಂ ರಂಗಸ್ವಾಮಿ ಅವರಿಗೆ ಬುಧವಾರ ಪ್ರತಿಜ್ಞಾವಿಧಿ ಬೋಧಿಸಿದರು.

ಪುದುಚೇರಿ: ರಾಜ್ಯದಲ್ಲಿ 'ಯಮಹಾ ಆರ್‌ಎಕ್ಸ್ 100 ರಾಮಸ್ವಾಮಿ' ಎಂದೇ ಹೆಸರಾಗಿರುವ ಎನ್.ರಂಗಸ್ವಾಮಿ ಅವರು ಕೇಂದ್ರಾಡಳಿತ ಪ್ರದೇಶ ಪುದುಚೇರಿಯ ಮುಖ್ಯಮಂತ್ರಿಯಾಗಿ ದೇವರ ಹೆಸರಿನಲ್ಲಿ ಬುಧವಾರ ಬೆಳಗ್ಗೆ ಪ್ರಮಾಣ ವಚನ ಸ್ವೀಕರಿಸಿದರು. ಆಲ್ ಇಂಡಿಯ ಎನ್ ರಂಗಸ್ವಾಮಿ ಕಾಂಗ್ರೆಸ್(ಎಐಎನ್‌ಆರ್‌ಸಿ) ಪಕ್ಷದ ಸಂಸ್ಥಾಪಕ ನಾಯಕರಾದ ಎನ್.ರಂಗಸ್ವಾಮಿ ಅವರದು ಪುದುಚೇರಿ ಸಿಎಂ ಆಗಿ ಈಗಿನದು 5ನೇ ಅಧಿಕಾರವಧಿಯಾಗಿದೆ. ಪುದುಚೇರಿಯಲ್ಲಿರುವ 'ಆಂಧ್ರಪ್ರದೇಶ ಯಾನಂ' ಕ್ಷೇತ್ರವನ್ನು ಪ್ರತಿನಿಧಿಸುವ ಎಐಎನ್‌ಆರ್‌ಸಿ ಪಕ್ಷದ ಸಂಸ್ಥಾಪಕ ಎನ್. ರಂಗಸಾಮಿ ಅವರು ತೆಲುಗಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದು ವಿಶೇಷವಾಗಿತ್ತು.

ಜತೆಗೆ, ಪ್ರಾದೇಶಿಕ ಪಕ್ಷದ ಮಲ್ಲಾಡಿ ಕೃಷ್ಣ ರಾವ್ ಮತ್ತು ಬಿಜೆಪಿಯ ಎ.ನಮಃಶಿವಾಯಂ ಅವರು ಎನ್‌ಡಿಎ ಸರಕಾರದ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಲೆಫ್ಟಿನೆಂಟ್ ಗವರ್ನರ್ ಕೆ.ಕೈಲಾಶನಾಥನ್ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು. ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವಿನ್ ಮತ್ತು ಬಿ.ಎಲ್.ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.

THIS IS A PUBLIC ANNOUNCEMENT FOR INFORMATION PURPOSES ONLY AND IS NOT A FINAL OFFER DOCUMENT ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE FOR UNITS OR SECURITIES. **NOT FOR PUBLICATION, RELEASE OR DISTRIBUTION, DIRECTLY OR INDIRECTLY OUTSIDE INDIA.**

INITIAL PUBLIC OFFER OF BAGMANE PRIME OFFICE REIT IN RELIANCE UPON REGULATION 14(1) OF THE SECURITIES AND EXCHANGE BOARD OF INDIA (REAL ESTATE INVESTMENT TRUSTS) REGULATIONS, 2014, AS AMENDED (THE "REIT REGULATIONS")

BAGMANE REIT

BAGMANE PRIME OFFICE REIT

(Registered in the Republic of India as a contributory, determinate and irrevocable trust on May 30, 2025 at Bengaluru, Karnataka, India under the Indian Trusts Act, 1882 and as a real estate investment trust on July 15, 2025 at Mumbai, Maharashtra, India under the Securities and Exchange Board of India (Real Estate Investment Trusts) Regulations, 2014, as amended having registration number IN/REIT/25-26/0007)
Principal Place of Business: 5th Floor, 'B' Block, Laurel Building, C.V. Raman Nagar, Bagmane Tech Park, Bengaluru - 560 093, Karnataka, India, **Tel:** +91 80 4032 9901; **Fax:** N.A.; **Compliance Officer:** Venkatesh Ranganath P;
E-mail: reitcompliance@bagmanereit.com; **Website:** www.bagmanereit.com

(Please scan this QR code to view the Final Offer Document)

TRUSTEE	SPONSOR	MANAGER
AXIS TRUSTEE	BAGMANE	BAGMANE REIT
Axis Trustee Services Limited	**Bagmane Realty and Infrastructure LLP**	**Bagmane Realty Investment Manager Private Limited**

BASIS OF ALLOTMENT

The Units of Bagmane Prime Office REIT are proposed to be listed on National Stock Exchange of India Limited ("NSE") and BSE Limited ("BSE") and the trading will commence on Thursday May 14, 2026.

Initial public offer of 340,500,000 Units of Bagmane Prime Office REIT ("Bagmane REIT") at a price of ₹ 100 per Unit aggregating to ₹ 34,050 million, consisting of a fresh issuance of 239,000,000 Units by the Bagmane REIT aggregating to ₹ 23,900 million ("Fresh Issue") and an offer for sale of 101,500,000 Units by BREP ASIA III INDIA HOLDING CO VIII PTE LTD. ("Selling Unitholder") aggregating to ₹ 10,150 million ("Offer for Sale" and together with the Fresh Issue, the ("Offer"). The Offer has been undertaken in reliance upon Regulation 14(1) of the Securities and Exchange Board of India (Real Estate Investment Trusts) Regulations, 2014, as amended (the "REIT Regulations"). The Offer will constitute 10.01% of the total outstanding Units on a post-Offer basis in accordance with Regulation 14(2A) of the REIT Regulations.

OFFER PRICE: ₹ 100 PER UNIT

ANCHOR INVESTOR OFFER PRICE: ₹ 100 PER UNIT | STRATEGIC INVESTOR OFFER PRICE: ₹ 100 PER UNIT

RISKS TO INVESTORS:

- **Bagmane REIT does not provide any assurance or guarantee of any distributions to the Unitholders. It may not be able to make distributions to Unitholders in the manner described in the Final Offer Document or at all, and the level of distributions may decrease.**
- **The Bagmane REIT has a limited operating history and may not be able to operate its business successfully or generate sufficient cash flows to make or sustain distributions.**
- **The Special Purpose Combined Financial Statements are prepared for the Final Offer Document and may not necessarily be representative of the Bagmane REIT's actual consolidated financial position, results of operation and cash flows for such periods.**

Credit Rating: As on December 26, 2025, the Bagmane REIT has been assigned an issuer rating of Provisional CARE AAA; Stable by CARE Ratings Limited and as on December 29, 2025, the Bagmane REIT has been assigned an issuer rating of Provisional [ICRA] AAA (Stable) by ICRA Limited

BID / OFFER PERIOD:

ANCHOR INVESTOR BID/OFFER PERIOD: MONDAY, MAY 4, 2026

BID/OFFER OPENED ON: TUESDAY, MAY 5, 2026

BID/OFFER CLOSED ON: THURSDAY, MAY 7, 2026

The Offer is being made through the Book Building Process and in compliance with the REIT Regulations and the SEBI Master Circular, wherein not more than 75% of the Offer (excluding Strategic Investor Portion) shall be available for allocation on a proportionate basis to Institutional Investors, provided that the Manager may, in consultation with the Selling Unitholder and BRLMs, allocate up to 60% of the Institutional Investor Portion to Anchor Investors on a discretionary basis in accordance with the REIT Regulations and the SEBI Master Circular. Further, not less than 25% of the Offer shall be available for allocation on a proportionate basis to Non-Institutional Investors (excluding the Strategic Investor Portion), in accordance with the REIT Regulations and the SEBI Master Circular, subject to valid Bids being received at or above the Offer Price. The Manager, in consultation with the Selling Unitholder and BRLMs, may retain oversubscription in the Offer in accordance with the REIT Regulations and the SEBI Master Circular. All Bidders, other than Anchor Investors and Strategic Investors, are required to utilise the Application Supported by Blocked Amount **("ASBA")** process by providing details of their respective ASBA accounts and UPI ID (in case of individual Non-Institutional Investors using the UPI Mechanism. Bidding with a Bid Amount of ₹ 500,000 or less), in which case the corresponding Bid Amounts will be blocked by the Self Certified Syndicate Banks **("SCSBs")** or under the UPI Mechanism, as applicable, to participate in this Offer. For details, see "Offer Procedure" on page 417 of the Final Offer Document.

The Bidding for Anchor Investors opened and closed on Monday, May 04, 2026. Our Trust received 50 Anchor Investor Application Forms from 39 Anchor Investors for 117,226,200 Units. The Anchor Investor Offer Price was finalized at ₹ 100 per Unit. A total of 11,49,74,850 Units were allocated under the Anchor Investor Portion aggregating to ₹ 11,497,485,000/-

The Offer received 153,432 applications for 3,636,948,250 Units (prior to technical rejections) resulting in 10.68 times subscription. The details of the applications received in the Offer from various categories are as under (before technical rejections):

Sl. No.	Category	No. of Applications received	No. of Units applied	No. of Units available for allocation as per the Final Offer Document	No. of times Subscribed	Amount (₹)
A	Institutional Bidders (excluding Strategic & Anchor Investors)	121	2,02,78,76,550	7,66,50,150	26.46	2,02,78,65,60,000.00
B	Other Bidders (Non Institutional)*	1,53,239	1,40,68,45,500	6,38,75,000	22.02	1,40,67,96,81,900.00
C	Strategic Investors	22	8,50,00,000	8,50,00,000	1.00	8,50,00,00,000.00
D	Anchor Investors	50	11,72,26,200	11,49,74,850	1.02	11,72,26,20,000.00
	TOTAL	**1,53,432**	**3,63,69,48,250**	**34,05,00,000**	**10.68**	**3,63,68,88,61,900.00**

This excludes 2 applications for 4,200 Units aggregating to ₹4,20,000/- from Non-Institutional Investors which were not in bid book but which were banked.

Final Demand

A summary of the final demand as per the NSE and the BSE as on the Bid/Offer Closing Date at different Bid prices is as under:

Sr. No.	Bid Price (₹)	Bids quantity	(%) to Total	Cumulative Total	% Cumulative Total
1	95	9,56,700	0.03	9,56,700	0.03
2	96	1,52,250	0.00	11,08,950	0.03
3	97	2,95,800	0.01	14,04,750	0.04
4	98	3,23,100	0.01	17,27,850	0.05
5	99	13,75,500	0.04	31,03,350	0.09
6	100	3,51,18,12,150	99.91	3,51,49,15,500	100.00
	TOTAL	**3,51,49,15,500**	**100.00**		

The Basis of Allotment was finalized in consultation with the Designated Stock Exchange, being the NSE, on May 12, 2026.

A. Allotment to the Non-Institutional Investors (excluding Anchor Investors and Strategic Investors) (after technical rejections) (including ASBA Application)

The Basis of Allotment to the Non-Institutional Investors (excluding Anchor Investors and Strategic Investors), who have bid at the Offer Price of ₹100 per Unit, was finalized in consultation with the NSE. The Non-Institutional Portion has been subscribed to the extent of 21.83116 times. The total number of Units Allotted in this category is 63,875,000 Units to 41,338 successful Non-Institutional Investors (excluding Anchor Investors and Strategic Investors). The category-wise details of the Basis of Allotment are as under: **(Sample)**

Sr. No.	Category	No. of Applications Received	% of Total	Total No. of Units applied	% to Total	No. of Units allotted per applicant	Ratio	Total No. of Units allotted
1	150	89,405	59.84	1,34,10,750	0.96	150	29 : 633	6,14,250
2	300	10,396	6.96	31,18,800	0.22	150	25 : 273	1,42,800
3	450	3,583	2.40	16,12,350	0.12	150	46 : 335	73,800
4	600	2,030	1.36	12,18,000	0.09	150	35 : 191	55,800
5	750	1,213	0.81	9,09,750	0.07	150	11 : 48	41,700
6	900	1,355	0.91	12,19,500	0.09	150	14 : 51	55,800
7	1,050	1,216	0.81	12,76,800	0.09	150	17 : 53	58,500
8	1,200	692	0.46	8,30,400	0.06	150	29 : 79	38,100
9	1,25,550	3	0.00	3,76,650	0.03	5,751	1 : 1	17,253
10	1,26,000	1	0.00	1,26,000	0.01	5,772	1 : 1	5,772
11	1,26,450	1	0.00	1,26,450	0.01	5,792	1 : 1	5,792
12	1,26,750	1	0.00	1,26,750	0.01	5,806	1 : 1	5,806
13	1,26,900	1	0.00	1,26,900	0.01	5,813	1 : 1	5,813
14	1,27,500	1	0.00	1,27,500	0.01	5,840	1 : 1	5,840
15	1,27,950	1	0.00	1,27,950	0.01	5,861	1 : 1	5,861
16	1,28,700	1	0.00	1,28,700	0.01	5,895	1 : 1	5,895
17	1,29,000	1	0.00	1,29,000	0.01	5,909	1 : 1	5,909
18	1,00,05,000	1	0.00	1,00,05,000	0.72	4,58,290	1 : 1	4,58,290
19	1,05,99,900	1	0.00	1,05,99,900	0.76	4,85,540	1 : 1	4,85,540
20	1,09,99,950	1	0.00	1,09,99,950	0.79	5,03,865	1 : 1	5,03,865
21	1,14,99,900	1	0.00	1,14,99,900	0.82	5,26,766	1 : 1	5,26,766
22	1,44,99,900	1	0.00	1,44,99,900	1.04	6,64,184	1 : 1	6,64,184
23	1,99,99,950	1	0.00	1,99,99,950	1.43	9,16,120	1 : 1	9,16,120
24	2,14,99,950	1	0.00	2,14,99,950	1.54	9,84,829	1 : 1	9,84,829
25	2,49,99,900	1	0.00	2,49,99,900	1.79	11,45,148	1 : 1	11,45,148
26	3,00,00,000	1	0.00	3,00,00,000	2.15	13,74,183	1 : 1	13,74,183
27	4,99,99,950	1	0.00	4,99,99,950	3.59	22,90,302	1 : 1	22,90,302
	TOTAL	**1,49,414**	**100.00**	**1,39,44,65,100**	**100.00**			**6,38,75,000**

B. Allotment to Institutional Investors (excluding Anchor Investors and Strategic Investors) (After Technical Rejections) (including ASBA Application)

The Basis of Allotment to the Institutional Investors (excluding Anchor Investors and Strategic Investors), who have bid at the Offer Price of ₹ 100 per Unit, was finalized in consultation with the NSE. The Institutional Portion has been subscribed to the extent of 26.44198 times. The total number of Units Allotted in this category is 76,650,150 Units to 120 successful Institutional Investors (excluding Anchor Investors and Strategic Investors). The category-wise details of the Basis of Allotment are as under: **(Sample)**

Sr. No.	Category	No. of Applications Received	% of Total	Total No. of Units applied	% to Total	No. of Units allotted per applicant	Ratio	Total No. of Units allotted
1	3,900	1	0.83	3,900	0.00	150	1 : 1	150
2	13,200	1	0.83	13,200	0.00	499	1 : 1	499
3	44,400	1	0.83	44,400	0.00	1,679	1 : 1	1,679
4	50,100	1	0.83	50,100	0.00	1,895	1 : 1	1,895
5	1,14,000	1	0.83	1,14,000	0.01	4,311	1 : 1	4,311
6	1,19,250	1	0.83	1,19,250	0.01	4,510	1 : 1	4,510
7	1,95,000	1	0.83	1,95,000	0.01	7,375	1 : 1	7,375
8	2,00,100	1	0.83	2,00,100	0.01	7,567	1 : 1	7,567
9	2,49,900	2	1.67	4,99,800	0.02	9,451	1 : 1	18,902
10	2,92,500	1	0.83	2,92,500	0.01	11,062	1 : 1	11,062
11	3,00,000	1	0.83	3,00,000	0.01	11,346	1 : 1	11,346
12	3,49,950	1	0.83	3,49,950	0.02	13,235	1 : 1	13,235
13	30,00,000	4	3.33	1,20,00,000	0.59	1,13,456	1 : 1	4,53,824
14	33,99,900	1	0.83	33,99,900	0.17	1,28,580	1 : 1	1,28,580
15	34,99,950	1	0.83	34,99,950	0.17	1,32,363	1 : 1	1,32,363
16	36,00,000	1	0.83	36,00,000	0.18	1,36,147	1 : 1	1,36,147
17	43,66,650	1	0.83	43,66,650	0.22	1,65,141	1 : 1	1,65,141
18	46,50,000	1	0.83	46,50,000	0.23	1,75,857	1 : 1	1,75,857
19	50,02,500	1	0.83	50,02,500	0.25	1,89,188	1 : 1	1,89,188
20	52,00,200	1	0.83	52,00,200	0.26	1,96,664	1 : 1	1,96,664
21	55,00,050	1	0.83	55,00,050	0.27	2,08,004	1 : 1	2,08,004
22	57,00,000	1	0.83	57,00,000	0.28	2,15,566	1 : 1	2,15,566
23	59,70,000	1	0.83	59,70,000	0.29	2,25,777	1 : 1	2,25,777
24	60,00,000	1	0.83	60,00,000	0.30	2,26,912	1 : 1	2,26,912
25	4,76,86,950	1	0.83	4,76,86,950	2.35	18,03,456	1 : 1	18,03,456
26	5,15,59,500	1	0.83	5,15,59,500	2.54	19,49,911	1 : 1	19,49,911
27	6,30,87,900	1	0.83	6,30,87,900	3.11	23,85,899	1 : 1	23,85,899
28	9,00,00,000	1	0.83	9,00,00,000	4.44	34,03,679	1 : 1	34,03,679
29	9,48,63,750	1	0.83	9,48,63,750	4.68	35,87,619	1 : 1	35,87,619
30	9,99,99,900	1	0.83	9,99,99,900	4.93	37,81,862	1 : 1	37,81,862
31	10,45,25,550	1	0.83	10,45,25,550	5.16	39,53,016	1 : 1	39,53,016
32	11,99,49,900	1	0.83	11,99,49,900	5.92	45,36,344	1 : 1	45,36,344
33	12,00,00,000	1	0.83	12,00,00,000	5.92	45,38,238	1 : 1	45,38,238
34	12,16,04,850	1	0.83	12,16,04,850	6.00	45,98,932	1 : 1	45,98,932
35	14,05,24,950	2	1.67	28,10,49,900	13.87	53,14,465	1 : 1	1,06,28,930
	TOTAL	**120**	**100.00**	**2,02,67,81,550**	**100.00**			**7,66,50,150**

C. Allotment to Strategic Investors (after Rejections)

The Bagmane REIT in consultation with the Selling Unitholder and the BRLMs, has allotted 85,000,000 Units to 22 Strategic Investors at the Anchor Investor Offer Price of ₹100 per Unit in accordance with the REIT Regulations.

Category	FIs/Banks	MF's	IC's	AIF's	FPI/FIIs	NBFC	Others	PF	Total
Strategic Investors	-	1,25,00,000	1,85,00,000	2,25,00,000	-	1,00,00,000	1,40,00,000	75,00,000	**8,50,00,000**

D. Allotment to Anchor Investors (after Technical Rejections)

The Bagmane REIT in consultation with the Selling Unitholder and the BRLMs, has allotted 114,974,850 Units to 50 Anchor Investors at the Anchor Investor Offer Price of ₹100 per Unit in accordance with the REIT Regulations. This represents 60% of the Institutional Investor Portion.

Category	FIs/Banks	MF's	IC's	AIF's	FPI/FIIs	NBFC	Others	Total
Anchor Investors	-	3,21,06,750	3,02,49,000	1,88,68,650	45,00,150	85,00,200	2,07,50,100	**11,49,74,850**

The Committee of Directors of the Investment Manager at its meeting held on May 12, 2026, has noted the Basis of Allotment of the Units approved by the Designated Stock Exchange, being NSE and allotted the units to various successful applicants. The Allotment Advice-cum-Unblocking Intimations and/or notices have been dispatched/emailed to the addresses of the investors as registered with the depositories. Further, the instructions to the Self Certified Syndicate Banks have been issued for unblocking of funds and transfers to the Public Offer Account on May 12, 2026 and payment to non-Syndicate brokers have been issued on May 12, 2026. In case the same is not received within ten days, investors may contact the Registrar to the Offer at the address given below. The Units Allotted to the successful Allottees have been credited on May 13, 2026 to their beneficiary accounts subject to validation of the account details with the depositories concerned. The Manager has received the listing and trading approval each dated May 13, 2026 from NSE and BSE and the trading of Units will commence on May 14, 2026

Note: All capitalised terms used and not specifically defined herein shall have the same meaning as ascribed to them in the Final Offer Document.

INVESTORS PLEASE NOTE

The details of the Allotment made will be hosted on the website of the Registrar to the Offer, Kfin Technologies Limited At www.kfintech.com.

All future correspondence in this regard may kindly be addressed to the Registrar to the Offer quoting full name of the first/ sole Bidder, Bid cum Application Form number, Bidder DP ID, Client ID, PAN, date of submission of Bid cum Application Form, address of the Bidder, number of Units applied for, the name and address of the Designated Intermediary where the Bid cum Application Form was submitted by the Bidder and a copy of the Acknowledgment Slip received from the Designated Intermediary at the address given below:

KFINTECH
EXPERIENCE TRANSFORMATION

Kfin Technologies Limited
Selenium Tower B, Plot No. 31 & 32, Financial District, Nanakramguda, Serilingampally, Hyderabad,
Ranga Reddi - 500 032, Telangana, India, **Tel:** +91 40 6716 2222/1800 309 4001,
E-mail: bagmane.reit@kfintech.com, **Investor grievance e-mail:** einward.ris@kfintech.com
Website: www.kfintech.com, **Contact Person:** M. Murali Krishna, **SEBI Registration No.:** INR000000221

For **BAGMANE PRIME OFFICE REIT**
on behalf of the Board of Directors
Sd/-
Venkatesh Ranganath P
Compliance Officer

Place: Bengaluru, Karnataka
Date: May 13, 2026

THE LEVEL OF SUBSCRIPTION SHOULD NOT BE TAKEN TO BE INDICATIVE OF EITHER THE MARKET PRICE OF THE UNITS ON LISTING OR THE BUSINESS PROSPECTS OF BAGMANE PRIME OFFICE REIT.

BAGMANE PRIME OFFICE REIT, acting through its Investment Manager, is proposing, subject to receipt of requisite approvals, market conditions and other considerations, to make an initial offer of its Units representing an undivided beneficial interest in Bagmane Prime Office REIT, and has filed the Final Offer Document with SEBI and the Stock Exchanges on May 11, 2026. The Final Offer Document is available on the website of SEBI at www.sebi.gov.in, BSE at www.bseindia.com, NSE at www.nseindia.com, respectively, as well as on the website of the Book Running Lead Managers, i.e. JM Financial Limited, Kotak Mahindra Capital Company Limited, Axis Capital Limited, IIFL Capital Services Limited (Formerly known as IIFL Securities Limited), SBI Capital Markets Limited, 360 ONE WAM Limited and HDFC Bank Limited at www.jmfl.com, https://investmentbank.kotak.com, www.axiscapital.co.in, www.iiflcapital.com, www.sbicaps.com, https://www.360.one and www.hdfc.bank.in, respectively. and on the website of the Bagmane Prime Office REIT at www.bagmanereit.com. Potential investors should note that investment in the Units involves a degree of risk, and for details relating to the same, should refer to the section *"Risk Factors"* on page 48 of the Final Offer Document. These materials are not for publication or distribution, directly or indirectly, in or into the United States. These materials are not an offer for the sale of the Units or other securities in the United States or elsewhere.

The Units have not been and will not be registered under the United States Securities Act of 1933, as amended (the "**Securities Act**") and may not be offered or sold within the United States except pursuant to an exemption from, or in a transaction not subject to, the registration requirements of the Securities Act and applicable U.S. state securities laws. Bagmane Realty Investment Manager Private Limited, acting as manager of Bagmane Prime Office REIT (the "**REIT**") does not intend to register any of the securities of the REIT in the United States or to conduct a public offering of the securities of the REIT in the United States.

ಸಮಾಚಾರ ಸಣ್ಣದಲ್ಲ

ಭೂ ಗ್ಯಾರಂಟಿಯಲ್ಲಿ ವಿಶೇಷತೆ ಇಲ್ಲ

ಬೆಂಗಳೂರು: ರಾಜ್ಯ ಸರಕಾರದ ನನ್ನ ಖಾತೆ ನನ್ನ ಹಕ್ಕು ಎಂಬ ಆರನೇ ಭೂಗ್ಯಾರಂಟಿಯಲ್ಲಿ ಅಚ್ಚರಿ ಏನಿಲ್ಲ, ವಿಶೇಷತೆಯೂ ಇಲ್ಲ ಎಂದು ವಿಧಾನಪರಿಷತ್ ವಿಪಕ್ಷ ನಾಯಕ

ಛಲವಾದಿ ನಾರಾಯಣಸ್ವಾಮಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಇದು ಬೆಂಗಳೂರಿನ ಜನರಿಗೆ ಯಾವುದೇ ಉಡು ಗೊರೆ ಅಲ್ಲ. 33 ಲಕ್ಷ ಆಸ್ತಿಗಳಿವೆ ಎಂದಿದ್ದಾರೆ. ಈ ಆಸ್ತಿಗಳ ಒಡೆತನ ಯಾರಿಗೂ ಇರಲಿಲ್ಲವೇ? ಹೊಸದಾಗಿ ಒಡೆತನ ಕೊಡುತ್ತಿದ್ದೀರಾ ಎಂದು ಪ್ರಶ್ನಿಸಿದರಲ್ಲದೆ, ಇದು ಭ್ರಷ್ಟಾಚಾರಕ್ಕೆ ದಾರಿಯೇ ಹೊರತು ಬೇರೇನೂ ಅಲ್ಲ. ಕಾಂಗ್ರೆಸ್‌ನಲ್ಲಿ ಕಿಕ್‌ಬ್ಯಾಕ್ ಇಲ್ಲದೇ ಕಥೆಯೇ ಇಲ್ಲ ಎಂದು ಆರೋಪಿಸಿದರು. ಬೆಂಗಳೂರಲ್ಲಿ ರಸ್ತೆ ಗುಂಡಿಗಳು ಹಾಗೇ ಇವೆ. ಜನರ ಕೋಪ ಎದುರಿಸಲಾಗದೇ ಕಾಂಗ್ರೆಸ್ ಸರಕಾರ ಜಿಬಿಎ ಚುನಾವಣೆಯನ್ನು ನವೆಂಬರ್ ತಿಂಗಳಿಗೆ ಮುಂದಕ್ಕೆ ಹಾಕಲು ಕೋರ್ಟಿಗೆ ಅರ್ಜಿ ಹಾಕಿದೆ. ಕಾಂಗ್ರೆಸ್ ಪಕ್ಷ ಚುನಾವಣಾ ಭೀತಿ ಹೊಂದಿದೆ ಎಂದು ದೂರಿದರು.

ಪ್ರಧಾನಿ ಹೇಳಿಕೆಗೆ ವಿರೋಧ ಬೇಡ

ಬೆಂಗಳೂರು: ಪ್ರಧಾನಿಯವರು ದೇಶದ ಹಿತದೃಷ್ಟಿಯಿಂದ ಕೆಲವು ಸಲಹೆಗಳನ್ನು ನೀಡಿದ್ದು, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್

ವಿರೋಧ ಮಾಡುವುದನ್ನು ಕೈಬಿಡಬೇಕು ಎಂದು ವಿಧಾನ ಪರಿಷತ್ತಿನ ವಿರೋಧಪಕ್ಷದ ಮುಖ್ಯ ಸಚೇತಕ ಎನ್ ರವಿಕುಮಾರ್ ಆಗ್ರಹಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಿಯವರ ಹೇಳಿಕೆ ಗಮನಿಸಿ ಅನೇಕ ಕಂಪನಿಗಳು ವಾರದಲ್ಲಿ 3 ದಿನ ಮನೆಯಿಂದಲೇ ಕೆಲಸ ಮಾಡಿಸುವುದಾಗಿ ಮುಂದೆ ಬರುತ್ತಿವೆ. ಅನುಭವಿ ರಾಜಕಾರಣಿ ಬಿ.ಕೆ.ಹರಿಪ್ರಸಾದ್ ಅಪ್ರಬುದ್ಧ ಹಾಗೂ ಅತ್ಯಂತ ಹಗುರವಾದ ಹೇಳಿಕೆ ಕೊಡುತ್ತಾರೆ. ಅವರ ಬಗ್ಗೆ ಹೇಳಿಕೆ ಕೊಡುವುದರಲ್ಲಿ ಏನೇನೂ ಅರ್ಥ ಇಲ್ಲ. ಪೆಟ್ರೋಲಿಯಂ ಉತ್ಪನ್ನ, ಗ್ಯಾಸ್ ಬಳಕೆ ಕಡಿಮೆ ಮಾಡಿ, ಒಂದು ವರ್ಷ ಕಾಲ ಚಿನ್ನ ಖರೀದಿ ಅಗತ್ಯವಿದ್ದರೆ ಮಾತ್ರ ಕಡಿಮೆ ಮಾಡಿ, ಸಾಮೂಹಿಕ ಸಾರಿಗೆ ವ್ಯವಸ್ಥೆ ಬಳಸಿ ಎಂದು ಪ್ರಧಾನಿ ಹೇಳಿದ್ದಾರೆ.

ಅಮೆಜಾನ್ ವಿತರಣಾ ಸಿಬ್ಬಂದಿಗೆ ವಿಮೆ

ಬೆಂಗಳೂರು: ಖ್ಯಾತ ಇ-ಕಾಮರ್ಸ್ ಸಂಸ್ಥೆ ಅಮೆಜಾನ್ ಇಂಡಿಯಾ ತನ್ನ ವಿತರಣಾ ಜಾಲದ 90,000ಕ್ಕೂ ಹೆಚ್ಚು ಸಿಬ್ಬಂದಿ ಮತ್ತು ಅವರ ಕುಟುಂಬಗಳಿಗಾಗಿ ಸಮಗ್ರ ಆರೋಗ್ಯ ಮತ್ತು ವಿಮಾ ಯೋಜನೆಯನ್ನು ಘೋಷಿಸಿದೆ. ಈ ಯೋಜನೆಯ ಮೂಲಕ ತನ್ನ ಕೊನೆಯ ಹಂತದ ವಿತರಣಾ ಸಿಬ್ಬಂದಿಗೆ ಸಾಮಾಜಿಕ ಭದ್ರತೆ ಮತ್ತು ಆರ್ಥಿಕ ರಕ್ಷಣೆ ಒದಗಿಸುವ ಗುರಿ ಹೊಂದಿದೆ. ಈ ಹೊಸ ಯೋಜನೆಯಡಿ ಆರೋಗ್ಯ ರಕ್ಷಣೆಯನ್ನು ಗಮನಾರ್ಹವಾಗಿ ಹೆಚ್ಚಿಸಲಾಗಿದೆ. ಹೆಚ್ಚುವರಿ ಮೆಡಿಕ್ಲೈಮ್ ಮೊತ್ತವನ್ನು ರು.1.5 ಲಕ್ಷಕ್ಕೆ ಏರಿಸಲಾಗಿದ್ದು, ಅಪಘಾತ ವಿಮಾ ಕವರೇಜ್ ಅನ್ನು 10 ಲಕ್ಷಕ್ಕೆ ವಿಸ್ತರಿಸಲಾಗಿದೆ. ದಿನನಿತ್ಯದ ವೈದ್ಯಕೀಯ ತಪಾಸಣೆಗಾಗಿ 10,000 ವರೆಗೆ ಒಪಿಡಿ ಸೌಲಭ್ಯ ನೀಡಲಾಗುತ್ತಿದೆ.

ಅಮೂಲ್ ಹಾಲಿನ ಬೆಲೆ 2 ರು. ಹೆಚ್ಚಳ

ದೆಹಲಿ: ದೇಶದ ಪ್ರಮುಖ ಡೈರಿ ಬ್ರಾಂಡ್ ಅಮುಲ್ ತನ್ನ ಗ್ರಾಹಕರಿಗೆ ಶಾಕ್ ನೀಡಿದೆ. ಹಾಲಿನ ಉತ್ಪನ್ನಗಳಲ್ಲಿ ಪ್ರತಿ ಲೀಟರ್‌ಗೆ 2 ರು.ಗಳಷ್ಟು ಹೆಚ್ಚಳವನ್ನು ಘೋಷಿಸಿದೆ. ಪರಿಷ್ಕೃತ ಬೆಲೆಗಳು ಇಂದಿನಿಂದ ಜಾರಿಗೆ ಬರಲಿದೆ ಎಂದು ತಿಳಿಸಲಾಗಿದೆ. ಅಮುಲ್ ಗೋಲ್ಡ್, ಅಮುಲ್ ತಾಜಾ, ಅಮುಲ್ ಹಸು ಹಾಲು, ಅಮುಲ್ ಬಫಲೋ ಹಾಲು, ಅಮುಲ್ ಸ್ಲಿಮ್ ಟ್ರಿಮ್, ಅಮುಲ್ ಸ್ಟ್ಯಾಂಡರ್ಡ್ ಮಿಲ್ಕ್, ಅಮುಲ್ ಟಿ-ಸ್ಪೆಷಲ್‌ಗಳ ಬೆಲೆ ಹೆಚ್ಚಾಗಲಿದೆ. ಎಮ್ಮೆ ಹಾಲಿನ ಬೆಲೆಯನ್ನು ಲೀಟರ್‌ಗೆ 4 ರು. ಹೆಚ್ಚಿಸಲಾಗಿದ್ದು, 80 ರು.ಗೆ ತಲುಪಿದೆ. ಅಮುಲ್, ಒಂದು ನೀತಿಯಂತೆ, ಗ್ರಾಹಕರು ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಪಾವತಿಸುವ ಪ್ರತಿ ರೂಪಾಯಿಯಲ್ಲಿ ಸುಮಾರು 80 ಪೈಸೆಯನ್ನು ಹಾಲು ಉತ್ಪಾದಕರಿಗೆ ವರ್ಗಾಯಿಸುತ್ತದೆ ಎಂದು ಆಡಳಿತ ಮಂಡಳಿ ಹೇಳಿದೆ. 2025-26ರ ಆರ್ಥಿಕ ವರ್ಷದಲ್ಲಿ ಅಮುಲ್ ಬ್ರಾಂಡ್‌ನ ಒಟ್ಟು ವಹಿವಾಟು ಶೇ. 11ರಷ್ಟು ಹೆಚ್ಚಾಗಿ, ಡೈರಿ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಕಂಡುಬಂದ ಕಾರಣ ರು. 1 ಲಕ್ಷ ಕೋಟಿ ಮೈಲಿಗಲ್ಲನ್ನು ದಾಟಿದೆ.

ಕೇರಳಂ ಸಿಎಂ ಇಂದು ಘೋಷಣೆ?

ದೆಹಲಿ: ಕೇರಳಂನ ನೂತನ ಸಿಎಂ ಹೆಸರು ಗುರುವಾರ ಘೋಷಣೆಯಾಗುವ ನಿರೀಕ್ಷೆ ಇದೆ. ಬುಧವಾರ ಸಂಜೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಹುಲ್ ಗಾಂಧಿ ಜತೆ ದೆಹಲಿಯಲ್ಲಿ ಈ ಸಂಬಂಧ ಅಂತಿಮ ಚರ್ಚೆ ನಡೆಸಿದ್ದಾರೆ. ಕೇರಳಂ ಚುನಾವಣಾ ಫಲಿತಾಂಶ ಪ್ರಕಟವಾಗಿ ಹತ್ತು ದಿನಗಳಾಗುತ್ತಾ ಬಂದರೂ ಸಿಎಂ ಯಾರಾಗಬೇಕೆಂಬ ಆಯ್ಕೆ ವಿಷಯದಲ್ಲಿ ಕಾಂಗ್ರೆಸ್ ತಿಣುಕಾಡುತ್ತಿದೆ. ರಾಜ್ಯದ ಎಲ್ಲಾ ಮಾಜಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನು ಮಂಗಳವಾರ ಕಾಂಗ್ರೆಸ್ ಹೈಕಮಾಂಡ್ ದೆಹಲಿಗೆ ಕರೆಸಿ ಈ ಕುರಿತು ಅಭಿಪ್ರಾಯವನ್ನು ಸಂಗ್ರಹಿಸಿದೆ. ವಿ.ಡಿ. ಸತೀಶನ್, ಕೆ.ಸಿ.ವೇಣುಗೋಪಾಲ್ ಮತ್ತು ರಮೇಶ್ ಚೆನ್ನಿತ್ತಲ ಪೈಕಿ ಸಿಎಂ ಸ್ಥಾನಕ್ಕೆ ಒಬ್ಬರನ್ನು ಆಯ್ಕೆ ಮಾಡಬೇಕಾಗಿದ್ದು, ಬುಧವಾರ ಕೇರಳದ ಯುಡಿಎಫ್ ಒಕ್ಕೂಟದ ಮೈತ್ರಿ ಪಕ್ಷವಾದ ಮುಸ್ಲಿಂ ಲೀಗ್ ವಿ.ಡಿ.ಸತೀಶನ್‌ರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಬೇಕೆಂದು ಸಲಹೆ ನೀಡಿದೆ.

ದಿಢೀರ್ ಹೃದಯಾಘಾತಕ್ಕೆ ಪ್ರತಿಭಾನ್ವಿತ ಕಲಾವಿದ ಬಲಿ

ಅಕಾಲಕ್ಕೆ ನಂದಿ ಹೋದ ಚಂದನವನದ ದಿಲೀಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕನ್ನಡದ ಕಿರುತೆರೆಯಲ್ಲಿ ನಟರಾಗಿ, ನಿರ್ಮಾಪಕರಾಗಿ ಗುರುತಿಸಿಕೊಂಡು, ಬೆಳ್ಳಿತೆರೆಯಲ್ಲಿ ಪ್ರತಿಭಾನ್ವಿತ ನಟರಾಗಿ ಮಿಂಚಿದ ದಿಲೀಪ್ ರಾಜ್ ಅಸ್ತಂಗತರಾಗಿದ್ದಾರೆ. ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾರೆ. ದಿಲೀಪ್ ಇಲ್ಲ ಎಂಬುದನ್ನು ಯಾರೂ ನಂಬಲಾಗುತ್ತಿಲ್ಲ. ಆ ಮಟ್ಟಕ್ಕೆ ದಿಲೀಪ್ ನಿಧನ ಸುದ್ದಿ ಆಘಾತ ಉಂಟುಮಾಡಿದೆ. ದಿಲೀಪ್ ಸ್ಪುರದ್ರೂಪಿ, ಅಂತೆಯೇ ಪ್ರತಿಭಾನ್ವಿತ ನಟ. ಎಂತಹದ್ದೇ ಪಾತ್ರವನ್ನು ನೀಡಿದರೂ ಲೀಲಾಜಾಲವಾಗಿ ಅಭಿನಯಿಸುತ್ತಿದ್ದರು, ಜೀವಿಸುತ್ತಿದ್ದರು. ಕಾಲೇಜು ದಿನಗಳಲ್ಲಿ ನೃತ್ಯ ನಿರ್ದೇಶಕರಾಗಿದ್ದ ದಿಲೀಪ್, ಬಳಿಕ ನಟನೆಯತ್ತಲೂ ಆಸಕ್ತಿ ತಾಳಿದ್ದರು.

ಆಗಷ್ಟೇ ಪ್ರಸಾರ ಆರಂಭಿಸಿದ್ದ ಕಂಬದ ಮನೆ ಧಾರಾವಾಹಿಯಲ್ಲಿ ನಟಿಸಿದರು. ಮೊದಲ ಧಾರಾವಾಹಿಯಲ್ಲಿಯೇ ಮೆಚ್ಚುವ ಅಭಿನಯ ತೋರಿದ ದಿಲೀಪ್ ರಾಜ್ ಅಲ್ಲಿಂದ ಜನನಿ, ರಂಗೋಲಿ, ಅರ್ಧಸತ್ಯ, ಕುಂಕುಮ ಭಾಗ್ಯ, ಮಳೆಬಿಲ್ಲು.. ಹೀಗೆ ಹಲವು ಧಾರಾವಾಹಿಗಳಲ್ಲಿ ನಟಿಸಿದರು. ಜನನಿ ಧಾರಾವಾಹಿ ದಿಲೀಪ್ ಅವರಿಗೆ ಪ್ರಸಿದ್ಧಿ ತಂದುಕೊಟ್ಟಿತು.

ದಿಲೀಪ್ ರಾಜ್ ಶ್ರಮವಹಿಸಿ ಬೆಳ್ಳಿತೆರೆ ಮತ್ತು ಕಿರುತೆರೆಯಲ್ಲಿ ಗುರತಿಸಿಕೊಂಡಿದ್ದರು. ಅವರು ನಟ ಮಾತ್ರವಲ್ಲ ನಿರ್ಮಾಪಕರಾಗಿಯೂ ಛಾಪು ಮೂಡಿಸಿದ್ದರು. ತಮ್ಮ ಪತ್ನಿ ಶ್ರೀವಿದ್ಯಾ ಅವರೊಂದಿಗೆ ಸೇರಿ ಡಿ2ಆರ್ ಮೀಡಿಯಾ ಪ್ರೊಡಕ್ಷನ್ಸ್ ಸಂಸ್ಥೆ ಸ್ಥಾಪಿಸಿ ಧಾರಾವಾಹಿಗಳನ್ನು ನಿರ್ಮಾಣ ಮಾಡಿದ್ದರು. ಆ ಮೂಲಕ ಹೊಸ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಿದ್ದರು. ಹಿಟ್ಲರ್ ಕಲ್ಯಾಣ, ಪಾರು, ವಿದ್ಯಾ ವಿನಾಯಕ ಧಾರಾವಾಹಿಗಳನ್ನು ದಿಲೀಪ್ ರಾಜ್ ನಿರ್ಮಾಣ ಮಾಡಿದ್ದರು.

ಹೆಸರು ತಂದುಕೊಟ್ಟ ಹೇಮಂತ್: 2005ರಲ್ಲಿ ತೆರೆಗೆ ಬಂದ ಬ್ಯಾಗ್ ರೌಂಡ್ ಚಿತ್ರದ ಮೂಲಕ ದಿಲೀಪ್ ಚಂದನವನಕ್ಕೆ ಪಾದಾರ್ಪಣೆ ಮಾಡಿದರು. ಆ ಬಳಿಕ ನನ್ನ ಲವ್ ಮಾಡ್ತೀಯಾ ಸಿನಿಮಾದಲ್ಲಿಯೂ ಅಭಿನಯಿಸಿದರು. ಈ ಸಿನಿಮಾಗಳಲ್ಲಿ ದಿಲೀಪ್ ತಮ್ಮ ಪ್ರತಿಭೆಯ ಮೂಲಕ ಗುರುತಿಸಿಕೊಂಡಿದ್ದರು. ದಿಲೀಪ್ ರಾಜ್ ಪ್ರಸಿದ್ಧಿ ತಂದುಕೊಟ್ಟ ಸಿನಿಮಾ ಎಂದರೆ ಮಿಲನ. ಅಪ್ಪು ನಾಯಕರಾಗಿ ನಟಿಸಿದ್ದ ಮಿಲನ ಚಿತ್ರದಲ್ಲಿ ದಿಲೀಪ್ ಖಳನಾಗಿ ಖದರ್ ತೋರಿದರು. ಅವರ ಪಾತ್ರ ಪ್ರೇಕ್ಷಕರಿಗೆ ಅಚ್ಚುಮೆಚ್ಚಾಯಿತು. ಮಿಲನ ಚಿತ್ರದ ಹೇಮಂತ್ ಪಾತ್ರ ಅವರಿಗೆ ಹೆಸರು ತಂದುಕೊಟ್ಟಿತ್ತು. ಈ ಸಿನಿಮಾದ ಬಳಿಕ ದಿಲೀಪ್ ಅವರಿಗೆ ಜನಪ್ರಿಯತೆಯೂ ಸಿಕ್ಕಿತು. ಆ ಬಳಿಕ ಕಿಲಾಡಿ ಕೃಷ್ಣ, ಲವ್ ಗುರು, ಚಾಲೆಂಜ್, ಬರ್ಫಿ, ಯು ಟರ್ನ್ ಹೀಗೆ ಇಪ್ಪತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದರು.

ಕೈಹಿಡಿಯದ ಅದೃಷ್ಟ

ದಿಲೀಪ್ ರಾಜ್ ಅದ್ಭುತ ನಟ, ಯಾವುದೇ ಪಾತ್ರ ನೀಡಿದರೂ ಜೀವತುಂಬಿ ಅಭಿನಯಿಸುತ್ತಿದ್ದರು. ಅದು ಸಣ್ಣ ಪಾತ್ರವಾದರೂ ಸರಿಯೇ ಪ್ರಮುಖ ಪಾತ್ರವಾದರೂ ಸರಿಯೆ. ಅಂಬರೀಷ್, ಕಿಚ್ಚ ಸುದೀಪ್ ಅಭಿನಯದ ಅಂಬಿ ನಿಂಗೆ ವಯಸ್ಸಾಯ್ತೋ. ಚಿತ್ರದಲ್ಲಿ ಅಂಬರೀಶ್ ಅವರ ಮಗನ ಪಾತ್ರದಲ್ಲಿ ದಿಲೀಪ್ ನಟಿಸಿದ್ದರು. ಎಮೋಷನಲ್ ಆಗಿ ಸಾಗುವ ಪಾತ್ರದಲ್ಲಿ ಬಣ್ಣಹಚ್ಚಿದ ದಿಲೀಪ್, ಅದರಲ್ಲಿ ಅಕ್ಷರಶಃ ಜೀವಿಸಿದರು. ಅವರ ಪಾತ್ರವನ್ನು ನೋಡಿ ಸ್ವತಃ ಅಂಬರೀಶ್ ಅವರೇ ಮೆಚ್ಚುಗೆ ವ್ಯಕ್ತಪಡಿಸಿದ್ದರು. ನೀನು ಇಷ್ಟು ಅದ್ಭುತವಾಗಿ ಅಭಿನಯಿಸುತ್ತೀಯಾ.. ಯಾಕೆ ನಿನ್ನ ಬೇರೆ ಯಾರು ಸಿನಿಮಾಗಳಿಗೆ ಕರೆಯೋದಿಲ್ವ ಅಂತ ಕೇಳಿದ್ದರಂತೆ. ಇದು ದಿಲೀಪ್ ಅವರ ಅಮೋಘ ಅಭಿನಯಕ್ಕೆ ಸಾಕ್ಷಿಯಾಗಿದೆ.

ಯಶಸ್ಸು ತಂದುಕೊಟ್ಟ ಲವ್ ಮಾಕ್ಟೇಲ್ 3

ಇತ್ತೀಚೆಗೆ ಬಿಡುಗಡೆಯಾದ ಲವ್ ಮಾಕ್ಟೇಲ್ 3 ಒಟಿಟಿಯಲ್ಲಿಯೂ ಪ್ರಸಾರ ಆರಂಭಿಸಿದೆ. ಈ ಸಿನಿಮಾದಲ್ಲಿ ದಿಲೀಪ್ ರಾಜ್ ವಕೀಲರಾಗಿ ಕಾಣಿಸಿಕೊಂಡಿದ್ದರು. ಸ್ಟೈಲಿಶ್ ಲುಕ್‌ನಲ್ಲಿ ಮಿಂಚಿದ್ದರು. ದಿಲೀಪ್ ಅವರ ವಾದದ ಶೈಲಿ ಅವರ ಸ್ಪಷ್ಟ ಕನ್ನಡ, ಅವರ ಲೀಲಾಜಾಲ ನಟನೆಗೆ ಪ್ರೇಕ್ಷಕರು ಮಾರು ಹೋಗಿದ್ದರು. ಈ ಚಿತ್ರ ದಿಲೀಪ್ ಅವರಿಗೆ ಯಶಸ್ಸು ತಂದು ಕೊಟ್ಟಿತು. ಈ ಸಿನಿಮಾದ ಬಳಿಕ ಇನ್ನೂ ಹಲವು ಸಿನಿಮಾಗಳಲ್ಲಿ ನಟಿಸಲು ಅವಕಾಶ ಗಳು ಅರಸಿ ಬರುತ್ತಿದ್ದವು. ಅಷ್ಟರಲ್ಲಿ ದಿಲೀಪ್ ಎಲ್ಲರನ್ನೂ ಅಗಲಿ ಬಾರದ ಲೋಕಕ್ಕೆ ಪಯಣಿಸಿದ್ದಾರೆ.

ದಿಲೀಪ್ ಒಳ್ಳೆಯ ನಟ, ನಿರ್ದೇಶಕ, ನಿರ್ಮಾಪಕ ಎಲ್ಲದಕ್ಕೂ ಮಿಗಿಲಾಗಿ ಒಬ್ಬ ಒಳ್ಳೆಯ ಮನುಷ್ಯ. ನಾನು ಅವರನ್ನು ಭೇಟಿಯಾದ ಸಂದರ್ಭಗಳು ಕಡಿಮೆಯಾದರೂ ಮನಸ್ಸಿನಲ್ಲಿ ಕೂತ ವ್ಯಕ್ತಿತ್ವದ ಭಾವ ಮಾಸಿಹೋಗಲಾರದು. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲಿ.

-ರಿಷಬ್ ಶೆಟ್ಟಿ, ನಟ

ದಿಲೀಪ್ ಅದ್ಭುತ ನಟ. ನಾನು ದಿಲೀಪ್ ಒಟ್ಟಿಗೆ ನಾಟಕಗಳಲ್ಲಿ ನಟಿಸಿದ್ದೇವೆ. ನಮ್ಮ ತಂಡದಲ್ಲಿ ಮೊದಲು ಪ್ರಸಿದ್ಧಿ ಪಡೆದಿದ್ದು ದಿಲೀಪ್. ಜತೆಗೆ ದಿಲೀಪ್ ತುಂಬಾ ಶ್ರಮಜೀವಿ. ಅವರು ಅಪಾರ ಕನಸುಗಳನ್ನು ಕಂಡಿದ್ದರು. ಇಷ್ಟು ಚಿಕ್ಕ ವಯಸ್ಸಿಗೆ ಅವರನ್ನು ನಮ್ಮನ್ನು ಅಗಲಿರುವುದು ಆಘಾತ ತಂದಿದೆ.

-ಗಣೇಶ್, ನಟ

ನಾವೆಲ್ಲ ಒಟ್ಟಿಗೆ ನಟನೆಗೆ ಬಂದವರು. ದಿಲೀಪ್ ಶ್ರಮಜೀವಿ ತುಂಬಾ ಚೆನ್ನಾಗಿ ನಟಿಸುತ್ತಿದ್ದ. ಧಾರಾವಾಹಿಗಳ ಬಳಿಕ ಸಿನಿಮಾದಲ್ಲಿಯೂ ಅಭಿನಯಿಸುವ ಅವಕಾಶಗಳು ಅರಸಿ ಬಂದವು. ಅಲ್ಲಿಂದ ಮತ್ತೆ ಕಿರುತೆರೆಗೆ ಮರಳಿದ. ಈಗ ದಿಲೀಪ್ ನಮ್ಮೊಂದಿಗಿಲ್ಲ ಎಂಬುದನ್ನು ನಂಬಲಾಗುತ್ತಿಲ್ಲ.

-ರವಿಶಂಕರ್, ನಟ

ವಿವಿಧ ಇಲಾಖೆಗಳಲ್ಲಿ 86,205 ಕಡತ ವಿಲೇವಾರಿಗೆ ಬಾಕಿ | ಸೌಲಭ್ಯ ಪಡೆಯಲು ತೊಂದರೆ

ಚುರುಕಾಗದ ಆಡಳಿತ ಯಂತ್ರ: ಜನ ಹೈರಾಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತ್ವರಿತಗತಿಯಲ್ಲಿ ಕಡತ ವಿಲೇವಾರಿಯಾದರೆ ಭ್ರಷ್ಟಾಚಾರದ ನಿಯಂತ್ರಣ ಮತ್ತು ಜನಸ್ನೇಹಿ ಆಡಳಿತ ನಡೆಯುತ್ತಿದೆ ಎಂದರ್ಥ. ಆದರೆ, ಸರಕಾರದ ವಿವಿಧ ಇಲಾಖೆಗಳಲ್ಲಿ 86,205 ಕಡತಗಳು ವಿಲೇವಾರಿಗೆ ಬಾಕಿ ಉಳಿದಿದ್ದು, ಇದರಿಂದಾಗಿ ಆಡಳಿತಾತ್ಮಕ ಕಾರ್ಯಚಟುವಟಿಕೆಗಳಿಗೆ ತೀವ್ರ ಹಿನ್ನಡೆಯಾಗುತ್ತಿದೆ. ಸರಕಾರಿ ಸೌಲಭ್ಯ ಪಡೆಯಲು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ.

ಭೌತಿಕ ಸ್ವರೂಪದ ಕಡತ ವಿಲೇವಾರಿಯಲ್ಲಿ ಅಧಿಕಾರಿಗಳು, ಸಿಬ್ಬಂದಿ ಉದ್ದೇಶಪೂರ್ವಕ ವಿಳಂಬ ಮಾಡುವ ಸಾಧ್ಯತೆ ಇರುತ್ತದೆ ಎಂಬ ಕಾರಣಕ್ಕಾಗಿ ತಂತ್ರಜ್ಞಾನ ಆಧಾರಿತ ಇ-ಆಫೀಸ್ ವ್ಯವಸ್ಥೆ ಜಾರಿಗೊಳಿಸಲಾಯಿತು. ಸರಕಾರಿ ಕಚೇರಿಗಳಲ್ಲಿ ಕಡತಗಳ ನಿರ್ವಹಣೆ ಡಿಜಿಟಲೀಕರಣಗೊಳಿಸುವ, ಪಾರದರ್ಶಕ ಮತ್ತು ಪರಿಣಾಮಕಾರಿ ಆಡಳಿತ ಉತ್ತೇಜಿಸುವುದು ಇ-ಆಫೀಸ್ ಉದ್ದೇಶವಾಗಿದೆ. ಇದು ಕಾಗದರಹಿತ ಕೆಲಸವನ್ನು ಉತ್ತೇಜಿಸಿ, ಫೈಲ್ ಪ್ರಕ್ರಿಯೆಯನ್ನು ವೇಗಗೊಳಿಸುತ್ತದೆ. ಇ-ಆಫೀಸ್ ಪೋರ್ಟಲ್ ಮೂಲಕ ಕಡತ ಸ್ಥಿತಿಯನ್ನು ಪರಿಶೀಲಿಸಬಹುದು. ಆದರೆ, ಈ ವ್ಯವಸ್ಥೆಯ ಮೂಲಕ ಸಂಪೂರ್ಣವಾಗಿ ಕಡತ ವಿಲೇವಾರಿ ಮಾಡುವ ಪ್ರಕ್ರಿಯೆ ನಿಧಾನಗತಿಯಲ್ಲಿ ಸಾಗುವಂತಾಗಿದೆ. ಅಲ್ಲದೆ, ವಿಳಂಬಕ್ಕೆ ಅವಕಾಶ ಇಲ್ಲದಂತೆ ನಾಗರಿಕರಿಗೆ ನಿರ್ದಿಷ್ಟ ಕಾಲಮಿತಿಯೊಳಗೆ ಸರಕಾರದ ಸೇವೆಗಳನ್ನು ಒದಗಿಸುವುದಕ್ಕಾಗಿ ಸಕಾಲ ಕಾಯಿದೆ ಜಾರಿಯಲ್ಲಿದೆ.

ಎಲ್ಲ ಇಲಾಖೆಗಳ ಬಹುತೇಕ ಸೇವೆಗಳನ್ನು ಇದರ ವ್ಯಾಪ್ತಿಗೆ ತರಲಾಗಿದೆ. ಆದರೂ, ಅಧಿಕಾರಿಗಳು ಸೋಮಾರಿತನದಿಂದ ಕಡತಗಳನ್ನು ದೀರ್ಘ ಕಾಲ ಬಾಕಿ ಇರಿಸಿ ಜನರನ್ನು ಸಂಕಷ್ಟಕ್ಕೆ ಸಿಲುಕಿಸುತ್ತಿದ್ದಾರೆ. ಸರಕಾರದ ಅಧಿಕಾರದ ಚುಕ್ಕಾಣಿಯನ್ನು ಹಿಡಿದವರು ಬದಲಾದರೂ ಅಧಿಕಾರಿಗಳ ಕಾರ್ಯವೈಖರಿಯಲ್ಲಿ ಬದಲಾವಣೆಯಾಗಿಲ್ಲ ಎಂಬುದು ಕಡತ ವಿಲೇವಾರಿಯಲ್ಲಿನ ವಿಳಂಬ ಧೋರಣೆಯು ಸಾಬೀತುಪಡಿಸುತ್ತಿದೆ.

ಲಂಚಕ್ಕಾಗಿ ನೌಕರರ ತಂತ್ರ?: ಸರಕಾರದ ಬಹುತೇಕ ಇಲಾಖೆಗಳಲ್ಲಿ ಅರ್ಜಿಗಳು, ಕಡತಗಳನ್ನು ದೀರ್ಘ ಕಾಲ ಬಾಕಿ ಇರಿಸಿಕೊಂಡು ಜನರನ್ನು ಸತಾಯಿಸಿ, ಅವರು ಹತಾಶರಾಗುವಂತೆ ಮಾಡುವುದು ಸರಕಾರಿ ನೌಕರರ ತಂತ್ರ ಎನ್ನುವ ಆರೋಪ ಕೇಳಿಬಂದಿದೆ. ಸಾಕಷ್ಟು ಅಧಿಕಾರಿಗಳು ಕಡತಗಳನ್ನು ಟೇಬಲ್ ಮೇಲೆ ರಾಶಿ ಹಾಕಿಟ್ಟುಕೊಂಡು, ಕೆಲಸ ಮಾಡದೆ ವಿಳಂಬ ಮಾಡುತ್ತಿದ್ದಾರೆ. ಈ ಮೂಲಕ, ಲಂಚ ಕೊಡುವುದು ಅನಿವಾರ್ಯ ಎಂಬ ಸ್ಥಿತಿಯನ್ನು ನೌಕರರು ಸೃಷ್ಟಿಸಿದ್ದಾರೆ. ಬೃಹತ್ ಪ್ರಮಾಣದಲ್ಲಿ ಕಡತಗಳು ಬಾಕಿ ಉಳಿದಿರುವುದಕ್ಕೆ ಸಚಿವರು ಮತ್ತು ಅಧಿಕಾರಿಗಳು ಸಮಾನ ಹೊಣೆಗಾರರು. ನಿಯಮಿತವಾಗಿ ಇಲಾಖಾ ಅಧಿಕಾರಿಗಳ ಸಭೆ ನಡೆಸಿ, ಸಚಿವರು ನಿಗಾ ವಹಿಸಿದ್ದರೆ ಈ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಸರಕಾರಿ ನೌಕರರ ವರ್ಗಾವಣೆ, ಕಾಮಗಾರಿಗಳ ಗುತ್ತಿಗೆ ಸೇರಿ ಲಾಭದಾಯಕ ಎನಿಸಿದ ಕಡತಗಳಿಗೆ ಎಲ್ಲ ಇಲಾಖೆಗಳಲ್ಲೂ ಶರವೇಗದಲ್ಲಿ ಮುಕ್ತಿ ಸಿಗುತ್ತಿದೆ. ಅದೇ ಮಾದರಿಯನ್ನು ಉಳಿದ ಕಡತಗಳಿಗೂ ಏಕೆ ಅನ್ವಯಿಸುವುದಿಲ್ಲ ಎಂಬ ಪ್ರಶ್ನೆಗೆ ಉತ್ತರ ನೀಡಬೇಕಾದ ಹೊಣೆಗಾರಿಕೆ ಅಧಿಕಾರದ ಚುಕ್ಕಾಣಿ ಹಿಡಿದವರ ಮೇಲಿದೆ.

ಇತರ ಮುಖ್ಯಾಂಶಗಳು

- ಕಡತ ವಿಳಂಬದಿಂದ ಮೂಲಸೌಕರ್ಯ ಕಾಮಗಾರಿಗೆ ಅಡ್ಡಿ
- ಆಡಳಿತ ಸುಧಾರಣೆಗೆ ತಡೆ
- ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬಾಕಿ ಕಡತಗಳು
- ಕೆಲ ಇಲಾಖೆಗಳಲ್ಲಿ ಹಲವು ತಿಂಗಳಿಂದ ಬಾಕಿ ಉಳಿದ ಕಡತಗಳು
- ಕಂದಾಯ ಇಲಾಖೆಯಲ್ಲಿ ಪಹಣಿ ತಿದ್ದುಪಡಿ, ಸರ್ವೆಗೆ ಸಂಬಂಧಿಸಿದ ಅರ್ಜಿಗಳ ಸಂಖ್ಯೆ ಹೆಚ್ಚು
- ಕಡತ ವಿಲೇವಾರಿ ಮಾಡದೆ ತಹಸೀಲ್ದಾರ್‌ಗಳ ಕಳ್ಳಾಟ
- ಆರ್ಥಿಕ ಇಲಾಖೆಯಲ್ಲಿ ರಾಶಿ ಬಿದ್ದಿರುವ ಹಣಕಾಸು ಮಂಜೂರಾತಿ ಕಡತಗಳು

ಈ ಇಲಾಖೆಗಳಲ್ಲಿ ಕಡತ ಬಾಕಿ

ಇಲಾಖೆ	ಬಾಕಿ ಕಡತಗಳ ಸಂಖ್ಯೆ
ಕಂದಾಯ	7900
ಆರ್ಥಿಕ	5512
ಆರೋಗ್ಯ	4492
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ	4252
ಲೋಕೋಪಯೋಗಿ	3948
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್	3148
ಅರಣ್ಯ	2447
ಕಾನೂನು	2273
ಹಿಂದುಳಿದ ವರ್ಗಗಳು	1674
ವಸತಿ	1476
ಎಲ್ಲ ಇಲಾಖೆಗಳು ಸೇರಿ ಒಟ್ಟು	86,205

ನಿಗಾ ವ್ಯವಸ್ಥೆ ಇರಲಿ

ಕಂದಾಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ, ಆರ್ಥಿಕ, ಲೋಕೋಪಯೋಗಿ , ಅರಣ್ಯ, ಹಿಂದುಳಿದ ವರ್ಗಗಳು, ಆರೋಗ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಸತಿ ಮತ್ತು ಕಾನೂನು ಇಲಾಖೆಗಳಲ್ಲಿ ಬೃಹತ್ ಪ್ರಮಾಣದ ಕಡತಗಳ ವಿಲೇವಾರಿಯಾಗದೆ ಧೂಳು ಹಿಡಿಯುತ್ತಿವೆ. ಗ್ರಾಮಗಳಿಂದ ವಿಧಾನಸೌಧದವರೆಗೆ ಎಲ್ಲ ಹಂತಗಳಲ್ಲೂ ಕಡತ ವಿಲೇವಾರಿ ಮೇಲೆ ನಿಗಾ ಇಡುವಂತಹ ಬಿಗಿಯಾದ ವ್ಯವಸ್ಥೆ ರೂಪಿಸಬೇಕು. ದುರುದ್ದೇಶದಿಂದ ವಿಳಂಬ ಮಾಡುವವರನ್ನು ಗುರುತಿಸಿ, ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಸಂಬಂಧಿಸಿದ ಇಲಾಖೆಗಳ ಸಚಿವರನ್ನೂ ಉತ್ತರದಾಯಿಗಳನ್ನಾಗಿ ಮಾಡಬೇಕು. ಕಡತಗಳನ್ನು ಬಾಕಿ ಇರಿಸಿಕೊಂಡು ಜನಹಿತಕ್ಕೆ ವಿರುದ್ಧವಾಗಿ ನಡೆದುಕೊಳ್ಳುವವರ ವಿರುದ್ಧ ಚಾಟಿ ಬೀಸುವ ಕೆಲಸವನ್ನು ಮುಖ್ಯಮಂತ್ರಿಯವರೇ ಖುದ್ದಾಗಿ ಕೈಗೆತ್ತಿಕೊಂಡರಷ್ಟೇ ಬದಲಾವಣೆ ಸಾಧ್ಯ.

ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಕುಸಿತ ಆರೋಪ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಪೊಲೀಸ್ ಇಲಾಖೆ ಶಿಸ್ತು ನೈತಿಕತೆ

ಮತ್ತು ಜನರ ವಿಶ್ವಾಸ ಕಳೆದುಕೊಂಡು ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ ಗಂಭೀರ ಆರೋಪ ಮಾಡಿದ್ದಾರೆ.

ಕಾಂಗ್ರೆಸ್ ಸರಕಾರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಸಿದ್ದರಾಮಯ್ಯನವರೇ ಗ್ಯಾರಂಟಿ ಸರಕಾರದಲ್ಲಿ ರಾಜ್ಯದ ಜನರಿಗೆ ಜೀವ ಆಸ್ತಿ ಮತ್ತು ಮಾನದ ರಕ್ಷಣೆಗಾಗಿ ಗ್ಯಾರಂಟಿ ನೀಡುವವರು ಯಾರು ಎಂದು ಪ್ರಶ್ನೆ ಮಾಡಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದ್ದು ರಕ್ಷಕರೇ ಭಕ್ಷಕರಾಗಿದ್ದಾರೆ. ಪೊಲೀಸ್ ಇಲಾಖೆ ಕುರಿತಂತೆ ಮಾಧ್ಯಮಗಳಲ್ಲಿ ವರದಿಯಾಗಿರುವ ಅಂಕಿಅಂಶಗಳು ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ಬೆಚ್ಚಿ ಬೀಳಿಸುವ ಸತ್ಯ ಬಯಲಿಗೆ ಎಳೆದಿವೆ ಎಂದು ಆತಂಕ ಹೊರಹಾಕಿದ್ದಾರೆ.

ಕೇವಲ ಎರಡು ವರ್ಷಗಳಲ್ಲಿ 713 ಪೊಲೀಸ್ ಅಧಿಕಾರಿಗಳ ಅಮಾನತು ಪಡಿಸಲಾಗಿದೆ. ಇಷ್ಟು ದೊಡ್ಡ ಸಂಖ್ಯೆಯ ಅಮಾನತುಗಳು ಎಂದರೆ ಇದು ಯಾರೋ ಕೆಲವರ ವೈಯಕ್ತಿಕ ತಪ್ಪಲ್ಲ, ಸಂಪೂರ್ಣ ವ್ಯವಸ್ಥೆಯೇ ಕುಸಿದುಬಿದ್ದಿದೆ ಎಂಬುದಕ್ಕೆ ಸಾಕ್ಷಿ. ಗಂಭೀರ ಅಪರಾಧಗಳಲ್ಲಿ 95 ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣಗಳಿವೆ. ಸಾಮಾನ್ಯ ನಾಗರಿಕರು ಯಾರನ್ನು ನಂಬಬೇಕು? ಸುರಕ್ಷತೆಯ ಸಂಕೇತವಾಗಿರಬೇಕಾದ ಖಾಕಿ, ಇಂದು ಭಯ ಮತ್ತು ಅನುಮಾನಗಳ ಪ್ರತೀಕವಾಗುತ್ತಿರುವುದೇಕೆ ಎಂದು ಪ್ರಶ್ನಿಸಿದ್ದಾರೆ.

ದರೋಡೆ, ಕಳ್ಳತನ, ಕೊಲೆ ಆರೋಪಗಳಲ್ಲೂ ಪೊಲೀಸರ ಹೆಸರುಗಳು ಕೇಳಿಬಂದಿವೆ. ಇದು ಕೇಳುವುದಕ್ಕೂ ನಾಚಿಕೆಯಾಗುತ್ತದೆ. ಕಾನೂನು ಜಾರಿ ಮಾಡಬೇಕಾದವರೇ ಕಾನೂನನ್ನು ಗಾಳಿಗೆ ತೂರಿ ಉಲ್ಲಂಘಿಸಲು ಆರಂಭಿಸಿದರೆ ರಾಜ್ಯದಲ್ಲಿ ನ್ಯಾಯ ಹೇಗೆ ಉಳಿಯುತ್ತದೆ? ಅಮಾನತುಗೊಂಡವರಲ್ಲಿ ಬಹುಪಾಲು ಅಧಿಕಾರಿಗಳು ಬೆಂಗಳೂರಿನವರೇ ಎಂಬ ಸಂಗತಿ ಆತಂಕಕಾರಿ. ದೇಶದ ತಂತ್ರಜ್ಞಾನ ರಾಜಧಾನಿ ಎಂದು ಹೆಮ್ಮೆಪಡುವ ನಗರದಲ್ಲಿ ಕಾನೂನು ಸುವ್ಯವಸ್ಥೆ ಈ ಮಟ್ಟಿಗೆ ಹದಗೆಟ್ಟರೆ ಬೆಂಗಳೂರಿನ ಬ್ರ್ಯಾಂಡ್ ವ್ಯಾಲ್ಯೂ, ವರ್ಚಸ್ಸಿಗೆ ಧಕ್ಕೆಯಾಗುವುದಿಲ್ಲವೇ? ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

400 ಅಧಿಕಾರಿಗಳು ತಪ್ಪಿತಸ್ಥರು

400ಕ್ಕೂ ಹೆಚ್ಚು ಅಧಿಕಾರಿಗಳು ತಪ್ಪಿತಸ್ಥರೆಂದು ಸಾಬೀತಾಗಿದೆ. ಇದು ಕೇವಲ ಆರೋಪಗಳ ಹಂತದಲ್ಲಿಲ್ಲ. ವಿಭಾಗೀಯ ತನಿಖೆಗಳಲ್ಲೆ ತಪ್ಪಿತಸ್ಥರೆಂದು ಸಾಬೀತಾದರೂ, ಈ ಸರಕಾರ ಯಾವ ಕಠಿಣ ಕ್ರಮ ತೆಗೆದುಕೊಂಡಿದೆ? ಜನರಲ್ಲಿ ಮೂಡಿರುವ ಭಯ ಏನೆಂದರೆ, ರೌಡಿ ಶೀಟರ್‌ಗಳ ಜೊತೆ ಕೈಜೋಡಿಸುವವರು, ನಕಲಿ ದಾಖಲೆಗಳ ಜಾಲ ನಡೆಸುವವರು, ಅಮಾಯಕರ ಮೇಲೆ ದೌರ್ಜನ್ಯ ಎಸಗುವವರು ಕಾನೂನಿನ ಭಯವಿಲ್ಲದೆ ಸಂಚರಿಸುತ್ತಿದ್ದಾರೆ ಎಂಬುದು.ಇದು ಕೇವಲ ಪೊಲೀಸ್ ಇಲಾಖೆಯ ವೈಫಲ್ಯವಲ್ಲ, ಇದು ಗೃಹ ಇಲಾಖೆಯ ಸಂಪೂರ್ಣ ದಿವಾಳಿತನ ಎಂದು ವಾಗ್ದಾಳಿ ನಡೆಸಿದ್ದಾರೆ.

ಯುಎಇಗೆ ಮೊದಲ ಸ್ಥಾನ, ಅಮೆರಿಕ 13ನೇ ಸ್ಥಾನಕ್ಕೆ ಕುಸಿತ

ವಿಶ್ವದ ಆರ್ಥಿಕ ಸ್ಥಿರ ದೇಶಗಳು

ನವದೆಹಲಿ: ಪ್ರವಾಸಕ್ಕೆ ದೇಶ ಆಯ್ಕೆ ಮಾಡುವಾಗ ಜನರು ಸಾಮಾನ್ಯವಾಗಿ ಪ್ರಕೃತಿ ಸೌಂದರ್ಯ, ಆಹಾರ, ಸಂಸ್ಕೃತಿ ಅಥವಾ ಸುರಕ್ಷತೆಯನ್ನು ಗಮನಿಸುತ್ತಾರೆ.

ಆದರೆ, ಒಂದು ದೇಶದ ಆರ್ಥಿಕ ಸ್ಥಿರತೆ ಕೂಡ ಪ್ರವಾಸಿಗರ ಅನುಭವವನ್ನು ದೊಡ್ಡ ಮಟ್ಟದಲ್ಲಿ ಪ್ರಭಾವಿಸುತ್ತದೆ. ಉತ್ತಮ ರಸ್ತೆ ವ್ಯವಸ್ಥೆ, ವಿಶ್ವಾಸಾರ್ಹ ಡಿಜಿಟಲ್ ಪಾವತಿ ವ್ಯವಸ್ಥೆ, ಸುಧಾರಿತ ಸಾರ್ವಜನಿಕ ಸಾರಿಗೆ ಮತ್ತು ದೈನಂದಿನ ಸೇವೆಗಳ ಸುಗಮತೆಯ ಆಧಾರದ ಮೇಲೆ ನಿರ್ಧಾರವಾಗುತ್ತವೆ. ಯುದ್ಧ, ಮಹಾಮಾರಿ, ಜಾಗತಿಕ ಹಣಕಾಸು ಸಂಕಷ್ಟಗಳಂತಹ ಸವಾಲುಗಳನ್ನು ಎದುರಿಸಿದರೂ ಸ್ಥಿರ ಬೆಳವಣಿಗೆ, ಉದ್ಯೋಗಾವಕಾಶ ಮತ್ತು ಕಡಿಮೆ ದರ ಏರಿಕೆಯನ್ನು ಕಾಯ್ದುಕೊಳ್ಳುವ ಸಾಮರ್ಥ್ಯವಿರುವ ರಾಷ್ಟ್ರಗಳನ್ನೇ ಆರ್ಥಿಕವಾಗಿ ಸ್ಥಿರ ದೇಶಗಳು ಎಂದು ಪರಿಗಣಿಸಲಾಗುತ್ತದೆ. ಅಮೆರಿಕದ ಯುಎಸ್ ನ್ಯೂಸ್ ಅಂಡ್ ವರ್ಲ್ಡ್‌ನ ವರದಿಯ ಪ್ರಕಾರ, 2026 ರ ವಿಶ್ವದ ಆರ್ಥಿಕವಾಗಿ ಅತ್ಯಂತ ಸ್ಥಿರ ರಾಷ್ಟ್ರಗಳ ಪಟ್ಟಿಯಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ (UAE) ಮೊದಲ ಸ್ಥಾನ ಪಡೆದಿದೆ.

ಯುಎಇಗೆ ಅಗ್ರ ಸ್ಥಾನ: ಸುಮಾರು 504 ಬಿಲಿಯನ್ ಡಾಲರ್ ಜಿಡಿಪಿ ಹೊಂದಿರುವ ಯು ಎಇ, ಅತ್ಯಾಧುನಿಕ ನಗರಗಳು, ಬಲಿಷ್ಠ ಮೂಲಸೌಕರ್ಯ ಮತ್ತು ವೇಗವಾದ ಡಿಜಿಟಲ್ ಸೇವೆಗಳ ಮೂಲಕ ಜಾಗತಿಕ ಗಮನ ಸೆಳೆದಿದೆ. ಪ್ರವಾಸೋದ್ಯಮ ಮತ್ತು ವ್ಯಾಪಾರ ಎರಡಕ್ಕೂ ಅನುಕೂಲಕರ ಪರಿಸರ ನಿರ್ಮಿಸಿರುವುದು ಅದರ ಬಲವಾಗಿದೆ.

ಅಮೆರಿಕ ಟಾಪ್ 10ರಲ್ಲೂ ಇಲ್ಲ!

ಆಶ್ಚರ್ಯಕರ ಸಂಗತಿಯೆಂದರೆ, ವಿಶ್ವದ ಅತಿ ದೊಡ್ಡ ಆರ್ಥಿಕತೆಯಾದ ಅಮೆರಿಕ ಈ ಪಟ್ಟಿಯಲ್ಲಿ 13ನೇ ಸ್ಥಾನಕ್ಕೆ ತೃಪ್ತಿಪಡಬೇಕಿದೆ. ಹೆಚ್ಚುತ್ತಿರುವ ಸಾಲಭಾರ, ದರ ಏರಿಕೆ ಮತ್ತು ಜಾಗತಿಕ ಆರ್ಥಿಕ ಒತ್ತಡಗಳು ಅಮೆರಿಕದ ಸ್ಥಾನ ಕುಸಿತಕ್ಕೆ ಕಾರಣವೆಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಸ್ಥಿರತೆಯಲ್ಲಿ ಸಣ್ಣ ರಾಷ್ಟ್ರಗಳದ್ದೇ ಪಾರುಪತ್ಯ

5ನೇ ಅತಿದೊಡ್ಡ ಆರ್ಥಿಕ ಶಕ್ತಿಯಾದರೂ ಭಾರತದ ಆರ್ಥಿಕತೆ ಸ್ಥಿರವಲ್ಲ !

2026ರ ವಿಶ್ವದ ಆರ್ಥಿಕವಾಗಿ ಅತ್ಯಂತ ಸ್ಥಿರ ರಾಷ್ಟ್ರಗಳ ಪಟ್ಟಿ (US News & World Report)

ಸ್ಥಾನ	ದೇಶ	ಜಿಡಿಪಿ (ಅಂದಾಜು)	ಪ್ರಮುಖ ಲಕ್ಷಣಗಳು
1	ಯುಎಇ	$504 ಬಿಲಿಯನ್	ಅತ್ಯಾಧುನಿಕ ನಗರ, ಬಲಿಷ್ಠ ಮೂಲ ಸೌಕರ್ಯ,ಡಿಜಿಟಲ್ ಸೇವೆ
2	ಸ್ವಿಟ್ಜರ್‌ಲೆಂಡ್	$885 ಬಿಲಿಯನ್	ಕಡಿಮೆ ನಿರುದ್ಯೋಗ ಪ್ರಮಾಣ, ಕುಶಲಿ ಮಾನವ ಸಂಪನ್ಮೂಲ
3	ಜರ್ಮನಿ	$4.46 ಟ್ರಿಲಿಯನ್	ಕೈಗಾರಿಕಾ ಶಕ್ತಿ ಮತ್ತು ಹಣಕಾಸು ಸ್ಥಿರತೆ
4	ಕೆನಡಾ	$2.14 ಟ್ರಿಲಿಯನ್	ಬಲಿಷ್ಠ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಸಮತೋಲಿತ ಆರ್ಥಿಕತೆ
5	ಜಪಾನ್	$4.23 ಟ್ರಿಲಿಯನ್	ಅತ್ಯಾಧುನಿಕ ತಂತ್ರಜ್ಞಾನ, ವೇಗದ ಸಾರಿಗೆ ವ್ಯವಸ್ಥೆ,ಕೆಲಸದಲ್ಲಿ ಕ್ಷಮತೆ
6	ಆಸ್ಟ್ರೇಲಿಯಾ	$1.72 ಟ್ರಿಲಿಯನ್	ಸಂಪತ್ತಿನ ಸಮರ್ಥ ನಿರ್ವ ಹಣೆ, ಉನ್ನತ ಶಿಕ್ಷಣ ಸ್ಥಿರ ಆಡಳಿತ
7	ಸ್ವೀಡನ್	$621 ಬಿಲಿಯನ್	ನವೀನತೆ, ಸಾಮಾಜಿಕ ಕಲ್ಯಾಣ, ಹಸಿರು ಆರ್ಥಿಕತೆ
8	ಡೆನ್ಮಾರ್ಕ್	$399 ಬಿಲಿಯನ್	ಉನ್ನತ ಜೀವನ ಮಟ್ಟ, ಪಾರದರ್ಶಕ ಆಡಳಿತ
9	ನೆದರ್‌ಲ್ಯಾಂಡ್ಸ್	$1.01 ಟ್ರಿಲಿಯನ್	ಜಾಗತಿಕ ವ್ಯಾಪಾರ ಕೇಂದ್ರ, ಸುಧಾರಿತ ಮೂಲಸೌಕರ್ಯ
10	ಸೌದಿ ಅರೇಬಿಯಾ	$1.11 ಟ್ರಿಲಿಯನ್	ತೈಲ ಆರ್ಥಿಕ ಶಕ್ತಿ, ವೈವಿಧ್ಯಮಯ ಆರ್ಥಿಕತೆ
13	ಅಮೆರಿಕ	$27.36 ಟ್ರಿಲಿಯನ್	ಹೆಚ್ಚುತ್ತಿರುವ ಸಾಲಭಾರ,ಬೆಲೆ ಏರಿಕೆ, ನಿರುದ್ಯೋಗ, ಆರ್ಥಿಕ ಒತ್ತಡ
47	ಭಾರತ	$4.15 ಟ್ರಿಲಿಯನ್	ಜನಸಂಖ್ಯೆ ಒತ್ತಡ, ನಿರುದ್ಯೋಗ ಮೂಲಸೌಕರ್ಯ ಸವಾಲು

ಭಾರತಕ್ಕೆ 47ನೇ ಸ್ಥಾನ

ಭಾರತ ಈ ಪಟ್ಟಿಯಲ್ಲಿ 47ನೇ ಸ್ಥಾನ ಪಡೆದಿದೆ. ಸುಮಾರು 4.15 ಟ್ರಿಲಿಯನ್ ಡಾಲರ್ ಜಿಡಿಪಿ ಮತ್ತು 1.47 ಬಿಲಿಯನ್ ಜನಸಂಖ್ಯೆ ಹೊಂದಿರುವ ಭಾರತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾ ದರೂ, ಜನಸಂಖ್ಯೆಯ ಒತ್ತಡ, ನಿರುದ್ಯೋಗ ಮತ್ತು ಮೂಲ ಸೌಕರ್ಯ ಸವಾಲುಗಳು ಮೇಲ್ದರ್ಜೆ ಪಡೆಯಲು ಅಡೆತಡೆಗಳಾಗಿವೆ.

ಹಿಂಬಾಕಿ ಗೌರವಧನ ಬಿಡುಗಡೆಗೆ ಸರಕಾರಕ್ಕೆ ಆಗ್ರಹ

ಆಶಾ ಕಾರ್ಯಕರ್ತೆಯರಿಂದ ಪ್ರತಿಭಟನೆ

ಬೆಂಗಳೂರು: ಆಶಾ ಕಾರ್ಯಕರ್ತೆಯರ ಹಿಂಬಾಕಿ ಗೌರವಧನ, ಮಾಸಿಕ ನಿಗದಿತ 10,000 ರು. ಹಾಗೂ ಇನ್ನಿತರ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಬುಧವಾರ ನಗರದ ಫ್ರೀಡಂ ಪಾರ್ಕ್‌ನಲ್ಲಿ ಆಶಾ ಕಾರ್ಯಕರ್ತೆರು ಪ್ರತಿಭಟನೆ ನಡೆಸಿದರು.

ಈ ಕುರಿತು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯಉಪಾಧ್ಯಕ್ಷ ರಾಮಾ ಟಿ.ಸಿ ಮಾತನಾಡಿ, ರಾಜ್ಯದ ಆಶಾ ಕಾರ್ಯಕರ್ತೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವರು. ಮುಖ್ಯವಾಗಿ ಕಳೆದ ಒಂದು ವರ್ಷದಿಂದ ಕಾರ್ಯಕರ್ತೆಯರಿಗೆ ಮಾಸಿಕ ಗೌರವಧನ ಪ್ರೋತ್ಸಾಹಧನ ಪ್ರತೀ ತಿಂಗಳು ನಿಗದಿತ ಸಮಯಕ್ಕೆ ಬರುತ್ತಿಲ್ಲ. ಈಗಲೂ 3-4 ತಿಂಗಳವರೆಗೆ ಕೇಂದ್ರದ ಪ್ರೋತ್ಸಾಹಧನ ಬಾಕಿ ಇದೆ. 1-2 ತಿಂಗಳ ರಾಜ್ಯ ಸರಕಾರದ ಗೌರವಧನ ಬಾಕಿ ಇದೆ. ಆಶಾ ಕಾರ್ಯಕರ್ತೆಯರು ಕೆಲಸ ಮಾಡಿದಷ್ಟು ಕೇಂದ್ರದ ಪ್ರೋತ್ಸಾಹಧನ ಬರುತ್ತಿಲ್ಲ. ಹಲವಾರು ವರ್ಷ ಗಳಿಂದ ಬಾಕಿ ಇರುವ ವಿವಿಧ ಕಂಪೋನೆಂಟ್‌ಗಳ ಹಣ ಬಿಡುಗಡೆ ಆಗಿಲ್ಲ. ಹಲವಾರು ಆಶಾ ಕಾರ್ಯಕರ್ತೆಯರ ಗೌರವಧನ, ಪ್ರೋತ್ಸಾಹಧನ ಹಲವಾರು ತಿಂಗಳು ಕಡಿತಮಾಡ ಲಾಗಿದೆ. ಜಿಲ್ಲಾ, ತಾಲೂಕು ಹಂತದಲ್ಲಿ ಸಮಸ್ಯೆಗಳ ಬಗ್ಗೆ ಬಗೆಹರಿಸಲು ಕೇಳಿದರೆ, ರಾಜ್ಯದ ಸಮಸ್ಯೆಯೆಂದು ಹೇಳಿ ಸಮಸ್ಯೆಗಳನ್ನು ಪರಿಹರಿಸುತ್ತಿ ಎಂದರು. 9 ವಿವಿಧ ಸೇವೆಗಳನ್ನು ಆಶಾ ನಿಧಿ ತಂತ್ರಾಂಶದಲ್ಲಿ ನಿಷ್ಕ್ರಿಯೆಗೊಳಿಸಲಾಗಿದೆ. ಇದರಿಂದ ಪ್ರತೀ ಕಾರ್ಯಕರ್ತೆಗೆ ತಿಂಗಳಿಗೆ 500-1000 ರು. ವರೆಗೆ ಪ್ರೋತ್ಸಾಹಧನ ಕಡಿತವಾಗಲಿದೆ. ಈ ಕೆಲಸಗಳನ್ನು ಕಾರ್ಯಕರ್ತೆಯರು ಹಲವಾರು ವರ್ಷಗಳಿಂದ ಮಾಡುತ್ತಿದ್ದು, ಇವು ತಾಯಿ-ಮಗು ಸುರಕ್ಷತೆಗೆ, ಬಡಜನತೆಯ ಆರೋಗ್ಯಕ್ಕೆ ಅತ್ಯಂತ ಅಗತ್ಯ. ನಮ್ಮ ಹಕ್ಕೊತ್ತಾಯಗಳನ್ನು ಈಡೇರಿಸದಿದ್ದಲ್ಲಿ ಮುಂದೆ ಬೃಹತ್ ಮಟ್ಟದ ಪ್ರತಿಭಟನೆ ಕೈಗೆತ್ತುಕೊಳ್ಳಲಾಗುವುದು ಎಂದರು. ಪ್ರತಿಭಟನೆಯಲ್ಲಿ ಆಶಾ ಮುಖಂಡರುಗಳಾದ ಮುನಿರತ್ನ, ಭವ್ಯ, ಲಕ್ಷ್ಮಿದೇವಿ ಉಪಸ್ಥಿತರಿದ್ದರು.

ಹಕ್ಕೊತ್ತಾಯಗಳೇನು?

- ಬಾಕಿ ಇರುವ ಕೇಂದ್ರದ ಪ್ರೋತ್ಸಾಹಧನ, ರಾಜ್ಯದ ಗೌರವಧನ ಕೂಡಲೇ ಬಿಡುಗಡೆ
- ಆಶಾ ನಿಧಿ ತಂತ್ರಾಂಶದ 9 ಸೇವೆ ನಿಷ್ಕ್ರಿಯದಿಂದ 500 ರಿಂದ 1000 ರು.ನಷ್ಟ, ಈ ಸೇವೆ ಮುಂದುವರಿಸುವುದು.
- ಟಿಬಿ, ಟಿಬಿಐ, ಎನ್‌ಸಿಡಿ ಸೇರಿದಂತೆ ಹಲವು ಕಂಪೋನೆಂಟ್‌ಗಳ ಹಣ ಬಿಡುಗಡೆ.
- ಸಮಸ್ತ ಆ್ಯಪ್ ಮೂಲಕ ದಾಖಲಾತಿ ಮಾಡಿಸುವ ವ್ಯವಸ್ಥೆ ಕೈಬಿಡಬೇಕು.
- ಮೌಲ್ಯಮಾಪನ ಹೆಸರಿನಲ್ಲಿ ಆಶಾ ಕಾರ್ಯಕರ್ತೆಯರ ಮೇಲಿನ ಶೋಷಣೆಗೆ ತಡೆ.
- ನಿವೃತ್ತ ಆಶಾ ಕಾರ್ಯಕರ್ತೆಯರಿಗೆ ಇಡಿಗಂಟು ಸೌಲಭ್ಯ.
- ಆಶಾ ಸುಗಮಕಾರರನ್ನು ಸೂಕ್ತ ವೇತನದೊಂದಿಗೆ ಮುಂದುವರಿಸುವುದು.
- ಮುಖ್ಯಮಂತ್ರಿಗಳ ಘೋಷಣೆಯಂತೆ ಕನಿಷ್ಠ 10,000 ರು. ಮಾಸಿಕ ಗೌರವಧನ ಜಾರಿ.
- ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರಂತೆ ಆಶಾ ಕಾರ್ಯಕರ್ತೆಯರಿಗೂ 1,000 ರು. ಗೌರವಧನ

ವರ್ಷವಿಡೀ ಆಶಾಕಾರ್ಯಕರ್ತೆಯರು ಸಮಾಜದ ಒಳಿತಿಗಾಗಿ ರಕ್ತ ಮತ್ತು ಬೆವರಿನ ಮೂಲಕ ಶ್ರಮಿಸಿದ್ದೇವೆ. ಪ್ರತೀ ಸಾರಿ ನಾವು ನಮ್ಮ ಹಕ್ಕನ್ನು ಪಡೆಯಲು ಹೆಣಗಾಡಬೇಕಾಗಿದೆ. ಗೌರವಧನವು ನಾವು ಕಷ್ಟ ಪಟ್ಟು ಹೋರಾಟ ಮಾಡಿಗಳಿಸಿರುವ ಹಕ್ಕು, ಇದನ್ನು ಕೊಡದ ಸರಕಾರ ಮತ್ತೇನು ಕೊಟ್ಟಿತು. ಇದು ಅತ್ಯಂತ ಖಂಡನೀಯ.

-ಮಹಾಲಕ್ಷ್ಮಿ, ಆಶಾ ಕಾರ್ಯಕರ್ತೆಯರ ನಾಯಕಿ

ಭಾವುಕತೆ

ನಿನ್ನ ಊರು ಹೇಗಿದೆ?

ಇಬ್ಬರು ವ್ಯಕ್ತಿಗಳು ಒಬ್ಬ ಝೆನ್ ಗುರುವನ್ನು ಭೇಟಿಯಾದರು. ಮೊದಲ ವ್ಯಕ್ತಿ ಹೇಳಿದ- 'ನಾನು ಈ ಊರಿಗೆ ಬಂದು ನೆಲೆಸುವ ಬಗ್ಗೆ ಯೋಚಿಸುತ್ತಿದ್ದೇನೆ. ಇಲ್ಲಿ ಹೇಗಿದೆ?' ಝೆನ್ ಗುರು ಕೇಳಿದ- 'ನಿನ್ನ ಹಳೆಯ ಊರು ಹೇಗಿತ್ತು?' 'ಏನು ಕೇಳ್ತೀರಿ, ಭಯಾನಕವಾಗಿತ್ತು. ಎಲ್ಲರೂ ಪರಸ್ಪರ ದ್ವೇಷಿಸುತ್ತಿದ್ದರು. ನಾನೂ ಆ ಊರನ್ನು ದ್ವೇಷಿಸ್ತೀನಿ'. ಗುರು ಹೇಳಿದ- 'ಈ ಊರೂ ಹಾಗೇ ಇದೆ. ನೀನು ಇಲ್ಲಿಗೆ ಬರದಿರುವುದೆ ಒಳ್ಳೆಯದು.' ಆತ ಹೊರಟುಹೋದ. ಎರಡನೇ ವ್ಯಕ್ತಿ ಒಳಬಂದ. ಅವನೂ ಮೊದಲಿನವನಂತೇ ಈ ಊರಿಗೆ ಬಂದು ನೆಲೆಸುವ ಯೋಚನೆ ತಿಳಿಸಿದ. ಝೆನ್ ಗುರು, ಆತನಿಗೂ ಮೊದಲನೆಯವನಿಗೆ ಕೇಳಿದ ಪ್ರಶ್ನೆಯನ್ನೇ ಕೇಳಿದ. ಅದಕ್ಕೆ ಆತನ ಉತ್ತರ ಹೀಗಿತ್ತು- 'ಆ ಊರು ಚೆನ್ನಾಗಿತ್ತು. ಎಲ್ಲರೂ ಸ್ನೇಹಪರರಾಗಿದ್ದರು. ನಾನು ಸಂತೋಷವಾಗಿದ್ದೆ. ಬದಲಾಯಿಸಬೇಕು ಅನಿಸಿದೆ.' ಝೆನ್ ಗುರು ಹೇಳಿದ- 'ಈ ಊರೂ ಹಾಗೇ ಇದೆ. ನೀನು ಇದನ್ನು ಇಷ್ಟಪಡುವೆ. ಬಂದುಬಿಡು.'

ಸುತ್ತಮುತ್ತ

ಅತೀ ದುಬಾರಿ ಮಾವು

ಸಿಂಗಾಪುರದಲ್ಲಿ ಓಡಾಡುವಾಗ ಎಚ್ಚರ. ಪಬ್ಲಿಕ್ ಪ್ಲೇಸಿನಲ್ಲಿ ಇರುವ ಮಾವಿನ ಮರಗಳಲ್ಲಿ ಈಗ ಹಣ್ಣುಗಳು ಬಿಟ್ಟಿವೆ. ಕೆಳಗೂ ಬಿದ್ದಿರುತ್ತವೆ. ಸಾರ್ವಜನಿಕ ಜಾಗ ಅಂತ ಆ ಬಿದ್ದ ಹಣ್ಣನ್ನು ಹೆಕ್ಕಿಕೊಂಡಿರೋ, ಮುಗೀತು ಕತೆ. 5000 ಸಿಂಗಾಪುರ ಡಾಲರ ಅಥವಾ 3.74 ಲಕ್ಷ ರೂಪಾಯಿ ದಂಡ ಕಕ್ಕಬೇಕಾದೀತು. ಈ ಕುರಿತು ಸಿಂಗಾಪುರದಲ್ಲಿ ಕಠಿಣ ನಿಯಮಗಳನ್ನು ಸ್ಥಳೀಯಾಡಳಿತ ವಿಧಿಸಿದೆ. ಈ ಕುರಿತು ಭಾರತೀಯ ಮಹಿಳೆಯೊಬ್ಬರು ಮಾಡಿರುವ ಒಂದು ವಿಡಿಯೋ ವೈರಲ್ ಆಗಿದೆ. 'ಇದು ಮಿಯಾಜಾಕಿ ಮಾವಿಗಿಂತಲೂ ದುಬಾರಿ' ಅಂತ ಒಬ್ಬರು ಕಮೆಂಟ್ ಮಾಡಿದ್ದಾರೆ. ಇಷ್ಟೊಂದು ಕಠಿಣ ನಿಯಮ ಬೇಕೆ ಎಂಬುದು ಇನ್ನೊಬ್ಬರ ಕಮೆಂಟು.

ಹನಿ ಹನಿ ಕವಿತೆ

• ಮೀನಾ

ಗುಟ್ಟುಗಳು

ರಾಜರ ಅಂತಃಪುರಗಳಲ್ಲಿ
ಹುದುಗಿದ ನಿಟ್ಟುಸಿರುಗಳೇ
ಎಲ್ಲ ಸಾಮ್ರಾಜ್ಯಗಳನ್ನು
ಕೆಡವಬಲ್ಲ ಗುಟ್ಟುಗಳು

ಗೀತೆ ಮಾತು

ಇದಿಷ್ಟೇ ಅನ್ನಬೇಡಿ

ಇಷ್ಟೇ ನನ್ನ ಜೀವನ. ಇದು ಎಂದಿಗೂ ಬದಲಾಗುವುದಿಲ್ಲ. ನನ್ನ ಸಾಮರ್ಥ್ಯವೂ ಇಷ್ಟೇ- ಅಂತ ಒಂದಲ್ಲ ಒಂದು ಸಲ ಅನಿಸಿರುತ್ತದೆ. ಭಗವದ್ಗೀತೆ ಇದನ್ನು ಎದುರಿಸುವ ಕುರಿತು ಒಂದು ಸುಂದರವಾದ ಶ್ಲೋಕವನ್ನು ಹೇಳುತ್ತದೆ.

ಮನಸ್ಸಿನ ಅಶಾಂತಿ ಮತ್ತು ದುಃಖದ ಬಗ್ಗೆ ತುಂಬಾ ಆಳ ವಾಗಿ ಹೇಳುವ ಶ್ಲೋಕ ಇದು- 'ಮಾತ್ರಾಸ್ಪರ್ಶಾಸ್ತು ಕೌಂತೇಯ, ಶೀತೋಷ್ಣಸುಖದುಃಖದಾಃ । ಆಗಮಾಪಾಯಿನೋ ನಿತ್ಯಾಃ, ತಾಂಸ್ತಿತಿಕ್ಷಸ್ವ ಭಾರತ (ಅಧ್ಯಾಯ 2, ಶ್ಲೋಕ 14)' ಚಳಿ-ಬೆಚ್ಚಗೆ, ಸುಖ-ದುಃಖ - ಇವೆಲ್ಲವೂ ಬಂದು ಹೋಗುವವು. ಅವು ಶಾಶ್ವತವಲ್ಲ. ಆದ್ದರಿಂದ ಅವನ್ನು ಸಹನೆಯಿಂದ ಎದುರಿಸು. ಜೀವನದಲ್ಲಿ ಯಾವುದೂ ಶಾಶ್ವತವಲ್ಲ. ಸಂತೋಷವೂ ಉಳಿಯುವುದಿಲ್ಲ; ದುಃಖವೂ ಉಳಿಯುವುದಿಲ್ಲ. ಖಿನ್ನತೆಯ ಈ ಸ್ಥಿತಿಯೂ ಒಂದು ಅಲೆ ಹಾಗೆ. ಅದು ಬಂದಿದೆ, ಕೆಲಕಾಲ ಇರುತ್ತದೆ, ನಂತರ ನಿಧಾನವಾಗಿ ಕಡಿಮೆಯಾಗುತ್ತದೆ. ಇಂದು ಮನಸ್ಸು ಭಾರವಾಗಿದ್ದರೂ, ಅದು ನಿಮ್ಮ ಸಂಪೂರ್ಣ ವ್ಯಕ್ತಿತ್ವ ಅಲ್ಲ. ನಿಮ್ಮ ದುಃಖವೇ ನೀವಲ್ಲ. ಸಮಯ, ಸಹನೆ, ಮತ್ತು ಸಣ್ಣ ಪ್ರಯತ್ನಗಳು ಮನಸ್ಸನ್ನು ನಿಧಾನವಾಗಿ ಬದಲಾಯಿಸುತ್ತವೆ. ಅರ್ಜುನ ಕೂಡ ಯುದ್ಧ ಭೂಮಿಯಲ್ಲಿ ಎಲ್ಲವೂ ಮುಗಿದಂತೆಯೇ ಭಾವಿಸಿದ್ದ. ಆದರೆ ಕೃಷ್ಣ ಅವನಿಗೆ ಮೊದಲಾಗಿ ಕಲಿಸಿದ ಪಾಠವೇ ಇದು- ಈ ಕತ್ತಲೆಯೂ ಶಾಶ್ವತವಲ್ಲ.

ಮಾರ್ಗದರ್ಶನ!

ಹಂಚಿ ತಿನ್ನುವ ಪ್ರವೃತ್ತಿ ಎಲ್ಲರಲ್ಲೂ ಮೊಳೆಯಲಿ ಎಂಬ ಆಶಯ ಅವರದು. ಹೆತ್ತು ಹೊತ್ತು ಸಾಕಿ ಸಲುಹಿದ ತಂದೆ ತಾಯಿಗಳನ್ನು ವೃದ್ಧಾಶ್ರಮಕ್ಕೆ ಸೇರಿಸುವ ಉದ್ದೇಶ ದಿಂದ, ತಮ್ಮೆಡೆಗೆ ಬಂದ ಇನ್ನೂರಕ್ಕೂ ಹೆಚ್ಚು ಸಂಸಾರಗಳಿಗೆ ಬುದ್ಧಿವಾದ ಹೇಳಿ ಅವರನ್ನು ತಮ್ಮ ಮನೆ ಯಲ್ಲಿಯೇ ಇಟ್ಟುಕೊಳ್ಳುವಂತೆ ಮಾಡಿ ದ ಶ್ರೇಯಸ್ಸು ಸಹ ಅವರಿಗೆ ಸಲ್ಲುತ್ತದೆ.

ಲೋಕಹಿತಕ್ಕಾಗಿ ಈ ಬದುಕು!

'ಸೇವಾ ಪರಮೋ ಧರ್ಮಃ' ಎಂಬ ಮಾತಿಗೆ ಉತ್ತಮ ನಿದರ್ಶನ ಲತಿಕಾ ಭಟ್. ಮಲೆನಾಡಿನ ಮಡಿಲಲ್ಲಿರುವ ಶಿರಸಿಯಲ್ಲಿ ಅವರು 'ಸುಯೋಗಾಶ್ರಯ'ದಲ್ಲಿ ಮಾಡುತ್ತಿರುವ ಸೇವಾ ಕಾಯಕ ಅಪರೂಪದ್ದು, ಆದರ್ಶಪ್ರಾಯವಾದುದು.

• ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ.

ಮನುಷ್ಯ ಜಾತಿ ತಾನೊಂದೇ ವಲಂ'ಎಂದು ಸಾರಿದ ಮಹಾಕವಿ ಪಂಪನಿಗೆ ಪ್ರಿಯವಾದ ಬನವಾಸಿಯ ಪಕ್ಕದ ಪಟ್ಟಣ ಶಿರಸಿ. ಅಲ್ಲಿ ನೆಲೆ ನಿಂತು ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ಮಹತ್ವದ ಸಾಧನೆಯನ್ನು ಮಾಡಿರುವ ಅಪೂರ್ವ ಸಾಧಕರು ಲತಿಕಾ ಭಟ್. ವಿಜ್ಞಾನದ ಹಿನ್ನೆಲೆಯಿಂದ ಬಂದು ಉನ್ನತ ವಿದ್ಯಾಭ್ಯಾಸ ಮಾಡಿ ಕೈಗೆ ಬಂದ ನೌಕರಿಯನ್ನು ಬದಿಗೊತ್ತಿ ಸ್ವಂತ ಆಶ್ರಮವೊಂದನ್ನು ಸ್ಥಾಪಿಸಿ ಉಚಿತವಾಗಿ ಹಿರಿಯ ನಾಗರಿಕರ ಸೇವೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವ ಜೀವಕಾರುಣ್ಯಮೂರ್ತಿ ಇವರು. ಸೇವಾ ಪರಮೋ ಧರ್ಮಃ ಎಂಬ ಮಾತಿಗೆ ಅವರು ಉತ್ತಮ ನಿದರ್ಶನ. ದಿಕ್ಕುದಾತಾರರಿಲ್ಲದ ನಿರ್ಗತಿಕರನ್ನು ಅನಾಥರನ್ನು ಜಾತಿ ಮತ ಪಂಥ ಎನ್ನದೇ ಅವರನ್ನು ತಮ್ಮ ಮನೆಯಲ್ಲಿ ಇರಿಸಿಕೊಂಡು ಪ್ರೀತಿ ಕರುಣೆ ತೋರಿ ಹಿರಿಯ ಜೀವಗಳ ಬದುಕನ್ನು ಸಹ್ಯಗೊಳಿಸುವ ಕೆಲಸದಲ್ಲಿ ಅಲೆ ಬೇಸರವಿಲ್ಲದೆ ತೊಡಗಿಸಿಕೊಂಡಿರುವ ಲತಿಕಾ ತಾಯಿ ಮಾನವಾನುಕಂಪಿ. ವಿದ್ಯಾ ಪ್ರಸಾರ ಹಾಗೂ ಸಮಾಜಸೇವೆಯಲ್ಲಿ ಅವರದು ಎತ್ತಿದ ಕೈ. ಸದ್ದಿಲ್ಲದೇ ಯಾವುದೇ ಪ್ರಚಾರ ಪ್ರಶಸ್ತಿಗೆ ಆಶಿಸದೇ ಹೊಗಳಿಕೆಗೆ ಬಾಯ್ಬಿಡದೆ ನಿರ್ಮಮವಾಗಿ ರಚನಾತ್ಮಕವಾದ ಕಾರ್ಯದಲ್ಲಿ ನಿರತರಾಗಿರುವ ಅವರು ಸಾಂಪ್ರತ ಸಮಾಜಕ್ಕೆ ಆದರ್ಶಪ್ರಾಯರು.

ಸುಯೋಗಾಶ್ರಯ

'ಸುಯೋಗಾಶ್ರಯ' ಎಂಬ ವಿಶಿಷ್ಟವಾದ ಆಶ್ರಮವನ್ನು ಸ್ಥಾಪಿಸಿ, ತಮ್ಮ ಸ್ವಂತ ಖರ್ಚಿನಲ್ಲಿ ಹಿರಿಯ ನಾಗರಿಕರನ್ನು ಅನೇಕ ವರ್ಷಗಳಿಂದ ಪಾಲಿಸುತ್ತ ಪೋಷಿಸುತ್ತ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತ ಬಂದಿದ್ದಾರೆ. ಲತಿಕಾ ಅವರ ಕಾರ್ಯ ವೈಖರಿಯಿಂದ 'ಜನ ಸೇವೆಯೇ ಜನಾರ್ಧನ ಸೇವೆ' ಎಂಬ ಮಾತಿಗೆ ಹೊಸ ಅರ್ಥ, ಆಯಾಮ ಬಂದಿದೆ. ಸುಯೋಗಾಶ್ರಯ ಕೇವಲ ವೃದ್ಧಾಶ್ರಮವಲ್ಲ, ಅದು ಬರೇ ಅನಾಥಾಶ್ರಮವೂ ಅಲ್ಲ. ಅದೊಂದು ಹಿರಿಯ ಜೀವಿಗಳ ನೆಮ್ಮದಿಯ ತಾಣ ಅಂತ ಹೇಳಿದರೆ ಅತ್ಯುಕ್ತಿಯಾಗದು.

ನೊಂದವರ, ಬೆಂದವರ, ದಿಕ್ಕಿಲ್ಲದ, ಗತಿಗೋತ್ರ ಇಲ್ಲದ ಜೀವಿಗಳಿಗೆ ಆಶ್ರಯ ನೀಡಿ ನೆಮ್ಮದಿಯ ತಾಣವೊಂದನ್ನು ಸ್ಥಾಪಿಸಿ ಕಳೆದ ಹದಿನೈದು ವರ್ಷಗಳಿಂದ ಅದಕ್ಕಾಗಿ ಅಹರ್ನಿಶಿ ದುಡಿಯುತ್ತ ಬಂದವರು ಲತಿಕಾ ಆಯಿ. ತಮ್ಮ ಜತೆಗೆ ಇರುವ ಸಹಜೀವಿಗಳು ಸಾವನ್ನಪ್ಪಿದ ಸಂದರ್ಭದಲ್ಲಿ ಅದೆಷ್ಟೋ ಚಿತೆಗೆ ತಾವೇ ಅಗ್ನಿಸ್ಪರ್ಶ ಮಾಡಿ ಪುಣ್ಯ ಕಟ್ಟಿಕೊಂಡ ಧೀರ ಮಹಿಳೆ. ಹಿರಿಯ ಜೀವಿಗಳ ಸೇವೆಗಾಗಿ ಬಾಳನ್ನು ಅವರು ಮುಡಿಪಾಗಿಟ್ಟಿರುವುದು ವಿಶೇಷ.

ನೊಂದ ಜೀವಗಳ ಕಣ್ಣೀರನೊರಸುವ ಕಾಯಕದಲ್ಲೇ ಸುಖ ಕಾಣುವ ಅವರದು ಪ್ರಗತಿಪರ ದೃಷ್ಟಿ. ಸದ್ಯ ಅವರ ಆಶ್ರಮದಲ್ಲಿ ಐವತ್ತಕ್ಕೂ ಹೆಚ್ಚು ಮಂದಿ ಇದ್ದು ಇದೊಂದು ಮಹಾಮನೆಯೇ ಸರಿ. ಯಾವುದೇ ಚಂದಾ ವಂತಿಗೆ ಎತ್ತದೆ ತಿಂಗಳಿಗೆ ಪತಿಯ ಸಂಬಳದ ದೊಡ್ಡ ಮೊತ್ತವನ್ನು ಈ ಜನ ಕಲ್ಯಾಣಕ್ಕೆ ಖರ್ಚು ಮಾಡಿಯೂ ತನ್ನದು ಮಿಂಚು ಹುಳದ ಕೆಲಸ ಅಷ್ಟೇ ಎಂಬ ಸರಳ ಸಜ್ಜನಿಕೆ ಅವರದು. ಉಪಕಾರಿ ನಾನು, ಎನ್ನುಪಕೃತಿಯು ಜಗಕೆಂಬ ಯಾವ ಅಹಂಭಾವ ಅವರ ಬಳಿ ಸುಳಿಯದು.

ನಲವತ್ತರಲ್ಲಿ ಆತ್ಮಾವಲೋಕನ

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಉಚಿತ ಶಿಕ್ಷಣ, ಸಹಾಯ ಹಸ್ತ ಎಂದು ಶುರುವಾದ ಈ ಲೋಕ ಕಲ್ಯಾಣ ಕಾರ್ಯ ಅಚಾನಕ್ಕಾಗಿ ಹೊಸ ತಿರುವನ್ನು ಪಡೆದುಕೊಂಡಿತು. ನಲವತ್ತರ ಹುಟ್ಟುಹಬ್ಬದ ಸಂದರ್ಭದಲ್ಲಿ ಅದೇನಾಯಿತೊ ಗೊತ್ತಿಲ್ಲ. ಒಮ್ಮೆಲೇ ಆತ್ಮಾವಲೋಕನಕ್ಕೆ ಇಳಿದರು. ಈ ಬದುಕಿಗೆ ಇಷ್ಟೇ ಅರ್ಥವೇ, ಆಯಸ್ಸು ಮುಗಿಯುತ್ತಿದೆ, ಸಮಾಜಕ್ಕೆ ಏನಾದರೂ ಮಾಡಬೇಕು ಎಂಬ ಸಂಕಲ್ಪ ಮಾಡಿಯೇ ಬಿಟ್ಟರು. ಸಮಾಜ ಸೇವೆಯೆಂಬ ಕೈದೀಪವನ್ನು ಹಿಡಿದೇ ಬಿಟ್ಟರು. ಇದಕ್ಕೆ ಪತಿ ಗಣಪತಿ ಭಟ್ ಅವರ ಪೂರ್ಣ ಸಹಕಾರ ಸಿಕ್ಕಿತು.

ಲತಿಕಾ ತಾಯಿ ಕಳೆದ ಹದಿನೈದು ವರ್ಷಗಳಿಂದ ತಮ್ಮ ಆಶ್ರಮವನ್ನು ನಡೆಸಿಕೊಂಡು ಬಂದಿದ್ದಾರೆ. ಯಾರಿಗೂ ಬೇಡವಾದವರನ್ನು ಸಮಾಜ ಒಲ್ಲದವರನ್ನು ತಮ್ಮ ಆಶ್ರಮದಲ್ಲಿ ನೆಲೆಯನ್ನು ನಂಬಿಕೆಯನ್ನು ದೊರಕಿಸಿ ಆತ್ಮ ಗೌರವದಿಂದ ಬದುಕು ಮುಂದುವರಿಸುವಂತೆ ಮಾಡಲು ಶ್ರಮಿಸುತ್ತ ಬಂದಿದ್ದಾರೆ. ಈ ಮೂಲಕ ಮಹಿಳೆಯಾದವಳು ಸುತ್ತಲಿನ ಸಮಾಜಕ್ಕೆ ಏನು ಮಾಡಬಹುದು ಎಂಬುದನ್ನು ನಾಡಿಗೆ ತೋರಿಸಿಕೊಟ್ಟಿದ್ದಾರೆ.

ನಾವು ಪುಸ್ತಕಗಳನ್ನು ಓದುತ್ತೇವೆ. ಅವರು ಸಹಜೀವಿಗಳ ಜೀವಂತ ಬದುಕನ್ನು ಓದುತ್ತಿದ್ದಾರೆ. 'ಸುಯೋಗಾಶ್ರಯ' ಇದು ವ್ಯಥೆಯಲ್ಲ, ಗೋಳಿನ ಕಥೆಯಲ್ಲ, ನಾನು ಆರಿಸಿಕೊಂಡಿರುವ ಜೀವನ ಎಂಬ ದೃಢವಾದ ನಂಬಿಕೆ ಅವರದು. ಸಾಧನೆಯೇ ಒಂದು ತಪಸ್ಸು. ನಾವು ಮಾಡುವ ಕೆಲಸದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದೇ ತಪಸ್ಸಿನ ಮುಖ್ಯ ಲಕ್ಷಣ. ಅದನ್ನು ಲತಿಕಾ ಅವರು ತನು ಶುದ್ಧ ಮನ ಶುದ್ಧ ಭಾವ ಶುದ್ಧವಾಗಿ ಮಾಡುತ್ತಿರುವುದು ವಿಶೇಷ.

ಕಳಲೆ: ಭವಿಷ್ಯದ ಸೂಪರ್‌ಫುಡ್ ಆಗಬಹುದೇ?

• ಕುಶಾಂಗಿ ಪಟೇಲ್

ಒಮ್ಮೆ ಗ್ರಾಮೀಣ ಅಡುಗೆಮನೆಗಳಲ್ಲಿ ಸಾಮಾನ್ಯ ಆಹಾರವಾಗಿದ್ದ ಬಿದಿರು ಮೊಗ್ಗು(ಕಳಲೆ)ಗಳು ಇಂದು ಜಾಗತಿಕ ವಿಜ್ಞಾನಿಗಳ ಗಮನ ಸೆಳೆಯುತ್ತಿವೆ. ಹೊಟ್ಟೆಯ ಆರೋಗ್ಯ, ದೇಹದ ಚಯಾಪಚಯ ಕ್ರಿಯೆ ಮತ್ತು ರಕ್ತದಲ್ಲಿನ ಸಕ್ಕರೆ ನಿಯಂತ್ರಣಕ್ಕೆ ಕಳಲೆ ಸಹಾಯಕವಾಗಬಹುದು ಎಂಬ ಅಧ್ಯಯನಗಳು ಚರ್ಚೆಗೆ ಕಾರಣವಾಗಿವೆ. ಪರಂಪರೆಯಿಂದ ಬಂದಿದ್ದ ಈ ಆಹಾರ ಇದೀಗ ಸೂಪರ್‌ಫುಡ್ ಎಂಬ ಹೊಸ ಗುರುತಿನತ್ತ ಹೆಜ್ಜೆ ಇಡುತ್ತಿದೆ.

ಉತ್ತರ ಪೂರ್ವ ಭಾರತದ ಅನೇಕ ಭಾಗಗಳಲ್ಲಿ ಕಳಲೆ ದಿನನಿತ್ಯದ ಆಹಾರದ ಒಂದು ಭಾಗವಾಗಿವೆ. ಅಸ್ಸಾಂ, ನಾಗಾಲ್ಯಾಂಡ್, ಮಣಿಪುರ ಸೇರಿದಂತೆ ಹಲವೆಡೆ ಜನರು ಕಳಲೆಗಳನ್ನು ಬೇಯಿಸಿ, ಉಪ್ಪಿನಕಾಯಿ ಮಾಡಿ, ಫರ್ಮೆಂಟೆಡ್ ರೂಪದಲ್ಲಿ ಸೇವಿಸುತ್ತಾರೆ. ಅಲ್ಲಿ ಇದು ಕೇವಲ ಆಹಾರವಲ್ಲ; ಸಂಸ್ಕೃತಿ ಮತ್ತು ಜೀವನಶೈಲಿಯ ಭಾಗವಾಗಿದೆ.

ಇತ್ತೀಚಿನ ಸಂಶೋಧನೆಗಳು ಕಳಲೆಗಳಲ್ಲಿ ಇರುವ ಪೌಷ್ಟಿಕಾಂಶಗಳ ಬಗ್ಗೆ ಹೊಸ ಬೆಳಕು ಚೆಲ್ಲಿವೆ. ಕಡಿಮೆ ಕ್ಯಾಲೊರಿ, ಹೆಚ್ಚು ನಾರಿನಾಂಶ, ಆಂಟಿಆಕ್ಸಿಡೆಂಟ್‌ಗಳು ಮತ್ತು ಹಲವು ಖನಿಜಾಂಶಗಳನ್ನು ಹೊಂದಿರುವ ಕಳಲೆಗಳು ದೇಹದ ಜೀರ್ಣಕ್ರಿಯೆಯನ್ನು ಸುಧಾರಿಸಲು ಸಹಾಯ ಮಾಡಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಇಂದು ಅನೇಕ ಜನರು ಹೊಟ್ಟೆ ಸಮಸ್ಯೆ, ಅಜೀರ್ಣ, ಆಸಿಡಿಟಿ ಮತ್ತು ಜೀರ್ಣಾಂಗದ ತೊಂದರೆಗಳಿಂದ ಬಳಲುತ್ತಿದ್ದಾರೆ. ಅತಿಯಾದ ಪ್ರಾಸೆಸ್ಡ್ ಆಹಾರ, ಒತ್ತಡದ ಜೀವನಶೈಲಿ ಮತ್ತು ಅಸಮರ್ಪಕ ಆಹಾರ ಪದ್ಧತಿ ಇದರ ಪ್ರಮುಖ ಕಾರಣಗಳಾಗಿವೆ. ಈ ಹಿನ್ನೆಲೆಯಲ್ಲೇ ಕಳಲೆಗಳು ಹೊಟ್ಟೆಯ ಒಳಗಿನ ಉತ್ತಮ ಬ್ಯಾಕ್ಟೀರಿಯಾಗಳನ್ನು ಬೆಳೆಸುವಲ್ಲಿ ಸಹಾಯಕವಾಗಬಹುದು ಎಂಬ ಅಭಿಪ್ರಾಯಗಳು ಕೇಳಿಬರುತ್ತಿವೆ. ಹೊಟ್ಟೆಯ ಆರೋಗ್ಯ ಉತ್ತಮವಾಗಿದ್ದರೆ ದೇಹದ ಶಕ್ತಿಯ ಮಟ್ಟ, ರೋಗನಿರೋಧಕ ಶಕ್ತಿ ಮತ್ತು ಮಾನಸಿಕ ಆರೋಗ್ಯಕ್ಕೂ ಒಳ್ಳೆಯ ಪರಿಣಾಮ ಉಂಟಾಗುತ್ತದೆ ಎನ್ನುವುದು ವೈದ್ಯಕೀಯ ಕ್ಷೇತ್ರದ ಅಭಿಪ್ರಾಯ.

ಇದಷ್ಟೇ ಅಲ್ಲದೆ, ಕಳಲೆಗಳು ದೇಹದ ತೂಕ ನಿಯಂತ್ರಣಕ್ಕೂ ಸಹಕಾರಿ ಆಗಬಹುದು ಎಂದು ಸಂಶೋಧಕರು ಹೇಳಿದ್ದಾರೆ. ಕಡಿಮೆ ಕೊಬ್ಬು ಮತ್ತು ಹೆಚ್ಚು ನಾರಿನಾಂಶ ಇರುವುದರಿಂದ ಹೊಟ್ಟೆ ತುಂಬಿದ ಭಾವನೆ ಹೆಚ್ಚು ಕಾಲ ಉಳಿಯುತ್ತದೆ. ಇದರಿಂದ ಅನಗತ್ಯ ಆಹಾರ ಸೇವನೆ ಕಡಿಮೆಯಾಗುವ ಸಾಧ್ಯತೆ ಇದೆ. ಮಧುಮೇಹ ಸಮಸ್ಯೆ ಹೆಚ್ಚುತ್ತಿರುವ ಇಂದಿನ ಕಾಲದಲ್ಲಿ, ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುವ ಆಹಾರಗಳ ಮೇಲೆ ಹೆಚ್ಚು ಗಮನ ಹರಿಸಲಾಗುತ್ತಿದೆ. ಈ ಸಾಲಿನಲ್ಲಿ ಕಳಲೆಗಳೂ ಒಂದು ಅಗ್ರಸ್ಥಾನ ಪಡೆಯುತ್ತಿವೆ.

ಆರೋಗ್ಯದ ಜತೆಗೆ ಪರಿಸರದ ದೃಷ್ಟಿಯಿಂದಲೂ ಬಿದಿರು ಒಂದು ಮಹತ್ವದ ಸಸ್ಯವಾಗಿದೆ. ಬಿದಿರು ವೇಗವಾಗಿ ಬೆಳೆಯುತ್ತದೆ, ಕಡಿಮೆ ಸಂಪನ್ಮೂಲಗಳಲ್ಲಿ ಬದುಕುತ್ತದೆ ಮತ್ತು ಪರಿಸರ ಸ್ನೇಹಿಯಾಗಿದೆ. ಹವಾಮಾನ ಬದಲಾವಣೆಯ ಬಗ್ಗೆ ವಿಶ್ವ ಚಿಂತಿಸುತ್ತಿರುವ ಈ ಸಂದರ್ಭದಲ್ಲಿ, ಬಿದಿರು ಆಧಾರಿತ ಆಹಾರಗಳಿಗೆ ಹೆಚ್ಚಿನ ಮಹತ್ವ ಸಿಗುತ್ತಿದೆ. ಆದರೆ, ತಜ್ಞರು ಒಂದು ಎಚ್ಚರಿಕೆಯನ್ನು ಕೂಡ ನೀಡಿದ್ದಾರೆ. ಕಚ್ಚಾ ಕಳಲೆಗಳನ್ನು ನೇರವಾಗಿ ತಿನ್ನಬಾರದು. ಸರಿಯಾದ ರೀತಿಯಲ್ಲಿ ಬೇಯಿಸಿ ಅಥವಾ ಫರ್ಮೆಂಟ್ ಮಾಡಿದ ನಂತರವೇ ಸೇವಿಸಬೇಕು. ಪಾರಂಪರಿಕ ಅಡುಗೆ ವಿಧಾನಗಳ ಮಹತ್ವ ಇಲ್ಲಿ ಮತ್ತೊಮ್ಮೆ ಸಾಬೀತಾಗುತ್ತದೆ.

ಇಂದು ಜಗತ್ತು ಮತ್ತೆ ಪಾರಂಪರಿಕ ಆಹಾರಗಳತ್ತ ಮುಖ ಮಾಡುತ್ತಿದೆ. ಅರಿಶಿನ, ಸಜ್ಜೆ, ರಾಗಿ ಹೇಗೆ ಮರುಜನ್ಮ ಪಡೆದವೋ, ಅದೇ ರೀತಿಯಲ್ಲಿ ಕಳಲೆಗಳಿಗೂ ಹೊಸ ಗುರುತು ಸಿಗುವ ಸಾಧ್ಯತೆ ಇದೆ. ಅಡುಗೆಮನೆಯ ಒಂದು ಸಾಮಾನ್ಯ ಪದಾರ್ಥವಾಗಿದ್ದ ಕಳಲೆ, ನಾಳೆಯ ಆರೋಗ್ಯಕರ ಬದುಕಿನ ಪ್ರಮುಖ ಆಹಾರವಾಗಬಹುದು ಎಂಬ ನಿರೀಕ್ಷೆ ಈಗ ಹೆಚ್ಚುತ್ತಿದೆ.

• ಹೊಸ್ಮನೆ ಮುತ್ತು

ಇಂದಿನ ಡಿಜಿಟಲ್ ಯುಗದಲ್ಲಿ ಮೊಬೈಲ್ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ. ಬೆಳಗ್ಗೆ ಕಣ್ಣು ತೆರೆದ ಕ್ಷಣದಿಂದ ರಾತ್ರಿ ಮಲಗುವವರೆಗೂ ನಮ್ಮ ಬೆರಳುಗಳು ಮೊಬೈಲ್ ಪರದೆಯ ಮೇಲೆ ನಿರಂತರವಾಗಿ ಓಡಾಡುತ್ತಲೇ ಇರುತ್ತವೆ. ಅರೆಬರೆ ನಿದ್ರೆಯಲ್ಲಿದ್ದರೂ ಸಾಮಾಜಿಕ ಜಾಲತಾಣಗಳ ಪುಟಗಳನ್ನು (Feed) ಮೇಲಕ್ಕೆ ಕೆಳಕ್ಕೆ ತಳ್ಳುತ್ತಲೇ ಇರುತ್ತವೆ. ನಕಾರಾತ್ಮಕ ಸುದ್ದಿಗಳು, ಆತಂಕ ಹುಟ್ಟಿಸುವ ಪೋಸ್ಟ್‌ಗಳು ಮತ್ತು ದುಃಖಭರಿತ ಘಟನೆಗಳು ಮನಸ್ಸಿನಲ್ಲಿ ಒತ್ತಡ ಉಂಟುಮಾಡಿದರೂ, ನಾವು ಮಾತ್ರ ನಿಲ್ಲಿಸದೆ ಮತ್ತಷ್ಟು ಸ್ಕ್ರೋಲ್ ಮಾಡುತ್ತಾ ಹೋಗುತ್ತೇವೆ. ಈ ಅಪಾಯಕಾರಿ ಅಭ್ಯಾಸವನ್ನೇ ಮನಃಶಾಸ್ತ್ರಜ್ಞರು 'ಡೂಮ್ ಸ್ಕ್ರೋಲಿಂಗ್' (Doom scrolling) ಎನ್ನುತ್ತಾರೆ. ಈ ಪ್ರವೃತ್ತಿ ಕೇವಲ ಸಮಯದ ಪೋಲಾಗುವುದಲ್ಲ, ಬದಲಾಗಿ ನಮ್ಮ ಮನಃಶಾಂತಿ ಮತ್ತು ಸಂಬಂಧಗಳ ಮೇಲೆ ದುಷ್ಪರಿಣಾಮ ಬೀರುವ ಒಂದು ಅಗೋಚರ ವೈರಸ್.

ವ್ಯಸನದ ವೇಷಗಳು: ಬೆಳಗ್ಗೆ ಎದ್ದೊಡನೆಯೇ ಮೊಬೈಲ್ ಹುಡುಕುವುದು, ಅತಿಯಾದ ಸ್ಕ್ರೋಲಿಂಗ್ ನಂತರ ಆಯಾಸ, ಕೋಪ ಅಥವಾ ಶೂನ್ಯತೆ ಅನುಭವಿಸುವುದು ಮತ್ತು ಸ್ಕ್ರೋಲ್ ನಿಲ್ಲಿಸಲಾಗದ ಅನಿವಾರ್ಯತೆಗೆ ಸಿಲುಕುವುದು. ಸ್ಕ್ರೀನ್ ಮುಂದೆ ಗಂಟೆಗಟ್ಟಲೆ ಸಮಯ ಕಳೆದರೂ ನೆನಪಿನಲ್ಲಿ ಏನೂ ಧನಾತ್ಮಕ ಸಂಗತಿಗಳಿಲ್ಲದಿರುವುದು. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಜನರೊಂದಿಗೆ ಮಾತನಾಡುವಾಗ ಕಿರಿಕಿರಿ ಉಂಟಾಗುವುದು, ಡೂಮ್ ಸ್ಕ್ರೋಲಿಂಗ್‌ನ ಪ್ರಮುಖ ಲಕ್ಷಣಗಳಾಗಿವೆ.

ಬೆಳಕಿನ ಪರದೆಯ ಕತ್ತಲೆ ಪರಿಣಾಮ: ನಮ್ಮ ಕೈಯಲ್ಲಿರುವ ಸ್ಮಾರ್ಟ್‌ಫೋನ್ ಕೇವಲ ಸಂವಹನ ಸಾಧನವಾಗಿ ಉಳಿದಿಲ್ಲ. ಸಂಶೋಧನೆಗಳ ಪ್ರಕಾರ, ದಿನಕ್ಕೆ 30 ನಿಮಿಷಕ್ಕಿಂತ ಹೆಚ್ಚು ಕಾಲ ನಕಾರಾತ್ಮಕ ವಿಷಯಗಳನ್ನು ವೀಕ್ಷಿಸುವುದರಿಂದ ವ್ಯಕ್ತಿಯ ಆತ್ಮವಿಶ್ವಾಸ ಕುಸಿ

ಹತಾಶೆಯ ಸ್ಕ್ರೀನ್‌ನಿಂದ ಹಸನಾದ ಬದುಕಿನತ್ತ..!

ಯುತ್ತದೆ. ಇದು ಯುವಜನತೆಯಲ್ಲಿ ಆತಂಕ, ಖಿನ್ನತೆ ಮತ್ತು ಏಕಾಗ್ರತೆಯ ಕೊರತೆಯನ್ನು ಹೆಚ್ಚಿಸುವುದಲ್ಲದೆ, ಮಿದುಳಿನ ರಸಾಯನಶಾಸ್ತ್ರವನ್ನೇ ಏರುಪೇರು ಮಾಡುತ್ತದೆ. ಪರದೆಯ ಮೇಲೆ ಮಿನುಗುವ ಇತರರ ಆಕರ್ಷಕ ಜೀವನಶೈಲಿಯನ್ನು ಕಂಡು, ನಮ್ಮ ನೈಜ ಬದುಕನ್ನು ಅವರ 'ಫಿಲ್ಟರ್' ಮಾಡಿದ ಬದುಕಿನೊಂದಿಗೆ ಹೋಲಿಸಿಕೊಳ್ಳುವುದು ನಮ್ಮನ್ನು ಹತಾಶೆಯ ಕೂಪಕ್ಕೆ ದೂಡುತ್ತದೆ.

ದೈಹಿಕವಾಗಿಯೂ ಈ ಅಭ್ಯಾಸ ತೀವ್ರ ತೊಂದರೆಗಳನ್ನು ತಂದೊಡ್ಡುತ್ತದೆ. ಮೊಬೈಲ್ ಪರದೆಯ ನೀಲಿ ಬೆಳಕು ನಿದ್ರೆಯ ಚಕ್ರವನ್ನು ಅಸ್ತವ್ಯಸ್ತಗೊಳಿಸಿ ನಿದ್ರಾಹೀನತೆಗೆ ಕಾರಣವಾಗುತ್ತದೆ. ದೀರ್ಘಕಾಲ ಒಂದೇ ಭಂಗಿಯಲ್ಲಿ ಕುಳಿತು ಸ್ಕ್ರೋಲ್ ಮಾಡುವುದರಿಂದ ಕಣ್ಣಿನ ತೊಂದರೆ, ತಲೆನೋವು ಮತ್ತು ಕುತ್ತಿಗೆ ನೋವು ಕಾಣಿಸಿಕೊಳ್ಳಬಹುದು. ಇದು ಕೆಲಸದ ಉತ್ಪಾದಕತೆಯನ್ನು ಕುಂಠಿತಗೊಳಿಸುವುದಲ್ಲದೆ, ಕುಟುಂಬ ಸದಸ್ಯರ ನಡುವಿನ ಭಾವನಾತ್ಮಕ ಸಂಬಂಧಗಳನ್ನು ದೂರ ಮಾಡುತ್ತಿದೆ.

ಅಲ್ಗಾರಿದಮ್ ಸುಳಿ: ಜಗತ್ತಿನಲ್ಲಿ ನಡೆಯುತ್ತಿರುವ ಕೆಟ್ಟ ಘಟನೆಗಳ ಬಗ್ಗೆ ತಿಳಿದುಕೊಂಡಿದ್ದರೆ ನಾವು ಸುರಕ್ಷಿತವಾಗಿರಬಹುದು ಎಂಬ ಭ್ರಮೆ ನಮ್ಮ ಮಿದುಳಿನಲ್ಲಿರುತ್ತದೆ. ಇಂತಹ ಮಾಹಿತಿಯ ಹಸಿವಿನಿಂದಾಗಿ ನಾವು ಅರಿಯದೆಯೇ ನಕಾರಾತ್ಮಕ ವಿಷಯಗಳತ್ತ ಆಕರ್ಷಿತರಾಗುತ್ತೇವೆ. ಇದಕ್ಕೆ ಪೂರಕವಾಗಿ, ಸೋಶಿಯಲ್ ಮೀಡಿಯಾ ಅಲ್ಗಾರಿದಮ್‌ಗಳು ಬಳಕೆದಾರರನ್ನು ಹೆಚ್ಚು ಕಾಲ ಹಿಡಿದಿಟ್ಟುಕೊಳ್ಳುವ ಉದ್ದೇಶದಿಂದ ಅಂತಹ ಆತಂಕಕಾರಿ ವಿಷಯಗಳನ್ನೇ ಪದೇ ಪದೇ ನಮ್ಮ ಮುಂದೆ ತರುತ್ತವೆ. ಈ ಸುಳಿಗೆ ಸಿಲುಕಿದಾಗ ಜನರು ಕ್ರಮೇಣ ಪರಿಸ್ಥಿತಿಯ ಮೇಲಿನ ನಿಯಂತ್ರಣ ಕಳೆದುಕೊಳ್ಳುತ್ತಾರೆ.

ಪರದೆಗೆ ಮಿತಿ, ಮನಸ್ಸಿಗೆ ನೆಮ್ಮದಿ: ಡೂಮ್ ಸ್ಕ್ರೋಲಿಂಗ್ ತಡೆಗಟ್ಟಲು 'ಡಿಜಿಟಲ್ ಗಡಿ'ಗಳನ್ನು ನಿಗದಿಪಡಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯ. ಸ್ಮಾರ್ಟ್‌ಫೋನ್‌ಗಳಲ್ಲಿರುವ 'Digital Wellbeing' ಅಥವಾ 'Screen Time' ಫೀಚರ್ ಬಳಸಿ ಸಮಯದ ಮಿತಿ ನಿಗದಿಪಡಿಸಿಕೊಳ್ಳಬೇಕು. ಫೋನಿನ ನೋಟಿಫಿಕೇಶನ್‌ಗಳನ್ನು ಆಫ್ ಮಾಡುವುದು ಮತ್ತು ಪರದೆಯನ್ನು 'ಗ್ರೇ-ಸ್ಕೇಲ್' (ಕಪ್ಪು-ಬಿಳುಪು) ಮೋಡ್‌ಗೆ ಬದಲಾಯಿಸುವುದು ಮೊಬೈಲ್ ಬಳಸುವ ಆಕರ್ಷಣೆಯನ್ನು ಕಡಿಮೆ ಮಾಡುತ್ತದೆ. ನಮ್ಮ ಮನಸ್ಥಿತಿಯು ನಾವು ನೋಡುವ ವಿಷಯಗಳ ಮೇಲೆ ಅವಲಂಬಿತವಾಗಿರುವುದರಿಂದ, ಆತಂಕ ಹುಟ್ಟಿಸುವ ಅಕೌಂಟ್‌ಗಳನ್ನು ಅನ್‌ಫಾಲೋ ಮಾಡಿ, ಪ್ರಕೃತಿ, ಕಲೆ, ವಿಜ್ಞಾನ ಮತ್ತು ಸಾಹಿತ್ಯದಂತಹ ಪಾಸಿಟಿವ್ ಫೀಡ್‌ಗಳನ್ನು ಬೆಳೆಸಿಕೊಳ್ಳಬೇಕು. ಬೆಳಗ್ಗೆ ಎದ್ದ ತಕ್ಷಣ ಮತ್ತು ರಾತ್ರಿ ಮಲಗುವ ಮುನ್ನ ಕನಿಷ್ಠ ಒಂದು ಗಂಟೆ 'ನೋ-ಫೋನ್ ಟೈಮ್' ಪಾಲಿಸಬೇಕು. ಊಟದ ಮೇಜು ಅಥವಾ ಮಲಗುವ ಕೋಣೆಯನ್ನು ಫೋನ್ ಮುಕ್ತ ವಲಯವನ್ನಾಗಿ ಮಾಡಿಕೊಳ್ಳುವುದು ಉತ್ತಮ. ವಾರಕ್ಕೊಮ್ಮೆ 'ಡಿಜಿ ಟಲ್ ಡಿಟಾಕ್ಸ್' ಅಂದರೆ ಸಂಪೂರ್ಣವಾಗಿ ಡಿಜಿಟಲ್ ಸಾಧನಗಳಿಂದ ದೂರವಿರುವ ಹವ್ಯಾಸ ರೂಢಿಸಿಕೊಳ್ಳಿ. ಆ ಸಮಯದಲ್ಲಿ ಓದು, ಸಂಗೀತ, ನಡಿಗೆ ಅಥವಾ ಪ್ರೀತಿಪಾತ್ರರೊಂದಿಗೆ ಮುಖಾಮುಖಿ ಸಂಭಾಷಣೆ ಮಾಡುವು ದರಿಂದ ಮನಸ್ಸು ತಾಜಾವಾಗುತ್ತದೆ. ನೆನಪಿಡಿ, ಮನಸ್ಸಿಗೆ ನಿಜವಾದ ವಿಶ್ರಾಂತಿ ಸಿಗುವುದು ಡಿಜಿಟಲ್ ಪರದೆ ಯಲ್ಲಲ್ಲ, ಬದಲಾಗಿ ನೈಜ ಬದುಕಿನ ಕ್ಷಣಗಳಲ್ಲಿ. ತಂತ್ರಜ್ಞಾನದ ಬಳಕೆಯು ಅರಿವಿ ನಿಂದ ಕೂಡಿದೆಯೋ ಅಥವಾ ವ್ಯಸನವಾಗಿದೆಯೋ ಎಂಬ ಆತ್ಮಾವಲೋಕನ ಮಾಡಿಕೊಂಡು, ಅನಗತ್ಯ ಡೂಮ್ ಸ್ಕ್ರೋಲಿಂಗ್‌ಗೆ ಗುಡ್ ಬೈ ಹೇಳಿ; ಧನಾತ್ಮಕತೆಯತ್ತ ಹೆಜ್ಜೆ ಇರಿಸಿ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	2				3	■	4
	■		■	■	■		■	
	■	5		6	■		■	
7	8		■		■	9	10	
■		■	11			■		■
12			■		■	14		15
	■		■	16			■	
	■		■	■	■		■	
	■	17					■	

ಎಡದಿಂದ ಬಲಕ್ಕೆ

2. ದ್ರೋಹ ಮಾಡಲು ಯೋಚನೆ ಮಾಡುವುದಕ್ಕೆ ಹೀಗೆನ್ನುವರು (5)
5. ಹುತ್ತಕ್ಕೆ ಮತ್ತೊಂದು ಹೆಸರಿದು (3)
7. ಭಿನ್ನತೆಯನ್ನು ಹೇಳುವ ಮರದ ರೆಂಬೆ (3)
9. ಕೊಂಡುಕೊಂಡ ವಸ್ತುವಿನ ಬಗ್ಗೆ ಸಿಕ್ಕಿದ ಪಾವತಿಪತ್ರ (3)
11. ಬುದ್ಧನ ಮತ್ತೊಂದು ಹೆಸರಿದು (3)
12. ಆರಂಭದ್ದಲ್ಲ, ಕೊನೆಯದ್ದು (3)
14. ಯಮುನಿಗೆ ಮತ್ತೊಂದು ಹೆಸರು (3)
16. ಒಳ್ಳೆಯ ವಾಸನೆ (3)
17. ಅಗತ್ಯವಿದ್ದಾಗ ಪರರಿಗೆ ಮಾಡುವ ನೆರವು (5)

ಮೇಲಿಂದ ಕೆಳಕ್ಕೆ

1. ಕಪ್ಪು ಮುಸುಡಿನ ಕೋತಿಯಿದು (4)
2. ಬೇರೆಯವರಿಂದ ಪಡೆದ ಸಾಲ (4)
3. ಮಿತ್ರನಿಗೆ ಮತ್ತೊಂದು ಹೆಸರಿದು (4)
4. ಅವನು ನೀಡಿದ ಒಪ್ಪಿಗೆ (4)
6. ಕಡೆಗೆ ಅಲಕ್ಷಿಸು (5)
8. ಕಿವಿಕೊಡಬಾರದಾದ ಗಾಳಿಸುದ್ದಿ (3)
10. ಚೊಚ್ಚಿಲು ಬಸಿರಿಗೆ ಮಾಡುವ ಮುಖ್ಯವಾದ ಸಂಸ್ಕಾರ (3)
12. ಮಂಗಳಗ್ರಹಕ್ಕೆ ಮತ್ತೊಂದು ಹೆಸರು (4)
13. ಇಬ್ಬರ ನಡುವೆ ಬರುವ ವಿರಸ (4)
14. ಗಾಢವಾದ ಕತ್ತಲೆ (4)
15. ಒಂದು ವಿಷಯದ ಮೇಲೆ ತೋರಿಸಿದ ಆಸ್ಥೆ (4)

ಸರಿಯುತ್ತರಗಳು

ತುಳಸೀದಾಸರ ಹನುಮಾನ್ ಚಾಲೀಸಾದ ಉಗಮದ ಕಥೆ



ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಗೋಸ್ವಾಮಿ ತುಳಸೀದಾಸರು ಅಯೋಧ್ಯೆ ಮತ್ತು ಕಾಶಿಯಲ್ಲಿ ರಾಮ ನಾಮದ ಮಹಿಮೆಯನ್ನು ಸಾರುತ್ತಾ ಜನಪ್ರಿಯರಾಗಿದ್ದರು. ಅವರ ಖ್ಯಾತಿ ಎಷ್ಟಿತ್ತೆಂದರೆ, ಅಂದಿನ ಮೊಘಲ್ ಚಕ್ರವರ್ತಿ ಅಕ್ಬರನ ಕಿವಿಗೂ ಇದು ಮುಟ್ಟಿತು. ಒಮ್ಮೆ ಅಕ್ಬರನು ತುಳಸೀದಾಸರನ್ನು ತನ್ನ ಆಸ್ಥಾನಕ್ಕೆ ಕರೆಸಿ, ನಿಮ್ಮ ರಾಮನ ಪವಾಡವನ್ನೇನಾದರೂ ತೋರಿಸಿ ಎಂದು ಕೇಳಿದನು. ಅದಕ್ಕೆ ತುಳಸೀದಾಸರು ವಿನಯದಿಂದ, ನಾನು ಕೇವಲ ಒಬ್ಬ ಭಕ್ತ, ಯಾವುದೇ ಪವಾಡಗಳನ್ನು ಮಾಡುವ ಶಕ್ತಿ ನನಗಿಲ್ಲ; ರಾಮ ನಾಮವೊಂದೇ ಸತ್ಯ ಎಂದು ಉತ್ತರಿಸಿದರು.

ಈ ಉತ್ತರದಿಂದ ಅತೃಪ್ತನಾದ ಚಕ್ರವರ್ತಿಯು, ತುಳಸೀದಾಸರನ್ನು ಫತೇಪುರ್ ಸಿಕ್ರಿಯ ಕಾರಾಗೃಹದಲ್ಲಿ ಬಂಧಿಸಲು ಆದೇಶಿಸಿದನು. ಕಬ್ಬಿಣದ ಸರಳುಗಳ ಹಿಂದೆ ಬಂಧಿಯಾದ ತುಳಸೀದಾಸರಿಗೆ ರಾಮನ ದರ್ಶನವಾಗದಿದ್ದಕ್ಕೆ ಬಹಳ ವೇದನೆಯಾಯಿತು. ಆ ಭಾವನಾತ್ಮಕ ಕ್ಷಣದಲ್ಲಿ, ಅವರು ಆಂಜನೇಯನನ್ನು ಪ್ರಾರ್ಥಿಸಲು ನಿರ್ಧರಿಸಿದರು.

ಕಾರಾಗೃಹದ ಕತ್ತಲ ಕೋಣೆಯಲ್ಲಿ ಕುಳಿತು, ತುಳಸೀದಾಸರು ಅತ್ಯಂತ ಭಕ್ತಿಯಿಂದ 40 ಚೌಪದಿಗಳನ್ನು ರಚಿಸಿದರು. ಇದನ್ನೇ ನಾವು ಇಂದು 'ಹನುಮಾನ್ ಚಾಲೀಸಾ' ಎಂದು ಕರೆಯುತ್ತೇವೆ. ಅವರು ಆ 40 ದಿನಗಳ ಕಾಲ ನಿರಂತರವಾಗಿ ಹನುಮಂತನನ್ನು ಸ್ತುತಿಸುತ್ತಾ ಹೋದಂತೆ, ಅವರ ಭಕ್ತಿ ಉತ್ತುಂಗಕ್ಕೇರಿತು.

ಪುರಾಣಗಳ ಪ್ರಕಾರ, ತುಳಸೀದಾಸರು ಚಾಲೀಸಾವನ್ನು ಪೂರ್ಣಗೊಳಿಸಿದಾಗ ಒಂದು ಅದ್ಭುತ ನಡೆಯಿತು. ಹಠಾತ್ತನೆ ಸಾವಿರಾರು ಮಂಗಗಳ ಸೈನ್ಯವು ಅಕ್ಬರನ ಅರಮನೆ ಮತ್ತು ಜೈಲನ್ನು ಮುತ್ತಿಗೆ ಹಾಕಿದವು. ಮಂಗಗಳು ಎಲ್ಲೆಡೆ ನಾಶಮಾಡಲು ಶುರುಮಾಡಿದವು, ಸೈನಿಕರಿಗೆ ಅವುಗಳನ್ನು ತಡೆಯಲು ಸಾಧ್ಯವಾಗಲಿಲ್ಲ. ಇದು ತುಳಸೀದಾಸರ ಭಕ್ತಿಯ ಶಕ್ತಿ ಎಂದು ಅರಿತ ಅಕ್ಬರನು ತಕ್ಷಣ ಜೈಲಿಗೆ ಧಾವಿಸಿ, ಅವರ ಕ್ಷಮೆ ಕೇಳಿ ಅವರನ್ನು ಬಿಡುಗಡೆ ಮಾಡಿದನು. ಅಷ್ಟೇ ಅಲ್ಲದೆ, ಅಂದಿನಿಂದ ತುಳಸೀದಾಸರ ಗೌರವಾರ್ಥವಾಗಿ ಮಂಗಗಳಿಗೆ ಯಾವುದೇ ತೊಂದರೆ ನೀಡಬಾರದೆಂದು ಆದೇಶಿಸಿದನು ಎನ್ನಲಾಗುತ್ತದೆ. ತುಳಸೀದಾಸರು ತಮ್ಮ ಸಂಕಷ್ಟದ ಸಮಯದಲ್ಲಿ ಹನುಮಂತನನ್ನು ಸ್ತುತಿಸಿದ ಆ ಪ್ರಮುಖ ಚೌಪದಿಗಳು ಮತ್ತು ಅವುಗಳ ಭಾವಾರ್ಥ ಇಲ್ಲಿದೆ.

ಜೈ ಹನುಮಾನ್ ಜ್ಞಾನ ಗುಣ ಸಾಗರ ।
ಜೈ ಕಪೀಶ ತಿಹು ಲೋಕ ಉಜಾಗರ ॥

ಬುದ್ಧಿಹೀನ ತನು ಜಾನಿಕೇ, ಸುಮಿರೌ ಪವನಕುಮಾರ ।
ಬಲ ಬುದ್ಧಿ ವಿದ್ಯಾ ದೇಹು ಮೋಹಿ, ಹರಹು ಕಲೇಸ ವಿಕಾರ ॥

ಅರ್ಥ: ಎಲೈ ಪವನಪುತ್ರನೇ, ನಾನು ಜ್ಞಾನವಿಲ್ಲದವನೆಂದು ತಿಳಿದು ನಿನ್ನನ್ನು ಸ್ಮರಿಸುತ್ತಿದ್ದೇನೆ. ನನಗೆ ಶಕ್ತಿ, ಬುದ್ಧಿ ಮತ್ತು ವಿದ್ಯೆಯನ್ನು ನೀಡಿ ಅನುಗ್ರಹಿಸು. ನನ್ನ ಮನಸ್ಸಿನ ಕ್ಲೇಶಗಳನ್ನು ಮತ್ತು ವಿಕಾರಗಳನ್ನ ದೂರ ಮಾಡು.

ದುರ್ಗಮ ಕಾಜ ಜಗತ ಕೇ ಜೇತೇ ।
ಸುಗಮ ಅನುಗ್ರಹ ತುಮ್ಹರೇ ತೇತೇ ॥

ಅರ್ಥ: ಈ ಜಗತ್ತಿನಲ್ಲಿ ಸಾಧಿಸಲು ಅಸಾಧ್ಯವೆನಿಸುವ ಎಂತಹ ಕಠಿಣ ಕೆಲಸಗಳಿದ್ದರೂ, ನಿನ್ನ ಕೃಪೆ ಅಥವಾ ಅನುಗ್ರಹವಿದ್ದರೆ ಅವು ಅತ್ಯಂತ ಸುಲಭವಾಗಿ ಮತ್ತು ಸರಳವಾಗಿ ಪೂರ್ಣಗೊಳ್ಳುತ್ತವೆ.

ಸಬ ಸುಖ ಲಹೈ ತುಮ್ಹಾರೀ ಶರಣಾ ।
ತುಮ ರಕ್ಷಕ ಕಾಹೂ ಕೋ ಡರ ನಾ ॥

ಅರ್ಥ: ನಿನ್ನ ಶರಣು ಬಂದವರಿಗೆ ಈ ಲೋಕದ ಸಕಲ ಸುಖಗಳೂ ಲಭಿಸುತ್ತವೆ. ನೀನೇ ರಕ್ಷಕನಾಗಿ ನಿಂತ ಮೇಲೆ, ಯಾರಿಗೂ ಅಥವಾ ಯಾವುದಕ್ಕೂ ಹೆದರುವ ಅವಶ್ಯಕತೆಯೇ ಇರುವುದಿಲ್ಲ.

ಸಂಕಟ ಕಟೈ ಮಿಟೈ ಸಬ ಪೀರಾ ।
ಜೋ ಸುಮಿರೈ ಹನುಮತ ಬಲಬೀರಾ ॥

ಅರ್ಥ: ಮಹಾ ಪರಾಕ್ರಮಿಯಾದ ಹನು ಮಂತನನ್ನು ಯಾರು ಭಕ್ತಿಯಿಂದ ಸ್ಮರಿಸು ತ್ತಾರೋ, ಅವರ ಎಲ್ಲ ಸಂಕಟಗಳು ದೂರವಾಗುತ್ತವೆ ಮತ್ತು ಅವರ ಸಕಲ ನೋವುಗಳು ಅಳಿಸಿಹೋಗುತ್ತವೆ.

ಭೂತ ಪಿಸಾಚ ನಿಕಟ ನಹಿ ಆವೈ ।
ಮಹಾವೀರ ಜಬ ನಾಮ ಸುನಾವೈ ॥

ಅರ್ಥ: ಹನುಮಾನ್ ಚಾಲೀಸಾವನ್ನು ಭಕ್ತಿಯಿಂದ ಪಠಿಸುವುದರಿಂದ ಯಾವುದೇ ರೀತಿಯ ಭೂತ ಪ್ರೇತಗಳಾಗಲಿ ಅಥವಾ ಮನಸ್ಸಿನಲ್ಲಿರುವ ಅಜ್ಞಾತ ಭಯ, ನಕಾರಾತ್ಮಕ ಆಲೋಚನೆಗಳು ಮತ್ತು ದುಸ್ವಪ್ನಗಳು ದೂರವಾಗುತ್ತವೆ.

ಜೋ ಯಹ ಪಢೈ ಹನುಮಾನ ಚಾಲೀಸಾ ।
ಹೋಯ ಸಿದ್ಧಿ ಸಾಖೀ ಗೌರೀಸಾ ॥

ಅರ್ಥ: ಯಾರು ಈ ಹನುಮಾನ್ ಚಾಲೀಸಾವನ್ನು ಭಕ್ತಿಯಿಂದ ಪಠಿಸುತ್ತಾರೋ, ಅವರಿಗೆ ಖಂಡಿತವಾಗಿಯೂ ಸಿದ್ಧಿ ದೊರೆಯುತ್ತದೆ. ಇದಕ್ಕೆ ಸಾಕ್ಷಾತ್ ಕಾಶೀ ವಿಶ್ವನಾಥನೇ ಸಾಕ್ಷಿ ಎಂದು ಕೊನೆಯಲ್ಲಿ ಆಶೀರ್ವದಿಸುತ್ತಾರೆ ತುಳಸಿದಾಸರು.

ಹನುಮಾನ್ ಚಾಲೀಸಾವನ್ನು ಭಕ್ತಿಯಿಂದ ಪಠಿಸುವುದರಿಂದ ಮನಸ್ಸಿನಲ್ಲಿರುವ ಭಯ, ಆತಂಕ ಮತ್ತು ನಕಾರಾತ್ಮಕ ಆಲೋಚನೆಗಳು ದೂರವಾಗಿ, ಹೊಸ ಚೈತನ್ಯ ಹಾಗೂ ಆತ್ಮವಿಶ್ವಾಸ ಮೂಡುತ್ತದೆ. ಹನುಮಂತನು ಬುದ್ಧಿ, ಶಕ್ತಿ ಮತ್ತು ಧೈರ್ಯದ ಸಂಕೇತವಾಗಿರುವುದರಿಂದ, ಚಾಲೀಸಾದ ಪಠಣವು ಜೀವನದ ಕಷ್ಟಕಾಲದಲ್ಲಿ ಮನೋಬಲವನ್ನು ಹೆಚ್ಚಿಸಿ ಅಡೆತಡೆಗಳನ್ನು ನಿವಾರಿಸಲು ಸಹಕರಿಸುತ್ತದೆ. ಅಲ್ಲದೆ, ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಶನಿ ದೋಷದಂತಹ ಗ್ರಹ ದೋಷಗಳ ಪ್ರಭಾವವನ್ನು ತಗ್ಗಿಸಲು ಮತ್ತು ದೈನಂದಿನ ಜೀವನದಲ್ಲಿ ಏಕಾಗ್ರತೆ ಹಾಗೂ ಶಿಸ್ತನ್ನು ಮೈಗೂಡಿಸಿಕೊಳ್ಳಲು ಇದು ಅತ್ಯಂತ ಪ್ರಭಾವಶಾಲಿ ಸ್ತೋತ್ರ. ಸಕಾರಾತ್ಮಕ ಶಕ್ತಿಯನ್ನು ವೃದ್ಧಿಸುವ ಈ ಪಠಣವು ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿಯನ್ನು ನೀಡುತ್ತದೆ. ಜೈ ಹನುಮಾನ್.

(ತಾಂತ್ರಿಕ ಕಾರಣದಿಂದ ಮಂಗಳವಾರದ ಸಂಚಿಕೆಯಲ್ಲಿ ಪೂರ್ಣ ಲೇಖನ ಪ್ರಕಟಗೊಂಡಿಲ್ಲ. ಆದ್ದರಿಂದ ಅದೇ ಲೇಖನವನ್ನು ಪೂರ್ಣ ರೂಪದಲ್ಲಿ ಪ್ರಕಟಿಸಲಾಗಿದೆ.)

ನೀವೂ ಬರೆಯಬಹುದು
ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್
ಹೆನ್ರಿಕ್ ಕ್ಲಾಸೆನ್
ಹೈದರಾಬಾದ್

ಪರ್ಪಲ್ ಕ್ಯಾಪ್
ಭುವನೇಶ್ವರ್
ಆರ್‌ಸಿಬಿ

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	12	8	4	16
ಗುಜರಾತ್	12	8	4	16
ಹೈದರಾಬಾದ್	12	7	5	14
ಪಂಜಾಬ್	11	6	4	13
ಚೆನ್ನೈ	11	6	5	12
ರಾಜಸ್ಥಾನ್	11	6	5	12
ಡೆಲ್ಲಿ	12	5	7	10
ಕೋಲ್ಕತಾ	11	4	6	9
ಮುಂಬೈ	11	3	8	6
ಲಖನೌ	11	3	8	6

ಕೋಲ್ಕತಾ ಮಣಿಸಿ ಅಗ್ರಸ್ಥಾನಕ್ಕೆ ಮರಳಿದ ಆರ್‌ಸಿಬಿ | ಪಾಟೀದಾರ್ ಪಡೆಗೆ ಪ್ಲೇಆಫ್ ಬಹುತೇಕ ಖಚಿತ

ಮತ್ತೊಮ್ಮೆ ವಿರಾಟ ಪ್ರದರ್ಶನ

ರಾಯ್ಪುರ: ಇಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅವರ ಸ್ಫೋಟಕ ಶತಕದ ನೆರವಿನಿಂದ ಕೋಲ್ಕತಾ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಮತ್ತೆ ನಂಬರ್ 1 ಸ್ಥಾನಕ್ಕೆ ಮರಳಿದ್ದು ಪ್ಲೇಆಫ್ ಸ್ಥಾನವನ್ನು ಬಹುತೇಕ ಖಾತರಿಪಡಿಸಿಕೊಂಡಂತಾಗಿದೆ.

ಕೋಲ್ಕತಾ ನೀಡಿದ್ದ 193 ರನ್‌ಗಳ ಸವಾಲಿನ ಗುರಿ ಬೆನ್ನಟ್ಟಿದ ಆರ್‌ಸಿಬಿ 19.1 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಗುರಿ ತಲುಪಿತು.

ಆರ್‌ಸಿಬಿ ಬುಧವಾರ ಕೂಡ ಬ್ಯಾಟಿಂಗ್‌ನಲ್ಲಿ ಉತ್ತಮ ಆರಂಭ ಪಡೆಯುವಲ್ಲಿ ವಿಫಲವಾಯಿತು. ಜೇಕಬ್ ಬೆಥೆಲ್ 12 ಎಸೆತಗಳಲ್ಲಿ 2 ಬೌಂಡರಿ, 1 ಸಿಕ್ಸರ್ ಸಹಿತ 15 ರನ್ ಗಳಿಸಿ 4ನೇ ಓವರ್‌ನಲ್ಲಿ ಕಾರ್ತಿಕ್ ತ್ಯಾಗಿ ಬೌನ್ಸರ್ ಬಾಲ್‌ನಲ್ಲಿ ಅವರಿಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿಕೊಂಡರು.

ನಂತರ ಕೊಹ್ಲಿ ಜೊತೆ ಸೇರಿದ ಕನ್ನಡಿಗ ದೇವದತ್ ಪಡಿಕ್ಕಲ್ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿ 2ನೇ ವಿಕೆಟ್‌ಗೆ 92 ರನ್‌ಗಳ ಜತೆಯಾಟ ಪ್ರದರ್ಶಿಸಿದರು. ಪಡಿಕ್ಕಲ್ 27 ಎಸೆತಗಳಲ್ಲಿ 7 ಬೌಂಡರಿಗಳ ಸಹಿತ 39 ರನ್ ಗಳಿಸಿ ಕಾರ್ತಿಕ್ ತ್ಯಾಗಿಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ರಜತ್ ಪಾಟೀದಾರ್ 8 ಎಸೆತಗಳಲ್ಲಿ 11 ರನ್ ಗಳಿಸಿ ಸುನೀಲ್ ನರೈನ್‌ಗೆ ವಿಕೆಟ್ ಒಪ್ಪಿಸಿದರು. ಟಿಮ್ ಡೇವಿಡ್ ಕೇವಲ 2 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು.

58 ಎಸೆತಗಳಲ್ಲಿ ಶತಕ ಸಿಡಿಸಿದ ಕೊಹ್ಲಿ ಒಟ್ಟಾರೆ 60 ಎಸೆತಗಳಲ್ಲಿ 11 ಬೌಂಡರಿ, 3 ಸಿಕ್ಸರ್‌ಗಳ ಸಹಿತ ಅಜೇಯ 105 ರನ್‌ಗಳಿಸಿದರೆ, ಜಿತೇಶ್ ಶರ್ಮಾ 5 ಎಸೆತಗಳಲ್ಲಿ ಅಜೇಯ 8 ರನ್ ಗಳಿಸಿ 20ನೇ ಓವರ್‌ನ ಮೊದಲ ಎಸೆತದಲ್ಲಿ ಬೌಂಡರಿ ಬಾರಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು.

ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತಾ ತಂಡವು 20 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 192 ರನ್‌ಗಳನ್ನು ಕಲೆ ಹಾಕಿತ್ತು. ಅಂಗ್‌ಕ್ರಿಸ್ ರಘುವಂಶಿ (71) ಅರ್ಧಶತಕ

ಹಾಗೂ ರಿಂಕು ಸಿಂಗ್ ಅಜೇಯ 49 ಅರ್ಧಶತಕವು ಕೆಕೆಆರ್ 193 ರನ್‌ಗಳ ಸವಾಲಿನ ಗುರಿ ದಾಖಲಿಸಲು ನೆರವಾದರು.

ಕೆಕೆಆರ್ ಆರಂಭಿಕ ಆಘಾತ: ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಮೂರನೇ ಓವರ್‌ನಲ್ಲಿ ಮೊದಲ ಹಿನ್ನಡೆ ಅನುಭವಿಸಿತು. ತಂಡದ ಸ್ಫೋಟಕ ಬ್ಯಾಟ್ಸ್‌ಮನ್ ಫಿನ್ ಅಲೆನ್ 8 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 18 ರನ್ ಗಳಿಸಿ ಔಟಾದರು. ಭುವನೇಶ್ವರ್ ಕುಮಾರ್ ಆರ್‌ಸಿಬಿಗೆ ಮೊದಲ ಯಶಸ್ಸನ್ನು ತಂದು ಕೊಟ್ಟರು. 18 ರನ್ ಗಳಿಸಿದ ಫಿನ್ ಅಲೆನ್ ಅವರ ವಿಕೆಟ್ ಭುವನೇಶ್ವರ್ ಅವರ ಪಾಲಾಯಿತು.

ನಂತರ ನಾಯಕ ಅಜಿಂಕ್ಯ ರಹಾನೆ 13 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 19 ರನ್ ಗಳಿಸಿ ಹೇಜಲ್‌ವುಡ್ ಬೌಲಿಂಗ್‌ನಲ್ಲಿ ಅವರಿಗೆ ಕ್ಯಾಚ್ ಕೊಟ್ಟು ಔಟ್ ಆದರು.

ರಿಂಕು-ರಘುವಂಶಿ ಸ್ಫೋಟಕ ಆಟ: ಈ ಹಂತದಲ್ಲಿ ಒಂದಾದ ಕ್ಯಾಮರೂನ್ ಗ್ರೀನ್ ಹಾಗೂ ರಘುವಂಶಿ 3ನೇ ವಿಕೆಟ್‌ಗೆ 60 ರನ್‌ಗಳ ಜತೆಯಾಟ ಪ್ರದರ್ಶಿಸಿದರು. ಕ್ಯಾಮರೂನ್ ಗ್ರೀನ್ 24 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 32 ರನ್ ಗಳಿಸಿ ರಸಿಖ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. 5ನೇ ಕ್ರಮಾಂಕದಲ್ಲಿ ಬಂದ ರಿಂಕು ಸಿಂಗ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ಮಾಡಿದರು. 4ನೇ ವಿಕೆಟ್‌ಗೆ 76 ರನ್‌ಗಳ ಜತೆಯಾಟದ ಮೂಲಕ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು.

ರಿಂಕು ಸಿಂಗ್ 29 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್‌ಗಳ ಸಹಿತ ಅಜೇಯ 49 ರನ್ ಗಳಿಸಿದರೆ, ರಘುವಂಶಿ 46 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್‌ಗಳ ಸಹಿತ 71 ರನ್ ಗಳಿಸಿದರು. ಆರ್‌ಸಿಬಿ ಪರ ರಸಿಖ್ ಸಲಾಮ್, ಭುವನೇಶ್ವರ್ ಕುಮಾರ್, ಜೋಶ್ ಹೇಜಲ್‌ವುಡ್ ತಲಾ ಒಂದು ವಿಕೆಟ್ ಪಡೆದರು.

ಧೋನಿ ದಾಖಲೆ ಮುರಿದ ಕೊಹ್ಲಿ

ಆರ್‌ಸಿಬಿಯ ಹಿರಿಯ ಆಟಗಾರ ವಿರಾಟ್ ಕೊಹ್ಲಿ ಬುಧವಾರ ಕೋಲ್ಕತಾ ವಿರುದ್ಧದ ಪಂದ್ಯವನ್ನಾಡುವ ಮೂಲಕ ಅತೀ ಹೆಚ್ಚು ಐಪಿಎಲ್ ಪಂದ್ಯಗಳನ್ನು ಆಡಿದ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಚೆನ್ನೈ ತಂಡದ ಎಂಎಸ್ ಧೋನಿ ಹಾಗೂ ಮುಂಬೈ ತಂಡದ ರೋಹಿತ್ ಶರ್ಮಾ ಅವರನ್ನು ಕೊಹ್ಲಿ ಹಿಂದಿಕ್ಕಿದ್ದಾರೆ. ಬುಧವಾರದ ಪಂದ್ಯವು ವಿರಾಟ್ ಕೊಹ್ಲಿ ಅವರ ಐಪಿಎಲ್ ವೃತ್ತಿಜೀವನದ 279ನೇ ಪಂದ್ಯವಾಗಿತ್ತು. ಮೇ 10ರಂದು ನಡೆದ ಆರ್‌ಸಿಬಿ ಹಾಗೂ ಮುಂಬೈ ನಡುವಿನ ಪಂದ್ಯದಲ್ಲಿ ರೋಹಿತ್ ಮತ್ತು ಕೊಹ್ಲಿ 278 ಪಂದ್ಯಗಳ ಮೈಲುಗಲ್ಲನ್ನು ತಲುಪಿದ್ದರು. ಐಪಿಎಲ್ ಇತಿಹಾಸದಲ್ಲಿ ಏಕೈಕ ಫ್ರ್ಯಾಂಚೈಸಿ ಪರ ಅತೀ ಹೆಚ್ಚು ಪಂದ್ಯಗಳನ್ನು ಆಡಿದ ದಾಖಲೆ ಕೂಡ ಇದೀಗ ಆರ್‌ಸಿಬಿಯ ಕೊಹ್ಲಿ ಹೆಸರಿನಲ್ಲಿದ್ದು, ಅವರು 250 ಪಂದ್ಯಗಳನ್ನು ಆಡಿದ್ದಾರೆ. 2ನೇ ಸ್ಥಾನದಲ್ಲಿ ಎಂಎಸ್ ಧೋನಿ (ಚೆನ್ನೈ ಪರ 248 ಪಂದ್ಯಗಳು), 3ನೇ ಸ್ಥಾನದಲ್ಲಿ ರೋಹಿತ್ ಶರ್ಮಾ (ಮುಂಬೈ ಪರ 232 ಪಂದ್ಯಗಳು) ಇದ್ದಾರೆ.

ಸ್ಕೋರ್ ಬೋರ್ಡ್

ಕೋಲ್ಕತಾ 192/4 20 ಓವರ್

		ರನ್	ಎಸೆತ	4s	6s
ರಹಾನೆ	ಸಿ ಆ್ಯಂಡ್ ಬಿ.ಹೇಜಲ್‌ವುಡ್	19	13	3	1
ಫಿನ್‌ಅಲೆನ್	ಸಿ ಜಿತೇಶ್, ಬಿ ಭುವನೇಶ್ವರ್	18	8	3	1
ರಘುವಂಶಿ	ರನೌಟ್	71	46	7	3
ಕ್ಯಾಮೆರನ್‌ಗ್ರೀನ್	ಬಿ ರಸಿಖ್	32	24	3	1
ರಿಂಕು	ನಾಟ್ ಔಟ್	49	29	3	2

ಬೌಲಿಂಗ್ ಆರ್‌ಸಿಬಿ

	ಓವರ್	ಮೇಡನ್	ರನ್	ವಿಕೆಟ್
ಭುವನೇಶ್ವರ್	4	0	34	1
ಡಫಿ	4	0	48	0
ಹೇಜಲ್‌ವುಡ್	4	0	35	1
ರಸಿಖ್	4	0	35	1
ಕೃನಾಲ್	4	0	39	0

ವಿಕೆಟ್ ಪತನ: 1/23, 2/48, 3/116, 4/192

ಆರ್‌ಸಿಬಿ 195/4 19.1 ಓವರ್

		ರನ್	ಎಸೆತ	4s	6s
ಬೆಥೆಲ್	ಸಿ ಆ್ಯಂಡ್ ಬಿ ತ್ಯಾಗಿ	15	12	2	1
ಕೊಹ್ಲಿ	ನಾಟ್‌ಔಟ್	105	60	11	3
ಪಡಿಕ್ಕಲ್	ಸಿ ರಹಾನೆ, ಬಿ ತ್ಯಾಗಿ	39	27	7	0
ಪಾಟೀದಾರ್	ಸಿ ರಹಾನೆ, ಬಿ ನರೈನ್	11	8	0	1
ಟಿಮ್‌ಡೇವಿಡ್	ಸಿ ಪಾಂಡೆ, ಬಿ ತ್ಯಾಗಿ	2	3	0	0
ಜಿತೇಶ್	ನಾಟ್‌ಔಟ್	8	5	1	0

ಕೋಲ್ಕತಾ ಬೌಲಿಂಗ್

	ಓವರ್	ಮೇಡನ್	ರನ್	ವಿಕೆಟ್
ದುಬೆ	2.1	0	21	0
ಅರೋರಾ	4	0	48	0
ತ್ಯಾಗಿ	4	0	33	3
ನರೈನ್	4	0	31	1
ಗ್ರೀನ್	2	0	22	0
ಅನುಕೂಲ್	3	0	36	0

ವಿಕೆಟ್ ಪತನ : 1/37, 2/129, 3/157, 4/181

ಪ್ಲೇಯರ್ ಆಫ್ ದಿ ಮ್ಯಾಚ್ ▶▶ ಕೊಹ್ಲಿ (ಆರ್‌ಸಿಬಿ)

ಮ್ಯಾಕ್ನೀಲ್ ನೊರೋನ್ಹಾ ಸಿಎಸ್‌ಕೆಗೆ ಸೇರ್ಪಡೆ

ಚೆನ್ನೈ: ಕಳೆದ ವಾರ ಪಾದದ ಮೂಳೆ ಮುರಿತದಿಂದಾಗಿ ಈ ಸಲದ ಐಪಿಎಲ್ ಪಂದ್ಯಾವಳಿಯಿಂದ ಹೊರಗುಳಿದಿದ್ದ ರಾಮಕೃಷ್ಣ ಘೋಷ್ ಬದಲಿಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಕರ್ನಾಟಕದ ಆಲ್‌ರೌಂಡರ್ ಮ್ಯಾಕ್ನೀಲ್ ನೊರೊನ್ಹಾ ಅವರನ್ನು ಆಯ್ಕೆ ಮಾಡಿಕೊಂಡಿದೆ. ಚೆನ್ನೈ ತಂಡವು ಬಿಸಿಸಿಐಗೆ ಈ ಕುರಿತಾಗಿ ಪತ್ರ ಬರೆದು ಒಪ್ಪಂದ ಪೂರ್ಣಗೊಳಿಸಲು ಅನುಮೋದನೆಗಾಗಿ ಕಾಯುತ್ತಿದೆ ಎಂದು ಸಿಎಸ್‌ಕೆ ಸಿಇಒ ಕಾಸಿ ವಿಶ್ವನಾಥನ್ ದೃಢಪಡಿಸಿದ್ದಾರೆ. 2025ರ ಮಹಾರಾಜ ಟ್ರೋಫಿ ಅಭಿಯಾನದಲ್ಲಿ ಮಂಗಳೂರು ಡ್ರ್ಯಾಗನ್ಸ್ ಪರ ನೊರೊನ್ಹಾ ಅದ್ಭುತ ಪ್ರದರ್ಶನ ನೀಡಿದ್ದರು. 19 ಸಿಕ್ಸರ್‌ಗಳು ಸೇರಿದಂತೆ 13 ಪಂದ್ಯಗಳಲ್ಲಿ 148.82 ಸ್ಟ್ರೈಕ್ ರೇಟ್‌ನಲ್ಲಿ 253 ರನ್ ಗಳಿಸಿದ್ದರು. ನೊರೊನ್ಹಾ ತಮ್ಮ ಆಫ್‌ಸ್ಪಿನ್ ಬೌಲಿಂಗ್‌ನಲ್ಲಿಯೂ ಸಹ ಕೊಡುಗೆ ನೀಡಿದ್ದು, 7.44 ರ ಎಕಾನಮಿ ರೇಟ್‌ನಲ್ಲಿ 10 ವಿಕೆಟ್‌ಗಳನ್ನು ಗಳಿಸಿದ್ದಾರೆ. ಹುಬ್ಬಳ್ಳಿ ಟೈಗರ್ಸ್ ವಿರುದ್ಧದ ಫೈನಲ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ. ಅವರ ಆ ಪ್ರದರ್ಶನದಿಂದಾಗಿ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕ ತಂಡಕ್ಕೆ ಅವರನ್ನು ಆಯ್ಕೆ ಮಾಡುವಂತೆ ಮಾಡಿತ್ತು.

ಸಮಾಚಾರ ಸಣ್ಣದಲ್ಲ

ನಿಧಾನಗತಿ ಬೌಲಿಂಗ್: ಕಮಿನ್ಸ್‌ಗೆ ದಂಡ



ಅಹಮದಾಬಾದ್: ಮಂಗಳವಾರ ನಡೆದ ಐಪಿಎಲ್‌ನ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಸೋಲಿನ ನಂತರ ಸನ್‌ರೈಸರ್ಸ್ ಹೈದರಾಬಾದ್ ನಾಯಕ ಪ್ಯಾಟ್ ಕಮ್ಮಿನ್ಸ್‌ಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) 12 ಲಕ್ಷ ರು.ದಂಡ ವಿಧಿಸಿದೆ. ಪಂದ್ಯದ ಸಮಯದಲ್ಲಿ ನಿಧಾನಗತಿಯ ಓವರ್ ದರವನ್ನು ಕಾಯ್ದುಕೊಂಡಿದ್ದಕ್ಕಾಗಿ ಅವರು ತಪ್ಪಿತಸ್ಥರೆಂದು ಕಂಡುಬಂದಿದೆ, ಹಾಗಾಗಿ ಐಪಿಎಲ್ ನೀತಿ ಸಂಹಿತೆಯ ಆರ್ಟಿಕಲ್ 2.22ರ ಅಡಿಯಲ್ಲಿ ಇದು ಋತುವಿನ ಮೊದಲ ಅಪರಾಧವಾಗಿರುವುದರಿಂದ, ಅವರಿಗೆ ಕನಿಷ್ಠ ದಂಡ ವಿಧಿಸಲಾಯಿತು. ಐಪಿಎಲ್ ನೀತಿ ಸಂಹಿತೆಯ ಆರ್ಟಿಕಲ್ 2.22ರ ಅಡಿಯಲ್ಲಿ ಸನ್‌ರೈಸರ್ಸ್ ತಂಡ ಈ ಋತುವಿನಲ್ಲಿ ಮಾಡಿದ ಮೊದಲ ಓವರ್‌ರೇಟ್ ಅಪರಾಧ ಇದಾಗಿದ್ದು, ಇದು ಕನಿಷ್ಠ ಓವರ್‌ರೇಟ್ ಉಲ್ಲಂಘನೆಗಳಿಗೆ ಸಂಬಂಧಿಸಿದೆ ಎಂದು ಲೀಗ್ ಸ್ಪಷ್ಟಪಡಿಸಿದೆ. ಹಾಗಾಗಿ ನಾಯಕ ಕಮಿನ್ಸ್‌ಗೆ 12 ಲಕ್ಷ ರು. ದಂಡವನ್ನು ವಿಧಿಸಲಾಗಿದೆ ಎಂದು ಐಪಿಎಲ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಟೆಸ್ಟ್ ರ‍್ಯಾಂಕಿಂಗ್: ಬುಮ್ರಾಗೆ ಅಗ್ರಸ್ಥಾನ

ಮುಂಬೈ: ಭಾರತದ ವೇಗದ ಬೌಲಿಂಗ್ ದಾಳಿಯ ಮುಂಚೂಣಿಯಲ್ಲಿರುವ ಜಸ್ಪ್ರೀತ್ ಬುಮ್ರಾ ಅವರು ಬುಧವಾರ ಬಿಡುಗಡೆಯಾದ ಇತ್ತೀಚಿನ ಐಸಿಸಿ ಟೆಸ್ಟ್ ಶ್ರೇಯಾಂಕಗಳ ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ವನ್ನು ಉಳಿಸಿಕೊಂಡಿದ್ದಾರೆ. ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಟೂರ್ನಿಯಲ್ಲಿ ಭಾರತ 2026ರಲ್ಲಿ ಇಲ್ಲಿಯವರೆಗೆ ಒಂದೇ ಒಂದು ಪಂದ್ಯವನ್ನು ಆಡಿಲ್ಲ. ತಂಡವು ನವೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ತನ್ನ ಕೊನೆಯ ಸರಣಿಯನ್ನು ತವರಿನಲ್ಲಿ ಆಡಿತ್ತು. ಆದರೂ ಬೌಲರ್‌ಗಳ ಪಟ್ಟಿಯಲ್ಲಿ ಬುಮ್ರಾ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ.ಯಶಸ್ವಿ ಜೈಸ್ವಾಲ್ ಮತ್ತು ಶುಭ್‌ಮನ್ ಗಿಲ್ ಬ್ಯಾಟ್ಸ್‌ಮನ್‌ಗಳ ಪಟ್ಟಿಯಲ್ಲಿ ಕ್ರಮವಾಗಿ ಎಂಟನೇ ಮತ್ತು ಒಂಬತ್ತನೇ ಸ್ಥಾನದಲ್ಲಿದ್ದಾರೆ. ಇಂಗ್ಲೆಂಡ್‌ನ ಮಾಜಿ ಟೆಸ್ಟ್ ನಾಯಕ ಜೋ ರೂಟ್ 880 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಜೈಸ್ವಾಲ್ 750 ಅಂಕಗಳನ್ನು ಹೊಂದಿದ್ದರೆ, ಗಿಲ್ ಒಂದು ಸ್ಥಾನ ಏರಿಕೆ ಕಂಡು ಪ್ರಸ್ತುತ 730 ಅಂಕಗಳನ್ನು ಹೊಂದಿದ್ದಾರೆ.

ಜಿಂಬಾಬ್ವೆ ದೇಶೀಯ ಕ್ರಿಕೆಟ್‌ನಲ್ಲಿ ದಾಖಲೆ

ಹರಾರೆ: ಜಿಂಬಾಬ್ವೆಯ ದೇಶಿಯ ಲೀಗ್‌ನಲ್ಲಿ ತಂಡವೊಂದು 50 ಓವರ್‌ಗಳಲ್ಲಿ 822 ರನ್‌ಗಳಿಸಿ ಕ್ರಿಕೆಟ್ ಜಗತ್ತಿನ ಅತ್ಯಂತ ಹೆಚ್ಚು ರನ್ ದಾಖಲೆಯನ್ನು ಪುಡಿ ಮಾಡಿದೆ. 50 ಓವರ್‌ಗಳ ಪಂದ್ಯದಲ್ಲಿ ಒಂದು ತಂಡ ಕೇವಲ 50 ಓವರ್‌ಗಳಲ್ಲಿ 822 ರನ್ ಗಳಿಸಿರುವುದು ಇದೇ ಮೊದಲು, ಈ ಪಂದ್ಯದ ಅಚ್ಚರಿ ಎಂದರೆ ಈ 822 ರನ್‌ಗಳ ಸ್ಕೋರ್‌ಗೆ ಪ್ರತಿಕ್ರಿಯೆಯಾಗಿ, ಎದುರಾಳಿ ತಂಡ ಕೇವಲ 28 ರನ್‌ಗಳಿಗೆ ಆಲೌಟ್ ಆಗಿ 794 ರನ್‌ಗಳ ಬೃಹತ್ ಜಯ ಸಾಧಿಸಿದೆ. ಈ ಪಂದ್ಯವು ಜಿಂಬಾಬ್ವೆಯ ಎರಡು ದೇಶೀಯ ತಂಡಗಳಾದ ಸ್ಕಾರ್ಪಿಯನ್ಸ್ ಕ್ರಿಕೆಟ್ ಕ್ಲಬ್ ಮತ್ತು ಮಿಥಾನೆ ಲಯನ್ಸ್ ನಡುವೆ ನಡೆಯಿತು.

ಮುಂಬೈಗೆ ಕೇವಲ ಔಪಚಾರಿಕ ಸೆಣಸಾಟ | ಪಂಜಾಬ್ ತಂಡಕ್ಕಿದು ಮಾಡು-ಮಡಿ ಪಂದ್ಯ

ಅಯ್ಯರ್ ಪಡೆಗಿಂದು ಅಗ್ನಿ ಪರೀಕ್ಷೆ

ಧರ್ಮಶಾಲಾ: ಇಲ್ಲಿ ಇಂದು ನಡೆಯುವ ಐಪಿಎಲ್‌ನ 58ನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವು ಮುಂಬೈ ಇಂಡಿಯನ್ಸ್ ತಂಡವನ್ನು ಎದುರಿಸಲಿದೆ. ಈಗಾಗಲೇ ಟೂರ್ನಿಯಿಂದ ಹೊರಬಿದ್ದಿರುವ ಮುಂಬೈಗೆ ಇದು ಔಪಚಾರಿಕ ಪಂದ್ಯವಾದರೆ, ಪ್ಲೇಆಫ್ ಸ್ಥಾನದ ಯೋಚನೆಯಲ್ಲಿರುವ ಪಂಜಾಬ್‌ಗಿದು ಮಾಡು ಇಲ್ಲವೇ ಮಡಿ ಪಂದ್ಯವಾಗಲಿದೆ.

ಪಂಜಾಬ್ ಕಿಂಗ್ಸ್ ತಂಡವು ಈ ಆವೃತ್ತಿಯ ತನ್ನ ಮೊದಲ ಏಳು ಪಂದ್ಯಗಳಲ್ಲಿ ಅಜೇಯವಾಗಿ ಆಡಿದ ನಂತರ, ಸತತ ನಾಲ್ಕು ಸೋಲುಗಳನ್ನು ಅನುಭವಿಸಿದೆ. ಮೇ 11ರಂದು ಧರ್ಮಶಾಲಾದಲ್ಲಿ 211 ರನ್ ಬಾರಿಸಿಯೂ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಸೋಲು ಕಂಡಿತ್ತು. ತಂಡ ಎದುರಿಸಿದ ಸತತ 4 ಸೋಲಿಗೆ ಕಳಪೆ ಬೌಲಿಂಗ್ ಮತ್ತು ಫೀಲ್ಡಿಂಗ್ ಕಾರಣ ಎಂದು ನಾಯಕ ಶ್ರೇಯಸ್ ಅಯ್ಯರ್ ಹೇಳಿದ್ದಾರೆ. ಹೀಗಾಗಿ ಪಂಜಾಬ್ ತಂಡ ಈ ವೈಫಲ್ಯಗಳನ್ನು ಇಂದಿನ ಪಂದ್ಯದಲ್ಲಿ ಸರಿಪಡಿಸಿಕೊಳ್ಳಬೇಕಿದೆ. ಪ್ಲೇಆಫ್ ಸ್ಥಾನಕ್ಕೆ ಪ್ರವೇಶಿಸಬೇಕಿದ್ದರೆ ಈ ಪಂದ್ಯದ ಮೂಲಕ ಗೆಲುವಿನ ಹಾದಿಗೆ ಮರಳಬೇಕಾಗಿದೆ, ಇಲ್ಲದಿದ್ದರೆ ಪ್ಲೇಆಫ್ ಹಂತಕ್ಕೆ ಏರಲಾರದೆ ಟೂರ್ನಿಯಿಂದ ಹೊರಬರಬೇಕಾದ ಪರಿಸ್ಥಿತಿ ಬರಬಹುದು.

ಮೇ 10ರಂದು ರಾಯ್ಪುರದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧದ ಪಂದ್ಯದಲ್ಲಿ ಸೋತ ಮುಂಬೈ ಇಂಡಿಯನ್ಸ್ ತಂಡವು ಎಂಟನೇ ಸೋಲಿನೊಂದಿಗೆ ಟೂರ್ನಿಯಿಂದ ಹೊರಬಿದ್ದಿದೆ. ಇಡೀ ಋತುವಿನಲ್ಲಿ ಹಾರ್ದಿಕ್ ಪಾಂಡ್ಯ ನಾಯಕತ್ವದ ತಂಡದ ಪ್ರದರ್ಶನ ಕಳಪೆಯಾಗಿದೆ. 11 ಪಂದ್ಯಗಳನ್ನು ಆಡಿ ಕೇವಲ 3ರಲ್ಲಿ ಗೆದ್ದು, ಆರು ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಮುಂಬೈ ಒಂಬತ್ತನೇ ಸ್ಥಾನದಲ್ಲಿದೆ.

ಪಿಚ್ ರಿಪೋರ್ಟ್: ಧರ್ಮಶಾಲಾದಲ್ಲಿರುವ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣವು ದೇಶದ ಅತ್ಯಂತ ಅತ್ಯಂತ ಬ್ಯಾಟಿಂಗ್‌ಸ್ನೇಹಿ ಪಿಚ್‌ಗಳಲ್ಲಿ ಒಂದಾಗಿದೆ. ಕಪ್ಪು ಮಣ್ಣಿನ ಪಿಚ್ ಗಟ್ಟಿಯಾಗಿದ್ದು, ಸ್ಥಿರವಾದ ಬೌನ್ಸ್ ನೀಡುತ್ತದೆ. ಬ್ಯಾಟರ್‌ಗಳು ತಮ್ಮ ಹೊಡೆತಗಳನ್ನು ಮುಕ್ತವಾಗಿ ಆಡಲು ಅನುವು ಮಾಡಿಕೊಡುತ್ತದೆ, ಚೆಂಡು ಗಾಳಿಯಲ್ಲಿ ಹೆಚ್ಚು ವೇಗವಾಗಿ ಚಲಿಸುತ್ತದೆ.

ಒಟ್ಟು ಮುಖಾಮುಖಿ
ಆಡಿದ ಒಟ್ಟು ಪಂದ್ಯಗಳು 35
ಪಂಜಾಬ್ ಗೆಲುವು- 18
ಮುಂಬೈ ಗೆಲುವು- 17

ಇಂದಿನ ಪಂದ್ಯ
ಪಂಜಾಬ್-ಮುಂಬೈ
ಸ್ಥಳ: ಧರ್ಮಶಾಲಾ ಸ್ಟೇಡಿಯಂ
ಸಮಯ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಜಿಯೋ ಹಾಟ್‌ಸ್ಟಾರ್

ಚೆನ್ನೈ ಸೂಪರ್ ಕಿಂಗ್ಸ್‌ಗೆ ಈಗಲೂ ಪ್ಲೇಆಫ್ ಆಸೆ ಜೀವಂತ

ಲಖನೌ ವಿರುದ್ಧ ಧೋನಿ ಆಡುವ ಸಾಧ್ಯತೆ

ಚೆನ್ನೈ: ಮೇ 15ರಂದು ಉತ್ತರ ಪ್ರದೇಶದ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ಐಪಿಎಲ್ 2026ಪಂದ್ಯಕ್ಕಾಗಿ ಎಂಎಸ್ ಧೋನಿ ಲಖನೌಗೆ ಪ್ರಯಾಣಿಸಿದ್ದಾರೆ ಎಂದು ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ಹೇಳಿದೆ. ಆಡಳಿತ ಮಂಡಳಿಯು ತಂಡದ ಉಳಿದ ಸದಸ್ಯರೊಂದಿಗೆ ವಾಣಿಜ್ಯ ವಿಮಾನದಲ್ಲಿ ಧೋನಿಯ ಅಲ್ಲಿಗೆ ತೆರಳಿದ್ದು, ಆದರೆ ಅವರು ಪಂದ್ಯದಲ್ಲಿ ಕಾಣಿಸಿಕೊಳ್ಳಲಿದ್ದಾರಾ ಎಂಬುದು ಇನ್ನೂ ಅಂತಿಮವಾಗಿಲ್ಲ.

ಈ ಐಪಿಎಲ್ ಋತುವಿನ ಆರಂಭಕ್ಕೂ ಮುನ್ನ ತರಬೇತಿ ಅವಧಿಯಲ್ಲಿ ಧೋನಿ ಕಾಲಿನ ಸ್ನಾಯು ಸೆಳೆತಕ್ಕೆ ಒಳಗಾದ ಕಾರಣ ಆರಂಭದಲ್ಲಿ ಅವರು ಎರಡು ವಾರಗಳ ಕಾಲ ಹೊರಗಿದ್ದರು, ಆದರೆ ಸುಮಾರು ಒಂದು ತಿಂಗಳು ಕಳೆದಿದ್ದರೂ ಅವರು ಈ ಐಪಿಎಲ್ ಋತುವಿನಲ್ಲಿ ಇನ್ನೂ ಒಂದು ಪಂದ್ಯವನ್ನು ಆಡಿಲ್ಲ.

ಚೆನ್ನೈನ ಉಳಿದ ಪಂದ್ಯಗಳಲ್ಲಿ ಧೋನಿ ಆಡಬಹುದೆಂಬ ನಿರೀಕ್ಷೆ ಚೆನ್ನೈ ಅಭಿಮಾನಿಗಳಲ್ಲಿ ಹೆಚ್ಚುತ್ತಿದೆ, ಹಾಗಾಗಿ ಲಖನೌ ವಿರುದ್ಧದ ಪಂದ್ಯವು ಅವರ ಈ ಋತುವಿನ ಮೊದಲ ಪಂದ್ಯ ಆರಂಭವಾಗಬಹುದು ಎಂದೂ ಅಂದಾಜಿಸಲಾಗುತ್ತಿದೆ.

ಈ ವರ್ಷ ತಂಡದಿಂದ ಧೋನಿ ಹೊರಗುಳಿದಿರುವುದಕ್ಕೆ ಹಲವಾರು ಕಾರಣ ಗಳಿವೆ. ವಿಕೆಟ್ ಕೀಪಿಂಗ್ ಕಾರ್ಯದಲ್ಲಿ ಹಿನ್ನಡೆ ಅನುಭವಿಸಿದ್ದು, ಇದು ಅವರ ತಂಡದ ಮರಳುವಿಕೆಯನ್ನು ವಿಳಂಬ ಗೊಳಿಸಿತು ಎಂದು ಕೋಚ್ ಸ್ಟೀಫನ್ ಫ್ಲೆಮಿಂಗ್ ಹೇಳಿದ್ದಾರೆ.

ಚೆನ್ನೈ ಫ್ರಾಂಚೈಸಿ ಆಡಳಿತ ಮಂಡಳಿಯಿಂದ ಇದೀಗ ಆಟವಾಡುವ ಸಾಧ್ಯತೆಯ ಸುಳಿವು ಬಂದಿದ್ದು, ಕೆಲವು ವರದಿಗಳ ಪ್ರಕಾರ ಆಡುವ ಬಳಗದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ಬಲವಾಗಿದೆ ಎನ್ನಲಾಗುತ್ತಿದೆ. ಇದೀಗ ಸಿಎಸ್‌ಕೆ ನಿರಂತರವಾಗಿ ಪಂದ್ಯಗಳನ್ನು ಗೆಲ್ಲುತ್ತಿದೆ. ಅದು ಇದುವರೆಗೂ 10 ಪಂದ್ಯಗಳನ್ನು ಆಡಿದ್ದು 6ರಲ್ಲಿ ಗೆದ್ದು, 12 ಅಂಕಗಳನ್ನು ಕಲೆ ಹಾಕಿದೆ. ಇನ್ನು 3 ಪಂದ್ಯಗಳು ಬಾಕಿ ಉಳಿದಿರುವುದರಿಂದ ಅವುಗಳನ್ನೆಲ್ಲಾ ಗೆದ್ದರೆ ಪ್ಲೇಆಫ್‌ನಲ್ಲಿ ಅರ್ಹತೆ ಪಡೆಯುವುದಂತೂ ಖಚಿತ. ಹಾಗಾಗಿ ಈ ನಿರ್ಣಾಯಕ ಹಂತದಲ್ಲಿ ಧೋನಿ ಮೈದಾನಕ್ಕಿಳಿದು ಉತ್ತಮ ಇನ್ನಿಂಗ್ಸ್ ಪ್ರದರ್ಶಿಸಲು ಸಾಧ್ಯವಾದರೆ ಅದರ ಲಾಭ ಚೆನ್ನೈ ತಂಡಕ್ಕೆ ಸಿಗಲಿದೆ ಎಂಬ ಲೆಕ್ಕಾಚಾರ ಫ್ರಾಂಚೈಸಿಯದ್ದಾಗಿದೆ.

ಟಿ20 ಮಹಿಳಾ ವಿಶ್ವಕಪ್‌ಗೆ ಸೋಫಿ ಮೊಲಿನೆಕ್ಸ್ ಆಸ್ಟ್ರೇಲಿಯಾ ನಾಯಕಿ

ಮಹಿಳಾ ಟಿ20 ವಿಶ್ವಕಪ್: ಆಸೀಸ್ ತಂಡ ಪ್ರಕಟ

ಸಿಡ್ನಿ: ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್‌ಗಾಗಿ ಆಸ್ಟ್ರೇಲಿಯಾ ಬಲಿಷ್ಠ ತಂಡವನ್ನು ಪ್ರಕಟಿಸಿದೆ. ಅಲಿಸಾ ಹೀಲಿ ನಿವೃತ್ತಿ ಘೋಷಿಸಿದ ನಂತರ ನಾಯಕತ್ವ ವಹಿಸಿಕೊಂಡ ಸೋಫಿ ಮೊಲಿನೆಕ್ಸ್ ತಂಡವನ್ನು ಮುನ್ನಡೆಸಲಿದ್ದಾರೆ. ಪ್ರಮುಖ ಟೂರ್ನಮೆಂಟ್‌ನಲ್ಲಿ ಇದು ಅವರ ಮೊದಲ ಸವಾಲಾಗಿದೆ.

ಆಯ್ಕೆದಾರರು ತಮ್ಮ ಬೌಲಿಂಗ್ ಸಂಪನ್ಮೂಲಗಳಲ್ಲಿ ವೈವಿಧ್ಯತೆಯತ್ತ ಗಮನ ಹರಿಸಿದ್ದಾರೆ, ಡಾರ್ಸಿ ಬ್ರೌನ್ ಅವರನ್ನು 15 ಆಟಗಾರರ ತಂಡದಿಂದ ಹೊರಗಿಡಲಾಗಿದೆ. ಯುವ ಎಡಗೈ ಸೀಮರ್ ಲೂಸಿ ಹ್ಯಾಮಿಲ್ಟನ್‌ಗೆ ಸ್ಥಾನ ನೀಡಿದ್ದು, ಇತ್ತೀಚಿನ ಪಂದ್ಯಗಳಲ್ಲಿ ಅವರು ಉತ್ತಮ ಬೌಲಿಂಗ್ ಪ್ರದರ್ಶನ ತೋರಿದ್ದರು. ಲೆಗ್‌ಸ್ಪಿನ್ನರ್‌ಗಳಾದ ಅಲಾನಾ ಕಿಂಗ್ ಮತ್ತು ಜಾರ್ಜಿಯಾ ವೇರ್‌ಹ್ಯಾಮ್ ಮೊಲಿನೆಕ್ಸ್ ಮತ್ತು ಆಲ್‌ರೌಂಡರ್ ಆಶ್ಲೀ ಗಾರ್ಡ್ನರ್ ತಂಡದಲ್ಲಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ನಡೆದ 2023ರ ಟಿ 20 ವಿಶ್ವಕಪ್‌ನಲ್ಲಿ ಆಸೀಸ್ ಪ್ರಶಸ್ತಿ ವಿಜೇತ ಅಭಿಯಾನದಲ್ಲಿ ಬ್ರೌನ್ ಪಾತ್ರ ವಹಿಸಿದ್ದರೂ ಸಹ ಅವರನ್ನು ಕೈಬಿಡಲಾಗಿದೆ. ನಾವು ನಿರೀಕ್ಷಿಸುತ್ತಿದ್ದ ಪರಿಸ್ಥಿತಿಗಳು ಮತ್ತು ತಂಡದ ವೈಶಿಷ್ಟ್ಯಗಳನ್ನು ಆಧರಿಸಿ ನಿರ್ಧಾರ ತೆಗೆದುಕೊಳ್ಳಲಾಯಿತು, ಎಡಗೈ ವೇಗಿಯಾಗಿ ವಿಭಿನ್ನವಾದದ್ದನ್ನು ನೀಡುವ ಲೂಸಿ ಹ್ಯಾಮಿಲ್ಟನ್ ಅವರನ್ನು ಆಯ್ಕೆ ಮಾಡಿಕೊಂಡೆವು ಎಂದು ಫ್ಲೆಗ್ಲರ್ ಹೇಳಿದ್ದಾರೆ.

ಈ ವರ್ಷದ ಆರಂಭದಲ್ಲಿ ಆಸ್ಟ್ರೇಲಿಯಾದ ಕೆರಿಬಿಯನ್ ಪ್ರವಾಸದ ಸಮಯದಲ್ಲಿ ಹ್ಯಾಮಿಲ್ಟನ್ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. ಬಳಿಕ ಭಾರತ ವಿರುದ್ಧದ ಟೆಸ್ಟ್‌ನಲ್ಲಿ ಆರು ವಿಕೆಟ್‌ಗಳನ್ನು ಪಡೆದು ಗಮನ ಸೆಳೆದರು. ಅವರ ಸೇರ್ಪಡೆಯಿಂದ ಆಸ್ಟ್ರೇಲಿಯಾಕ್ಕೆ ಕಿಮ್ ಗಾರ್ತ್, ನಿಕೋಲಾ ಕ್ಯಾರಿ, ಅನ್ನಾಬೆಲ್ ಸದರ್ಲ್ಯಾಂಡ್, ತಹ್ಲಿಯಾ ಮೆಕ್‌ಗ್ರಾತ್, ಎಲಿಸ್ ಪೆರ್ರಿ ಮತ್ತು ಮೇಗನ್ ಶುಟ್ ಅವರನ್ನೊಳಗೊಂಡ ತಂಡದ ಜೊತೆಗೆ ಎಡಗೈ ವೇಗದ ಬೌಲರ್ ಆಯ್ಕೆ ಸಿಕ್ಕಿದೆ.

ಆಸ್ಟ್ರೇಲಿಯಾದ ಟಿ20 ತಂಡ: ಸೋಫಿ ಮೊಲಿನೆಕ್ಸ್ (ನಾಯಕಿ), ಆಶ್ಲೀ ಗಾರ್ಡ್ನರ್ (ಉಪ ನಾಯಕಿ), ತಹ್ಲಿಯಾ ಮೆಕ್‌ಗ್ರಾತ್, ನಿಕೋಲಾ ಕ್ಯಾರಿ, ಕಿಮ್ ಗಾರ್ತ್, ಲೂಸಿ ಹ್ಯಾಮಿಲ್ಟನ್, ಗ್ರೇಸ್ ಹ್ಯಾರಿಸ್, ಅಲಾನಾ ಕಿಂಗ್, ಫೋಬೆ ಲಿಚ್‌ಫೀಲ್ಡ್, ಬೆತ್ ಮೂನಿ, ಎಲಿಸ್ ಪೆರ್ರಿ, ಮೇಗನ್ ಶುಟ್, ಅನ್ನಾಬೆಲ್ ಸದರ್ಲ್ಯಾಂಡ್, ಜಾರ್ಜಿಯಾ ವೋಲ್, ಜಾರ್ಜಿಯಾ ವೇರ್‌ಹ್ಯಾಮ್.

ತ್ರಿಶಾಗೆ ಹೆಚ್ಚಿದ ಬೇಡಿಕೆ

ಬಹು ಭಾಷಾ ನಟಿಯಾಗಿರುವ ನಟಿ ತ್ರಿಶಾ ಎರಡು ದಶಕಗಳಿಂದಲೂ ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದಾರೆ. ಸಿನಿಮಾರಂಗಕ್ಕೆ ಹೊಸ ನಟಿಯರ ಆಗಮನವಾದರೂ ತ್ರಿಶಾ ಬೇಡಿಕೆ ಮಾತ್ರ ಕುಗ್ಗಿಲ್ಲ. ತಮ್ಮ ಸಹಜಾಭಿನಯದ ಮೂಲಕವೇ ಪ್ರಸಿದ್ಧಿ ಪಡೆದಿರುವ ತ್ರಿಶಾ ಇಂದಿಗೂ ಸಾಲು ಸಾಲು ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ಸೂರ್ಯ ಅಭಿನಯದ ಕುರುಪ್ಪು ಚಿತ್ರದಲ್ಲಿಯೂ ನಾಯಕಿಯಾಗಿ ನಟಿಸಿರುವ ತ್ರಿಶಾ, ಟಾಲಿವುಡ್ ಸ್ಟಾರ್ ನಟ ಚಿರಂಜೀವಿ ಅಭಿನಯಿಸುತ್ತಿರುವ ವಿಶ್ವಾಂಬರ ಚಿತ್ರದಲ್ಲಿಯೂ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಇದರ ಜತೆಗೆ ರಜನಿಕಾಂತ್ ಹಾಗೂ ಕಮಲ್ ಹಾಸನ್ ಇಬ್ಬರೂ ಒಟ್ಟಿಗೆ ನಟಿಸುತ್ತಿರುವ ಹೊಸ ಚಿತ್ರದಲ್ಲಿಯೂ ಅಭಿನಯಿಸಲು ತ್ರಿಶಾಗೆ ಅವಕಾಶ ಅರಸಿ ಬಂದಿದೆ. ಹೀಗೆ ಸ್ಟಾರ್ ನಟರ ಸಿನಿಮಾಗಳಲ್ಲಿ ಅಭಿನಯಿಸಿ ಮನಗೆದ್ದಿರುವ ತ್ರಿಶಾ ತಮ್ಮ ಸಂಭಾವನೆಯನ್ನು ಏರಿಸಿಕೊಂಡಿದ್ದಾರೆ. ಸದ್ಯ ತ್ರಿಶಾ ಸಿನಿಮಾವೊಂದಕ್ಕೆ ಬರೋಬ್ಬರಿ ಹನ್ನೆರಡು ಕೋಟಿ ಸಂಭಾವನೆ ಪಡೆಯುತ್ತಿದ್ದಾರೆ.

ಇತ್ತ ನಟ ವಿಜಯ್ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ವಿಜಯ್ ಗೆ ಆಪ್ತವಾಗಿರುವ ತ್ರಿಶಾ ಕೂಡ ಮುಂದಿನ ದಿನಗಳಲ್ಲಿ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಲಿದ್ದಾರಾ ಎಂಬ ಕುತೂಹಲ ಕಾಡುತ್ತಿದೆ.

ಬಿಡುಗಡೆಗೂ ಮೊದಲೇ ದೃಶ್ಯಂ ದಾಖಲೆ

ಮೋಹನ್ ಲಾಲ್ ಅಭಿನಯದ ದೃಶ್ಯಂ 3 ಇದೇ ತಿಂಗಳು ತೆರೆಗೆ ಬರಲಿದೆ. ಅದಕ್ಕೂ ಮೊದಲೇ ಈ ಚಿತ್ರ ದಾಖಲೆ ಬರೆಯುತ್ತಿದೆ. ದೃಶ್ಯಂ 3 ಸಿನಿಮಾದ ಮುಂಗಡ ಬುಕ್ಕಿಂಗ್ ಆರಂಭವಾಗಿದ್ದು, ದಾಖಲೆ ಮಟ್ಟದಲ್ಲಿ ಟಿಕೆಟ್ ಗಳು ಮಾರಾಟವಾಗುತ್ತಿವೆ. ಕೇರಳದ ಮಲ್ಟಿಪ್ಲೆಕ್ಸ್ ಗಳಲ್ಲಿ ಅದಾಗಲೇ ಟಿಕೆಟ್ ಸೋಲ್ಡ್ ಔಟ್ ಆಗಿದ್ದು, ಈಗ ಏಕಪರದೆಯ ಚಿತ್ರಮಂದಿರಗಳಲ್ಲಿಯೂ ಟಿಕೆಟ್ ಮಾರಾಟ ಗಣನೀಯವಾಗಿ ಹೆಚ್ಚಳವಾಗಿದೆ. ಕೇರಳದಲ್ಲಿಯೂ ಹಲವು ಏಕಪರದೆಯ ಚಿತ್ರಮಂದಿರಗಳು ಮುಚ್ಚಿದ್ದವು. ಈಗ ಆ ಥಿಯೇಟರ್ ಗಳು ಮರುಜೀವ ಪಡೆದಿದ್ದು ಮತ್ತೊಮ್ಮೆ ದೃಶ್ಯಂ ದರ್ಶನಕ್ಕೆ ಸಿದ್ಧವಾಗಿವೆ. ಕೇವಲ ನಗರ ಪ್ರದೇಶಗಳಲ್ಲಿ ಮಾತ್ರವಲ್ಲ, ಸಣ್ಣಪುಟ್ಟ ಪಟ್ಟಣಗಳಲ್ಲಿಯೂ ಮುಚ್ಚಿದ್ದ ಏಕಪರದೆಯ ಥಿಯೇಟರ್ ಗಳು ದೃಶ್ಯಂಗಾಗಿ ತೆರೆದಿವೆ. ಇದನ್ನು ಗಮನಿಸಿದರೆ ದೃಶ್ಯಂ 3 ಕ್ರೇಜ್ ಯಾವ ಮಟ್ಟಕ್ಕಿದೆ ಎಂಬುದು ತಿಳಿಯುತ್ತದೆ.

ದೃಶ್ಯಂ ಮೊದಲ ಹಾಗೂ ದ್ವಿತೀಯಾ ಭಾಗಕ್ಕೆ ಪ್ರೇಕ್ಷಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗ್ತು. ಈಗ ಮೂರನೇ ಭಾಗವೂ ನಿರೀಕ್ಷೆ ಮೂಡಿಸಿದೆ. ಈ ಸಿನಿಮಾದ ಟ್ರೇಲರ್ ರಿಲೀಸ್ ಆಗಿದ್ದು ಇದನ್ನು ನೋಡಿದ ಪ್ರೇಕ್ಷಕರು ಬಹುಪರಾಕ್ ಎಂದಿದ್ದು ಚಿತ್ರ ನೋಡಲು ಕಾತರರಾಗಿದ್ದಾರೆ. ಈ ಭಾಗದಲ್ಲಿಯೂ ಮೋಹಲ್ ಲಾಲ್ ಜಾರ್ಜ್ ಕುಟ್ಟಿಯಾಗಿ ಕಾಣಿಸಿಕೊಂಡಿದ್ದು, ಯಾವುದೋ ಸಮಸ್ಯೆಯಲ್ಲಿ ಸಿಲುಕಿದ್ದಾರೆ. ಅದರಿಂದ ತಮ್ಮ ಕುಟುಂಬವನ್ನು ಹೇಗೆ ರಕ್ಷಿಸುತ್ತಾರೆ ಎಂಬ ಕುತೂಹಲ ಈ ಸಿನಿಮಾದಲ್ಲಿದೆ.

ಉತ್ತಮ ಚಿತ್ರಗಳಿಗೆ ಪ್ರೇಕ್ಷಕರ ಸ್ಪಂದನೆ

ಚಿತ್ರಮಂದಿರಗಳಿಗೆ ಪ್ರೇಕ್ಷಕರು ಬರುತ್ತಿಲ್ಲ. ಹಾಗಾಗಿ ಸಿನಿಮಾಗಳು ಗೆಲ್ಲುತ್ತಿಲ್ಲ ಎಂಬ ಕೊರಗು ಕನ್ನಡ ಸೇರಿದಂತೆ ಪರಭಾಷಾ ಸಿನಿಮಾ ನಿರ್ದೇಶಕರು, ನಿರ್ಮಾಪಕರಲ್ಲಿದೆ. ಆದರೆ ಒಳ್ಳೆಯ ಸಿನಿಮಾಗಳು ಬಂದರೆ ಪ್ರೇಕ್ಷಕರು ಖಂಡಿತಾ ಚಿತ್ರಮಂದಿರಗಳಿಗೆ ಬರುತ್ತಾರೆ , ಸಿನಿಮಾ ಗೆಲ್ಲಿಸುತ್ತಾರೆ ಎಂಬುದಕ್ಕೆ ದೃಶ್ಯಂ 3 ನಿದರ್ಶನವಾಗಿದೆ. ಬಿಡುಗಡೆಗೂ ಮೊದಲೇ ಕೋಟ್ಯಾಂತರ ರು. ಮೌಲ್ಯದ ಟಿಕೆಟ್ ಗಳು ಮಾರಾಟವಾಗಿರು ಸಿನಿಮಾದ ಕುರಿತ ನಿರೀಕ್ಷೆಯನ್ನು ಸಹಜವಾಗಿಯೇ ಹೆಚ್ಚಿಸಿದೆ. ಕನ್ನಡದಲ್ಲಿಯೂ ಇಂತಹದ್ದೇ ಸಿನಿಮಾಗಳು ತೆರೆಗೆ ಬಂದರೆ ಪ್ರೇಕ್ಷಕರು ಥಿಯೇಟರ್ ಗಳಿಗೆ ಮರಳಿ ಬರುತ್ತಾರೆ.



ಬಿಟೌನ್

ಹೊಸಬರ ಸುಮ್ಮೆ ತಮಾಷೆಗೆ

ಸ್ಯಾಂಡಲ್ ವುಡ್ ನಲ್ಲಿ ಹೊಸಬರ ದಂಡೇ ಇದೆ ಹೊಸ ಪ್ರಯತ್ನಗಳು ಸಾಗುತ್ತಿವೆ. ಹೊಸಬರು ವಿಭಿನ್ನ ಟೈಟಲ್ ಹಾಗೂ ಕಥೆ ಮೂಲಕ ಗಮನಸೆಳೆಯುತ್ತಿದ್ದಾರೆ. ಅದರ ಮುಂದುವರಿದ ಭಾಗವಾಗ ಸುಮ್ನೆ ತಮಾಷೆಗೆ ಚಿತ್ರ ಸೆಟ್ಟೇರಿದೆ.

ಈ ಹಿಂದೆ ಕಡಲ ತೀರದ ಭಾರ್ಗವ ನಿರ್ದೇಶಿಸಿದ್ದ ಪನ್ನಗ ಹಾಗೂ ಅವರ ಸ್ನೇಹಿತರು, ಯಾವ ಮೋಹನ ಮುರಳಿ ಕರೆಯಿತು ನಿರ್ದೇಶಕ ವಿಶ್ವಾಸ್ ಕೃಷ್ಣ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಘಟಕಲ ಸುರೇಶ್ ಬಾಬು, ಸುಮ್ನೆ ತಮಾಷೆಗೆ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಇದು ಅವರು ನಿರ್ದೇಶಿಸುತ್ತಿರುವ ಚೊಚ್ಚಲ ಚಿತ್ರವಾಗಿದೆ. ಈ ಸಿನಿಮಾದ ಸ್ಕ್ರಿಪ್ಟ್ ಪೂಜೆ ಬೆಂಗಳೂರಿನ ಜೆಪಿ ನಗರದ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ಸನ್ನಿಧಿಯಲ್ಲಿ ನೆರವೇರಿತು.

ಕಡಲ ತೀರದ ಭಾರ್ಗವ, ಯಾವ ಮೋಹನ ಮುರಳಿ ಕರೆಯಿತು ಹಾಗೂ ಪೀಟರ್ ಸಿನಿಮಾಗಳಲ್ಲಿ ನಟಿಸಿರುವ ಪಟೇಲ್ ವರುಣ್ ರಾಜು ಸುಮ್ನೆ ತಮಾಷೆಗೆ ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಉಳಿದಂತೆ ಹರೀಶ್, ದರ್ಶನ್ ಹಾಗೂ ಮಾಧವ ತಾರಾಬಳಗದಲ್ಲಿದ್ದಾರೆ. ಸಾಮ್ರಾಟ್ ಸಂಗೀತ ನಿರ್ದೇಶನ, ಪುನೀತ್ ಓಂಕಾರ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.